ಶನಿವಾರ, ಅಕ್ಟೋಬರ್ 22, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಹೆಣ್ಣುಮಕ್ಕಳಿಗೆ ಆಗಾಗ್ಗೆ ಅಡುಗೆ ಮನೆಯಿಂದ ಪರಿತ್ಯಕ್ತರಾಗಬೇಕೆಂಬ ವಿರಕ್ತಭಾವ ಹುಟ್ಟುವುದು ಸಹಜ. ಆಗೆಲ್ಲ ಕೈ ಹಿಡಿಯುವರು 'ಅಮ್ಮನ ಅಕ್ಕರೆ'ಯ ತಂಡ

ಶನಿವಾರ, ಅಕ್ಟೋಬರ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 292 | ಪುಟ 34
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

ಚರ್ಚೆ
ಅಮಿತ್ ಶಾ ನೇತೃತ್ವದ ಸಂಸತ್ ಸಮಿತಿಯು ಹಿಂದಿ ಕುರಿತಂತೆ ಮಾಡಿರುವ ಶಿಫಾರಸು ಹಿಂದಿ ಹೇರಿಕೆಯ ಹುನ್ನಾರವೇ?

ಟಿ20 ವಿಶ್ವಕಪ್ ಕ್ರಿಕೆಟ್ ಇಂದಿನಿಂದ 12

17,850 ಧ್ವನಿವರ್ಧಕಗಳಿಗೆ ಅನುಮತಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,315 ▲	17,576 ▲	₹51,450 (ಬೆಂಗಳೂರು) ▼	₹57,300 (ಬೆಂಗಳೂರು) ▼	82.88 ▼

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
ವಿಶೇಷ ಕೂಡುಗೆ ವೇಸ್ಟೇಜ್ 4% ಮಾತ್ರ
₹4720/-gm
ಬೆಳ್ಳಿ ₹ 52,000/-
ಚಿಕ್ಕಪೇಟೆ: 41300355
Gangothri *CA

ಮಾರ್ಚ್ 10ರಿಂದ ದ್ವಿತೀಯ ಪಿಯು ಪರೀಕ್ಷೆ

ಬೆಂಗಳೂರು: 2022–23ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಿಸಿದೆ.

ಮಾರ್ಚ್ 10ರಿಂದ 29ರವರೆಗೆ ಪರೀಕ್ಷೆಗಳು ನಡೆಯಲಿವೆ. ಮಾರ್ಚ್ 10ರಂದು ಕನ್ನಡ, ಅರೇಬಿಕ್, 11ರಂದು ಗಣಿತ, ಶಿಕ್ಷಣಶಾಸ್ತ್ರ, 13ರಂದು ಅರ್ಥ ಶಾಸ್ತ್ರ, 14ರಂದು ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನ ವಿಜ್ಞಾನ, ಮೂಲಗಣಿತ, 15ರಂದು ತಮಿಳು, ತೆಲುಗು, ಮಲಯಾಳ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್ ಪರೀಕ್ಷೆ ನಡೆಯಲಿವೆ.

3ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸುಪ್ರೀಂ ಕೋರ್ಟ್ ಸೂಚನೆ • ಪಾಲಿಸದಿದ್ದರೆ ನ್ಯಾಯಾಂಗ ನಿಂದನೆ

ದ್ವೇಷಭಾಷಣಕ್ಕೆ ಕಡಿವಾಣ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ದ್ವೇಷ ಭಾಷಣ ಮಾಡುವವರ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು, ಕ್ರಮ ತೆಗೆದುಕೊಳ್ಳಿ ಎಂದು ಸುಪ್ರೀಂ ಕೋರ್ಟ್ ಮೂರು ರಾಜ್ಯ ಸರ್ಕಾರಗಳಿಗೆ ಮಧ್ಯಂತರ ಆದೇಶ ನೀಡಿದೆ. ಇಂತಹ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳದೇ ಇದ್ದರೆ, ನ್ಯಾಯಾಂಗ ನಿಂದನೆಯಾಗುತ್ತದೆ ಮತ್ತು ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೋರ್ಟ್ ಶುಕ್ರವಾರ ಎಚ್ಚರಿಕೆ ನೀಡಿದೆ.

ದೆಹಲಿ, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿ ನಡೆದಿದ್ದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಮುಸ್ಲಿಮರ ವಿರುದ್ಧ ನೀಡಿದ್ದ ದ್ವೇಷಪೂರಿತ ಹೇಳಿಕೆಗಳು ಮತ್ತು ಪ್ರಚೋದನಕಾರಿ ಕರೆಗಳ ವಿರುದ್ಧ ಶಹೀನ್ ಅಬ್ದುಲ್ಲಾ ಅವರು ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಋಷಿಕೇಶ್ ರಾಯ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ಸಂವಿಧಾನದ 51ನೇ ಎ ವಿಧಿಯು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳುತ್ತದೆ. ಆದರೆ 21ನೇ ಶತಮಾನದಲ್ಲಿ ನಾವು ಧರ್ಮದ ಹೆಸರಿನಲ್ಲಿ ಎಷ್ಟು ಸಂಕುಚಿತರಾಗಿದ್ದೇವೆ? ಈ ಹೇಳಿಕೆಗಳು ವಿಚ್ಛಿದ್ರಕಾರಿಯಾಗಿವೆ' ಎಂದು ಪೀಠವು ಆಘಾತ ವ್ಯಕ್ತಪಡಿಸಿತು.

'ಇಂತಹ ಹೇಳಿಕೆಗಳ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಂಡ ಬಗ್ಗೆ ವರದಿ ನೀಡಬೇಕು' ಎಂದು ಪೀಠವು ಆದೇಶಿಸಿದೆ. ಅರ್ಜಿದಾರರು ಪ್ರತಿವಾದಿಗಳಾಗಿ ನಮೂದಿಸಿದ್ದ ದೆಹಲಿ, ಉತ್ತರಾಖಂಡ ಮತ್ತು ಉತ್ತರ ಪ್ರದೇಶ ಪೊಲೀಸ್ ಇಲಾಖೆ ಮುಖ್ಯಸ್ಥರಿಗೆ ಈ ಸಂಬಂಧ ನೋಟಿಸ್ ಜಾರಿ ಮಾಡಲಾಗಿದೆ.

ಇದಕ್ಕೂ ಮುನ್ನ ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ನಾವು ಅರ್ಜಿ ಸಲ್ಲಿಸುತ್ತಲೇ ಇದ್ದೇವೆ, ನ್ಯಾಯಾಲಯದ ಮುಂದೆ ಬರುತ್ತಲೇ ಇದ್ದೇವೆ. ಆದರೆ ಸಂಬಂಧಪಟ್ಟವರು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಹೀಗಾಗಿಯೇ ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಹೆಚ್ಚಾಗುತ್ತಲೇ ಇದೆ. ಮುಸ್ಲಿಂ ವ್ಯಾಪಾರಿಗಳನ್ನು ಬಹಿಷ್ಕರಿಸಬೇಕು, ಮುಸ್ಲಿಮರ ಕತ್ತು ಸೀಳಬೇಕು ಎಂದೂ ಕರೆ ನೀಡಲಾಗಿದೆ' ಎಂದು ಹೇಳಿದರು.

ಆಗ ಪೀಠವು, 'ಮುಸ್ಲಿಮರೂ ದ್ವೇಷ ಭಾಷಣ ಮಾಡುತ್ತಿದ್ದಾರೆಯೇ' ಎಂದು ಪ್ರಶ್ನಿಸಿತು. ಅದಕ್ಕೆ ಪ್ರತಿಕ್ರಿಯಿಸಿದ ಸಿಬಲ್, 'ಯಾರು ದ್ವೇಷ ಭಾಷಣ ಮಾಡಿದರೂ ಕ್ರಮ ತೆಗೆದುಕೊಳ್ಳಬೇಕು' ಎಂದು ಹೇಳಿದರು.

ಆಗ ಪೀಠವು, 'ಸಂವಿಧಾನದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿರುವ ಭಾರತದ ಜಾತ್ಯತೀತ ಸ್ವರೂಪವನ್ನು ರಕ್ಷಿಸುವ ಉದ್ದೇಶದಿಂದ ದ್ವೇಷ ಭಾಷಣದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚಿಸಿತು.

ದೂರು ನೀಡಲೆಂದು ಕಾಯುವಂತಿಲ್ಲ...

- ದ್ವೇಷ ಭಾಷಣ ನಡೆದಾಗ ಪೊಲೀಸರು ಸ್ವಯಂಪ್ರೇರಿತರಾಗಿ ಪ್ರಕರಣ ದಾಖಲಿಸಿಕೊಳ್ಳಬೇಕು. ಯಾರಾದರೂ ದೂರು ನೀಡಲಿ ಎಂದು ಕಾಯಬಾರದು
- ರಾಜ್ಯ ಪೊಲೀಸ್ ಮುಖ್ಯಸ್ಥರು ತಮ್ಮ ಅಧೀನ ಅಧಿಕಾರಿಗಳಿಗೆ ಈ ಸಂಬಂಧ ತಕ್ಷಣವೇ ನಿರ್ದೇಶನ ನೀಡಬೇಕು
- ಭಾರತೀಯ ದಂಡ ಸಂಹಿತೆಯ 153ಎ (ಧರ್ಮ, ಜಾತಿ, ಜನಾಂಗ, ಹುಟ್ಟಿದ ಸ್ಥಳ, ಭಾಷೆ ಇತ್ಯಾದಿ ಆಧಾರದಲ್ಲಿ ಭಿನ್ನ ಸಮುದಾಯಗಳ ನಡುವೆ ದ್ವೇಷ ಮೂಡಿಸುವ ಯತ್ನ) , 153ಬಿ (ರಾಷ್ಟ್ರೀಯ ಸಮಗ್ರತೆಗೆ ಧಕ್ಕೆ ತರುವಂತಹ ಹೇಳಿಕೆ ನೀಡುವುದು, ಬರಹ ಬರೆಯುವುದು ಇತ್ಯಾದಿ) ಮತ್ತು 295ಎ (ಧಾರ್ಮಿಕ ನಂಬಿಕೆಗಳು ಮತ್ತು ಭಾವನೆಗಳಿಗೆ ಉದ್ದೇಶಪೂರ್ವಕವಾಗಿ ಧಕ್ಕೆ ತರುವುದು) ಸೆಕ್ಷನ್‌ಗಳಲ್ಲಿ ವಿವರಿಸಲಾದಂತಹ ಕೃತ್ಯಗಳಿಗೆ ಸಮನಾದ ಭಾಷಣ, ಕೃತ್ಯಗಳು ನಡೆದಾಗ ತಕ್ಷಣವೇ ಪ್ರಕರಣ ದಾಖಲಿಸಬೇಕು ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು

- ದ್ವೇಷ ಭಾಷಣ ಮಾಡುವ ವ್ಯಕ್ತಿಯು ಯಾವ ಧರ್ಮದವರಾಗಿದ್ದರೂ ಪ್ರಕರಣ ದಾಖಲಿಸಿ, ಕ್ರಮ ತೆಗೆದುಕೊಳ್ಳಬೇಕು
- ದ್ವೇಷ ಭಾಷಣದ ಸಂದರ್ಭದಲ್ಲಿ ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕುವುದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲಾಗುತ್ತದೆ

> **ದೇಶದ ಜಾತ್ಯತೀತ ಪ್ರಜಾಸತ್ತೆ, ಸಾಂವಿಧಾನಿಕ ಮೌಲ್ಯಗಳು ಮತ್ತು ಮೂಲಭೂತ ಹಕ್ಕುಗಳ ರಕ್ಷಣೆಯ ಕರ್ತವ್ಯ ಈ ನ್ಯಾಯಾಲಯದ್ದಾಗಿದೆ**
> **ಸುಪ್ರೀಂ ಕೋರ್ಟ್**

ಆಕಾಶ್ ಆಸ್ಪತ್ರೆಗೆ ₹41.57 ಕೋಟಿ

ಕೋವಿಡ್: ಆಯುಷ್ಮಾನ್ ಭಾರತದಡಿ ಗರಿಷ್ಠ ಮೊತ್ತ ಪಡೆದ ಆಸ್ಪತ್ರೆ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ದೇವನಹಳ್ಳಿಯ ಆಕಾಶ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ₹41.57 ಕೋಟಿ ಹಣ ಪಾವತಿಯಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪವಿರುವ ಈ ಆಸ್ಪತ್ರೆಯು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ರಾಜ್ಯದಲ್ಲೇ ಅತ್ಯಧಿಕ ಮೊತ್ತವನ್ನು ಪಡೆದ ಸಂಸ್ಥೆಯಾಗಿದೆ.

ಕೋವಿಡ್ ಪ್ರಥಮ ಪ್ರಕರಣ ವರದಿಯಾಗುತ್ತಿದ್ದಂತೆ ಸೋಂಕು ಶಂಕಿತರು ಹಾಗೂ ಸಂಪರ್ಕಿತರಿಗೆ ಪ್ರತ್ಯೇಕ ವಾಸಕ್ಕೆ ಸರ್ಕಾರವು ಇಲ್ಲಿ ವ್ಯವಸ್ಥೆ ಮಾಡಿತ್ತು. ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದಂತೆ 825 ಹಾಸಿಗೆಗಳ ಸಂಸ್ಥೆಯಲ್ಲಿ, ಮೊದಲು 200ಕ್ಕೂ ಅಧಿಕ ಹಾಸಿಗೆಗಳನ್ನು ಚಿಕಿತ್ಸೆಗೆ ಗುರುತಿಸಲಾಗಿತ್ತು. ಸರ್ಕಾರ ಶಿಫಾರಸು ಆಧಾರದಲ್ಲಿ ಹಣ ಪಾವತಿಸುವ ಬಗ್ಗೆ ಆದೇಶ ಹೊರಡಿಸಿತ್ತು. ಪ್ರಕರಣ ಏರಿಕೆ ಕಂಡ ಬಳಿಕ, ಅಲ್ಲಿನ ಎಲ್ಲ 825 ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಿ, ಸರ್ಕಾರಿ ಆಸ್ಪತ್ರೆಗಳಿಗೆ ಬಂದವರನ್ನು ಶಿಫಾರಸು ಆಧಾರದಲ್ಲಿ ಅಲ್ಲಿಗೆ ಸ್ಥಳಾಂತರ ಮಾಡಲಾಗಿತ್ತು. ವಿದೇಶಿಗಳಿಂದ ಬಂದು ಸೋಂಕಿತರಾದ ಹೆಚ್ಚಿನವರಿಗೆ ಅಲ್ಲಿಯೇ ಚಿಕಿತ್ಸೆ ಒದಗಿಸಲಾಗಿದೆ. ಕೆಲವರು ನೇರವಾಗಿ ದಾಖಲಾಗಿಯೂ ಕೋವಿಡ್ ಚಿಕಿತ್ಸೆ ಪಡೆದಿದ್ದಾರೆ.

ನೋಟಿಸ್ ಜಾರಿ: ಕೋವಿಡ್ ಪೀಡಿತರು ಚೇತರಿಸಿಕೊಂಡರೂ ಆಸ್ಪತ್ರೆಯಿಂದ ಮನೆಗೆ ಕಳುಹಿಸುತ್ತಿಲ್ಲ ಎಂದು ಈ ಹಿಂದೆ ಕೆಲವರು ಆಕಾಶ್ ಆಸ್ಪತ್ರೆ ವಿರುದ್ಧ ಆರೋಪ ಮಾಡಿದ್ದರು. ಅದೇ ರೀತಿ, ಸರ್ಕಾರದಿಂದ ಹಣ ಪಡೆಯುವ ಜತೆಗೆ ರೋಗಿಗಳ ಕಡೆಯವರಿಂದಲೂ ಚಿಕಿತ್ಸಾ ವೆಚ್ಚವನ್ನು ಆಸ್ಪತ್ರೆ ವಸೂಲಿ ಮಾಡಿದೆ ಎಂದು ರೋಗಿಗಳ ಕುಟುಂಬಸ್ಥರು ಆರೋಗ್ಯ ಇಲಾಖೆಗೆ ದೂರು ನೀಡಿದ್ದಾರೆ. ಈ ಬಗ್ಗೆ 'ಪ್ರಜಾವಾಣಿ'ಗೆ ದಾಖಲೆ ಲಭ್ಯವಾಗಿದ್ದು, ಇಲಾಖೆಯು ಕಾರಣ ಕೇಳಿ ಆಸ್ಪತ್ರೆಗೆ ನೋಟಿಸ್ ನೀಡಿದೆ.

ಆಸ್ಪತ್ರೆಗೆ ಪ್ರಭಾವಿ ಸಚಿವರ ನಂಟು?

ಆಕಾಶ್ ಆಸ್ಪತ್ರೆಯು ರಾಜ್ಯ ಸರ್ಕಾರದ ಪ್ರಭಾವಿ ಸಚಿವರೊಬ್ಬರಿಗೆ ಸೇರಿದ್ದಾಗಿದ್ದು, ಹೆಚ್ಚಿನ ಮೊತ್ತದ ಪಾವತಿಯ ಹಿಂದೆ ಈ ಅಂಶವೂ ಕೆಲಸ ಮಾಡಿದೆ ಎಂದೂ ಹೇಳಲಾಗುತ್ತಿದೆ.

'ವಿಮಾನ ನಿಲ್ದಾಣದ ಸಮೀಪ ಇರುವ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜನ್ನು ಅದರ ಸ್ಥಿರಾಸ್ತಿ ಸಮೇತ ಸಚಿವರು ಖರೀದಿಸಿದ್ದಾರೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ದಾಖಲೆಗಳಲ್ಲಿ ಸಚಿವರ ಒಡೆತನದ ಹೆಸರಿಲ್ಲ. ಆದರೆ, ಆಸ್ಪತ್ರೆಯ ಪೂರ್ಣ ಉಸ್ತುವಾರಿ ಸಚಿವರ ಹಿಡಿತದಲ್ಲಿದೆ' ಎಂದು ಹೆಸರು ಬಹಿರಂಗ ಪಡಿಸಲು ಬಯಸದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

> **ಸಂಸ್ಥೆಯಲ್ಲಿನ ಎಲ್ಲ ಹಾಸಿಗೆಯನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟಿದ್ದೆವು. ಕ್ವಾರಂಟೈನ್‌ಗೂ ಅವಕಾಶ ನೀಡಿದ್ದೆವು. ಇದರಿಂದಾಗಿ ಹೆಚ್ಚಿನ ಹಣ ಪಾವತಿಯಾಗಿದೆ**
> **ಡಾ.ಶಿವಪ್ರಕಾಶ್ ಎನ್.ಸಿ.,** ಆಕಾಶ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ

'ಬಡ ಪೋಷಕರ ಜೇಬಿಗೆ ಸರ್ಕಾರದ ಕತ್ತರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮಿಷನ್ ಹೆಸರಿನಲ್ಲಿ ರಾಜ್ಯದ ಖಜಾನೆ ಲೂಟಿ ಮಾಡಿದ ಬಿಜೆಪಿ ಸರ್ಕಾರ, ಈಗ ದೇಣಿಗೆ ನೆಪದಲ್ಲಿ ಬಡ ಮಕ್ಕಳ ಪೋಷಕರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪೋಷಕರಿಂದ ಶಾಲಾಭಿವೃದ್ಧಿಗೆ ದೇಣಿಗೆ ಸಂಗ್ರಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿರುವ ಕುರಿತು ಟ್ವಿಟರ್‌ನಲ್ಲಿ ಶುಕ್ರವಾರ ಪ್ರತಿಕ್ರಿಯಿಸಿರುವ ಅವರು, 'ಸರ್ಕಾರಿ ಶಾಲೆಯ ಬಡ ಮಕ್ಕಳ ಮೇಲೆ ಬಿಜೆಪಿ ಸರ್ಕಾರದ ಭ್ರಷ್ಟ ಕಣ್ಣು ಬಿದ್ದಿದೆ. ಬಿಜೆಪಿ ಸರ್ಕಾರಕ್ಕೆ ಇಂಥ ದೈನೇಸಿ ಸ್ಥಿತಿ ಬರಬಾರದಿತ್ತು' ಎಂದು ವಾಗ್ದಾಳಿ ನಡೆಸಿದ್ದಾರೆ.

'ನಾವು ವಿದ್ಯಾರ್ಥಿಗಳಿಗೆ ನೀಡಿದ್ದ ಹಾಲು, ಬಿಸಿಯೂಟ, ಸಮವಸ್ತ್ರ, ಶೂ, ವಿದ್ಯಾಸಿರಿ, ಹಾಸ್ಟೆಲ್ ಸೌಲಭ್ಯಗಳನ್ನು ಒಂದೊಂದಾಗಿ ಕಿತ್ತುಕೊಳ್ಳುತ್ತಿರುವ ಬಿಜೆಪಿ ಸರ್ಕಾರ, ಈಗ ಅವರಿಂದ ದುಡ್ಡು ಕಿತ್ತುಕೊಳ್ಳಲು ಹೊರಟಿದೆ. ವೇದಿಕೆ ಮೇಲೆ ನಿಂತು ಧಮ್, ತಾಕತ್ ಎಂದು ಬೊಬ್ಬಿರಿಯುವವರು ವಿದ್ಯಾರ್ಥಿಗಳ ನೆರವಿನ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿ ತಮ್ಮ ತಾಕತ್ ತೋರಿಸಲಿ' ಎಂದು ಸವಾಲು ಹಾಕಿದ್ದಾರೆ.

'ನಮ್ಮ ಸರ್ಕಾರ ವಿದ್ಯಾಸಿರಿ, ಅರಿವು, ಶೂ ಭಾಗ್ಯ, ವಿದೇಶಿ ವ್ಯಾಸಂಗಕ್ಕೆ ಆರ್ಥಿಕ ನೆರವು, ಶೈಕ್ಷಣಿಕ ಸಾಲ ಯೋಜನೆ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆಳಕು ನೀಡಿತ್ತು. ಬಿಜೆಪಿ ಸರ್ಕಾರ ಓದುವ ಮಕ್ಕಳ ಕೈಗೆ ತ್ರಿಶೂಲ ದೀಕ್ಷೆ ನೀಡಿ ಅವರ ಬದುಕನ್ನು ಕತ್ತಲೆಗೆ ದೂಡುತ್ತಿದೆ' ಎಂದು ಸಿದ್ದರಾಮಯ್ಯ ದೂರಿದ್ದಾರೆ.

'ವಿದ್ಯಾರ್ಥಿಗಳ ಪೋಷಕರಿಂದ ಹಣ ಸಂಗ್ರಹಿಸುವಂತೆ ಹೊರಡಿಸಿರುವ ಆದೇಶವನ್ನು ತಕ್ಷಣ ಹಿಂಪಡೆಯಬೇಕು. ಅನುದಾನದ ಕೊರತೆಯಿಂದ ಸ್ಥಗಿತಗೊಂಡಿರುವ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪುನರ್ ಚಾಲನೆ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಇನ್ನೊಂದು ಸುದ್ದಿ 6

ಬಿಬಿಎಂಪಿ ಭ್ರಷ್ಟಾಚಾರ: ಐಎಎಸ್ ಅಧಿಕಾರಿಗಳ ವಿರುದ್ಧ ಸಿವಿಲ್ ದಾವೆ?

ಸಿಐಡಿ ಶಿಫಾರಸಿಗೆ 8 ವರ್ಷದ ಬಳಿಕ ಉತ್ತರ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: ಬಿಬಿಎಂಪಿಯ ರಾಜರಾಜೇಶ್ವರಿ ನಗರ, ಮಲ್ಲೇಶ್ವರ ಹಾಗೂ ಗಾಂಧಿನಗರ ವಲಯಗಳಲ್ಲಿ ನಡೆದಿರುವ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಸಿಐಡಿ (ವಿಶೇಷ ಘಟಕಗಳು ಹಾಗೂ ಆರ್ಥಿಕ ಅಪರಾಧಗಳು) ಮಾಡಿರುವ ಶಿಫಾರಸಿಗೆ ಕರ್ನಾಟಕ ಸರ್ಕಾರ 8 ವರ್ಷಗಳ ಬಳಿಕ ಪ್ರತಿಕ್ರಿಯಿಸಿದೆ.

ಅಧಿಕಾರ ವ್ಯಾಪ್ತಿ ಮೀರಿ ಟೆಂಡರ್‌ಗಳನ್ನು ಅನುಮೋದಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಪಶ್ಚಿಮ ವಲಯದ ಜಂಟಿ ಆಯುಕ್ತರಾಗಿದ್ದ ವಿ.ಶ್ರೀರಾಮ ರೆಡ್ಡಿ ಹಾಗೂ ವಿ.ಪಿ. ಇಕ್ಕೇರಿ (ಇವರಿಬ್ಬರು ನಿವೃತ್ತರಾಗಿದ್ದಾರೆ) ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸಿಐಡಿಯ ಪೊಲೀಸ್ ಮಹಾನಿರ್ದೇಶಕರು 2014ರ ಜೂನ್‌ನಲ್ಲಿ ಶಿಫಾರಸು ಮಾಡಿದ್ದರು.

ಈ ಶಿಫಾರಸಿಗೆ ಇತ್ತೀಚೆಗೆ ಪ್ರತಿಕ್ರಿಯಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, 'ಅಖಿಲ ಭಾರತ ಸೇವೆ (ಡಿಸಿಆರ್‌ಬಿ) ನಿಯಮಗಳು 1958ರ ಅನ್ವಯ ಕಾಲಮಿತಿ ಮೀರಿರುವ ಕಾರಣ ಈ ಇಬ್ಬರು ಅಧಿಕಾರಿಗಳ ವಿರುದ್ಧದ ಶಿಸ್ತುಕ್ರಮ ಶಿಫಾರಸನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಕರ್ನಾಟಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿದ್ದಲ್ಲಿ ಅಧಿಕಾರಿಗಳ ವಿರುದ್ಧ ಸಿವಿಲ್ ದಾವೆ ಹೂಡಬಹುದು' ಎಂದು ಹೇಳಿದೆ. ಈ ಮೂರು ವಲಯಗಳಲ್ಲಿ ನಡೆದ ಅಕ್ರಮಗಳ ಬಗ್ಗೆ 'ಪ್ರಜಾವಾಣಿ' ಸರಣಿ ವರದಿಗಳನ್ನು ಪ್ರಕಟಿಸಿತ್ತು.

3Fನೇ ಪುಟ ನೋಡಿ

ಪುನೀತಪರ್ವದಲ್ಲಿ ವಿಜಯ ಪ್ರಕಾಶ್ ಅವರ 'ಬೊಂಬೆ ಹೇಳುತೈತೆ' ಹಾಡಿಗೆ ಪುನೀತ್ ಕುಟುಂಬದವರು ಭಾವುಕರಾದ ಕ್ಷಣ

'ಗಂಧದಗುಡಿ'ಗೆ ಅಭಿಮಾನದ ಮುನ್ನುಡಿ

ಅಭಿಮಾನಿಗಳ ಭಾವತೀವ್ರತೆಯಲ್ಲಿ ಪುನೀತ್ ನೆನಪಿನ ಓಕುಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇದೇ 28ರಂದು ಗಂಧದ ಗುಡಿ ಬಿಡುಗಡೆ
- ಪುನೀತ್ ವ್ಯಕ್ತಿತ್ವ, ಕೊಡುಗೆ ಸ್ಮರಣೆ

ಬೆಂಗಳೂರು: ಸಹಸ್ರ ಜನರ ಅಭಿಮಾನದ ಪ್ರವಾಹ, ಕೇಕೆ, ಜಯಘೋಷ, ಧ್ವನಿ ಬೆಳಕಿನ ಚಿತ್ತಾರ.. ವೈಭವ, ಕೊನೆಯಲ್ಲಿ ಭಾವತೀವ್ರತೆಯು ಗಾಢ ಮೌನದೊಂದಿಗೆ 'ಪುನೀತ ಪರ್ವ' ಇಲ್ಲಿನ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆಯಿತು.

ನಟ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ ಅ.29ಕ್ಕೆ ಒಂದು ವರ್ಷ ತುಂಬಲಿದೆ. ಅವರು ಪಾಲ್ಗೊಂಡ ಸಾಕ್ಷ್ಯಚಿತ್ರ 'ಗಂಧದಗುಡಿ' ಅ. 28ರಂದು ಬಿಡುಗಡೆಯಾಗಲಿದೆ. ಅದರ ಬಿಡುಗಡೆ ಪೂರ್ವ ಕಾರ್ಯಕ್ರಮವಿದು.

ಪುನೀತ್ ಭಾವಚಿತ್ರವಿದ್ದ ಬಿಳಿಯ ಧ್ವಜ, ಕನ್ನಡಧ್ವಜ, ಮಿನುಗು ದೀಪದ ಭಾವಚಿತ್ರ ಹಿಡಿದು ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಚಿತ್ರರಂಗದ ತಾರೆಯರು, ಅಭಿಮಾನಿಗಳು ಶ್ವೇತ ವಸ್ತ್ರಧಾರಿಗಳಾಗಿ ಭಾಗವಹಿಸಿ ಅಪ್ಪು ಅವರಿಗೆ ಗೌರವ ಸಲ್ಲಿಸಿದರು.

ಅಭಿಮಾನಿಗಳೇ ನಮ್ಮನೆ ದೇವ್ರು... ಜಾಕಿ ಜಾಕಿ ಜಾಕಿ...ಗಾನ ಬಜಾನಾ... ನೀನೇ ನೀನೇ ಮನಸ್ಸೆಲ್ಲಾ ನೀನೇ.. ಹಾಡುಗಳು ಧ್ವನಿವರ್ಧಕದಲ್ಲಿ ಮೊಳಗುತ್ತಿದ್ದಂತೆ ಪ್ರೇಕ್ಷಕರಲ್ಲಿ ಭಾವೋದ್ದೀಪನವಾಗುತ್ತಿತ್ತು. ಅರಿವಿಲ್ಲದೆ ಹೆಜ್ಜೆ ಹಾಕುತ್ತಿದ್ದರು. ಒಮ್ಮೆ ಮೌನವಾಗುತ್ತಿದ್ದರು.

ಪುನೀತ್ ಅವರ ಬೃಹತ್ ಕಟೌಟ್‌ಗಳು ಹಾಡುಗಳ ಭಾವಕ್ಕೆ ಸ್ಪಂದಿಸಿದಂತೆ ಭಾಸವಾಯಿತು. ಅಪ್ಪು ಅಪ್ಪು ಘೋಷಣೆ ಪದೇಪದೇ ಮೊಳಗಿತು. ನೂರಾರು ಕ್ಯಾಮೆರಾಗಳು ಪ್ರೇಕ್ಷಕರ ಭಾವ ಸೆರೆ ಹಿಡಿದವು. ಪುನೀತ್ ರಾಜ್ ಕುಮಾರ್ ಅವರ ಬಾಲನಟನೆಯ ತುಣುಕುಗಳು ಪರದೆಗಳಲ್ಲಿ ಬಿತ್ತರಗೊಂಡವು. ಪುನೀತ್ ಅವರು ಹಾಡಿದ್ದ 'ಬಾನದಾರಿಯಲ್ಲಿ ಸೂರ್ಯ ಜಾರಿ ಹೋದ' ಹಾಡನ್ನು ಪುನೀತ್ ಸಹೋದರ ರಾಘವೇಂದ್ರ ರಾಜ್ ಕುಮಾರ್ ಹಾಡಿದರು. ಸಂಗೀತ ನಿರ್ದೇಶಕ ಗುರುಕಿರಣ್ ಅವರು ಪುನೀತ್ ಚಿತ್ರಗಳ ಹಾಡು ಹಾಡಿದರು. ಇದೇ ವೇಳೆ ಅಭಿಮಾನಿಗಳು ಮೊಬೈಲ್ ಟಾರ್ಚ್ ಬೆಳಗಿ ಗೌರವ ಸಲ್ಲಿಸಿದರು.

ಗಾಯಕರಾದ ಟಿಪ್ಪು, ಕುನಾಲ್ ಗಾಂಜಾವಾಲ, ಅರ್ಮಾನ್ ಮಲಿಕ್ ಅವರು ಪುನೀತ್ ಚಿತ್ರಗಳ ಗೀತೆಗಳನ್ನು ಹಾಡಿದರು. ಕೊನೆಯಲ್ಲಿ ವಿಜಯಪ್ರಕಾಶ್ ಅವರು ಹಾಡಿದ 'ಗೊಂಬೆ ಹೇಳುತೈತೆ...' ಹಾಡಿಗೆ ಚಿತ್ರರಂಗದ ಪ್ರಮುಖರು ಹಾಗೂ ಪುನೀತ್ ಕುಟುಂಬದ ಎಲ್ಲರೂ ವೇದಿಕೆಯಲ್ಲಿ ಧ್ವನಿಗೂಡಿಸಿದರು. ಹಾಡು ಕೊನೆಗೊಳ್ಳುತ್ತಿದ್ದಂತೆಯೇ ಪುನೀತ್ ಪತ್ನಿ ಅಶ್ವಿನಿ, ಸಹೋದರ ಶಿವರಾಜ್ ಕುಮಾರ್ ಸಹಿತ ಎಲ್ಲರೂ ಕಣ್ಣೀರಾದರು. ಕಾರ್ಯಕ್ರಮದ ಕೊನೆಯಲ್ಲಿ ಅಮಿತಾಬ್ ಬಚ್ಚನ್ ಅವರ ವಿಡಿಯೊ ಸಂದೇಶ ಬಿತ್ತರಗೊಂಡಿತು.

ರಮೇಶ್ ಅರವಿಂದ್, ರಮ್ಯಾ, ರವಿಚಂದ್ರನ್, ರಕ್ಷಿತ್ ಶೆಟ್ಟಿ, ರಾಜ್ ಬಿ. ಶೆಟ್ಟಿ ಪುನೀತ್ ಅವರನ್ನು ಸ್ಮರಿಸಿದರು. ರಾಣಾ ದಗ್ಗುಬಾಟಿ, ಸಿದ್ಧಾರ್ಥ, ಸೂರ್ಯ, ಯಶ್, ನಿಖಿಲ್ ಕುಮಾರಸ್ವಾಮಿ, ಡಾಲಿ ಧನಂಜಯ, ಅನು ಪ್ರಭಾಕರ್, ಪ್ರಿಯಾ ಆನಂದ್, ಸಂಸದೆ ಸುಮಲತಾ ಅಂಬರೀಶ್ ಸೇರಿ ಹಲವು ಗಣ್ಯರು ಭಾಗವಹಿಸಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುರುಗೇಶ್ ನಿರಾಣಿ, ನಾರಾಯಣಗೌಡ ಮತ್ತು ಚಿತ್ರದ ನಿರ್ದೇಶಕ ಅಮೋಘವರ್ಷ ಇದ್ದರು. ರಾಜ್ಯದ ಹಲವೆಡೆಯಿಂದ ಬಸ್, ಕಾರು, ಟೆಂಪೋ, ಬೈಕ್‌ಗಳಲ್ಲಿ ಅಭಿಮಾನಿಗಳು ಬಂದಿದ್ದರು. ಅರಮನೆ ರಸ್ತೆಯ ಎಲ್ಲ ಭಾಗಗಳಲ್ಲೂ ಸಂಚಾರ ದಟ್ಟಣೆ ಉಂಟಾಗಿತ್ತು.

ಅಪ್ಪು ಅಲ್ಲ ಲೋಹಿತ್: ಸುಧಾಮೂರ್ತಿ ನೆನಪು

'ಪುನೀತ್ ಅವರನ್ನು ನಾನು ಹೆಚ್ಚು ನೋಡಿದ್ದು ಬಾಲನಟನಾಗಿ. ಹಾಗಾಗಿ ಅವರು ನನಗೆ ಲೋಹಿತ್ ಆಗಿಯೇ ಇದ್ದಾರೆ. ಸಹೃದಯಿ ವ್ಯಕ್ತಿಯಾಗಿ ಅವರು ವೈಯಕ್ತಿಕವಾಗಿ ಪರಿಚಿತರು. ಒಮ್ಮೆ ಕೊಲಂಬೊ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿ ಗೌರವದಿಂದ ಮಾತನಾಡಿದ್ದರು. ಈ ಸಂಸ್ಕಾರ ಅವರಿಗೆ ಮನೆಯಿಂದಲೇ ಬಂದಿದೆ' ಎಂದು ಇನ್ಫೊಸಿಸ್ ಪ್ರತಿಷ್ಠಾನದ ಮುಖ್ಯಸ್ಥರಾದ ಸುಧಾಮೂರ್ತಿ ಹೇಳಿದರು.

> **ಗಂಧದ ಗುಡಿ ಡಾ. ಪುನೀತ್ ರಾಜಕುಮಾರ್ ಅವರ ಪ್ರಯೋಗ. ನಿಸರ್ಗ, ಕಾಡು, ಪ್ರಾಣಿಗಳನ್ನೊಳಗೊಂಡು ಚಿತ್ರೀಕರಿಸಿದ ಸಿನಿಮಾ. ಇದು ಯಶಸ್ಸು ಕಾಣಲಿ**
>
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

'ಈ ಜನಸ್ತೋಮ ನೋಡಿದರೆ ಅಪ್ಪು ಇಲ್ಲೇ ಇದ್ದಾರೆ ಅನಿಸುತ್ತದೆ. ಒಳ್ಳೆಯ ಬಾಳ್ವೆ ಮಾಡಿದ ಮನುಷ್ಯ ದೇವರಾಗಬಹುದು ಎಂಬುದಕ್ಕೆ ಅಪ್ಪು ಉದಾಹರಣೆ' ಎಂದು ತಮಿಳು ಚಿತ್ರದ ಹಾಡೊಂದನ್ನು ನಟ ಶರತ್‌ಕುಮಾರ್ ಉಲ್ಲೇಖಿಸಿದರು.

ಪುನೀತ್ ನಿಧನದ ಬಳಿಕ ಅವರ ಹೆಸರಿನಲ್ಲಿ ಹತ್ತಾರು ಆಂಬುಲೆನ್ಸ್‌ಗಳನ್ನು ಚಿತ್ರರಂಗದ ಪ್ರಮುಖರು ಕೊಡುಗೆಯಾಗಿ ನೀಡಿದ್ದು, ಅವರ ಪ್ರಕೃತಿ ಪ್ರೀತಿಯನ್ನು ನಟ ಪ್ರಕಾಶ್ ರಾಜ್ ಸ್ಮರಿಸಿದರು.

ಮಾರ್ಚ್ 10ರಿಂದ ದ್ವಿತೀಯ ಪಿಯು ಪರೀಕ್ಷೆ

ಒಂದನೇ ಪುಟದಿಂದ...

16ರಂದು ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 17ರಂದು ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಆರೋಗ್ಯ, 18ರಂದು ಭೂಗೋಳ ಶಾಸ್ತ್ರ, ಜೀವ ವಿಜ್ಞಾನ, 20ರಂದು ಇತಿಹಾಸ, ಭೌತ ವಿಜ್ಞಾನ, 21ರಂದು ಹಿಂದಿ, 23ರಂದು ಇಂಗ್ಲಿಷ್, 25ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 27ರಂದು ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, 29ರಂದು ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ. ಆಕ್ಷೇಪಣೆಗಳು ಇದ್ದಲ್ಲಿ ನ.11ರ ಸಂಜೆ 5.30ರ ಒಳಗೆ jdexm.dpue@gmail.comಗೆಸಲ್ಲಿಸಬಹುದು.

ಚಲನಚಿತ್ರ ನಟ ಚೇತನ್ ವಿರುದ್ಧ ದೂರು

ಮಡಿಕೇರಿ: 'ನಟ ಚೇತನ್ ಕರಾವಳಿ ಭಾಗದ ದೈವಗಳ ಆರಾಧನೆ ಹಿಂದೂ ಸಂಸ್ಕೃತಿ ಅಲ್ಲ ಎಂದು ಹೇಳಿಕೆ ನೀಡಿ ಸಮಾಜದಲ್ಲಿ ಗೊಂದಲ ಸೃಷ್ಟಿಸಿ ಶಾಂತಿ ಕದಡಲು ಯತ್ನಿಸಿದ್ದಾರೆ' ಎಂದು ಆರೋಪಿಸಿ ಕೊಡಗು ಯುವ ಸೇನೆ ಜಿಲ್ಲಾ ಘಟಕದ ಉಪಾಧ್ಯಕ್ಷ ನಡುಮುಟ್ಲು ಪ್ರವೀಣ್ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್‌ಗೆ ದೂರು ಸಲ್ಲಿಸಿದ್ದಾರೆ.

Azadi Ka Amrit Mahotsav

ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI)

ಕಾರ್ಡ್ ಹೊಂದಿರುವವರಿಗೆ ತಮ್ಮ ಕಾರ್ಡ್ ಅನ್ನು ಟೋಕನೈಸ್ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಪ್ರೋತ್ಸಾಹಿಸುತ್ತದೆ

ಕಾರ್ಡುದಾರರ ಹಿತಾಸಕ್ತಿಗಳನ್ನು ರಕ್ಷಿಸಲು, ಅಕ್ಟೋಬರ್ 1, 2022ರಿಂದ ಜಾರಿಗೆ ಬರುವಂತೆ, ಕಾರ್ಡ್ ನೆಟ್‌ವರ್ಕ್‌ಗಳು ಮತ್ತು ಕಾರ್ಡ್ ವಿತರಕರನ್ನು ಹೊರತುಪಡಿಸಿ ಇತರ ಘಟಕಗಳು ಕಾರ್ಡ್ ಸಂಖ್ಯೆ, ಎಕ್ಸ್‌ಪೈರಿ ದಿನಾಂಕ ಇತ್ಯಾದಿ ಕಾರ್ಡ್ ಡೇಟಾವನ್ನು (ಅಂದರೆ ಕಾರ್ಡ್ ಆನ್ ಫೈಲ್ ಅಥವಾ ಸಿಓಎಫ್) ಸಂಗ್ರಹಿಸುವಂತಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಡ್ಡಾಯಗೊಳಿಸಿದೆ. ಹಾಗೆಯೇ, ಕಾರ್ಡುದಾರರಿಗೆ ಅನಾನುಕೂಲವಾಗದಂತೆ ಖಚಿತಪಡಿಸಿಕೊಳ್ಳಲು, ಸಿಓಎಫ್ ಟೋಕನೈಸೇಶನ್ ಅನ್ನು ಆರ್‌ಬಿಐ ಪರಿಚಯಿಸಿದೆ. ಟೋಕನೈಸೇಶನ್‌ನಿಂದಾಗಿ ಕಾರ್ಡ್‌ದಾರರು ಪ್ರತಿ ವಹಿವಾಟಿಗೆ ಕಾರ್ಡ್ ವಿವರಗಳನ್ನು ನಮೂದಿಸುವ ಅಗತ್ಯವಿರುವುದಿಲ್ಲ. ಅದೇ ಸಮಯದಲ್ಲಿ ವ್ಯಾಪಾರಿಯು ಕಾರ್ಡ್ ವಿವರಗಳನ್ನು ಸಂಗ್ರಹಿಸುವುದಿಲ್ಲ ಅಥವಾ ಬಳಸುವುದಿಲ್ಲ; ಹೀಗಾಗಿ ಕಾರ್ಡ್ ವಿವರಗಳ ಸಂಭಾವ್ಯ ನಷ್ಟ ಮತ್ತು ಸಂಬಂಧಿತ ದುರುಪಯೋಗ ತಡೆಯಲ್ಪಡುತ್ತದೆ. ಟೋಕನ್‌ಗಳ ಬಳಕೆಯು ಕಾರ್ಡ್ ವಹಿವಾಟಿನ ಸುರಕ್ಷತೆ ಮತ್ತು ಅನುಕೂಲತೆಯನ್ನು ಹೆಚ್ಚಿಸುತ್ತದೆ ಮತ್ತು ಇದು ಕಾರ್ಡ್‌ದಾರರ ಹಿತಾಸಕ್ತಿಯ ಪರವಾಗಿದೆ.

ಟೋಕನೈಸೇಶನ್ ಅಥವಾ ಸಿಓಎಫ್ ಟೋಕನೈಸೇಶನ್ ಎಂದರೇನು?

1. ಟೋಕನೈಸೇಶನ್ ಅನ್ನು ಯಾವುದೇ ಅನುಕೂಲಕರವಾದ ಸಮಯದಲ್ಲಿ ಮಾಡಬಹುದು.
2. ಟೋಕನೈಸೇಶನ್ ಎನ್ನುವುದು ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ವಿವರಗಳನ್ನು ''**ಟೋಕನ್**'' ಎಂಬ ವಿಶಿಷ್ಟ ಪರ್ಯಾಯ ಕೋಡ್‌ನೊಂದಿಗೆ ಬದಲಾಯಿಸುವ ಪ್ರಕ್ರಿಯೆಯಾಗಿದೆ.
3. ಟೋಕನೈಸೇಶನ್ ಪ್ರಕ್ರಿಯೆ ಆನ್‌ಲೈನ್/ಇ-ಕಾಮರ್ಸ್ ವಹಿವಾಟುಗಳಿಗೆ ಮಾತ್ರ ಅನ್ವಯವಾಗುತ್ತದೆಯೇ ಹೊರತು ಮುಖಾಮುಖಿ (face to face) ಅಥವಾ ಪಾಯಿಂಟ್ ಆಫ್ ಸೇಲ್ (PoS) ವಹಿವಾಟುಗಳಿಗೆ ಅಲ್ಲ.
4. ಟೋಕನೈಸೇಶನ್ ಅನ್ನು ಪ್ರತಿ ಕಾರ್ಡ್‌ಗೆ ಪ್ರತಿ ಆನ್‌ಲೈನ್/ಇ-ಕಾಮರ್ಸ್ ವ್ಯಾಪಾರಿಯಲ್ಲಿ ಒಮ್ಮೆ ಮಾತ್ರ ಮಾಡಿದರೆ ಸಾಕು. ಪ್ರತಿಯೊಂದು ಟೋಕನ್ ನಿರ್ದಿಷ್ಟ ಕಾರ್ಡ್ ಮತ್ತು ನಿರ್ದಿಷ್ಟ ಆನ್‌ಲೈನ್/ಇ-ಕಾಮರ್ಸ್ ವ್ಯಾಪಾರಿಗೆ ವಿಶಿಷ್ಟವಾಗಿರುತ್ತದೆ. ಕಾರ್ಡ್‌ದಾರರು ಒಂದೇ ಕಾರ್ಡ್ ಅನ್ನು ಅನೇಕ ಆನ್‌ಲೈನ್/ಇ-ಕಾಮರ್ಸ್ ವ್ಯಾಪಾರಿಗಳಲ್ಲಿ ಟೋಕನೈಸ್ ಮಾಡಬಹುದು.
5. ಒಂದು ಟೋಕನ್ ಯಾವ ವ್ಯಾಪಾರಿಗಾಗಿ ರಚಿತವಾಗಿದೆಯೋ, ಅದನ್ನು ಹೊರತುಪಡಿಸಿ ಬೇರೆ ವ್ಯಾಪಾರಿಗೆ ಪಾವತಿಸಲು ಬಳಸಲಾಗುವುದಿಲ್ಲ.
6. ಒಮ್ಮೆ ಟೋಕನ್ ರಚಿಸಿದ ನಂತರ, ಕಾರ್ಡುದಾರರು ಭವಿಷ್ಯದಲ್ಲಿ ವಹಿವಾಟುಗಳನ್ನು ಕೈಗೊಳ್ಳಲು ಟೋಕನ್ ವಿವರಗಳನ್ನು ನಮೂದಿಸುವ ಅಥವಾ ನೆನಪಿಟ್ಟುಕೊಳ್ಳುವ ಅಗತ್ಯವಿಲ್ಲ. ಟೋಕನೈಸ್ ಮಾಡಿದ ಕಾರ್ಡ್ ಅನ್ನು ಗುರುತಿಸಲು, ಚೆಕ್‌ಔಟ್ ಪ್ರಕ್ರಿಯೆಯಲ್ಲಿ ಆ ಕಾರ್ಡ್‌ನ ಕೊನೆಯ ನಾಲ್ಕು ಅಂಕೆಗಳನ್ನು ತೋರಿಸಲಾಗುವುದು.
7. ಕಾರ್ಡ್‌ದಾರರು ಸ್ವಇಚ್ಛೆಯಿಂದ ತಮ್ಮ ಟೋಕನ್ ನೋಂದಣಿಯನ್ನು ರದ್ದು ಮಾಡುವ ಆಯ್ಕೆಯನ್ನು ಹೊಂದಿರುತ್ತಾರೆ.

ಕಾರ್ಡ್ ಅನ್ನು ಟೋಕನೈಸ್ ಮಾಡುವುದು ಹೇಗೆ ?

1. ಟೋಕನೈಸೇಶನ್ ಆಯ್ಕೆ ಮಾಡಲು, ಕಾರ್ಡುದಾರರು ವ್ಯಾಪಾರಿ ವೆಬ್‌ಸೈಟ್/ಅಪ್ಲಿಕೇಶನ್‌ನಲ್ಲಿ ಒಮ್ಮೆಯಷ್ಟೆ ನೋಂದಾಯಿಸಬೇಕಾಗುತ್ತದೆ.
2. ನೋಂದಾಯಿಸಲು, ಕಾರ್ಡ್‌ದಾರರು ಕಾರ್ಡ್ ವಿವರಗಳನ್ನು ನಮೂದಿಸಬೇಕು ಮತ್ತು ಸಮ್ಮತಿ ಸೂಚಿಸಬೇಕು. ಕಾರ್ಡ್ ವಿತರಕರು OTPಯಂತಹ ಹೆಚ್ಚುವರಿ ದೃಢೀಕರಣದ ಮೂಲಕ ಆ ಸಮ್ಮತಿಗೆ ಮಾನ್ಯತೆ ನೀಡುತ್ತಾರೆ.

ಸುರಕ್ಷಿತ, ಸಂರಕ್ಷಿತ, ತಡೆರಹಿತ ಮತ್ತು ಅನುಕೂಲಕರ ಅನುಭವವನ್ನು ಹೊಂದಲು ಕಾರ್ಡ್‌ದಾರರು ತಮ್ಮ ಕಾರ್ಡ್‌ಗಳನ್ನು ಟೋಕನೈಸ್ ಮಾಡಲು ಪ್ರೋತ್ಸಾಹಿಸಿದೆ.

ಈ ಸಲಹೆಯನ್ನು ಆರ್‌ಬಿಐ ಮಾಹಿತಿ ಮತ್ತು ಸಾಮಾನ್ಯ ಮಾರ್ಗದರ್ಶನದ ಉದ್ದೇಶಕ್ಕಾಗಿ ಮಾತ್ರ ನೀಡಿದೆ. ಸ್ಪಷ್ಟೀಕರಣ ಅಥವಾ ವ್ಯಾಖ್ಯಾನದ ಅಗತ್ಯವಿದ್ದಲ್ಲಿ, ಆರ್‌ಬಿಐ ಹೊರಡಿಸಿರುವ ಸಂಬಂಧಿತ ಸುತ್ತೋಲೆಗಳು ಮತ್ತು ಅಧಿಸೂಚನೆಗಳಿಂದ ಮಾರ್ಗದರ್ಶನ ಪಡೆಯಬಹುದು.

‘ಅಕ್ಕರೆ’ಯ ಅನ್ನಪೂರ್ಣೆಯರು

ಹೆಣ್ಣುಮಕ್ಕಳಿಗೆ ಆಗಾಗ್ಗೆ ಅಡುಗೆ ಮನೆಯಿಂದ ಪರಿತ್ಯಕ್ತರಾಗಬೇಕೆಂಬ ವಿರಕ್ತಭಾವ ಹುಟ್ಟುವುದು ಸಹಜ. ಆಗೆಲ್ಲ ಕೈ ಹಿಡಿಯುವರು ‘ಅಮ್ಮನ ಅಕ್ಕರೆ’ಯ ಈ ಅಕ್ಕ–ತಂಗಿಯರು.

‘ಅಕ್ಕರೆಯ ಅಡುಗೆ’ ತಯಾರಿಸುವಲ್ಲಿ ನಿರತರಾಗಿರುವ ತಂಡ

ಸಂಧ್ಯಾಹೆಗಡೆ

ನಗರದಲ್ಲಿ ನಾಲ್ಕು ಗೋಡೆಗಳ ನಡುವೆ ಹೇಗಪ್ಪಾ ಸಮಯ ಕಳೆಯೋದು, ಬದುಕೇ ಅಸಹನೀಯ ಆಗೋಗಿದೆ ಎಂದು ಗೊಣಗಿಕೊಳ್ಳುವ ಗೃಹಿಣಿಯರಿಗೆ ಈ ಸ್ನೇಹಿತೆಯರ ಲವಲವಿಕೆಯ ಕತೆಗಳು ಇಷ್ಟ ಆಗೇ ಆಗುತ್ತವೆ. ಅಡುಗೆಯನ್ನೇ ಆನಂದಿಸುವ, ತರಕಾರಿ ಕತ್ತರಿಸುತ್ತ ಕಳವಳಗಳನ್ನ ಕಳಚಿ ಹಗುರಾಗುವ, ಸಾಸಿವೆ, ಜೀರಿಗೆ, ಕೊತ್ತಂಬರಿ ಕಾಳಿನಲ್ಲಿ ಕನಸನ್ನು ತುಂಬಿಕೊಂಡು, ವಗ್ಗರಣೆ ಡಬ್ಬಿಯನ್ನು ಮಡಿಲಲ್ಲಿ ಹೊತ್ತು ತಿರುಗುವವರು ಈ ಅನ್ನಪೂರ್ಣೆಯರು.

ಅಡುಗೆಮನೆ ನಿರ್ವಹಣೆ , ಅಡುಗೆ ತಯಾರಿ ಇವೆಲ್ಲ ಮಹಿಳೆಯರ ಬೆನ್ನಿಗಂಟಿಕೊಂಡ ‘ಮೂಲಭೂತ ಕರ್ತವ್ಯ’ಗಳು! ಶ್ರದ್ಧೆಯಿಂದ ನಿರ್ವಹಿಸುವ ಈ ಕರ್ತವ್ಯ ಒಮ್ಮೊಮ್ಮೆ ಏಕತಾನತೆಯ ಬೇಸರವನ್ನೂ ಹುಟ್ಟಿಸುತ್ತದೆ. ಅಡುಗೆ ಮನೆಯಿಂದ ಪರಿತ್ಯಕ್ತಳಾಗಬೇಕೆಂಬ ವಿರಕ್ತಭಾವ ಹುಟ್ಟಿಸುತ್ತದೆ. ಆಗ ಥಟ್ಟನೆ ನೆನಪಾಗುವುದು ‘ಅಮ್ಮನ ಅಕ್ಕರೆ’ಯ ಅಕ್ಕ–ತಂಗಿಯರು.

ಅಡುಗೆ ಅಂದರೆ ಇವರಿಗೆ ಸಂತೈಸುವ ಕೈಗಳು ಬಾಚಿ ತಬ್ಬಿಕೊಂಡಂತೆ, ಒಡಲ ನೋವಿನ ಹಾಡಿಗೆ ಸ್ವರ ಸೇರಿದಂತೆ, ಖುಷಿಯ ಬಲೂನು ಬಾನಿಗೆ ಹಾರಿಬಿಟ್ಟಂತೆ, ಇವೆಲ್ಲಕ್ಕಿಂತ ಮುಖ್ಯವಾಗಿ ಹಸಿದ ಹೊಟ್ಟೆಗೆ ಸಂತೃಪ್ತ ಊಟ ನೀಡಿದ ತೃಪ್ತಭಾವ.

ಬೆಂಗಳೂರಿನಲ್ಲಿ ‘ಅಮ್ಮನ ಅಕ್ಕರೆ’ ಅಡುಗೆ ಮಹಿಳೆಯರ ತಂಡದ ಬಗ್ಗೆ ಗೊತ್ತಿಲ್ಲದವರು ಕಡಿಮೆ. ಕೇಟರಿಂಗ್ ಉದ್ಯಮ ನಡೆಸುವ ಹಲವಾರು ತಂಡಗಳು ಬೃಹತ್ ಬೆಂಗಳೂರಿನಲ್ಲಿವೆ. ಆದರೆ, ಇಬ್ಬರು ಮಹಿಳೆಯರು ಮಹಿಳೆಯರಿಗಾಗಿ ಕಟ್ಟಿರುವ ಈ ತಂಡ ಪ್ರೀತಿ, ಆತಿಥ್ಯದ ಮೂಲಕ ಜನರ ಮನ ಗೆದ್ದಿದೆ, ವಿಭಿನ್ನವಾಗಿ ಗುರುತಿಸಿಕೊಂಡಿದೆ.

ಸಹನಾ ಸುರೇಶ್ ‘ಅಕ್ಕರೆಯ ಅಡುಗೆ‘ ತಂಡ

ಸಾಗರ ಸಾಲೆಕೊಪ್ಪದ ಸಹನಾ ಸುರೇಶ್ ಮತ್ತು ಭಾಗ್ಯ ಈ ತಂಡದ ರೂವಾರಿಗಳು. ನಾಲ್ಕು ವರ್ಷಗಳ ಹಿಂದೆ ನಾಲ್ವರು ಸೇರಿ, ಬಿಡುವಿನ ವೇಳೆಯನ್ನು ಖುಷಿಯಿಂದ ಕಳೆಯಲು ಶುರು ಮಾಡಿದ ಅಡುಗೆಯೆಂಬ ಕಾಯಕ ಈಗ 30ಕ್ಕೂ ಹೆಚ್ಚು ಮಹಿಳೆಯರಿಗೆ ಜೀವನಾಧಾರವಾಗಿದೆ.

‘ಶಿವಮೊಗ್ಗದಲ್ಲಿದ್ದಾಗ ಮನೆಗೆ ನೆಂಟರು, ಆಪ್ತರು ಬರ್ತಿದ್ರು, ಅಡುಗೆ ಮಾಡಿ ಬಡಿಸುತ್ತಿದ್ದೆ. ಯಜಮಾನರಿಗೆ ವರ್ಗವಾಗಿ, ಯಾವಾಗ ಬೆಂಗಳೂರಿಗೆ ಬಂದೆನೋ ಎರಡನೇ ಮಹಡಿಯ ನಾಲ್ಕು ಗೋಡೆಗಳ ನಡುವೆ ಕುಳಿತು ತಲೆ ಚಿಟ್ಟು ಹಿಡಿಯಿತು. ಬೆಳಿಗ್ಗೆ 8 ಗಂಟೆಗೆ ಮನೆಗೆಲಸ ಮುಗಿಸಿ, ಕುಳಿತರೆ ದಿಕ್ಕು ತೋಚದು, ಟಿವಿ ನೋಡುವ ಅಭ್ಯಾಸವೇ ಇಲ್ಲ. ವಾಪಸ್ ಊರಿಗೇ ಹೋಗಿಬಿಡಬೇಕು ಎಂದುಕೊಳ್ಳುತ್ತಿರುವಾಗ, ಕಾರ್ಯದ ಮನೆಯಲ್ಲಿ ಊಟ ಬಡಿಸಲು ಬಂದವರಿಬ್ಬರ ಪರಿಚಯ ಮಾಡಿಕೊಂಡೆ. ಅವರ ಜತೆ ಶ್ರೀಕಾಂತ ಬಾಪಟರ ಅಡುಗೆ ತಂಡಕ್ಕೆ ಸೇರಿಕೊಂಡೆ. ಹಾಗೆ ಆರಂಭವಾದ ಅಡುಗೆಯ ಆಹ್ಲಾದ ಮುಂದೆ ಸ್ವತಂತ್ರ ನಿರ್ವಹಣೆಯ ಪಾಠ ಕಲಿಸಿತು’ ಎನ್ನುವ ತಂಡದ ನಾಯಕಿ ಸಹನಾ ಅವರಿಗೆ ಅಡುಗೆ ಒಂದು ಕ್ಷಣಕ್ಕೂ ಬೋರ್ ಅನ್ನಿಸಿದ್ದೇ ಇಲ್ಲವಂತೆ.

ಬೆಂಗಳೂರು ಸುತ್ತಮುತ್ತ ಎಲ್ಲೇ ಕರೆದರೂ ಅಮ್ಮನ ಅಕ್ಕರೆಯ ಹೆಂಗಳೆಯರು ಅಡುಗೆ ಮಾಡಿ ಬಡಿಸುತ್ತಾರೆ. ದೂರದ ಕೊಯಮತ್ತೂರಿಗೂ ಹೋಗಿ ಅಡುಗೆ ಉಣಬಡಿಸಿದ್ದಾರೆ. ಮದುವೆ, ಉಪನಯನ, ದೇವರ ಕಾರ್ಯ ಅಷ್ಟೇ ಅಲ್ಲ ತಿಥಿ ಅಡುಗೆ ಮಾಡಲು ಸೈ ಎನ್ನುವ ಈ ಮಹಿಳೆಯರು, 10 ಜನರಿದ್ದರೂ, ಸಾವಿರ ಜನರಿದ್ದರೂ ಅಷ್ಟೇ ಅಚ್ಚುಕಟ್ಟಾಗಿ ಅಡುಗೆ ಮಾಡುತ್ತಾರೆ. ‘ಮನೆ ಆತಿಥ್ಯ’ ಇವರ ಸರಳ ಸೂತ್ರ.

ಕಷ್ಟ ಕೋಟಲೆಗಳು ನೂರೆಂಟಿದ್ದರೂ, ಎದೆಯೊಳಗಣ ತಲ್ಲಣಗಳನ್ನು ಹುದುಗಿಟ್ಟು ನಗುನಗುತ್ತ ‘ಇನ್ನೂ ಸ್ವಲ್ಪ ಕೇಸರಿ ಹಾಕಿಸಿಕೊಳ್ಳಿ, ಇನ್ನೊಂದು ಕಡಬು ತಿನ್ನಿ ಏನಾಗಲ್ಲ, ತಂಬುಳಿ ಆರೋಗ್ಯಕ್ಕೆ ಒಳ್ಳೆಯದು’ ಎನ್ನುತ್ತ ನಗುನಗುತ್ತ ಊಟ ಬಡಿಸುತ್ತಾರೆ. ಸ್ನೇಹಿತರ ನಡುವೆ ಸಮಾನತೆ ಕಾಯ್ದುಕೊಳ್ಳಲು ಸಮವಸ್ತ್ರದ ಸೀರೆ ತೊಡುವ ಕ್ರಮ ಅಳವಡಿಸಿಕೊಂಡಿದ್ದಾರೆ.

‘ಮನೆಯವರ ತರಹ ನಗ್ತಾ ನಗ್ತಾ ಪ್ರೀತಿಯಿಂದ ಬಡಸ್ತೀರಿ’ ಎಂದು ಹೇಳಿದವರೇ ಹೆಚ್ಚಿನವರು ವಿನಾ, ಯಾರೂ ಇಲ್ಲಿಯ ತನಕ ಕೀಳಾಗಿ ಕಂಡಿದ್ದು, ಅಯ್ಯೋ ಅಡುಗೆ ಮಾಡುವವರು ಇವರು ಎಂದು ಹೀಗಳೆದಿದ್ದು ಅನುಭವಕ್ಕೆ ಬಂದಿಲ್ಲ. ಇದು, ಅಡುಗೆಯ ಗೌರವ ಔನ್ನತ್ಯಕ್ಕೇರಿಸಿದ್ದಷ್ಟೆ ಅಲ್ಲ, ನಮ್ಮಲ್ಲಿ ಆತ್ಮಸ್ಥೈರ್ಯವನ್ನೂ ತುಂಬಿದೆ ಎನ್ನುತ್ತಾರೆ ಅಕ್ಕರೆಯ ಸದಸ್ಯೆಯರು.

ಟೊಮೆಟೊ ತಂಬುಳಿ, ಮಾವಿನ ಕಾಯಿ ಬೂತಗೊಜ್ಜು, ಕೆಂಪವಲಕ್ಕಿ ಹೀಗೆ ಅಪ್ಪಟ ಮಲೆನಾಡಿನ ಅಡುಗೆಯಿಂದ ಬಿಸಿಬೇಳೆ ಬಾತ್, ಪುಲಾವ್, ವಾಂಗಿಬಾತ್, ಉತ್ತರ ಭಾರತದ ಅಡುಗೆ ಹೀಗೆ ನಾಲಿಗೆ ಬಯಸುವ ರುಚಿ ಸಿದ್ಧಪಡಿಸುವ ಇವರು ಎಂದಿಗೂ ಟೇಸ್ಟಿಂಗ್ ಪೌಡರ್ ಬಳಸಿದ್ದೇ ಇಲ್ಲವಂತೆ. ‘ನಾನಂತೂ ಟೇಸ್ಟಿಂಗ್ ಪೌಡರ್ ಹೇಗಿರುತ್ತೆ ಅಂತನೂ ನೋಡಿಲ್ಲ, ಹೋಟೆಲ್ ಊಟವೂ ನಂಗೆ ಇಷ್ಟ ಅಲ್ಲ’ ಎನ್ನುತ್ತಿದ್ದರು ಸಹನಾ.

ಮನೆಯ ಆಪ್ತತೆ ಇರಬೇಕು, ಉಳಿದವರಿಗೆ ಕಿರಿಕಿರಿ ಆಗಬಾರದು ಎಂಬ ಕಾರಣಕ್ಕೆ ಅಡುಗೆ ಸಿದ್ಧತೆಯ ವೇಳೆ ಮೊಬೈಲ್ ಬಳಕೆಗೆ ನಿಷೇಧ ವಿಧಿಸಿಕೊಂಡಿದ್ದಾರೆ.

‘ಅಡುಗೆ ಎನ್ನುವುದು ನಮಗೆ ಉದ್ಯಮ ಅನ್ನುವುದಕ್ಕಿಂತ ಅದೊಂದು ಬಿಡುಗಡೆಯ ನೆಮ್ಮದಿ. ಮನೋಬಲ ಹೆಚ್ಚಿಸುವ ಮಾಧ್ಯಮ. ನಮ್ಮ ತಂಡದಲ್ಲಿರುವ ಹೆಚ್ಚಿನವರು ಆರ್ಥಿಕ ಅಗತ್ಯ ಇರುವವರೇ. ಕುಟುಂಬದ ನಿರ್ವಹಣೆಯ ಜತೆಗೆ ಚಿತ್ತ ನಿರ್ವಹಣೆಗೆ ಅವರಿಗೆ ಇದು ಆಧಾರವಾಗಿದೆ. ಹೆಂಗಸರ ಜತೆ ಒಮ್ಮೊಮ್ಮೆ ಊಟ ಬಡಿಸಲು ಅವರ ಗಂಡಂದಿರು, ಮಕ್ಕಳು ಕೂಡ ಬರುತ್ತಾರೆ’ ಎನ್ನುತ್ತಿರುವಾಗಲೇ ಸಹನಾ ಅವರಿಗೆ ಮಹಿಳೆಯೊಬ್ಬರು ಕಾಲ್ ಮಾಡಿ, ‘ಅಕ್ಕಾ ನಾಳೆಯಿಂದ ನಾನು ಬರಲೇ’ ಎಂದ ದನಿ ಕೇಳಿಸಿತು.

ಭಾನುವಾರದ ರಜೆ ಅಡುಗೆ ಮಾಡಲು ಮೂಡ್ ಇಲ್ಲ ಅಂದ್ರೆ, ಅಕ್ಕರೆಯ ಅಮ್ಮಂದಿರಿಗೆ ಕರೆ ಮಾಡಿದರೆ ಸಾಕು, ಕನಿಷ್ಠ 10 ಜನರಿದ್ದರೂ ಮನೆಗೇ ಬಂದು ಅಡುಗೆ ಮಾಡಿಕೊಡುತ್ತಾರೆ. ಇವರ ಸಂಪರ್ಕ ಸಂಖ್ಯೆ: 9480792653. ❖

ಕೋಪವನ್ನು ಆರೋಗ್ಯಕರವಾಗಿ ಹೊರಹಾಕುವುದು ಹೇಗೆ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• ಆಚಾರ ವಿಚಾರವನ್ನು ಪಾಲಿಸುವ ಸುಸಂಸ್ಕೃತ ಮನೆತನದ ಗೃಹಿಣಿ ನಾನು. ಈಚೀಚೆಗೆ ವಿಪರೀತ ಸಿಟ್ಟು ಬರುತ್ತದೆ. ಸಿಟ್ಟು ಬಂದಾಗ ಕೆಟ್ಟ ಕೊಳಕ ಬೈಗುಳಗಳನ್ನು ಬೈಯುತ್ತೀನಿ. ನನ್ನ ಅಭಿರುಚಿಗೆ ತಕ್ಕ ಗಂಡ ಸಿಗಲಿಲ್ಲ ಎಂಬ ಬೇಸರವಿದೆ. ಅಪ್ಪ ಅಮ್ಮನ ಪ್ರೀತಿ ಸಿಗಲಿಲ್ಲ, ಹೆಣ್ಣುಮಗಳು ಎಂಬ ಕಾರಣಕ್ಕೆ ಆದ ಅವಮಾನ ಸಂಕಟ ಇವೆಲ್ಲವೂ ನನ್ನೊಳಗೆ ಸೇರಿ ಹೀಗೆ ಮಾಡಿಸುತ್ತಿರಬಹುದೇ? ಎರಡು ವರ್ಷದ ಮಗನಿದ್ದಾನೆ. ನನ್ನ ಬೈಗುಳ ಅವನಿಗೆಲ್ಲಿ ಬಂದುಬಿಡುತ್ತೋ ಅನ್ನೋ ಭಯ. ಸಿಟ್ಟು ಬಂದಾಗ ಕೆಟ್ಟ ಬೈಗುಳ ಬಾರದೇ ಇರುವ ಹಾಗೇ ಮಾಡಲು ಏನಾದರೂ ಉಪಾಯ ಇದೆಯೇ? ನನ್ನ ಸುತ್ತಮುತ್ತ ಯಾರೂ ಕೆಟ್ಟಮಾತನ್ನು ಬಳಸುವುದಿಲ್ಲ. ನನ್ನ ಬಾಲ್ಯದಲ್ಲಿಯೂ ಈ ಬೈಗುಳ ಕೇಳಿದವಳಲ್ಲ. ಆದರೂ ಈ ಬೈಗುಳಗಳು ಹೇಗೆ ಬರುತ್ತಿವೆ ಎಂಬುದು ಅರ್ಥವಾಗುತ್ತಿಲ್ಲ. ಎಷ್ಟೇ ನಿಯಂತ್ರಣ ಮಾಡಿಕೊಂಡರೂ ಸಾಧ್ಯವಾಗುತ್ತಿಲ್ಲ. ಉಳಿದಂತೆ ನಾನು ನಾರ್ಮಲ್ ಆಗಿದ್ದೇನೆ. ಪರಿಹಾರವೇನು?

ವಿಂಧ್ಯಾ ಬುಧ್ಯ, ಊರು ತಿಳಿಸಿಲ್ಲ.

ನಿಮ್ಮೊಳಗೆ ಮೂಡುವ ಕೋಪ ಹೊರಬರಲೇಬೇಕು. ಅದಿಲ್ಲದಿದ್ದರೆ ನಿಮ್ಮ ಆರೋಗ್ಯ ಹಾಳಾಗಬಹುದು. ಹಾಗಾಗಿ ಕೋಪ ಬಂದಾಗ ಬೈಗುಳಗಳನ್ನು ನಿಲ್ಲಿಸುವುದನ್ನು ಮಾತ್ರ ಗುರಿಯಾಗಿ ಇಟ್ಟುಕೊಳ್ಳದೆ ನಿಮ್ಮ ಕೋಪವನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಂಡು ನಿಭಾಯಿಸುವುದನ್ನು ಕಲಿಯಬಹುದಲ್ಲವೇ? ಮೊದಲನೆಯದಾಗಿ ಎಷ್ಟು ಚಂದವಾಗಿ ಪತ್ರವನ್ನು ಬರೆದಿದ್ದೀರಿ. ನಿಮ್ಮ ಪ್ರಾಮಾಣಿಕತೆ ಮತ್ತು ಸಂವೇದನಾ ಶೀಲತೆಗಾಗಿ ಅಭಿನಂದಿಸುತ್ತೇನೆ. ಇವೆರೆಡನ್ನು ಬಳಸಿಕೊಂಡು ನೀವು ಸಂತೋಷ ಸಮಾಧಾನಗಳಿಂದ ಬದುಕುವುದು ಹೇಗೆ ಎಂದು ಯೋಚಿಸೋಣ.

ಎರಡನೆಯದಾಗಿ ಕೋಪದ ಆರಂಭವನ್ನು ಗುರುತಿಸುವ ಅಭ್ಯಾಸ ಮಾಡಿ. ಕೋಪ ನಿಮ್ಮ ದೇಹದ ಬೇರೆಬೇರೆ ಅಂಗಾಂಗಗಳಲ್ಲಿ ತನ್ನ ಸೂಚನೆ ನೀಡುತ್ತದೆ. ಇವುಗಳಿಂದ ನಿಮ್ಮ ಕೋಪ ಹೆಚ್ಚುತ್ತಿರುವುದರ ಅರಿವನ್ನು ಬೆಳೆಸಿಕೊಳ್ಳಿ. ತಕ್ಷಣ ನಿಧಾನವಾಗಿ ಉಸಿರಾಡುತ್ತಾ ಸಾಧ್ಯವಿರುವಷ್ಟು ದೇಹವನ್ನು ಸಡಿಲಬಿಡುತ್ತಾ ದೇಹವನ್ನು ಸಂತೈಸಿಕೊಳ್ಳಿ. ನಾನು ಕೋಪದಲ್ಲಿದ್ದೇನೆ, ಹಾಗಾಗಿ ಕೆಟ್ಟಮಾತು ಬರಬಹುದು ಎಂದು ನಿಮ್ಮನ್ನು ಎಚ್ಚರಿಸಿಕೊಳ್ಳಿ. ಸಾಧ್ಯವಿದ್ದರೆ ಆ ಸ್ಥಳದಿಂದ ದೂರಹೋಗಿ. ಅಥವಾ ‘ನನಗೆ ಕೋಪ ಬಂದಿದೆ, ಈಗ ಮಾತನಾಡುವುದಿಲ್ಲ, ನಂತರ ಹೇಳುತ್ತೇನೆ‘ ಎಂದಷ್ಟೇ ಹೇಳಿ ಅಲ್ಲಿಂದ ದೂರಹೋಗಿ.

ಮೂರನೆಯದಾಗಿ ನಿಮ್ಮ ಕೋಪವನ್ನು ಶತ್ರುವನ್ನಾಗಿ ಮಾಡಿಕೊಳ್ಳದೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಪೋಷಕರಿಂದ ಸಿಗದ ಪ್ರೀತಿ, ಬದಲಾಗಿ ಸಿಕ್ಕ ನೋವು ಅವಮಾನ, ಸೂಕ್ತ ಸಂಗಾತಿ ಸಿಗದಿರುವ ಹತಾಶೆ ಮುಂತಾದವು ನಿಮ್ಮೊಳಗೆ ಮೂಡಿಸುತ್ತಿರುವ ಭಾವನೆಗಳೇನು? ಅದು ಹತಾಶೆಯೆ? ಅಸಹಾಕತೆಯೇ? ಕೀಳರಿಮೆಯೇ? ನಿಮ್ಮನ್ನೇ ನೀವು ಕಳೆದುಕೊಂಡ ಮತ್ತು ಗೌರವಿಸಿಕೊಳ್ಳಲಾಗದ ಅನುಭವವೇ? ಇವೆಲ್ಲವನ್ನೂ ಸಹಜವೆಂದು ಸ್ವೀಕರಿಸಿ. ಬಾಲ್ಯದಲ್ಲಿ ಪೋಷಕರ ಮೇಲೆ ಅವಲಂಬಿತರಾಗಿದ್ದಾಗ ನೀವು ಅಸಹಾಯಕರಾಗಿದ್ದು ನಿಜ. ಆದರೆ ಈಗ ನೀವು ವಯಸ್ಕರು, ನಿಮ್ಮೊಳಗೆ ಇರುವ ಯಾವ ಶಕ್ತಿಯೂ ನಾಶವಾಗಿಲ್ಲ, ಜೀವನವನ್ನು ಬೇರೆ ರೀತಿಯಲ್ಲಿ ರೂಪಿಸಿಕೊಳ್ಳಲು ನೀವು ಸಮರ್ಥರು ಎಂದು ನೆನಪಿಸಿಕೊಳ್ಳಿ. ನಂತರ ಎಂತಹ ಬದುಕು ನನಗೆ ಇಷ್ಟ ಮತ್ತು ಅದನ್ನು ನಿಧಾನವಾಗಿ ರೂಪಿಸಿಕೊಳ್ಳುವುದು ಹೇಗೆ ಎಂದು ಯೋಚಿಸಿ. ಹಾಗೆಯೇ ಹಂತಹಂತವಾಗಿ ಬೆಳೆಯುವ ಪ್ರಯತ್ನ ಪ್ರಾರಂಭಿಸಿ.

ನೆನಪಿಡಿ; ಬಾಲ್ಯದ ಅನುಭವಗಳು ನಿಮ್ಮೊಳಗೆ ಅಸಹಾಯಕತೆ ಹತಾಶೆ ಕೀಳರಿಮೆಗಳನ್ನು ಮೂಡಿಸುತ್ತಿವೆ. ಇವುಗಳೇ ಇವತ್ತು ಕೋಪವಾಗಿ ಬದಲಾಗುತ್ತಿವೆ. ಭಿನ್ನಾಭಿಪ್ರಾಯ ಬೇಸರ ಕೋಪಗಳನ್ನು ಗೌರವಯುತವಾಗಿ ವ್ಯಕ್ತಪಡಿಸುವುದು ಹೇಗೆ ಎಂದು ಯೋಚಿಸಿ. ನಿಮ್ಮ ಯಾವುದೇ ಶಕ್ತಿಯೂ ಬಾಲ್ಯದ ಕಹಿ ಅನುಭವಗಳಿಂದ ಅಳಿಸಿ ಹೋಗಿರುವುದಿಲ್ಲ. ಅವುಗಳನ್ನು ಗುರುತಿಸಿ ಬಳಸುವುದನ್ನು ಕಲಿಯಬೇಕಾಗಿರುವುದು ಮಾತ್ರ ನೀವೇ? ಆರಂಭದ ದಾರಿ ಕಠಿಣವಾಗಿರಬಹುದು. ಪ್ರಯತ್ನವನ್ನು ಮಾಡುತ್ತಲೇ ಇದ್ದರೆ ಬದಲಾವಣೆಗಳು ಆಗಲೇಬೇಕಲ್ಲವೇ?

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಬೆಳಕಿನ ಹಬ್ಬಕ್ಕೆ ಸಿಹಿ ರೆಸಿಪಿ

ನಳಪಾಕ

ಕಾಶಿ ಹಲ್ವಾ



ಬೇಕಾಗುವ ಸಾಮಗ್ರಿಗಳು: ತುರಿದ ಬೂದುಗುಂಬಳಕಾಯಿ , ಒಂದು ಕಪ್ ಸಕ್ಕರೆ, ಕಾಲು ಟೀ ಸ್ಪೂನ್ ಕೇಸರಿ, ಅರ್ಧ ಕಪ್ ತುಪ್ಪ, 15 ಗೋಡಂಬಿ, ಕಾಲು ಟೀ ಸ್ಪೂನ್ ಏಲಕ್ಕಿ

ಮಾಡುವ ವಿಧಾನ: ತುರಿದ ಬೂದುಗುಂಬಳಕಾಯಿಯನ್ನು ಅದರ ಸಿಪ್ಪೆಯಿಂದ ಬೇರ್ಪಡಿಸಿ ಸಂಪೂರ್ಣವಾಗಿ ಬೇಯಿಸಿ. ಚೆನ್ನಾಗಿ ಬೆಂದ ಬೂದುಗುಂಬಳಕಾಯಿಗೆ ಸಕ್ಕರೆ, ಕೇಸರಿ ಸೇರಿಸಿ. ಸಕ್ಕರೆ ಕರಗುವವರೆಗೂ ಚೆನ್ನಾಗಿ ತಿರುವಿ. ಸಕ್ಕರೆ ಪಾಕ ದಪ್ಪವಾಗುವವರೆಗೂ ಕುದಿಸಿ. ಇದಕ್ಕೆ ತುಪ್ಪ ಸೇರಿಸಿ ತಿರುವಿ. ಈಗ ಸಿದ್ಧಗೊಂಡ ಕಾಶಿ ಹಲ್ವಾಗೆ ಹುರಿದ ಗೋಡಂಬಿ, ಏಲಕ್ಕಿ ಪುಡಿಯನ್ನು ಹಾಕಿ ತಿರುವಿ.

ದೀಪಾವಳಿಯ ಚಂಬೆಳಕಿಗೆ ಸಂಸ್ಕೃತಿಯ ಕಳೆ

ಹಳದಿ ಬಿಳಿ ಬಣ್ಣದಲ್ಲಿ ಮನೆಯ ಸಿಂಗಾರ...

ಚಿತ್ರಗಳು: ಅಣ್ಣಪ್ಪ ದಿಗಟೆಕೊಪ್ಪ

ವೀರಭದ್ರ ಸೂರಗುಪ್ಪೆ

ಬೆಳಕಿನ ಹಬ್ಬ ದೀಪಾವಳಿಗೂ ಮನೆ ಬೆಳಗುವ ಹೆಣ್ಣುಮಕ್ಕಳ ಬದುಕಿಗೂ ಸಾಮ್ಯತೆ ಇದೆ. ತಮದಿಂದ ಬೆಳಕಿನೆಡೆಗೆ ಬದುಕು ಹೊರಳಿಕೊಳ್ಳಬೇಕಾದಾಗೆಲ್ಲ ಹೆಣ್ಣುಮಕ್ಕಳ ಕಾಣ್ಕೆ ದೊಡ್ಡದಿದೆ. ಮನಸ್ಸುಗಳನ್ನು, ಸಂಸ್ಕೃತಿಯನ್ನು ಏಕಕಾಲಕ್ಕೆ ಬೆಸೆಯುವ ಹಬ್ಬ ಎನ್ನುವ ಹಿನ್ನೆಲೆಯಲ್ಲಿ ಮಲೆನಾಡಿನ ದೀವರ ಜನಾಂಗದ ಮಹಿಳೆಯರು ಆಚರಿಸುವ ದೀಪಾವಳಿ ವಿಶೇಷವಾಗಿದೆ.

ದೀಪಾವಳಿಯನ್ನು ಬೋರೆ ಹಬ್ಬ, ದೊಡ್ಡಬ್ಬ, ವರ್ಷತೊಡಕು ಹೀಗೆ ಮೂರು ದಿನಗಳ ಕಾಲ ದೀವರ ಮಹಿಳೆಯರು ವಿಶಿಷ್ಟವಾಗಿ ಆಚರಿಸುತ್ತಾರೆ. ಈ ಸಂಭ್ರಮದ ತಿದಿ ಊದುವುದೇ ಪ್ರಕೃತಿಯ ಆರಾಧನೆಯಿಂದ.

ಮೊದಲ ದಿನದ ಬೋರೆ ಹಬ್ಬದಂದು ಬೋರೆಗೊಚ್ಚು ಅಂದರೆ ಗೊಚ್ಚು ಮಣ್ಣನ್ನು ಮನೆಯ ಅಂಗಳ, ಬಾಗಿಲು, ಉಬ್ಬು ತಗ್ಗಾದ ಕೊಟ್ಟಿಗೆಯ ಭಾಗಕ್ಕೆ ಹಾಕಿ ಸಮತಟ್ಟು ಮಾಡುತ್ತಾರೆ. ನಂತರ ಸಗಣಿಯಿಂದ ಅಂಗಳವನ್ನು ಸಾರಿಸಿ, ಜೇಡಿ ಕೆಮ್ಮಣ್ಣು ಬಳಸಿ ಒರೆಯಲಾಗುತ್ತದೆ. ನಂತರ ರಂಗೋಲಿಯಿಂದ ಸಿಂಗರಿಸಲಾಗುತ್ತದೆ.

ಮುಂಜಾನೆ ಸೂರ್ಯೋದಯಕ್ಕೆ ಮುನ್ನ ಹೆಣ್ಣುಮಕ್ಕಳೆಲ್ಲ ಸೇರಿ ಹೊಸ ಮಣ್ಣಿನ ಮಗೆಗೆ (ಮಡಿಕೆಗೆ) ಬಾವಿಯಿಂದ ನೀರು ತಂದು ಹಾಕುತ್ತಾರೆ. ಕಲ್ಲಿನ ಹರಳು ಹಾಕಿ ಬಲೀಂದ್ರನ ತಂದು ಅಡಿಕೆ ಹಿಂಗಾರ, ಹಸಿ ಅಡಿಕೆ, ವೀಳ್ಯೆದೆಲೆ ,ಹೂವು ಬೋರೆ ಕಣ್ಣಿ(ಜಾನುವಾರುಗಳನ್ನ ಕಟ್ಟುವ ಹಗ್ಗ,ಕಣ್ಣಿ,ಮಿಣಿ) ಗಳನ್ನ ಇಟ್ಟು ಪೂಜಿಸಲಾಗುತ್ತದೆ. ಆ ದಿನ ರಾಜ್ಯದ ಮಕ್ಕಳನ್ನು ನೋಡಲು ಬಲಿಚಕ್ರವರ್ತಿ ಬರುತ್ತಾನೆ ಎಂಬ ನಂಬಿಕೆ ಇರುವುದರಿಂದ ಅವನನ್ನು ಆರಾಧಿಸಲಾಗುತ್ತದೆ.

ಅಮಾವಾಸ್ಯೆಯ ದಿನದಂದು ಮತ್ತೆ ಮನೆಯನ್ನೆಲ್ಲ ಚೊಕ್ಕ ಮಾಡಿ, ಅಡಿಕೆ, ತೆಂಗು, ಮಾವು ಇತ್ಯಾದಿ ಮರಗಳಿಗೆ ಜೇಡಿ ಕೆಮ್ಮಣ್ಣಿನಿಂದ ಚಿತ್ತಾರ ಬರೆಯಲಾಗುತ್ತದೆ. ಜತೆಗೆ ಗೋಪೂಜೆಗಾಗಿ ಗೋವುಗಳನ್ನು ಸಿಂಗರಿಸಲಾಗುತ್ತದೆ. ಪುರುಷರು ದನಕರುಗಳ ಕೋಡಿಗೆ ಹಸಿರು, ಕೆಂಪು ಬಣ್ಣ ಬಳಿದು ಬ್ಯಾಗಡೆ (ಬಣ್ಣದ ಪೇಪರ್) ಹಚ್ಚಿ , ಬಾಸಿಂಗದ ಜತೆ ಹೂವಿನಿಂದ ಸಿಂಗರಿಸುತ್ತಾರೆ.

ಮಹಿಳೆಯರು ಹಿಂದಿನ ದಿನವೇ ಬೇಯಿಸಿದ ಅಕ್ಕಿಹಿಟ್ಟಿನ ಚಪ್ಪೆ ರೊಟ್ಟಿಯನ್ನು ಮಾಡುತ್ತಾರೆ. ಹೆಸರುಕಾಳು, ಕಡಲೆ ನೆನೆಹಾಕಿ, ಹೋಳಿಗೆ ಸೇರಿದಂತೆ ತರಹೇವಾರಿ ಸಿಹಿತಿಂಡಿ ಕಡುಬು ಮಾಡುತ್ತಾರೆ.

ದೊಡ್ಡಬ್ಬದಲ್ಲಿ ಗೋಪೂಜೆ ಮುಖ್ಯವಾದದು. ಕೊಟ್ಟಿಗೆ ಮುಖ್ಯಭಾಗದಲ್ಲಿ ಜೇಡಿಯ ಬಳಿದು ಕೆಮ್ಮಣ್ಣು ಎಳೆಗಳ ಗೋವಿನ ಪಾದ ಹೋಲುವ ಮೂರು ಎಳೆಗಳ ಚಿತ್ತಾರದ ಬರೆದು, ಆ ಭಾಗದಲ್ಲಿ ಮನೆಯಲ್ಲಿದ್ದ ಬೂರೆಮಗೆಯನ್ನಿಡುತ್ತಾರೆ. ದನಕರುಗಳ ಕೊರಳಿಗೆ ಅಡಿಕೆ ಸರ, ಹೂವಿನ ದಂಡೆ, ಎಲೆ, ಚಪ್ಪೆರೊಟ್ಟಿ ಹಿಂಗಾರ ಮಾವಿನ ಕೊನೆ, ಹಸಿಯಡಿಕೆ ಹಿಂಗಾರ ಸೇರಿಸಿದ ಪ್ರಸಾದದ ಗೊಂಚಲನ್ನು ಕಟ್ಟಲಾಗುತ್ತದೆ. ಬೇಣಿನ ಮರದಿಂದ ಆದ ಪುಂಡಿನಾರಿನಿಂದ ಮಾಡಿದ ಕಣ್ಣಿ ಕೊರಳದಂಡೆಯನ್ನು ಕಟ್ಟಲಾಗುತ್ತದೆ.

ಪುರುಷರು ಎತ್ತಿಗೆ ಬಾಸಿಂಗ ತೊಡಿಸಿದರೆ, ಮಹಿಳೆಯರು ಬಾಸಿಂಗ ಕಟ್ಟಿದ ರಾಸುಗಳಿಗೆ ಕಾಲುಗಳನ್ನು ಪೂಜಿಸಿ , ಹಾಡು ಹಾಡುತ್ತಾರೆ. ಕಾಲುಪೂಜೆಗಿಟ್ಟ ಹೆಸರುಕಾಳು ಕಡಲೆ, ಬಾಳೆಹಣ್ಣು, ಸೇಬುಹಣ್ಣು ಹೋಳಿಗೆ, ಸಣ್ಣ ತುಂಡು ಮಾಡಿದ ಹಸಿ ಹಾಲು, ತುಪ್ಪ ಬೆರಸಿದ ಪನಿವಾರ ಮಾಡಿ ಎಲ್ಲರಿಗೂ ಹಂಚುತ್ತಾರೆ.

ಹಸೆ ಚಿತ್ತಾರ... ಬುಟ್ಟಿಗೆ ಹಸೆ ಬರೆಯುತ್ತಿರುವ ದಿಗಟೆಕೊಪ್ಪದ ಕುಸುಮ ಅಣ್ಣಪ್ಪ...

ಕಾಲುಪೂಜೆ ಮುಗಿದು ದನಬೆದರಿದ ನಂತರ ಬೆಟ್ಟದ ನೆಲ್ಲಿಕಾಯಿ, ಗುಡ್ಡೆ ಗೇರಿಕಾಯಿಗಳಿಂದ ಮಾಡಿದ ಸಗಣಿ ಉಂಡೆಗಳನ್ನು ಮನೆಯ ಹೊಸ್ತಿಲಲ್ಲಿ ಇಡುತ್ತಾರೆ. ಊರಿನ ಮಾಸ್ತಮ್ಮ, ಮಾರಮ್ಮ ಸೇರಿದಂತೆ ಎಲ್ಲಾ ದೇವರಿಗೆ ಎಡೆತೋರಿಸಿ, ಆರತಿ ಬೆಳಗಿ ಕುಟುಂಬಕ್ಕೆ ಶ್ರೇಯಸ್ಸು ನೀಡು ಎಂದು ಬೇಡಿಕೊಳ್ಳುತ್ತಾರೆ.

ಅದೇ ದಿನ ಸಂಜೆ ಊರ ಪ್ರಮುಖರು ದೇವರ ದೀಪ ಹೊತ್ತು ಬರುತ್ತಾರೆ. ಅವರ ಪಾದ ತೊಳೆದು ಬರಮಾಡಿ ಕೊಳ್ಳಲಾಗುತ್ತದೆ. ಬಳಿಕ ಬಲೀಂದ್ರ ಬಳಿ ಇರಿಸಿ, ಎಣ್ಣೆ ಹಾಕಿ, ಕಾಣಿಸಿ ಸಲ್ಲಿಸಲಾಗುತ್ತದೆ. ಬಂದವರಿಗೆಲ್ಲರಿಗೂ ಸಿಹಿ ತಿಂಡಿ ಕಡುಬು ನೀಡಿ ‘ಬಲ್ಲೇಳು ಬಲೀಂದ್ರರಾಯ’ ಎಂದು ಹೆಣ್ಣುಮಕ್ಕಳು ಸೇರಿ ಹಾಡುತ್ತಾರೆ.

ದೀಪಾವಳಿಯ ಮೂರನೇ ದಿನವೇ ವರ್ಷತೊಡಕಿನ ಹಬ್ಬ. ಮನೆ, ಮಾರು ಹಸನು ಮಾಡಿ ಜೇಡಿ ಕೆಮ್ಮಣ್ಣು ಬಳಿದು ಹಳದಿ ಮತ್ತು ಬಿಳಿ ಬಣ್ಣದ ಬೊಟ್ಟುಗಳಿಂದ ಬಾಗಿಲು ಹೊಸ್ತಿಲನ್ನ ಅಲಂಕರಿಸುವುದನ್ನು ನೋಡುವುದೇ ಚಂದ. ನಂತರ ದೋಸೆ ಅಥವ ಕೋಳಿ ಕಜ್ಜಾಯ, ಪಾಯಸ ಮಾಡಿ ಇಡಕಲಿಗೆ (ನೀರು ತುಂಬಿಡುವ ಸ್ಥಳ) ಎಡೆ ಇಡಲಾಗುತ್ತದೆ.

ಬಾಸಿಂಗವನ್ನ ಮನೆಯ ಕೋಳಿಗೆ (ಅಟ್ಟ) ಏರಿಸಿ, ಬೂರೆ ಮಗೆಗೆ ಪೂಜಿಸಿ, ವರ್ಷವಿಡೀ ಯಾವುದೇ ತೊಡಕು ಉಂಟಾಗದಿರಲಿ ಎಂದು ಮನೆ ದೇವರನ್ನ ಪ್ರಾರ್ಥಿಸಲಾಗುತ್ತದೆ.

ಎಲ್ಲ ಹಬ್ಬಗಳಂತೆ ಈ ಹಬ್ಬದಲ್ಲಿಯೂ ಹಬ್ಬದ ಸಿದ್ಧತೆಯಿಂದ ಹಿಡಿದು ಸಮಾಪ್ತಿಯವರೆಗೂ ಹೆಣ್ಣುಮಕ್ಕಳ ಪಾತ್ರ ದೊಡ್ಡದಿದ್ದರೂ, ದೀವರ ಮನೆಗಳಲ್ಲಿ ದೀಪಾವಳಿ ಹೆಣ್ಣಮಕ್ಕಳ ಹಬ್ಬವೆಂದೇ ಎನಿಸಿಕೊಂಡಿದೆ. ಹಾಡು ಹಸೆಯ ಮೂಲಕ ಹೆಣ್ಣುಮಕ್ಕಳೆಲ್ಲ ಒಂದೆಡೆ ಸೇರುತ್ತಾರೆ. ಸೋಬಾನೆ ಹಾಡುತ್ತ ಬದುಕಿನ ಏರಿಳಿತಕ್ಕೊಂದು ಲಯ ದಕ್ಕಿಸಿಕೊಳ್ಳುತ್ತಾರೆ. ಸಾಂಸ್ಕೃತಿಕ ರಾಯಭಾರಿಗಳಾಗುತ್ತಲೇ ಇಡೀ ದೀಪಾವಳಿಗೆ ಒಂದು ಕಳೆ ತರುತ್ತಾರೆ. ❖

ಪೇಸಿಎಂ ಪೋಸ್ಟರ್: ವಕೀಲರ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಸಿಎಂ ಅಭಿಯಾನಕ್ಕೆ ಕರೆಕೊಟ್ಟ ಆರೋಪದಲ್ಲಿ ನೆಲಮಂಗಲದ ವಕೀಲರಿಬ್ಬರ ವಿರುದ್ಧ ಸಾರ್ವಜನಿಕ ಆಸ್ತಿ ಹಾನಿ ನಿಯಂತ್ರಣ ಕಾಯ್ದೆ ಹಾಗೂ ಕರ್ನಾಟಕ ಸಾರ್ವಜನಿಕ ಸ್ಥಳ ವಿರೂಪಗೊಳಿಸಿದ ಕಾಯ್ದೆಯಡಿ ದಾಖಲಿಸಲಾಗಿದ್ದ ಎಫ್ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದು ಕೋರಿ ನೆಲಮಂಗಲ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷರೂ ಆದ ವಕೀಲ ಜೆ.ಎಸ್. ನಾರಾಯಣ ಗೌಡ ಹಾಗೂ ಕಾನೂನು ಘಟಕದ ಮುಖ್ಯಸ್ಥರೂ ಆಗಿರುವ ವಕೀಲ ವಿ. ರಾಮಕೃಷ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಅರ್ಜಿದಾರರು ಮೊಬೈಲ್ ಮೂಲಕ ಪೋಸ್ಟರ್‌ಗಳನ್ನು ಅಂಟಿಸುವಂತೆ ಬೇರೆಯವರಿಗೆ ಸೂಚಿಸಿದ್ದಾರೆ ಎಂದಮಾತ್ರಕ್ಕೆ ಅಪರಾಧ ಎನಿಸುವುದಿಲ್ಲ. ಕಾಯ್ದೆಯ ಅಡಿ ಅಪರಾಧವಾಗುವಂತಹ ಯಾವುದೇ ಕೃತ್ಯವನ್ನೂ ಅರ್ಜಿದಾರರು ಎಸಗಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಈ ಆದೇಶದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಕೇವಲ ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ಮಾತ್ರ ಸೀಮಿತವಾಗಿವೆ. ಇದೇ ಪ್ರಕರಣದ ಇತರ ಆರೋಪಿಗಳ ವಿರುದ್ಧದ ತನಿಖೆಯ ಮೇಲೆ ಈ ಆದೇಶ ಪರಿಣಾಮ ಬೀರುವುದಿಲ್ಲ' ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

ಪ್ರಕರಣವೇನು?

'ಆರೋಪಿಗಳು ಪೋಸ್ಟರ್‌ಗಳನ್ನು ಅಂಟಿಸುವ ಮೂಲಕ ಸಾರ್ವಜನಿಕ ಸ್ಥಳಗಳ ಅಂದಗೆಡಿಸುತ್ತಿದ್ದಾರೆ' ಎಂದು ನೆಲಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ ಅರ್ಜಿದಾರರೂ ಸೇರಿ ಐವರ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 290ರ (ಸಾರ್ವಜನಿಕ ಉಪದ್ರವ) ಅನುಸಾರ ಎಫ್ಐಆರ್ ದಾಖಲಿಸಲಾಗಿತ್ತು.

'ಎಲ್.ಎನ್. ವರುಣ್ ಕುಮಾರ್, ಕೃಷ್ಣ ಪವಾರ್ ಮತ್ತು ಸಿ.ಅಶೋಕ್ ಕುಮಾರ್ ಎಂಬುವರು ಅರ್ಜಿದಾರರಾದ ಜೆ.ಎಸ್. ನಾರಾಯಣಗೌಡ ಹಾಗೂ ವಿ. ರಾಮಕೃಷ್ಣ ಅವರ ಸೂಚನೆ ಮೇರೆಗೆ ನೆಲಮಂಗಲದ ವಿವಿಧೆಡೆ ಮುಖ್ಯಮಂತ್ರಿಗಳ ಭಾವಚಿತ್ರ ಹಾಗೂ ಕ್ಯೂಆರ್ ಕೋಡ್ ಹೊಂದಿದ್ದ ಪೋಸ್ಟರ್ ಅಂಟಿಸುತ್ತಿದ್ದರು. ಅದರಲ್ಲಿ ಇಲ್ಲಿ ಶೇ 40 (ಲಂಚ) ಸ್ವೀಕರಿಸಲಾಗುವುದು ಎಂದು ಉಲ್ಲೇಖಿಸಲಾಗಿತ್ತು' ಎಂದು ಎಫ್ಐಆರ್‌ನಲ್ಲಿ ವಿವರಿಸಲಾಗಿತ್ತು.

ಬಲಿಪಾಡ್ಯಮಿ: ಗೋಪೂಜೆಗೆ ಸೂಚನೆ

ಬೆಂಗಳೂರು: ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಲಿಪಾಡ್ಯಮಿ ದಿನ ಗೋಪೂಜೆ ಕೈಗೊಳ್ಳುವಂತೆ ಪಶುಸಂಗೋಪನಾ ಇಲಾಖೆ ಸೂಚನೆ ನೀಡಿದೆ.

ಕರ್ನಾಟಕ ಹಾಲು ಮಹಾಮಂಡಳಿ ಅಧೀನದಲ್ಲಿ 14 ಸಾವಿರಕ್ಕೂ ಹೆಚ್ಚು ಹಾಲು ಉತ್ಪಾದಕರ ಸಂಘಗಳಿವೆ. ಈ ಸಂಘಗಳಲ್ಲಿ ಇದೇ 26ರಂದು ಬಲಿಪಾಡ್ಯಮಿ ದಿನ ಗೋಪೂಜೆ ಮಾಡುವ ಮೂಲಕ ರಾಜ್ಯದ ರೈತರಿಗೆ ಗೋಸಂರಕ್ಷಣೆ ಬಗ್ಗೆ ತಿಳಿಸಬೇಕು ಎಂದು ಪಶುಸಂಗೋಪನಾ ಸಚಿವ ಪ್ರಭು ಬಿ. ಚವ್ಹಾಣ್ ತಿಳಿಸಿದ್ದಾರೆ.

ನಗರದ ಇನ್ನಷ್ಟು ಸುದ್ದಿಗಳು ಪುಟ 9

ಕರ್ನಾಟಕ ಸರ್ಕಾರ – ಸಹಕಾರ ಇಲಾಖೆ

ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್‌ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560 003.

ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ

ಶ್ರೀ ಎಂ.ವೆಂಕಟೇಶ್ ಅ. ನಂ. 10628. ಮತ್ತು ಶ್ರೀಮತಿ ಅಂಜನಮ್ಮ ಅ.ನಂ. 10629, ಮನೆ ನಂ. 17, 9ನೇ ಎ ಮೈನ್ ರೋಡ್, ಪಿಐಡಿ ನಂ. 38–76–72/1 ವಾರ್ಡ್ ನಂ. 38, ಬೈರವೇಶ್ವರನಗರ, ನಾಗರಭಾವಿ ವಿಲೇಜ್, ಮೂಡಲಪಾಳ್ಯ, ಬೆಂಗಳೂರು–560072. ಇವರುಗಳು ಮೇಲ್ಕಂಡ ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಅಮಿಟೆಡ್‌ನ ವಿಜಯನಗರ ಶಾಖೆ ನಂ.13/1 14 ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ವಿಜಯನಗರ ಪೂರ್ವ, ಅತ್ತಿಗುಪ್ಪೆ, ಬೆಂಗಳೂರು–560040 ಬ್ಯಾಂಕಿನಿಂದ ತಮ್ಮಗಳ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಈಡು ಮಾಡಿ ಸಾಲವನ್ನು ಪಡೆದಿದ್ದರು. ಸದರಿ ಸಾಲಗಾರರು ಸಾಲದ ಕರಾರಿನ ರೀತ್ಯಾ ಸಕಾಲದಲ್ಲಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದರಿಂದ ಇವರ ವಿರುದ್ಧ ಸಾಲದ ಹಣ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ ಕಲಂ 70 ರ ರೀತ್ಯಾ ಸಾಲ ವಸೂಲಾತಿಗಾಗಿ ದಾವಾವನ್ನು ಹೂಡಲಾಗಿತ್ತು. ಈ ದಾವಾದ ಪ್ರಕಾರ ವ್ಯಾಜ್ಯ ಸಂಖ್ಯೆ: ಜೆಆರ್‌ಡಿ/ಯುಎಫ್/625/2018–2019, ದಿನಾಂಕ:04.02.2020 ಮತ್ತು ವ್ಯಾಜ್ಯ ಸಂಖ್ಯೆ: ಜೆಆರ್‌ಡಿ/ಯುಬಿಎಫ್/626/2018–2019, ದಿನಾಂಕ:04.02.2020 ರಲ್ಲಿದ್ದಂತೆ ಸಾಲಗಾರರ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡುವ ಮೂಲಕ ಸ್ಥಿರ ಸ್ವತ್ತನ್ನು ಮಾರಾಟ ಮಾಡಿ ಸಾಲದ ಮೊಬಲಗಿಗೆ ಶೇ.14% ರಂತೆ ಸರಳ ಬಡ್ಡಿ, ಶೇ.2% ರಂತೆ ದಂಡದ ಬಡ್ಡಿ, ದಾವಾ ಫೀ ಅಮಲ್ದಾರಿ ಫೀ ಮತ್ತು ಇತ್ಯಾದಿಗಳನ್ನು ವಸೂಲ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ. ಈ ಆದೇಶ ರೀತಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ–441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132, ಕೆ.ಹೆಚ್.ರಸ್ತೆ, ಬೆಂಗಳೂರು–560027, ರವರು ತಮ್ಮ ಹುಕುಂ ಸಿ.ಇ.ಪಿ.ನಂ.ಎಆರ್‌ಇ/ಯುಬಿಎಫ್/483/2019–2020, ದಿನಾಂಕ: 18–03–2020 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ದಾರಿ ಕ್ರಮ ನಡೆಸುವಂತ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಪ್ರಕಾರ ಈ ಕೆಳಕಂಡ ಸ್ವತ್ತಿನ ಬಹಿರಂಗ ಹರಾಜನ್ನು ವೃತ್ತಿನ ಸ್ಥಳದಲ್ಲಿಯೇ ದಿನಾಂಕ: 10–11–2022 ರಂದು ಗುರುವಾರ ಬೆಳಗ್ಗೆ 11.00 ಘಂಟೆಗೆ ಸಹಕಾರ ಸಂಘಗಳ ನಿಯಮಾನುವಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

ಕ್ರಮ ಸಂಖ್ಯೆ	ಸಾಲ ಪಡೆದವರ ಹೆಸರು ಅ ನಂ.	ಸಿ.ಇ.ಪಿ.ನಂ ಮತ್ತು ದಿನಾಂಕ	ಹರಾಜು ಮಾಡುವ ಆಸ್ತಿಯ ವಿವರ	ಹರಾಜು ಮಾಡುವ ದಿನಾಂಕ ಮತ್ತು ಸಮಯ	ಹರಾಜು ಮಾಡುವ ಸ್ಥಳ	ಸುಸ್ತಿದಾರರಿಂದ ವಸೂಲಾಗಬೇಕಾಗಿರುವ ಮೊಬಲಗು
1.	ಶ್ರೀ ಎಂ. ವೆಂಕಟೇಶ್ ಮತ್ತು ಶ್ರೀಮತಿ ಅಂಜನಮ್ಮ	ಸಿ.ಇ.ಪಿ.ನಂ. ಎಆರ್‌ಇ/ ಯುಬಿಎಫ್/483/ 2019–2020 ದಿನಾಂಕ: 18–03–2020	ಮನೆ ನಂ. 17, 9 ನೇ ಎ ಮೈನ್ ರೋಡ್, ಪಿಐಡಿ ನಂ. 38 76–72/1 ವಾರ್ಡ್ ನಂ. 38 ಬೈರವೇಶ್ವರನಗರ, ನಾಗರಭಾವಿ ವಿಲೇಜ್, ಮೂಡಲಪಾಳ್ಯ, ಬೆಂಗಳೂರು–560072. ಚಕ್ಕುಬಂದಿ: ಪೂರ್ವಕ್ಕೆ : ಬೇರೆಯವರ ಸ್ವತ್ತು ಪಶ್ಚಿಮಕ್ಕೆ : 30 ಅಡಿ ರಸ್ತೆ, ಉತ್ತರಕ್ಕೆ : 16 ನೇ ನಂಬರ್ ಸ್ವತ್ತು ದಕ್ಷಿಣಕ್ಕೆ : 18 ನೇ ನಂಬರ್ ಸ್ವತ್ತು ಅಳತೆ : ಪೂರ್ವ–ಪಶ್ಚಿಮ 50–00 ಅಡಿಗಳು ಉತ್ತರ–ದಕ್ಷಿಣ : 22–00 ಅಡಿಗಳು ಒಟ್ಟು 1100 ಚದರ ಅಡಿಗಳು ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ, ಮೂರನೇ ಮಹಡಿ, ನಾಲ್ಕನೇ ಮಹಡಿ, ಹೊಂದಿರುವ ವಸತಿ ಕಟ್ಟಡದ ಬಿಲ್ಟ್ ಅಪ್ ಪ್ರದೇಶ ಸರಿ ಸುಮಾರು 5200 ಚದರ ಅಡಿಗಳು.	10–11–2022 ಗುರುವಾರ ಬೆಳಗ್ಗೆ 11.00 ಘಂಟೆಗೆ	ಆಸ್ತಿ ಇರುವ ಸ್ಥಳದಲ್ಲಿ ನಂ. 17, 9ನೇ ಎ ಮೈನ್ ರೋಡ್, ಪಿಐಡಿ ನಂ. 38–76–72/1 ವಾರ್ಡ್ ನಂ. 38 ಬೈರವೇಶ್ವರನಗರ, ನಾಗರಭಾವಿ ವಿಲೇಜ್, ಮೂಡಲಪಾಳ್ಯ, ಬೆಂಗಳೂರು 560072.	ರೂ.60,69,492/– (ಅಸಲು ಮತ್ತು ಬಡ್ಡಿ ಸೇರಿ ದಿನಾಂಕ: 26–09–2022 ರವರೆಗೆ) ಮತ್ತು ಮುಂದುವರೆದ ಬಡ್ಡಿ ಹಾಗೂ ಮುಂದುವರೆದ ಇತರೆ ವೆಚ್ಚಗಳು.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲಾಗಲೀ ಅಥವಾ ಮಾರಾಟಾಧಿಕಾರಿಯವರಲ್ಲಾಗಲೀ ಪಡೆಯಬಹುದು. ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ. (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರೀ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು.(ನಿ.441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,ನಂ 132. ಕೆ.ಹೆಚ್.ರಸ್ತೆ. ಬೆಂಗಳೂರು–27 ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ: 08023564151 /23563302 ಮೊಬೈಲ್ : 6363581188.

ಹರಾಜಿನ ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಹರಾಜಿನ ಮುನ್ನ ಇ.ಎಂ.ಡಿ.ಯಾಗಿ ರೂ.25,000/-ಗಳನ್ನು ಮಾರಾಟಾಧಿಕಾರಿಯವರಲ್ಲಾಗಲೀ ಅಥವಾ ಬ್ಯಾಂಕಿನಲ್ಲಾಗಲೀ ನಗದು/ಡಿಡಿ ಮೂಲಕ ಪಾವತಿಸಿ ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು.
2. ಹರಾಜಿನಲ್ಲಿ ಹೆಚ್ಚಿನ ಬಿಡ್ ನಿಂತವರು (Higher Bidder) ಹರಾಜು ಮೊಬಲಗಿನ ಶೇ.15% ರಷ್ಟು ಹಣವನ್ನು ಸ್ಥಳದಲ್ಲಿಯೇ ನಗದು /ಡಿಡಿ ಮೂಲಕ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು. ಉಳಿದ ಮೊಬಲಗನ್ನು ಮತ್ತು ಇದಕ್ಕೆ ತಗಲುವ ಸ್ಟ್ಯಾಂಪ್ ಪೇಪರ್ ಹಾಗೂ ಇತರೆ ವೆಚ್ಚಗಳ ಮೊಬಲಗನ್ನು ಬಿಡ್ ಮಾಡಿದ 45 ದಿವಸಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ ದಿವಸ ಪಾವತಿಯಾಗಿರುವ ಮೊಬಲಗನ್ನು ವಾಪಸು ಕೊಡಲಾಗುವುದಿಲ್ಲ. ಇದನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಹರಾಜಿನ ಇತರೆ ಷರತ್ತುಗಳನ್ನು ಫಾರಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತೆ.
4. ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಬ್ಯಾಂಕಿನವರು ಜವಬ್ದಾರರಲ್ಲವೆಂಬುದನ್ನು ತಿಳಿದಿರತಕ್ಕದ್ದು.
5. ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. ಇದನ್ನು ಬಿಡ್ಡುದಾರರು ತಿಳಿದಿರತಕ್ಕದ್ದು.
6. ಸರ್ಕಾರಿ ಮಾರ್ಗದರ್ಶಿ ದರಕ್ಕಿಂತ ಕಡಿಮೆ ಮೊಬಲಗಿಗೆ ಬಿಡ್ (ಸವಾಲು) ಮಾಡಿದರೆ ಆ ಆಸ್ತಿಯನ್ನು ಬಿಡ್ ದಾರರಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್.ರೂಲ್ಸ್ 38(6)ರ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ.
7. ಹರಾಜು ಒಪ್ಪುವುದು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಯವರಿಗೆ ಸೇರಿರುತ್ತದೆ.
8. ಸುಸ್ತಿದಾರರು ಹರಾಜಿಗೆ ಮುನ್ನ ಪೂರ್ಣ ಸಾಲ ಮತ್ತು ಸಾಲದ ಬಡ್ಡಿ ಇತರೆ ಮೊಬಲಗನ್ನು ಮರು ಪಾವತಿ ಮಾಡಿದರೆ ಬಹಿರಂಗ ಹರಾಜನ್ನು ರದ್ದುಗೊಳಿಸಲಾಗುವುದು.

ದಿನಾಂಕ: 22-10-2022
ಸ್ಥಳ : ಬೆಂಗಳೂರು

ಸಹಿ/- ಮಾರಾಟಾಧಿಕಾರಿ
ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್‌ರಸ್ತೆ), ಮಲ್ಲೇಶ್ವರಂ, ಬೆಂಗಳೂರು-560003
ದೂ : 080 23564151 / 23563302. ಮೊ : 6363581188.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು

ಇ–ಮೇಲ್: dcftmk_dcftmk@yahoo.co.in

ಸಂಖ್ಯೆ–ಎ/ಬಿಯುಡಿ/ಕೆ.ಎಫ್.ಡಿ.ಎಫ್/ಮರು–ಟೆಂಡರ್/ಸಿಆರ್–79/2022–23
ದಿನಾಂಕ: 20.10.2022

ಮರು ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವಿಭಾಗದ ವಿವಿಧ ವಲಯಗಳಲ್ಲಿ ಮುಂಗಡ ಕಾಮಗಾರಿ, ಸಸಿಗಳನ್ನು ಬೆಳೆಸುವ, ಆರ್.ಸಿ.ಸಿ ಪಿಲ್ಲರ್ ಅಳವಡಿಸಿಕೊಂಡು ಮುಳ್ಳುತಂತಿ ಬೇಲಿ ನಿರ್ಮಾಣ ಮತ್ತು ಹೊಸದಾಗಿ ಗಸ್ತುಹಾದಿ ನಿರ್ಮಾಣ ಮಾಡುವ ಹಾಗೂ ಕಟ್ಟಡ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು 2022–23ನೇ ಸಾಲಿಗೆ ತುಮಕೂರು ವಿಭಾಗದ ಅರಣ್ಯ ಗುತ್ತಿಗೆದಾರರಾಗಿ ನೋಂದಾವಣೆಯಾಗಿರುವ ಗುತ್ತಿಗೆದಾರರಿಂದ ಹಾಗೂ ಸಿವಿಲ್ ಕಾಮಗಾರಿಗಳಿಗೆ ಪಿ.ಡಬ್ಲ್ಯು.ಡಿ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಟೆಂಡರ್‌ಗಳನ್ನು ದಾಖಲಿಸಲು ಕೋರಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 18 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.47,88,000/–ಗಳಿಗೆ ಇ.ಎಂ.ಡಿ ಮೊತ್ತ ರೂ.95,760/– ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.21,400/–ಗಳಿಗೆ ಇ.ಎಂ.ಡಿ. ಮೊತ್ತ ರೂ.535/–ಗಳಾಗಿರುತ್ತದೆ. ದಿನಾಂಕ: **04.11.2022**ರ ಅಪರಾಹ್ನ 3.00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: **05.11.2022** ರಂದು ಸಂಜೆ 3.00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್‌ಸೈಟ್ ವಿಳಾಸ– http://www.eproc.karnataka.gov.in

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು.

DIPR/TUM/615/MCA/2022-23

ಕರ್ನಾಟಕ ಸರ್ಕಾರ

ಸರ್ಕಾರಿ ವೈಮಾನಿಕ ತರಬೇತಿ ಶಾಲೆ

ನಿರ್ದೇಶಕರ ಕಛೇರಿ, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಬೆಂಗಳೂರು–560064. ದೂರವಾಣಿ ಸಂಖ್ಯೆ: 080–23332251. ಫ್ಯಾಕ್ಸ್: 080–23627178

ಸಂಖ್ಯೆ: ಎಫ್‌ಟಿಎಸ್/20/ಎಡಿಎಂ/2022–23 ದಿ: 17.10.2022

ತಿದ್ದುಪಡಿ

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಮುಖ್ಯ ವಿಮಾನ ಬೋಧಕರು ಹುದ್ದೆ–1, ಉಪ ಮುಖ್ಯ ವಿಮಾನ ಬೋಧಕರು ಹುದ್ದೆ–1 ಮತ್ತು ಸಹಾಯಕ ವಿಮಾನ ಬೋಧಕರು ಹುದ್ದೆ–1 ಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, **ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು ದಿನಾಂಕ: 31.10.2022ರ ವರೆಗೆ ವಿಸ್ತರಿಸಲಾಗಿದೆ.**

ಅರ್ಜಿದಾರರು ಇ–ಮೇಲ್ ಅಥವಾ ಅಂಚೆ ಮೂಲಕ ಅರ್ಜಿಗಳನ್ನು **ದಿನಾಂಕ: 31.10.2022ರೊಳಗೆ** ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಯಲಹಂಕ ಅಂಚೆ, ಬೆಂಗಳೂರು–560064 ಇವರಿಗೆ ಸಲ್ಲಿಸುವುದು. ಇ–ಮೇಲ್ ವಿಳಾಸ: gfts.kar@gmail.com

ಸಹಿ/–
ನಿರ್ದೇಶಕರು
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2748/ಶಿರಡಿಸಾಯಿ/2022–23

ನೈಋತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂ. ಎಸ್‌ಬಿಸಿ–ಜಿಎಸ್‌ಯು–ವೆಲ್ಡ್–03
ದಿನಾಂಕ : 14–10–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
1. ಉದ್ದೇಶಿತ ಬೆಂಗಳೂರು ದಂಡು – ವೈಟ್‌ಫೀಲ್ಡ್ ಕ್ವಾಡ್ರುಪ್ಲಿಂಗ್ 2. ಬೆಂಗಳೂರು ದಂಡು ಯಾರ್ಡ್ 3. ಹೊಸೂರು ಯಾರ್ಡ್ 4. ಬೆಂಗಳೂರು ನಗರ ಯಾರ್ಡ್ ಮತ್ತು ಸಿಪಿಎಂ/ಜಿಎಸ್/ಎಸ್‌ಬಿಸಿ ಅಡಿಯಲ್ಲಿನ ಇತರ ಕೆಲಸಗಳಿಗೆ ಸಂಬಂಧಿಸಿದಂತೆ 52ಕೆಜಿ ಮತ್ತು 60ಕೆಜಿ ಇನ್ ಸಿಟು ಗ್ಲೂಡ್ ಜಾಯಿಂಟ್‌ಗಳ ಫ್ಯಾಬ್ರಿಕೇಶನ್.	ರೂ. 2,14,68,000/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04–11–2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ
ಬೆಂಗಳೂರು
ಪಿಯುಬಿ/427/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

IN THE COURT OF THE XCI ADDI, CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU

Misc No. 892/2022

BETWEEN

The Competent Authority
for M/s. Ambidant Marketing Private Limited,
3rd Floor, Mini V.V.Tower, Podium Block,
Dr.Ambedkar Veedhi, Bengaluru-560001. **....Petitioner**

And

M/s.Ambidant Marketing Private Limited
Regd Office: at No.9A, K.H.B. Main Road,
Kanakanagara, R.T.Nagar Post, Bangalore-560032.
Represented by its Director
Syed Fareed Ahmed S/o. D.S.Jalaluddin,
At 374, Kushal Nagara, Opposite Hanifiya Masjid,
Venkatheshapuram, Bengalore-560045. and Another **....Respondents**

Notice to Respondent No. 1 and 2

1. M/s. Ambidant Marketing Private Limited
Regd Office: at No.9A, K.H.B.Main Road,
Kanakanagara, R.T.Nagar Post, Bangalore-560032.
Represented by its Director
Syed Fareed Ahmed S/o. D.S.Jalaluddin,
At 374, Kushal Nagara, Opposite Hanifiya Masjid,
Venkatheshapuram, Bengalore-560045.

2. Syed Fareed Ahmed S/o. D.S.Jalaluddin,
Ex-Director for M/s.Ambidant Marketing Pvt.Ltd.,
At # 374, Kushal Nagara, Opposite Hanifiya Masjid,
Venkatheshapuram, Bengalore-560045.

Whereas, the petitioner has filed the above petition under section 5(2) of the KRIDFE Act 2004 against Respondents.

The Respondents No.1 and 2 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petitions on 2nd November 2022 at 11.00 Clock in the forenoon.

Take notice that in default of your appearance on the date above mentioned petition will be heard and determined in your absence.

Given under my hand and seal of the court on this day 13th October 2022.

BY ORDER OF THE COURT
Assistant Registrar
City Civil Court
Bengaluru.

Sri Venkates P. Dalwai.
Special Public Prosecutor.

DIPR/CP/2695/AKAR/22-23

IN THE COURT OF THE XCI ADDI, CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU

Misc No. 891/2022

BETWEEN

The Competent Authority
for M/s.Ambidant Marketing Private Limited,
3rd Floor, Mini V.V.Tower, Podium Block,
Dr.Ambedkar Veedhi, Bengaluru-560001. **....Petitioner**

And

M/s.Ambidant Marketing Private Limited
Regd Office: at No.9A, K.H.B. Main Road,
Kanakanagara, R.T.Nagar Post, Bangalore-560032.
Represented by its Director
Syed Fareed Ahmed S/o. D.S.Jalaluddin,
At 374, Kushal Nagara, Opposite Hanifiya Masjid
Venkatheshapuram, Bengalore-560045. and Another **....Respondents**

Notice to Respondent No. 1 and 2

1. M/s. Ambidant Marketing Private Limited
Regd Office: at No.9A, K.H.B. Main Road,
Kanakanagara, R.T.Nagar Post, Bangalore-560032.
Represented by its Director
Syed Fareed Ahmed S/o. D.S.Jalaluddin,
At 374, Kushal Nagara, Opposite Hanifiya Masjid
Venkatheshapuram, Bengalore-560045.

2.Sycd Afaq Ahmed S/o.Syed Fareed Ahmed,
Ex-Director for M/s.Ambidant Marketing Pvt. Ltd.,
At #4, 2nd Cross, Rama Tent Road, Kushalnagar,
K.G.Halli, Bangalore-560045.

Whereas, the petitioner has filed the above petition under section 5(2) of the KPIDFE Act 2004 against Respondents.

The Respondents No.1 and 2 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petitions on 2nd November 2022 at 11.00 Clock in the forenoon.

Take notice that in default of your appearance on the date above mentioned petition will be heard and determined in your absence.

Given under my hand and seal of the court on this day 13th October 2022.

BY ORDER OF THE COURT
Assistant Registrar
City Civil Court
Bengaluru.

Sri Venkates P. Dalwai.
Special Public Prosecutor.

DIPR/CP/2696/AKAR/22-23

THE COURT OF THE XCI ADDI, CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU

Misc No. 598/2022

Between

The State Government of Karnataka
Represented by
The Competent Authority
And Assistant Commissioner
Mysuru Sub Division, Mysuru. **...Petitioner**

And

M/s. Green Buds Agro Farm Company Pvt. Ltd.
No. 73, 3rd Floor Madvesha Complex,
Malai mahadeshwara Main Road, Nazarbad,
Mysuru – 570010 and 5 others **....Respondents**

Notice to Respondent No. 1 and 2

1. M/s. Green Buds Agro Farm Company Pvt. Ltd.
Represented by its Managing Director,
Ravindranath B.L. S/o. Late Lakshmegowda
No. 73, 3rd Floor, Madvesha Complex,
Malai Mahadeshwara Main Road,
Nazarbad, Mysuru – 570010.

2. Ravindranath B.L.
S/o. Late Lakshmegowda
Managing Director,
M/s. Green Buds Agro Farm Company Pvt. Ltd.
Residing at # 109, 1st Floor, DX-Max Sab Villa
Apartments, Balaji Layout, Mallatha halli,
Nagarabhavi, Bengaluru.

Whereas, the petitioner has filed the above petition under section 5(2) of the KPIDFE Act 2004 against Respondents.

The Respondent No. 1 and 2 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on 31st October 2022 at 11.00 clock in the forenoon.

Take notice that in default of your appearance on the date above mentioned petition will be heard and determined in your absence.

Given under my hand and seal of the court on this day 11/10/2022.

BY ORDER OF THE COURT
Assistant Registrar
City Civil Court
Bengaluru.

Sri Venkates P. Dalwai.
Special Public Prosecutor.

DIPR/CP/2698/AKAR/22-23

THE COURT OF THE XCI ADDI, CITY CIVIL AND SESSIONS JUDGE AND SPECIAL JUDGE FOR KPIDFE ACT AT BENGALURU

Misc No. 868/2022

Between

The Competent Authority
For M/s. Green Buds Agro Farm Company Pvt. Ltd **....Petitioner**
Represented by Assistant Commissioner,
Mysuru Sub Division, Mysuru District.

And

M/s. Green Buds Agro Farm Company Pvt. Ltd.
No. 73, 3rd Floor, Madvesha Complex,
Sri Malai Mahadeshwara Main Road, Nazabad, Mysore-570010.
And 23 Others **....Respondents**

Notice to Respondent No. 1 to 7 and 17 to 19

1. M/s. Green Buds Agro Farm Company Pvt. Ltd.
Represented by its Managing Director
Ravindranath B.L. S/o. Late Lakshmegowda
No. 73, 3rd Floor, Madvesha Complex,
Sri Malai Mahadeshwara Main Road,
Nazarbad, Mysore – 570010.

2. Ravindranath B.L.
S/o. Late Lakshmegowda,
Managing Director,
M/s. Green Buds Agro Farm Company Pvt. Ltd.
Residing at No. 109, 1st Floor, DX-Max Sab Villa Apartments,
Balaji Layout, Mallathahalli, Nagarabavi, Bengaluru.

3. N. Gayathri
D/o. B.K. Narasimhegowda,
General Manager,
M/s. Green Buds Agro Farm Company Pvt. Ltd.
Residing at No. 183/1, Opposite to The Village Resort,
Gowrishankar Nagar, Mysuru Nanjangud Road, Mysuru City.

4. U.L. Dakshayini.
W/o. Ravindranath B.L.
Residing at No. 109, 1st Floor, DX-Max Sab Villa Apartments,
Balaji Layout, Mallathahalli, Nagarabavi, Bengaluru.

5. U.L. Vasangthakumar.
S/o. Lakshmegowda,
Residing at No. 109, 1st Floor, DX-Max sab Villa Apartments,
Balaji Layout, Mallathahalli, Nagarbavi, Bengaluru.

6. Anseera Muhammad Iqbal.
S/o. Ashraf, Adiganahalli, Hangodu Hobli,
Hunsuru Taluk, Mysuru District.

7. Kuppe Poyil abdul Ajeez.
S/o. Kun Ahmad Kutti, Adiganahalli, Hangodu Hobli,
Hunsuru Taluk, Mysuru District.

17. Gowramma T.M.
D/o. Late M. Madaiah, Inam Utthanahalli Village,
Varuna Hobli, Mysuru Taluk

18. Chikkamadaiah
S/o. Late Puttasiddamma,
Inam Uttanahalli Village, Varuna Hobli, Mysuru Taluk.

19. Ramachandra .T
S/o. D.V. Thamaiah, 3rd Main, Vinayaka Layout,
3rd Stage, Vijayanagar, Bengaluru.

Whereas, the petitioner has filed the above petition under section 5(2) of the KPIDFE Act 2004 against Respondents.

The Respondent No. 1 to 7 and 17 to 19 are hereby issued show cause notice u/s 12(1) of KPIDFE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able answer all material questions relating to above petition on 10/11/2022 at 11.00 clock in the forenoon.

Take notice that in default of your appearance on the date above mentioned petition will be heard and determined in your absence.

Given under my hand and seal of the court on this day 12th October 2022.

BY ORDER OF THE COURT
Assistant Registrar
City Civil Court
Bengaluru.

Sri Venkates P. Dalwai.
Special Public Prosecutor.

DIPR/CP/2697/AKAR/22-23

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: 09/CWM-UBLS/2022-23
ದಿನಾಂಕ: 13.10.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿಯ ಕ್ಯಾರಿಯೇಜ್ ದುರಸ್ತಿ ಕಾರ್ಯಾಗಾರದಿಂದ ಅಪಾಯಕಾರಿ ತ್ಯಾಜ್ಯ ನಿರ್ವಹಣೆ ಸಂಸ್ಥೆಯಾದ ಕೆಎಸ್‌ಪಿಸಿಬಿಯ ಅನುಮೋದನೆ ಯೊಂದಿಗೆ 240–ಮೆಟನ್ ಆಯಿಲ್/ಪೆಂಟು ಲೇಪಿತ ಹತ್ತಿ ಮತ್ತು ಅಪಾಯಕಾರಿ ತ್ಯಾಜ್ಯಗಳನ್ನು ಲೋಡ್ ಮಾಡಿ ಸಾಗಿಸುವುದು ನಂತರ ದಹನ ಮಾಡುವುದು.	ರೂ. 40,79,796/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.11.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಸಹಾಯಕ ಕಾರ್ಯಾಗಾರ ವ್ಯವಸ್ಥಾಪಕರು, ಕ್ಯಾರಿಯೇಜ್ ದುರಸ್ತಿ ಕಾರ್ಯಾಗಾರ, ಹುಬ್ಬಳ್ಳಿ
PUB/433/AAD/PRB/SWR/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಸಿಎಪಿ/ಸಿಎನ್/ಬಿಎನ್‌ಸಿ/90/2022
ದಿನಾಂಕ : 12–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
(1) ಹಿಂದೂಪುರ – ಪೆನುಕೊಂಡ ಸೆಕ್ಷನ್ ನಡುವೆ ಹಲವಾರು ವಿವಿಧ ವಿದ್ಯುತ್ ಕಾಮಗಾರಿಗಳೊಂದಿಗೆ ಎಲ್‌ಸಿ 64, ಎಲ್‌ಸಿ 44 ಮತ್ತು ಎಲ್‌ಸಿ 71 ಬದಲಿಗೆ ರೈಲು ಮೇಲ್ಸೇತುವೆ / ರೈಲು ಕೆಳಸೇತುವೆಯ ನಿರ್ಮಾಣಕ್ಕಾಗಿ ವಿದ್ಯುತ್ ಸರಬರಾಜು ಮತ್ತು ಬೆಳಕಿನ ವ್ಯವಸ್ಥೆಗಳು. (2) ಬೆಂಗಳೂರು ನಗರ – ಜೋಲಾರಪೇಟೆ ಸೆಕ್ಷನ್ ನಡುವೆ ಎಲ್‌ಸಿ 95, ಎಲ್‌ಸಿ 92 ಮತ್ತು ಎಲ್‌ಸಿ 91 ಬದಲಿಗೆ ರೈಲು ಮೇಲ್ಸೇತುವೆ / ರೈಲು ಕೆಳಸೇತುವೆ / ಸಬ್‌ವೇಯ ಉದ್ದೇಶಿತ ನಿರ್ಮಾಣಕ್ಕಾಗಿ ವಿದ್ಯುತ್ ಸರಬರಾಜು ಮತ್ತು ಬೆಳಕಿನ ವ್ಯವಸ್ಥೆಗಳು. (3) ಚನ್ನಸಂದ್ರ ಹತ್ತಿರ ಎಲ್‌ಸಿ 6 ಬದಲಿಗೆ ರೈಲು ಮೇಲ್ಸೇತುವೆ / ರೈಲು ಕೆಳಸೇತುವೆಯ ಉದ್ದೇಶಿತ ನಿರ್ಮಾಣಕ್ಕಾಗಿ ವಿದ್ಯುತ್ ಸರಬರಾಜು ಮತ್ತು ಬೆಳಕಿನ ವ್ಯವಸ್ಥೆ. (ಟೆಂಡರ್ ಸಂ. ಇಸಿಎನ್–41–2022–ಆರ್‌ಟಿ)	ರೂ. 78,05,971/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03–11–2022 ರಂದು 11:00 ಗಂಟೆವರೆಗೆ

ಟೆಂಡರ್ ಪ್ರಕಟಣೆ ಸಂ. ಸಿಎಪಿ/ಸಿಎನ್/ಬಿಎನ್‌ಸಿ/91/2022
ದಿನಾಂಕ : 12–10–2022

ಕೆಲಸದ ಹೆಸರು	ಅಂದಾಜು ಮೌಲ್ಯ
ಕೊಪ್ಪಳದಲ್ಲಿ ಎಲ್‌ಸಿ ಸಂ. 63/65/66 ಮತ್ತು ಗಿಣಿಗೇರದಲ್ಲಿ ಎಲ್‌ಸಿ 72 ಬದಲಿಗೆ ಉದ್ದೇಶಿತ ರೈಲು ಮೇಲ್ಸೇತುವೆ / ರೈಲು ಕೆಳಸೇತುವೆಯ ನಿರ್ಮಾಣಕ್ಕಾಗಿ ಅಗತ್ಯವಾದ ವಿದ್ಯುತ್ ಮಾರ್ಗ ಕ್ರಾಸಿಂಗ್‌ನ ಸ್ಥಳಾಂತರ. (ಟೆಂಡರ್ ಸಂ. ಇಸಿಎನ್–39–2022)	ರೂ. 97,21,375/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07–11–2022 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಳಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ (ನಿರ್ಮಾಣ)
ಬೆಂಗಳೂರು ದಂಡು
ಪಿಯುಬಿ/432/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೆಪ್ಟೆಂಬರ್ 30, 2022ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಆರು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ಆರು ತಿಂಗಳುಗಳಿಗೆ	ಸೆಪ್ಟೆಂಬರ್ 30, 2021ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2022ಕ್ಕೆ ಕೊನೆಗೊಂಡ ಆರು ತಿಂಗಳುಗಳಿಗೆ	ಸೆಪ್ಟೆಂಬರ್ 30, 2021ಕ್ಕೆ ಕೊನೆಗೊಂಡ ತ್ರೈಮಾಸಿಕ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	82,514	1,51,329	81,480	82,827	1,54,140	82,088
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	3,840	6,014	3,650	3,580	6,509	3,897
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	7,556	9,346	3,655	7,390	9,932	3,902
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	5,630	7,733	2,734	5,477	8,088	2,864
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	5,630	7,733	2,734	5,467	8,075	2,842
6.	ಈಕ್ವಿಟಿ ಷೇರು ಬಂಡವಾಳ	1,453	1,453	1,453	1,453	1,453	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ						
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]						
	1. ಮೂಲ :	7.75	10.64	3.76	7.80	11.55	4.11
	2. ದುರ್ಬಲೀಕೃತ :	7.75	10.64	3.76	7.80	11.55	4.11

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಮಹೇಂದ್ರ ಕುಮಾರ್ ಶರ್ಮಾ
ಅಧ್ಯಕ್ಷರು

ಸ್ಥಳ : ಮುಂಬಯಿ
ದಿನಾಂಕ : ಅಕ್ಟೋಬರ್ 21, 2022

ಐದಾರು ವರ್ಷ ಒಂದೇ ಸ್ಥಳದಲ್ಲಿರುವ ಸಿಬ್ಬಂದಿ ವರ್ಗಾವಣೆ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ರಸ್ತೆ ಗುಂಡಿ: ಇಂದಿನಿಂದ ದುರಸ್ತಿ ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯವನ್ನು ಯುದ್ಧೋಪಾದಿಯಲ್ಲಿ ಶನಿವಾರದಿಂದ ಆರಂಭಿಸಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಸತತ ಮಳೆಯಿಂದ ರಸ್ತೆಗಳ ದುರಸ್ತಿಗೆ ಹಿನ್ನಡೆಯಾಗಿತ್ತು. ಗುರುವಾರದಿಂದ ಮಳೆ ಬಿಡುವು ನೀಡಿದೆ. ಶನಿವಾರದಿಂದ 10 ದಿನ ಮಳೆ ಇರುವುದಿಲ್ಲ ಎಂದು ಹವಾಮಾನ ಇಲಾಖೆಯ ಮುನ್ಸೂಚನೆ ತಿಳಿಸಿದೆ. ಹೀಗಾಗಿ, ಈ ಅವಧಿಯಲ್ಲಿ ಎಲ್ಲ ರಸ್ತೆಗಳ ಗುಂಡಿ ಹಾಗೂ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಲಾಗುತ್ತದೆ ಎಂದು ಯಲಹಂಕದಲ್ಲಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು, 'ಡಾಂಬರು ಉತ್ಪಾದನಾ ಘಟಕವನ್ನು ಅಣಿಗೊಳಿಸಿಕೊಳ್ಳಬೇಕು. ಶನಿವಾರದಿಂದಲೇ ದುರಸ್ತಿ ಕೆಲಸ ಹಗಲು-ರಾತ್ರಿ ನಡೆಯಬೇಕು ಎಂದು ಎಲ್ಲ ವಲಯ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳಿಗೆ ಸೂಚನೆ ನೀಡಲಾಗಿದೆ' ಎಂದು ವಿವರಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಶುಕ್ರವಾರ ಪರಿಶೀಲಿಸಿದರು. ಶಾಸಕ ವಿಶ್ವನಾಥ್, ವಲಯ ಆಯುಕ್ತ ರಂಗಪ್ಪ, ವಲಯ ಜಂಟಿ ಆಯುಕ್ತರಾದ ಪೂರ್ಣಿಮಾ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ವಲಯ ಮುಖ್ಯ ಎಂಜಿನಿಯರ್ ರಂಗನಾಥ್ ಉಪಸ್ಥಿತರಿದ್ದರು

ಯಲಹಂಕ ವಲಯ ವ್ಯಾಪ್ತಿಯಲ್ಲಿ ಮುಖ್ಯ ಆಯುಕ್ತರು, ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಬೆಳಿಗ್ಗೆ 6ರಿಂದ ಎನ್.ಇ.ಎಸ್ ಬಸ್ ನಿಲ್ದಾಣದಿಂದ 16ನೇ ಎ ಕ್ರಾಸ್ ಸರ್ವೀಸ್ ರಸ್ತೆ, ಶೇಷಾದ್ರಿಪುರಂ ಕಾಲೇಜು ರಸ್ತೆ, ಶರಾವತಿ ಹೋಟೆಲ್ ರಸ್ತೆ, ಯಲಹಂಕ ನ್ಯೂ ಟೌನ್ ಬಸ್ ನಿಲ್ದಾಣ, ಸಂದೀಪ್ ಉನ್ನಿಕೃಷ್ಣನ್ ಮುಖ್ಯರಸ್ತೆ ಹಾಗೂ ಅಟ್ಟೂರುವರೆಗೆ ಸುಮಾರು 4 ಕಿ.ಮೀ. ನಡೆದು ಪರಿಶೀಲನೆ ನಡೆಸಿದರು.

'ಮರದ ಕೊಂಬೆಗಳ ರಾಶಿಯನ್ನು ತೆರವುಗೊಳಿಸಿ, ಪಾದಚಾರಿ ಮಾರ್ಗದಲ್ಲಿರುವ ಶೆಡ್ ತೆರವು ಮಾಡಿ' ಎಂದರು. 'ಶೋಲ್ಡರ್ ಡ್ರೈನ್‌ಗಳ ದುರಸ್ತಿ, ಒ.ಎಫ್.ಸಿ ಕೇಬಲ್ ಗಳನ್ನು ತೆರವುಗೊಳಿಸಿ, ರಸ್ತೆ ಚರಂಡಿ ದುರಸ್ತಿ ಮಾಡಿ, ಬೀದಿ ಬದಿ ವ್ಯಾಪಾರಿಗಳಿಗೆ ಬೇರೆಡೆ ಸ್ಥಳಾವಕಾಶ ಕಲ್ಪಿಸಿ, ರಸ್ತೆ ಬದಿ ಚರಂಡಿಯಲ್ಲಿ ಆಗಿಂದಾಗ್ಗೆ ಹೂಳು ತೆಗೆಯಿರಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾತೃ ಇಲಾಖೆಗೆ ಆರ್‌ಎಫ್‌ಒ

'ಯಲಹಂಕ ವಲಯ ಅರಣ್ಯ ವಿಭಾಗದ ಆರ್‌ಎಫ್‌ಒ ಆರ್.ಕೃಷ್ಣ ಅವರು ನಮ್ಮ ವೇಗಕ್ಕೆ ತಕ್ಕಂತೆ ಕೆಲಸ ಮಾಡಲಾಗುತ್ತಿಲ್ಲ. ಸ್ಥಳಗಳಿಗೆ ಹೋಗುತ್ತಿಲ್ಲ. ಹೀಗಾಗಿ, ಅವರ ಸೇವೆ ನಮಗೆ ಬೇಡ ಎಂದು ಬಿಬಿಎಂಪಿ ಸೇವೆಯಿಂದ ಅವರನ್ನು ಬಿಡುಗಡೆ ಮಾಡಲಾಗುತ್ತಿದೆ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಕಾರ್ಯ ನಿರ್ವಹಿಸದ ಬಗ್ಗೆ ಗುರುವಾರವು ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಅವರು ಮುಂದಿನ ದಿನಗಳಲ್ಲಿ ಕರ್ತವ್ಯಲೋಪ ಎಸಗಿದರೆ ಕ್ರಮ ಕೈಗೊಳ್ಳುತ್ತೇವೆ. ವಾಪಸ್ ಕಳುಹಿಸಲಾಗುತ್ತದೆ' ಎಂದರು.

'ಬಿಬಿಎಂಪಿಯಲ್ಲಿ ಕಂದಾಯ, ಆರೋಗ್ಯ, ಶಿಕ್ಷಣ, ಯೋಜನೆ, ರಸ್ತೆ ಮೂಲಸೌಕರ್ಯ, ನಗರ ಯೋಜನೆ ವಿಭಾಗಗಳಲ್ಲಿ ಹಲವು ವರ್ಷಗಳಿಂದ ಸಿಬ್ಬಂದಿ ಒಂದೇ ಕಡೇ ಇದ್ದಾರೆ. ಅವರು ಕಾರ್ಯನಿರ್ವಹಿಸುತ್ತಿಲ್ಲ. ಐದಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ನಿಯುಕ್ತಿಯಲ್ಲಿ ಇರುವವರನ್ನು ಇತರೆ ವಲಯಗಳಿಗೆ ವರ್ಗಾಯಿಸುವ ಬಗ್ಗೆ ಪಟ್ಟಿ ರಚಿಸಲಾಗುತ್ತಿದೆ. ನಾಗರಿಕರ ಸಮಸ್ಯೆಗಳನ್ನು ಶೀಘ್ರವಾಗಿ ನಿವಾರಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಸಾಮಾಜಿಕ ನ್ಯಾಯಕ್ಕಾಗಿ ರಾಹುಲ್ ಗಾಂಧಿಗೆ ಮೊರೆ

ಬೆಂಗಳೂರು: ಸಾಮಾಜಿಕ ನ್ಯಾಯ ಸಿಗದೆ ತುಳಿತಕ್ಕೆ ಒಳಗಾಗಿರುವ ಹಿಂದುಳಿದ ವರ್ಗಗಳಿಗೆ ಶಾಸಕಾಂಗ, ನ್ಯಾಯಾಂಗ ಹಾಗೂ ಇತರೆ ಕ್ಷೇತ್ರಗಳಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕಿಸಲು ಬೆಂಬಲಕ್ಕೆ ನಿಲ್ಲಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಸಲ್ಲಿಸಿದೆ.

ಲೋಕಸಭೆ, ವಿಧಾನಸಭೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಸ್ಥಾನ ದೊರಕಿಸಬೇಕು ಎಂಬುದೂ ಸೇರಿದಂತೆ ಪ್ರಮುಖ ಏಳು ವಿಷಯಗಳನ್ನು ಒಳಗೊಂಡ ಮನವಿ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ಕೆ.ಎಂ. ರಾಮಚಂದ್ರ, ಗೌರವಾಧ್ಯಕ್ಷ ಜಿ.ಕೆ. ರವಿ, ಕಾರ್ಯಾಧ್ಯಕ್ಷ ಸುರೇಶ್ ಎಂ. ಲಾತೂರ್, ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಎಸ್. ಹನುಮಂತ ಪ್ರಸಾದ್ ಮತ್ತಿತರರು ಸಾಮಾಜಿಕ ನ್ಯಾಯ ಕೊಡಿಸುವಂತೆ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದರು.

ಮನವಿ ಸಲ್ಲಿಸುವ ವೇಳೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಹಿರಿಯ ವಕೀಲ ಪ್ರೊ.ರವಿವರ್ಮಕುಮಾರ್, ಕೆಪಿಸಿಸಿ ಹಿಂದುಳಿದ ವರ್ಗಗಳ ಅಧ್ಯಕ್ಷ ಮಧು ಬಂಗಾರಪ್ಪ ಇದ್ದರು.

ಲಂಚ: ಬೆಸ್ಕಾಂ ಎ.ಇ ಬಂಧನ

ಬೆಂಗಳೂರು: ಬಹುಮಹಡಿ ಕಟ್ಟಡಕ್ಕೆ ಅಧಿಕ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 50,000 ಲಂಚ ಪಡೆಯುತ್ತಿದ್ದ ಬೆಸ್ಕಾಂ ಬೀಳೇಕಹಳ್ಳಿ ಉಪ ವಿಭಾಗದ ಸಹಾಯಕ ಎಂಜಿನಿಯರ್ ಎನ್. ನಾಗರಾಜ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕೋಡಿಚಿಕ್ಕನಹಳ್ಳಿಯ ಅಬ್ದುಲ್ ರಹೀಂ ಎಂಬುವವರ ಬಹುಮಹಡಿ ಕಟ್ಟಡದ ವಿದ್ಯುತ್ ಕಾಮಗಾರಿಯ ಗುತ್ತಿಗೆಯನ್ನು ಕುಮಾರ್ ಎಚ್.ಎಸ್. ಎಂಬುವವರು ಪಡೆದಿದ್ದರು. ಕಟ್ಟಡಕ್ಕೆ 37 ಕಿಲೋವ್ಯಾಟ್ ಸಾಮರ್ಥ್ಯದ ವಿದ್ಯುತ್ ಸಂಪರ್ಕಕ್ಕೆ 2017ರಲ್ಲೇ ಮಂಜೂರಾತಿ ಪಡೆದಿದ್ದರು. 'ಲೈನ್ ಕ್ಲಿಯರೆನ್ಸ್' ನೀಡಲು ₹ 50,000 ಲಂಚ ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು.

ಕುಮಾರ್ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು. ಗುರುವಾರ ಲಂಚದ ಹಣ ಪಡೆಯುತ್ತಿದ್ದಾಗಲೇ ದಾಳಿಮಾಡಿದ ಲೋಕಾಯುಕ್ತ ಪೊಲೀಸರ ತಂಡ, ನಾಗರಾಜ್ ಅವರನ್ನು ಬಂಧಿಸಿದೆ. ಎಸ್‌ಪಿ ಅಶೋಕ್ ಕೆ.ವಿ. ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಆಂಟೋನಿ ಜಾನ್ ನೇತೃತ್ವದ ತಂಡ ಈ ಕಾರ್ಯಾಚರಣೆ ನಡೆಸಿದೆ.

2017ರಲ್ಲಿ ವಾರ್ಷಿಕ 169.9 ಸೆಂ.ಮೀ ಮಳೆ, ಈ ವರ್ಷ 170.9 ಸೆಂ.ಮೀ ಮಳೆ

ರಾಜಧಾನಿಯಲ್ಲಿ ಈ ವರ್ಷ ದಾಖಲೆ ಮಳೆ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಈ ವರ್ಷ ಅತಿಹೆಚ್ಚು ಮಳೆ ಸುರಿದಿದ್ದು, ಮೂಲಸೌಕರ್ಯಕ್ಕೂ ಸಾಕಷ್ಟು ಹಾನಿಯಾಗಿದೆ. ನಗರದಲ್ಲಿ ಈ ವರ್ಷ ಮಲೆನಾಡು ಜಿಲ್ಲೆಗಳಲ್ಲಿ ಸುರಿಯುವಷ್ಟೇ ಸರಾಸರಿ ಮಳೆಯಾಗಿದೆ.

'ಸಿಲಿಕಾನ್ ಸಿಟಿ'ಯಲ್ಲಿ 2017ರಲ್ಲಿ ವಾರ್ಷಿಕವಾಗಿ 169.9 ಸೆಂ.ಮೀ ಮಳೆ ಸುರಿದಿತ್ತು. ಅದು ಇದುವರೆಗಿನ ದಾಖಲೆಯಾಗಿತ್ತು. ಆದರೆ, ಈ ವರ್ಷ ಈ ವರ್ಷ ಜನವರಿ 1ರಿಂದ ಅಕ್ಟೋಬರ್ 21ರ ಅವಧಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಆ ಪ್ರಮಾಣ ಅಳಿಸಿ ಹಾಕಿ ಸಾರ್ವಕಾಲಿಕ ದಾಖಲೆಯಾಗಿ ಅಂದಾಜು 170.9 ಸೆಂ.ಮೀ ಮಳೆಯಾಗಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಅಧಿಕೃತವಾಗಿ ಘೋಷಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ಈ ವರ್ಷ ಜನವರಿ 1ರಿಂದ ಅ.21ರ ಅವಧಿಯಲ್ಲಿ 137.2 ಸೆಂ.ಮೀ. ಮಳೆ ಸುರಿದಿದೆ. ಗ್ರಾಮಾಂತರ ಜಿಲ್ಲೆಯಲ್ಲಿ ವಾಡಿಕೆ ಮಳೆ 69.5 ಸೆಂ.ಮೀ. ಆಗಬೇಕಿತ್ತು. ವಾಡಿಕೆ ಮಳೆಗಿಂತ ಸರಾಸರಿ 67.7 ಸೆಂ.ಮೀ. ಹೆಚ್ಚು ಮಳೆ ಸುರಿದಿದೆ ಎಂದು ಐಎಂಡಿ ಅಧಿಕಾರಿ ಮಾಹಿತಿ ನೀಡಿದ್ದಾರೆ.

'ಬೆಂಗಳೂರಿನಲ್ಲಿ ಅಕ್ಟೋಬರ್ ಕೊನೆಯ ವೇಳೆಗೆ ನಿಧಾನವಾಗಿ ಮಳೆ ಕ್ಷೀಣಿಸಿ, ಚಳಿಗಾಲ ಪ್ರವೇಶದ ಮುನ್ಸೂಚನೆ ಸಿಗಬೇಕಿತ್ತು. ಆದರೆ, ಈಗಲೂ ಅಧಿಕ ಮಳೆಯಾಗುತ್ತಿದೆ. ಅ.1ರಿಂದ 21ರ ಅವಧಿಯಲ್ಲಿ ವಾಡಿಕೆ 11.4 ಸೆಂ.ಮೀ. ಮಳೆ ಸುರಿಯಬೇಕಿತ್ತು. 21.6 ಸೆಂ.ಮೀ. ಮಳೆಯಾಗಿದೆ. 10.2 ಸೆಂ.ಮೀನಷ್ಟು ಹೆಚ್ಚು ಮಳೆ ಬಿದ್ದಿದೆ' ಎಂದು ಹವಾಮಾನ ಇಲಾಖೆ ಅಧಿಕಾರಿ ಒಬ್ಬರು ಮಾಹಿತಿ ನೀಡಿದ್ದಾರೆ.

ಮುಂಗಾರು ಅವಧಿಯಲ್ಲಿ (ಜೂನ್1ರಿಂದ ಸೆಪ್ಟೆಂಬರ್ 30ರ ತನಕ) ಬೆಂಗಳೂರು ನಗರ ಜಿಲ್ಲೆಯಲ್ಲಿ 47.1 ಸೆಂ.ಮೀ. ವಾಡಿಕೆಯ ಮಳೆ ಪ್ರಮಾಣ. ಆದರೆ, 79 ಸೆಂ.ಮೀ. ಮಳೆಯಾಗಿದೆ. ಮುಂಗಾರು ಅವಧಿಯಲ್ಲಿ ಬೆಂಗಳೂರು ಮಳೆಯಲ್ಲಿ ತೋಯುವಂತೆ ಆಗಿತ್ತು. ಮುಂಗಾರು ಅವಧಿಯಲ್ಲೇ 31.9 ಸೆಂ.ಮೀ. ಹೆಚ್ಚು ಮಳೆ ಸುರಿದಿದೆ.

'ಸಿಲಿಕಾನ್ ಸಿಟಿ'ಯಲ್ಲಿ ನಿರಂತರ ಮಳೆಯಿಂದ ನಗರದ ಬಹುತೇಕ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿವೆ. ಗುಂಡಿಗಳಿಂದ ದ್ವಿಚಕ್ರ ಸವಾರರು ಸಂಕಟ ಪಡುತ್ತಿದ್ದಾರೆ.

ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿ ಸುರಿದ ಮಳೆಯಿಂದ ಬೆಂಗಳೂರು ಪೂರ್ವ ವಲಯದ ವ್ಯಾಪ್ತಿಯ ಕೆಲವು ಅಪಾರ್ಟ್‌ಮೆಂಟ್‌ಗಳಿಗೆ ನೀರು ನುಗ್ಗಿತ್ತು. ನೆಲಮಹಡಿಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳು ಪ್ರವಾಹದ ನೀರಿನಲ್ಲಿ ಮುಳುಗಿದ್ದವು. ಆ ವಾಹನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವ ಸ್ಥಿತಿ ಮಾಲೀಕರಿಗೆ ಬಂದಿತ್ತು. ಮಳೆಯ ನೀರು ಸಂಗ್ರಹಗೊಳ್ಳುವ ಪ್ರದೇಶದಲ್ಲಿರುವ ಅಪಾರ್ಟ್‌ಮೆಂಟ್, ನಿವೇಶನ ಹಾಗೂ ಬಾಡಿಗೆ ಮನೆಗಳಿಗೆ ಈಗ ಬೇಡಿಕೆ ಕುಸಿದಿದೆ.

'ಬೆಳಕಿನ ಹಬ್ಬ ದೀಪಾವಳಿಯಲ್ಲಿ ವ್ಯಾಪಾರ ನಡೆಸಿ, ಬದುಕು ಕಟ್ಟಿಕೊಳ್ಳುತ್ತಿದ್ದೆವು. ಪ್ರತಿನಿತ್ಯ ಸಂಜೆ ಸುರಿಯುತ್ತಿರುವ ಮಳೆಯಿಂದ ವ್ಯಾಪಾರ ನಡೆಸಲು ಸಾಧ್ಯವಾಗುತ್ತಿಲ್ಲ. ವ್ಯಾಪಾರಕ್ಕಿಟ್ಟ ಸಾಮಗ್ರಿಗಳು ನೀರು ಪಾಲಾಗುತ್ತಿವೆ. ಮಳೆ ಬಂದರೆ ಕೆ.ಆರ್. ಮಾರುಕಟ್ಟೆ ಹಾಗೂ ಚಿಕ್ಕಪೇಟೆ ರಸ್ತೆಗಳಲ್ಲಿ ನೀರು ನಿಲುತ್ತಿದೆ. ಶನಿವಾರ ಹಾಗೂ ಭಾನುವಾರವೂ ಮಳೆ ಸುರಿದರೆ ಹೂವಿನ ಹಾಗೂ ಹಣ್ಣು ವ್ಯಾಪಾರ ನಡೆಸಲು ಸಾಧ್ಯವಾಗುವುದಿಲ್ಲ' ಎಂದು ಚಿಕ್ಕಪೇಟೆಯಲ್ಲಿ ವ್ಯಾಪಾರ ನಡೆಸುವ ಸವಿತಾ ಅಳಲು ತೋಡಿಕೊಂಡರು.

ಬೆಂಗಳೂರಿನಲ್ಲಿ ಬುಧವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಎಜಿಆರ್ ಗಾರ್ಡನ್ಸ್– ಬೆಳ್ಳಂದೂರು ರಸ್ತೆ ಜಲಾವೃತಗೊಂಡಿತ್ತು —ಪ್ರಜಾವಾಣಿ ಚಿತ್ರ



ಹಕ್ಕಿಪಿಕ್ಕಿ ಜನಾಂಗದ ಜೋಪಡಿಗಳಿಗೆ ನೀರು

ದೊಡ್ಡಗುಬ್ಬಿ ಕೆರೆಯ ಕೋಡಿ ಬಿದ್ದು ಕೆರೆಯ ಪ್ರದೇಶದಲ್ಲಿ ವಾಸವಿರುವ ಹಕ್ಕಿಪಿಕ್ಕಿ ಜನಾಂಗ ವಾಸಿಸುವ ಜೋಪಡಿಗಳಲ್ಲಿ ನೀರು ತುಂಬಿಕೊಂಡಿದೆ

ಕೆ.ಆರ್.ಪುರ: ಮಳೆಗೆ ಮಹದೇವಪುರ ಕ್ಷೇತ್ರದ ದೊಡ್ಡಗುಬ್ಬಿ ಕೆರೆಯ ಕೋಡಿ ಬಿದ್ದು ಕೆರೆಯ ಆಸುಪಾಸಿನಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಜನಾಂಗದ ಜೋಪಡಿಗಳಿಗೆ ನೀರು ನುಗ್ಗಿದೆ. ಅವರ ಬದುಕು ದುಸ್ತರವಾಗಿದೆ.

ಜೋಪಡಿಗಳಿಗೆ ನೀರು ನುಗ್ಗಿದರಿಂದ ದವಸ-ಧಾನ್ಯಗಳು ಹಾಳಾಗಿವೆ. ಕುಡಿಯುವ ನೀರಿಗೆ ಪರದಾಡುವಂತಾಗಿದೆ. ಜೋಪಡಿ ಪ್ರದೇಶದಲ್ಲಿ ನೀರು ಹೆಚ್ಚಾಗಿ ತುಂಬಿಕೊಂಡಿದ್ದರಿಂದ ಜನರು ಗುಡಿಸಲಿನಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಕೋಡಿ ನೀರು ಹರಿಯುವ ಮಾರ್ಗದ ಮೂಲಕವೇ ಜೋಪಡಿಗಳಿಗೆ ತೆರಳಬೇಕು. ಕೆಲವೊಮ್ಮೆ ನಿವಾಸಿಗಳು ಬಿದ್ದು ಗಾಯಗೊಂಡಿರುವ ನಿರ್ದೇಶನವು ಇದೆ ಎಂದು ನಿವಾಸಿಗಳು ಹೇಳಿದ್ದಾರೆ.

40 ವರ್ಷದಿಂದ ದೊಡ್ಡ ಗುಬ್ಬಿ ಗ್ರಾಮದಲ್ಲಿ ಕೂಲಿ ಮಾಡಿಕೊಂಡು ಬದುಕು ಕಟ್ಟಿಕೊಂಡು ಸರ್ಕಾರದ ಭೂಮಿಯಲ್ಲಿ ವಾಸಿಸುತ್ತಿದ್ದೆವು. ಅದರೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಕ್ಕಲೆಬ್ಬಿಸುತ್ತಿದ್ದಾರೆ. ನೆರೆಯಿಂದ ವಿಷಜಂತುಗಳು ಬರುತ್ತಿವೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿವಾಸಿಗಳು ಆಗ್ರಹಿಸಿದರು. 15 ವರ್ಷದಿಂದ ಶ್ವಾಶತ ಸೂರಿಗಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಪ್ರತಿಸಲ ಮಳೆ ಬಂದಾಗಲು ನಮ್ಮ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕು ಸಾಕಿಸುವಂತಾಗಿದೆ. ಇಲ್ಲಿ ನಮಗೆ ಯಾವುದೇ ರೀತಿಯ ಮೂಲ ಸೌಕರ್ಯಗಳಾದ ರಸ್ತೆ-ವಿದ್ಯುತ್ ಇಲ್ಲದೆ ಪರದಾಡುತ್ತಿದ್ದೇವೆ ಎಂದು ಅಳಲು ತೋಡಿಕೊಂಡರು.

ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಶನ್ ನೂತನ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಕಬಡ್ಡಿ ಅಸೋಸಿಯೇಷನ್: ನೂತನ ಪದಾಧಿಕಾರಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ನೂತನ ಅಧ್ಯಕ್ಷರಾಗಿ ಎಂ.ಹನುಮಂತೇಗೌಡ ಆಯ್ಕೆ ಆಗಿದ್ದಾರೆ.

2021ರ ಡಿ.7ರಂದು ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆದಿತ್ತು. ನಂತರ, ಸರ್ಕಾರವು ಆಡಳಿತಾಧಿಕಾರಿ ನೇಮಿಸಿತ್ತು. ಇದನ್ನುಪ್ರಶ್ನಿಸಿಕೆಲವುಪದಾಧಿಕಾರಿಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಹಿನ್ನೆಲೆಯಲ್ಲಿ ನ್ಯಾಯಾಲಯವು ಚುನಾವಣೆ ನಡೆಸಿ, ಮತಪೆಟ್ಟಿಗೆಗಳನ್ನು ಮುಚ್ಚಿದ ಲಕೋಟೆಯಲ್ಲಿ ಇಡುವಂತೆ ಚುನಾವಣಾಧಿಕಾರಿಗೆ ಆದೇಶಿಸಿತ್ತು.

ಈಗ ನ್ಯಾಯಾಲಯದ ಆದೇಶದಂತೆ ಶುಕ್ರವಾರ ಮತಎಣಿಕೆ ನಡೆದು, ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸಿದರು. ಬಿ.ಸಿ. ರಮೇಶ್ ಮತ್ತು ಎ.ಮುನಿರಾಜು ನೇತೃತ್ವದ ಸಿಂಡಿಕೇಟ್‌ನ 14 ಸದಸ್ಯರು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಎ.ಮುನಿರಾಜು, ಉಪಾಧ್ಯಕ್ಷರಾಗಿ ರಾಜೇಂದ್ರ ಸುವರ್ಣ, ಅನಿಲ್ ಕುಮಾರ್, ಪಕ್ಕೀರ್ ಗೌಡ ಅನಂತಗೌಡ ಪಾಟೀಲ್, ಎಂ.ಮಹದೇವಸ್ವಾಮಿ, ರಮಾನಂದ ಗಣಪತಿ ನಾಯ್ಕ್, ಖಜಾಂಚಿಯಾಗಿ ನಂದಕುಮಾರ್ ವೆಂಕಟಪ್ಪ ಪಾಟೀಲ್, ಜಂಟಿ ಕಾರ್ಯದರ್ಶಿಗಳಾಗಿ ಎಚ್.ಎಸ್.ಉತ್ತಪ್ಪ, ಎಂ.ನಾಗರಾಜ್, ಜಿ.ಸಿ.ವಿಜಯಕುಮಾರ್, ಎ.ಎಸ್.ಅಮರೇಂದ್ರ, ಬಿ.ಎನ್. ಮಹೇಶ್ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಬಿ.ಸಿ.ಸುರೇಶ್ ಅವರು ಆಯ್ಕೆಯಾಗಿದ್ದಾರೆ.

ರಾಜಕಾಲುವೆ ಒತ್ತುವರಿ: ನೂರಾರು ಮನೆಗಳಿಗೆ ನುಗ್ಗಿದ ಮಳೆ ನೀರು

ಕೆಂಗೇರಿ: ನಗರದ ಉಲ್ಲಾಳು ವ್ಯಾಪ್ತಿಯ ನಾಗದೇವನಹಳ್ಳಿ, ರಾಮನಾಥ ಬಡಾವಣೆ, ಬೃಂದಾವನ ಬಡಾವಣೆ ಸುತ್ತಮುತ್ತಲಿನ ನೂರಾರು ಮನೆಗಳಿಗೆ ಬುಧವಾರ ರಾತ್ರಿ ಮಳೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು.

ಮಲ್ಲತ್ತಹಳ್ಳಿ, ಮರಿಯಪ್ಪನ ಪಾಳ್ಯ ನಾಗದೇವನಹಳ್ಳಿ ಸುತ್ತಮುತ್ತಲಿನ ಬಡಾವಣೆಗಳ ಮಳೆನೀರು ರಾಜಕಾಲುವೆ ಮುಖಾಂತರ ವೃಷಭಾವತಿ ನದಿಗೆ ಸೇರುತ್ತದೆ. ಆದರೆ ಈ ಭಾಗದಲ್ಲಿ ರಾಜಕಾಲುವೆ ಬಹುತೇಕ ಒತ್ತುವರಿಯಾಗಿದೆ. ಹೀಗಾಗಿ, ಪ್ರತಿವರ್ಷ ಮಳೆ ಬಂದಾಗ ಇದೇ ಸಮಸ್ಯೆ ಇಲ್ಲಿನ ಜನರನ್ನು ಬಾಧಿಸುತ್ತಿದೆ. ಮಳೆ ನೀರು ಮನೆಗೆ ನುಗ್ಗಿದಾಗ ಕಾಟಾಚಾರಕ್ಕೆ ಬಂದು ವಿಚಾರಿಸುವ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತೆ ಇತ್ತ ಸುಳಿಯುವುದೇ ಇಲ್ಲ' ಎಂದು ರಾಮನಾಥ ಬಡಾವಣೆಯ ಗೃಹಿಣಿ ಮಮತಾ ಆಕ್ರೋಶ ವ್ಯಕ್ತಪಡಿಸಿದರು.

ರಾಜಕಾಲುವೆ ಮೇಲೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗಿದೆ. ಇಂತಹ ಒತ್ತುವರಿಯಿಂದ ಹಿಮ್ಮುಖವಾಗಿ ಮಳೆ ನೀರು ಹರಿದು ಸುತ್ತಮುತ್ತ ಬಡಾವಣೆಗೆ ನುಗ್ಗಿ ಬರುತ್ತಿದೆ. ಮನೆಯಲ್ಲಿರುವ ದವಸ ಧಾನ್ಯ, ಬಟ್ಟೆ, ಫ್ರಿಡ್ಜ್, ಟಿವಿ ಹಾಳಾಗಿದೆ. ರಾತ್ರಿಯೆಲ್ಲಾ ಜಾಗರಣೆ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ' ಎಂದು ಸ್ಥಳೀಯ ನಿವಾಸಿ ಬೃಂದಾ ಅಳಲು ತೋಡಿಕೊಂಡರು. ಮಳೆ ನೀರು ಜೊತೆಗೆ ಒಳಚರಂಡಿ ನೀರು ಸೇರಿ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸಹಕಾರ ಸಚಿವ ಎಸ್ ಟಿ ಸೋಮಶೇಖರ್ ಮಳೆಹಾನಿ ಪ್ರದೇಶಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.



ರಾಮನಾಥ ಬಡಾವಣೆಯಲ್ಲಿ ನಿಂತಿದ್ದ ಮಳೆ ನೀರು

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ

'ಕಾನೂನಿನಿಂದ ಸಮಾಜ ಬದಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇವತ್ತಿನ ಸಮಾಜ ಶ್ರೀಮಂತಿಕೆ ಮತ್ತು ಅಧಿಕಾರವನ್ನು ಪೂಜಿಸುತ್ತಿದೆ. ಇದರಿಂದಾಗಿ ಜನರು ಶ್ರೀಮಂತಿಕೆಯ ಹಿಂದೆ ಬಿದ್ದು, ಅನ್ಯ ಮಾರ್ಗಗಳಿಂದ ಹಣಗಳಿಸಲು ಪೈಪೋಟಿ ನಡೆಸುತ್ತಿದ್ದಾರೆ. ಇಂತಹ ಸಮಾಜವನ್ನು ಕಾನೂನಿನಿಂದ ಬದಲಾಯಿಸಲು ಸಾಧ್ಯವಿಲ್ಲ' ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಮಾರಂಭದಲ್ಲಿ ವಿದ್ವಾಂಸ ಪ್ರೊ. ಶಾಂತಿನಾಥ ದಿಬ್ಬದ ಅವರಿಗೆ 'ಚಾವುಂಡರಾಯ ದತ್ತಿ ಪ್ರಶಸ್ತಿ', ವಿಜಯವಾಣಿ ಸಂಪಾದಕ ಕೆ.ಎನ್.ಚನ್ನೇಗೌಡ ಅವರಿಗೆ 'ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತಿರ್ಥಹಳ್ಳಿ ದತ್ತಿ ಪ್ರಶಸ್ತಿ', ಅಕ್ಕಲಕೋಟೆಯ ಬಸವಲಿಂಗ ಸ್ವಾಮೀಜಿ, ಪ್ರಾಧ್ಯಾಪಕ ಆರ್. ಶಂಕರಪ್ಪ ಹಾಗೂ ರಂಗನಿರ್ದೇಶಕ ಕೆ. ಇಮಾಮ ಸಾಬ ಅವರಿಗೆ 'ಕನ್ನಡ ಕಾಯಕ ದತ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. 'ಚಾವುಂಡರಾಯ ದತ್ತಿ ಪ್ರಶಸ್ತಿ' ₹ 30 ಸಾವಿರ ಹಾಗೂ ಉಳಿದ ದತ್ತಿ ಪ್ರಶಸ್ತಿಗಳು ತಲಾ ₹ 10 ಸಾವಿರ ಒಳಗೊಂಡಿವೆ.

ಸಮಾರಂಭದಲ್ಲಿ (ಕುಳಿತವರು ಎಡದಿಂದ ಬಲಕ್ಕೆ) ಕೆ.ಎನ್. ಚನ್ನೇಗೌಡ ಅವರಿಗೆ 'ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತಿರ್ಥಹಳ್ಳಿ ದತ್ತಿ ಪ್ರಶಸ್ತಿ', ಆರ್. ಶಂಕರಪ್ಪ, ಬಸವಲಿಂಗ ಸ್ವಾಮೀಜಿ ಹಾಗೂ ಕೆ. ಇಮಾಮಸಾಬ ಅವರಿಗೆ 'ಕನ್ನಡ ಕಾಯಕ ಪ್ರಶಸ್ತಿ' ಮತ್ತು ಪ್ರೊ. ಶಾಂತಿನಾಥ ದಿಬ್ಬದ ಅವರಿಗೆ 'ಚಾವುಂಡರಾಯ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷ ಮಹೇಶ ಜೋಶಿ, ದತ್ತಿದಾನಿ ಪದ್ಮಿನಿ ನಾಗರಾಜು, ನ್ಯಾ. ಸಂತೋಷ್ ಹೆಗ್ಡೆ, ಹಂ.ಪ. ನಾಗರಾಜಯ್ಯ, ದತ್ತಿದಾನಿ ವ.ಚ. ಚನ್ನೇಗೌಡ ಹಾಗೂ ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ಇದ್ದಾರೆ – ಪ್ರಜಾವಾಣಿ ಚಿತ್ರ

'ಈ ಹಿಂದೆ ಜೈಲಿಗೆ ಹೋದವರು ಹಾಗೂ ಅವರ ಕುಟುಂಬದವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತಿತ್ತು. ಇದರಿಂದ ಜನರಲ್ಲಿ ಭಯವಿತ್ತು. ಈಗ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋಗುತ್ತೇವೆ. ಮೋಸದಿಂದ ಹಣ ಪಡೆದವರಿಗೆ 40-50 ವರ್ಷಗಳ ಬಳಿಕ ಶಿಕ್ಷೆಯಾಗುತ್ತದೆ. ಇದರಿಂದಾಗಿ ಕಾನೂನಿನ ಭಯ ಇಲ್ಲವಾಗಿದೆ. ಕರ್ನಾಟಕ ಲೋಕಾಯುಕ್ತಕ್ಕೆ ಬರುವವರೆಗೆ ನಾನು ಕೂಪ ಮಂಡೂಕ ಆಗಿದ್ದೆ. ಅಲ್ಲಿಗೆ ಬಂದ ಬಳಿಕ ವ್ಯವಸ್ಥೆಯ ಲೋಪಗಳು ಅರಿವಿಗೆ ಬಂದಿತು' ಎಂದು ನ್ಯಾ. ಸಂತೋಷ್ ಹೆಗ್ಡೆ ತಿಳಿಸಿದರು.

'ಜೀವನದಲ್ಲಿ ತೃಪ್ತಿ ಎಂಬ ಮೌಲ್ಯವನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಬರುತ್ತದೆ. ಮಾನವೀಯತೆ ಇದ್ದರೆ ಮಾನವ ಎಂದು ಕರೆಸಿಕೊಳ್ಳಬಹುದು' ಎಂದು ಹೇಳಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, 'ಪರಿಷತ್ತನ್ನು ಅತ್ಯಂತ ಹತ್ತಿರದಿಂದ ನೋಡುತ್ತಾ ಬಂದಿರುವ ನನಗೆ, ಪರಿಷತ್ತಿನಲ್ಲಿ ಆಗುತ್ತಿರುವ ಇತ್ತೀಚಿನ ಬದಲಾವಣೆಯ ಬಗ್ಗೆ ಅತೀವ ಸಂತೋಷವಾಗುತ್ತಿದೆ. ಕನ್ನಡವನ್ನು ಹವಾನಿಯಂತ್ರಿತ ಕಟ್ಟಡದಲ್ಲಿ ಕೂರಿಸಿರುವುದು ಸಂತೋಷವನ್ನುಂಟು ಮಾಡಿದೆ' ಎಂದು ತಿಳಿಸಿದರು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ದತ್ತಿ ಪ್ರಶಸ್ತಿ ಪರಿಷತ್ತಿನ ಮೇಲೆ ಜನರು ಇಟ್ಟಿರುವ ವಿಶ್ವಾಸದ ಕಿರೀಟ. 2,061 ದತ್ತಿ ಪ್ರಶಸ್ತಿಗಳನ್ನು ಪರಿಷತ್ತಿನಲ್ಲಿ ಸ್ಥಾಪಿಸಲಾಗಿದೆ. ಸರ್ಕಾರವೂ ಇಷ್ಟು ಪ್ರಶಸ್ತಿ ನೀಡುತ್ತಿಲ್ಲ' ಎಂದು ಹೇಳಿದರು.

'ರಾಜಕೀಯ ಪ್ರಾತಿನಿಧ್ಯ ನೇಕಾರರ ಒತ್ತಾಯ'

ಬೆಂಗಳೂರು: 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕನಿಷ್ಠ ಐದು ಕ್ಷೇತ್ರಗಳಲ್ಲಿ ನೇಕಾರರಿಗೆ ಅವಕಾಶ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ಬಿ.ಎಸ್. ಸೋಮಶೇಖರ್ ಆಗ್ರಹಿಸಿದರು.

'ರಾಜ್ಯದಲ್ಲಿ 60 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನೇಕಾರ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯವೇ ಇಲ್ಲದಂತಾಗಿದೆ. ರಾಜ್ಯದ ಎಲ್ಲಾ ಪಕ್ಷಗಳು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಬಿಬಿಎಂಪಿ ಚುನಾವಣೆಯಲ್ಲಿ ಕನಿಷ್ಠ 20 ವಾರ್ಡ್‌ಗಳಲ್ಲಿ ನೇಕಾರರು ಸ್ಪರ್ಧಿಸಲು ಅವಕಾಶ ನೀಡಬೇಕು' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ರಾಜ್ಯದಲ್ಲಿ ಹಲವು ಪಂಗಡಗಳಾಗಿ ಗುರುತಿಸಿಕೊಂಡಿರುವ ನೇಕಾರರ ಸಮುದಾಯವನ್ನು ಸಂಘಟಿಸಿ ವಲಯವಾರು ಸಮಾವೇಶಗಳನ್ನು ಹಮ್ಮಿಕೊಂಡು ಸಂಘಟನೆಯನ್ನು ಬಲಪಡಿಸಲಾಗುವುದು. ನವೆಂಬರ್ 6ರಂದು ಮಂಗಳೂರಿನಲ್ಲಿ 13ರಂದು ತುಮಕೂರಿನಲ್ಲಿ ಸಮಾವೇಶಗಳನ್ನು ಆಯೋಜಿಸಲಾಗುವುದು' ಎಂದು ಮಾಹಿತಿ ನೀಡಿದರು.

ಒಂದೇ ಕುಟುಂಬದ ಮೂವರು ಸಾವು: ಆತ್ಮಹತ್ಯೆ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂದೇ ಕುಟುಂಬದ ಮೂವರು ಶುಕ್ರವಾರ ಬೆಳಿಗ್ಗೆ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಮೂರನೇ ಹಂತದ ನಿವಾಸಿ ಸಂತೋಷ್‌ಕುಮಾರ್ (54), ಅವರ ಪತ್ನಿ ಓಮನ್ (50) ಹಾಗೂ ಮಗಳು ಸನುಷಾ (17) ಮೃತರು. ಪೂರ್ಣ ಸುಟ್ಟಿರುವ ಸ್ಥಿತಿಯಲ್ಲಿ ಮೃತದೇಹಗಳು ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೇರಳದ ಸಂತೋಷ್, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಯಂತ್ರೋಪಕರಣಗಳ ಬಿಡಿಭಾಗ ತಯಾರಿಸುವ ಉದ್ಯಮ ನಡೆಸುತ್ತಿದ್ದ ಸಂತೋಷ್, ಬೊಮ್ಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸ್ವಂತ ಕಾರ್ಖಾನೆ ಹೊಂದಿದ್ದರು. ಪತ್ನಿ ಹಾಗೂ ಮಗಳ ಜೊತೆ ವಾಸವಿದ್ದರು.'

'ಶುಕ್ರವಾರ ಬೆಳಿಗ್ಗೆ ಸಂತೋಷ್ ಅವರ ಮನೆಯಿಂದ ದಟ್ಟ ಹೊಗೆ ಬರುತ್ತಿತ್ತು. ಸ್ಥಳೀಯರು, ಮನೆ ಬಳಿ ಹೋಗಿ ನೋಡಿದಾಗ ಬೆಂಕಿ ಹೊತ್ತಿ ಉರಿಯುತ್ತಿತ್ತು. ಮೂವರ ಚೀರಾಟ ಕೇಳಿಸುತ್ತಿತ್ತು. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಎರಡೂವರೆ ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದರು. ಮೂವರ ಮೃತದೇಹಗಳು ಸುಟ್ಟ ಸ್ಥಿತಿಯಲ್ಲಿ ಕಂಡವು' ಎಂದು ಪೊಲೀಸರು ತಿಳಿಸಿದರು.

ಆತ್ಮಹತ್ಯೆ ಅನುಮಾನ: 'ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿಕೊಂಡಿದ್ದ ಮೂವರು ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ಅನುಮಾನವಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯರು ಬಾಗಿಲು ತೆರೆದು ಮೂವರನ್ನೂ ರಕ್ಷಿಸಲು ಪ್ರಯತ್ನಿಸಿದ್ದರು. ಆದರೆ, ಒಳಗಿನಿಂದ ಲಾಕ್ ಆಗಿದ್ದರಿಂದ ಬಾಗಿಲು ತೆರೆಯಲು ಸಾಧ್ಯವಾಗಿರಲಿಲ್ಲ. ಈ ಬಗ್ಗೆ ಸ್ಥಳೀಯರಿಂದ ಹೇಳಿಕೆ ಪಡೆಯಲಾಗಿದೆ' ಎಂದು ತಿಳಿಸಿದರು.

ಕಾರ್ಖಾನೆ ಅಭಿವೃದ್ಧಿಗೆ ಸಾಲ: 'ಉದ್ಯಮಿ ಸಂತೋಷ್ ಕುಮಾರ್, ತಮ್ಮ ಕಾರ್ಖಾನೆ ಅಭಿವೃದ್ಧಿಗಾಗಿ ಹಲವರ ಬಳಿ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದರು. ಆದರೆ, ಕಾರ್ಖಾನೆ ವ್ಯವಹಾರದಲ್ಲಿ ನಷ್ಟವಾಗಿತ್ತು. ಸಾಲವನ್ನು ವಾಪಸು ತೀರಿಸಲಾಗದೇ ಕಷ್ಟಕ್ಕೆ ಸಿಲುಕಿದ್ದರೆಂಬುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸಾಲ ವಾಪಸು ನೀಡುವಂತೆ ಸಾಲಗಾರರು ಪೀಡಿಸುತ್ತಿದ್ದರು. ಇದರಿಂದ ಬೇಸತ್ತ ಸಂತೋಷ್, ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಮೂವರ ಸಾವಿನ ಬಗ್ಗೆ ಹೊರ ರಾಜ್ಯದಲ್ಲಿರುವ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದ್ದು, ಅವರು ನಗರಕ್ಕೆ ಬಂದ ಬಳಿಕವೇ ಹೇಳಿಕೆ ಪಡೆದು ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ಹೇಳಿದರು.

ವೈಟ್‌ಫೀಲ್ಡ್ –ಪಟ್ಟಂದೂರು ಅಗ್ರಹಾರ(ಐಟಿಪಿಎಲ್) ನಡುವಿನ 3.5 ಕಿ.ಮೀ

ಪರೀಕ್ಷಾರ್ಥ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ವೈಟ್‌ಫೀಲ್ಡ್ ಮೆಟ್ರೊ ಡಿಪೊನಿಂದ ಪರೀಕ್ಷಾರ್ಥ ಸಂಚಾರ ಆರಂಭಿಸುವ ಮುನ್ನ ಬಿಎಂಆರ್‌ಸಿಎಲ್ ಸಿಬ್ಬಂದಿಯೊಂದಿಗೆ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ರೈಲಿನ ಮುಂದೆ ನಿಂತು ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದರು

ಬೆಂಗಳೂರು: ಬೈಯಪ್ಪನಹಳ್ಳಿ-ವೈಟ್‌ಫೀಲ್ಡ್ ಮೆಟ್ರೊ ರೈಲು ಸಂಚಾರದ ಕಾಲ ಹತ್ತಿರವಾಗಿದ್ದು, ಶುಕ್ರವಾರ ಪರೀಕ್ಷಾರ್ಥ ಸಂಚಾರವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ ಆರಂಭಿಸಿದೆ.

ವೈಟ್‌ಫೀಲ್ಡ್- ಪಟ್ಟಂದೂರು ಅಗ್ರಹಾರ(ಐಟಿಪಿಎಲ್) ನಡುವಿನ 3.5 ಕಿ.ಮೀ. ಪರೀಕ್ಷಾರ್ಥ ಸಂಚಾರವನ್ನು ಆರಂಭಿಸಲಾಯಿತು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತೆಂಗಿನ ಕಾಯಿ ಒಡೆದು ಪೂಜೆ ಸಲ್ಲಿಸಿ, ಚಾಲನೆ ನೀಡಿದರು.

ಕಳೆದ ಶುಕ್ರವಾರವಷ್ಟೇ(ಅ.14) ರೈಲು ಬೋಗಿಗಳನ್ನು ವೈಟ್‌ಫೀಲ್ಡ್ ಮೆಟ್ರೊ ಡಿಪೊಗೆ ಸಾಗಿಸಿ ಹಳಿಗಳ ಮೇಲೆ ಇಳಿಸ ಲಾಗಿತ್ತು. ಅ.25ರಿಂದ ಪರೀಕ್ಷಾರ್ಥ ಸಂಚಾರ ಆರಂಭಿಸಲಾಗುವುದು ಎಂದು ಬಿಎಂಆರ್ ಸಿಎಲ್ ತಿಳಿಸಿತ್ತು. ನಾಲ್ಕು ದಿನ ಮುಂಚಿತವಾಗಿಯೇ ಸಂಚಾರ ಆರಂಭಿಸಿದೆ.

ಮೊದಲ ದಿನ ಆರು ಬೋಗಿಗಳ ಒಂದು ರೈಲು ಸಂಚರಿಸಿದೆ. ಶೀಘ್ರವೇ ಮತ್ತೊಂದು ರೈಲು ಸಂಚರಿಸಲಿದೆ. ಇಂತಿಷ್ಟೇ ಅವಧಿ ಎಂದು ನಿಗದಿಪಡಿಸಿಲ್ಲ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. 'ಸದ್ಯಕ್ಕೆ ವೈಟ್‌ಫೀಲ್ಡ್–ಪಟ್ಟಂದೂರು ಅಗ್ರಹಾರ ನಡುವೆಯಷ್ಟೇ ಪರೀಕ್ಷಾರ್ಥ ಸಂಚಾರ ನಡೆಯಲಿದೆ. ಗರುಡಾಚಾರ್ ಪಾಳ್ಯ ತನಕ ಟ್ರ್ಯಾಕ್ ಮತ್ತು ಸಿಗ್ನಲಿಂಗ್ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಮುಂದಿನ ವಾರದಲ್ಲಿ ಗರುಡಾಚಾರ್ ಪಾಳ್ಯದ ತನಕ ರೈಲುಗಳ ಸಂಚರಿಸಲಿವೆ. ಕೆಲವೇ ದಿನಗಳಲ್ಲಿ ಬೈಯಪ್ಪನಹಳ್ಳಿ ತನಕ ಪರೀಕ್ಷಾರ್ಥ ಸಂಚಾರ ಆರಂಭವಾಗಲಿದೆ' ಎಂದು ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಿಲ್ದಾಣ ನಿರ್ಮಾಣ ಕಾಮಗಾರಿ ಭರದಿಂದ ಸಾಗಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಜ್ಯೋತಿಪುರ ನಿಲ್ದಾಣ ಕಾಮಗಾರಿಗೆ ಮಾತ್ರ ಹೆಚ್ಚಿನ ಸಮಯ ಬೇಕಾಗಲಿದೆ. ಜನವರಿ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ' ಎಂದು ಹೇಳಿದರು.

ಅಷ್ಟರಲ್ಲಿ ಪರೀಕ್ಷಾರ್ಥ ಸಂಚಾರ ಪೂರ್ಣಗೊಂಡು ರೈಲ್ವೆ ಸುರಕ್ಷತಾ ಆಯುಕ್ತರಿಂದ ಪರಿಶೀಲನೆಯೂ ಪೂರ್ಣಗೊಳ್ಳಲಿದೆ. 2023ರ ಜನವರಿ ಕೊನೆ ಅಥವಾ ಫೆಬ್ರುವರಿಯಲ್ಲಿ ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ಮೆಟ್ರೊ ರೈಲು ಸಂಚಾರ ಸಾರ್ವಜನಿಕರಿಗೆ ಲಭ್ಯವಾಗಲಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಎಂ.ಜಿ.ರಸ್ತೆ–ವೆಲ್ಲಾರ ಜಂಕ್ಷನ್ ಸುರಂಗ ಪೂರ್ಣ

ಮೆಟ್ರೊ ರೈಲು ಯೋಜನೆಯ ಮತ್ತೊಂದು ಸುರಂಗ ಮಾರ್ಗದ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಪೂರ್ಣಗೊಳಿಸಿದ್ದು, ಎಂ.ಜಿ.ರಸ್ತೆಯಿಂದ ವೆಲ್ಲಾರ ಜಂಕ್ಷನ್(ರಾಷ್ಟ್ರೀಯ ಮಿಲಿಟರಿ ಸ್ಕೂಲ್) ತನಕ ಸುರಂಗ ಕೊರೆದ 'ಅವನಿ' ಟಿಬಿಎಂ (ಟನಲ್ ಬೋರಿಂಗ್ ಮಷಿನ್) ಶುಕ್ರವಾರ ಹೊರಬಂದಿದೆ.

ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ಎಂ.ಜಿ.ರಸ್ತೆಯಿಂದ 2022ರ ಮಾರ್ಚ್ 4ರಿಂದ ಸುರಂಗ ಕಾಮಗಾರಿ ಆರಂಭಿಸಲಾಗಿತ್ತು. 230 ದಿನಗಳಲ್ಲಿ 1131 ಮೀಟರ್ ಉದ್ದದ ಸುರಂಗ ಕೊರೆದು ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಟಿಬಿಎಂ ಹೊರಬಂದಿದೆ.

ವಾಣಿಜ್ಯ ಚಟುವಟಿಕೆ ಉಪಟಳ: ವರದಿ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಜನವಸತಿ ಪ್ರದೇಶಗಳಲ್ಲಿನ ವಾಣಿಜ್ಯ ಚಟುವಟಿಕೆ ಬಗ್ಗೆ ತಿಂಗಳಲ್ಲಿ ಸಮಗ್ರ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ಬಿಬಿಎಂಪಿಗೆ ನಿರ್ದೇಶಿಸಿದೆ.

'ವಿಲ್ಸನ್ ಗಾರ್ಡನ್ ಜನವಸತಿ ಪ್ರದೇಶಗಳಲ್ಲಿನ ವಾಣಿಜ್ಯ ಚಟುವಟಿಕೆ ನಿರ್ಬಂಧಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ವಿಲ್ಸನ್ ಗಾರ್ಡನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

'ವಿಲ್ಸನ್ ಗಾರ್ಡನ್ ಜನವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಸುತ್ತಿರುವ ವಿಶೇಷವಾಗಿ ಹೂವಿನ ವ್ಯಾಪಾರಿಗಳ ಕುರಿತಂತೆ ಬಿಬಿಎಂಪಿಯ ಮುಖ್ಯ ಎಂಜಿನಿಯರ್ ಪರಿಶೀಲನೆ ನಡೆಸಿ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ವರದಿ ಆಧರಿಸಿ ಏನು ಕ್ರಮ ಕೈಗೊಳ್ಳಲಾಗುವುದು ಎಂಬ ಬಗ್ಗೆ ಮೂರು ವಾರಗಳಲ್ಲಿ ನ್ಯಾಯಾಲಯಕ್ಕೆ ತಿಳಿಸಬೇಕು' ಎಂದು ನ್ಯಾಯಪೀಠ ಬಿಬಿಎಂಪಿಗೆ ನಿರ್ದೇಶಿಸಿತು.

'ಜನವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಿರ್ಬಂಧಿಸಲು ಪ್ರತ್ಯೇಕ ನಿಯಮಗಳಿವೆಯೇ ಅಥವಾ ಸಂಪೂರ್ಣ ನಿಷೇಧವಿದೆಯೇ? ಷರತ್ತುಬದ್ಧ ಅನುಮತಿ ನೀಡಲು ಅವಕಾಶವಿದೆಯೇ? ಷರತ್ತುಬದ್ಧ ಅನುಮತಿ ನೀಡಲು ಅವಕಾಶವಿದ್ದಲ್ಲಿ, ಯಾವ ಷರತ್ತುಗಳನ್ನು ವಿಧಿಸಲಾಗುತ್ತದೆ? ಒಂದೊಮ್ಮೆ ಅಂತಹ ಷರತ್ತುಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ ಎಂಬ ಬಗ್ಗೆ ಎಂಟು ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸಿ' ಎಂದು ತಾಕೀತು ಮಾಡಿದೆ.

ಏನಿದು ಅರ್ಜಿ?: 'ವಿಲ್ಸನ್ ಗಾರ್ಡನ್‌ನಲ್ಲಿ ಅಂದಾಜು 14 ಅಡ್ಡ ರಸ್ತೆಗಳಿವೆ. ರಸ್ತೆಯ ಎರಡೂ ಬದಿಗಳಲ್ಲಿ ಅನಧಿಕೃತವಾಗಿ ಹೂವು, ಹಣ್ಣಿನ ಅಂಗಡಿ, ಟ್ಯಾಕ್ಸಿ ಕಚೇರಿಗಳನ್ನು ತೆರೆಯಲಾಗಿದೆ. ತಡರಾತ್ರಿಯಾದರೂ ಮಳಿಗೆದಾರರು ಹಾಗೂ ಗ್ರಾಹಕರ ಜಂಗುಳಿ ಇರುತ್ತದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

'ಇಲ್ಲಿ 115 ಮಳಿಗೆಗಳಿದ್ದು, ಅವುಗಳಲ್ಲಿ ಎಂಟಕ್ಕೆ ಮಾತ್ರ ಬಿಬಿಎಂಪಿ ಅನುಮತಿ ನೀಡಿದೆ. ಇವುಗಳ ಉಪಟಳದಿಂದ ಮಹಿಳೆಯರು ಹಾಗೂ ಯುವತಿಯರಿಗೆ ಸುರಕ್ಷತೆ ಇಲ್ಲವಾಗಿದೆ. ಆದ್ದರಿಂದ, ಅನಧಿಕೃತ ಮಳಿಗೆಗಳನ್ನು ತೆರವುಗೊಳಿಸಲು ಮತ್ತು ಈ ಬಗ್ಗೆ ಕ್ರಮ ಕೈಗೊಳ್ಳಲು ವಿಫಲರಾಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ನಿರ್ದೇಶಿಸಬೇಕು' ಕೋರಲಾಗಿದೆ.

ಕಸಾಪ: ಭುವನೇಶ್ವರಿ ಪ್ರತಿಮೆ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಯಲ್ಲಿ ಕನ್ನಡ ಧ್ವಜ ಹಿಡಿದಿರುವ ಭುವನೇಶ್ವರಿ ಪ್ರತಿಮೆಯನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಿರ್ಮಿಸಿದ್ದು, ಕನ್ನಡ ರಾಜ್ಯೋತ್ಸವ ಪ್ರಯುಕ್ತ ನ.1ರಂದು ಪರಿಷತ್ತಿನ ಆವರಣದಲ್ಲಿ ಸ್ಥಾಪಿಸಲಾಗುತ್ತದೆ.

ಬೆಂಗಳೂರಿನ ಸ್ಥಪತಿ ಕ್ರಿಯೇಷನ್ಸ್‌ನ ಕಲಾವಿದ ಶಿವದತ್ತ ಅವರು ಈ ಪ್ರತಿಮೆಯನ್ನು ನಿರ್ಮಿಸಿದ್ದಾರೆ. ಈ ಪ್ರತಿಮೆ ಆರು ಕಾಲು ಅಡಿ ಎತ್ತರವಿದ್ದು, ಅಂತಿಮ ಸ್ಪರ್ಶ ನೀಡಲಾಗುತ್ತಿದೆ. ಪರಿಷತ್ತಿನ ತಡೆಗೋಡೆಗಳ ಒಳಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿ-ಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್ ಅವರ ಪ್ರತಿಮೆಗಳನ್ನು ಸ್ಥಾಪಿಸಲೂ ಕಾರ್ಯಯೋಜನೆ ರೂಪಿಸಲಾಗಿದೆ.

'ಚತುರ್ಭುಜ, ಪದ್ಮಪೀಠಾಸೀನ, ಪಾಶಾಂಕುಶ, ಅಭಯ ವರದ ಮುದ್ರೆಯೊಂದಿಗೆ ಕನ್ನಡ ಧ್ವಜ ಹಿಡಿದಿರುವ ಭುವನೇಶ್ವರಿ ಪ್ರತಿಮೆ ನಿರ್ಮಿಸುವಂತೆ ತಿಳಿಸಲಾಗಿತ್ತು. ಅದೇ ಪ್ರಕಾರ ನಿರ್ಮಿಸಲಾಗಿದೆ. ಇದಕ್ಕೆ ₹ 4 ಲಕ್ಷ ವೆಚ್ಚವಾಗಿದೆ. ಭುವನೇಶ್ವರಿ ಪ್ರತಿಮೆ ಅನಾವರಣಕ್ಕೆ ರಾಜ್ಯಪಾಲರನ್ನು ಆಹ್ವಾನಿಸುವ ಯೋಚನೆಯಿದೆ. ಕನ್ನಡ ಪರ ಹೋರಾಟಗಾರರಿಗೂ ಆಹ್ವಾನ ನೀಡಲಾಗುವುದು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಭುವನೇಶ್ವರಿ

'ಪರಿಷತ್ತಿನ ತಡೆಗೋಡೆಗಳ ಮೇಲೆ ಉಬ್ಬು ಚಿತ್ರಗಳನ್ನು ನಿರ್ಮಿಸಲಾಗುವುದು. ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಇಬ್ಬರು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರು ಉಬ್ಬು ಚಿತ್ರದಲ್ಲಿ ಮೂಡಲಿದ್ದಾರೆ' ಎಂದು ಹೇಳಿದರು.

ಪಿಎಂಎಲ್ ಕಾಯ್ದೆ: ಇ.ಡಿ ಕೋರ್ಟ್‌ಗೆ ಮಾತ್ರ ಅಧಿಕಾರ

ಬೆಂಗಳೂರು: 'ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್ಎ) ಆರೋಪಿಗಳ ಹೇಳಿಕೆ ದಾಖಲಿಸಿಕೊಳ್ಳಲು ಅನುಮತಿ ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಲು ಇ.ಡಿ ವಿಶೇಷ ನ್ಯಾಯಾಲಯಕ್ಕೆ ಮಾತ್ರ ಅಧಿಕಾರವಿದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಆರೋಪಿಗಳ ಹೇಳಿಕೆ ದಾಖಲಿಸಿಕೊಳ್ಳಲು ಇ.ಡಿಗೆ ಅನುಮತಿ ನೀಡಿ ಬೆಂಗಳೂರಿನ 1ನೇ ಎಸಿಎಂಎಂ ನ್ಯಾಯಾಲಯ ಸೆಪ್ಟೆಂಬರ್ 14ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಪಿಎಸ್ಐ ಅಕ್ರಮ ನೇಮಕಾತಿ ಹಗರಣದ ಆರೋಪಿಯೂ ಆದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಡಿ.ಹರ್ಷ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. ಹಗರಣದ ಆರೋಪಿಗಳ ಹೇಳಿಕೆ ದಾಖಲಿಸಿಕೊಳ್ಳಲು ಇ.ಡಿಗೆ ಅನುಮತಿ ನೀಡಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದುಪಡಿಸಿದೆ.

'ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆರೋಪಿಗಳ ವಿಚಾರಣೆಗೆ ಅನುಮತಿ ಕೋರಿ ಇ.ಡಿ ವಿಶೇಷ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಲು ಮುಕ್ತ ಅವಕಾಶ ಹೊಂದಿದ್ದಾರೆ' ಎಂದು ತಿಳಿಸಿದೆ.

ಡಯಾಲಿಸಿಸ್ ಸಿಬ್ಬಂದಿ ಮುಷ್ಕರ ಅಂತ್ಯ

ಬೆಂಗಳೂರು: ಕರ್ನಾಟಕ ರಾಜ್ಯ ಡಯಾಲಿಸಿಸ್ ನೌಕರರ ಸಂಘದ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಡಯಾಲಿಸಿಸ್ ಸಿಬ್ಬಂದಿ ಕೈಗೊಂಡಿದ್ದ ಮುಷ್ಕರ ಅಂತ್ಯಕೊಂಡಿದೆ.

ವೇತನ ಪಾವತಿ ಸಮಸ್ಯೆ ನಿವಾರಣೆ, ಕಾರ್ಮಿಕರ ಆರೋಗ್ಯ ವಿಮೆ (ಇಎಸ್ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಬ್ಬಂದಿ ಗುರುವಾರ ಮುಷ್ಕರ ಕೈಗೊಂಡಿದ್ದರು.

ಶುಕ್ರವಾರ ರಾತ್ರಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಸಿಬ್ಬಂದಿ ಹಾಗೂ ಸಂಜೀವಿನಿ ಸಂಸ್ಥೆಯ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದರು. ಬೇಡಿಕೆಗಳ ಬಗ್ಗೆ ಸಕಾರಾತ್ಮಕ ಸ್ಪಂದನ ದೊರೆತಿದ್ದರಿಂದ ಮುಷ್ಕರ ಹಿಂತೆಗೆದುಕೊಳ್ಳುವುದಾಗಿ ಸಿಬ್ಬಂದಿ ಪ್ರತಿನಿಧಿಗಳು ಪ್ರಕಟಿಸಿದರು.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಘಟಕಗಳನ್ನು ಬಿಆರ್‌ಎಸ್ ಏಜೆನ್ಸಿ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂಬ ಕಾರಣಕ್ಕೆ ಸಂಸ್ಥೆ ಜತೆಗಿನ ಒಪ್ಪಂದವನ್ನು ಆರೋಗ್ಯ ಇಲಾಖೆ ಕಳೆದ ವರ್ಷ ರದ್ದು ಮಾಡಿತ್ತು. ರಾಜ್ಯದ ಎಲ್ಲ ಡಯಾಲಿಸಿಸ್ ಘಟಕಗಳ ನಿರ್ವಹಣೆಯನ್ನು ಈಗ ಸಂಜೀವಿನಿ ಸಂಸ್ಥೆಗೆ ಹೊರಗುತ್ತಿಗೆ ನೀಡಲಾಗಿದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ 120 ಡಯಾಲಿಸಿಸ್ ಘಟಕಗಳಿದ್ದು, 650ಕ್ಕೂ ಅಧಿಕ ಸಿಬ್ಬಂದಿ ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿದ್ದಾರೆ.

ಕಳಪೆ ಕಾಮಗಾರಿ: ಸಿಐಡಿ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಚರ್ಚ್ ಸ್ಟ್ರೀಟ್‌ನಲ್ಲಿ ದುರಸ್ತಿ ಕಾಮಗಾರಿ ನಡೆಯುತ್ತಿರುವುದು. –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಚರ್ಚ್ ಸ್ಟ್ರೀಟ್ ಅನ್ನು ಟೆಂಡರ್‌ಶ್ಯೂರ್ ಯೋಜನೆಯಲ್ಲಿ ಅಭಿವೃದ್ಧಿಪಡಿಸಲು ₹18 ಕೋಟಿ ವೆಚ್ಚ ಮಾಡಲಾಗಿದ್ದು, ಈ ಕಾಮಗಾರಿ ಕಳಪೆಯಾಗಿದೆ. ಹೀಗಾಗಿ ಆಗಾಗ್ಗೆ ಹಾಳಾಗುತ್ತಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್.ಆರ್ ಆರೋಪಿಸಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿದ್ದು, 'ನಾಲ್ಕು ವರ್ಷಗಳ ಹಿಂದೆ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಯಡಿಯೂರು ವಾರ್ಡ್‌ನಲ್ಲಿ ಇದೇ ಟೆಂಡರ್‌ಶ್ಯೂರ್ ಯೋಜನೆಯಡಿ ಐದು ರಸ್ತೆಗಳನ್ನು ಅಭಿವೃದ್ಧಿ ಮಾಡಲಾಗಿದೆ. ಆ ರಸ್ತೆಗಳು ಈಗಲೂ ಸುಸ್ಥಿತಿಯಲ್ಲಿದೆ. ಆದರೆ, 700 ಮೀಟರ್ ಉದ್ದ ಚರ್ಚ್ ಸ್ಟ್ರೀಟ್ ಅಭಿವೃದ್ಧಿಗೆ ₹18 ಕೋಟಿ ವೆಚ್ಚ ಮಾಡಲಾಗಿದೆ. ಈ ರಸ್ತೆ ಆಗಾಗ್ಗೆ ಹಾಳಾಗುತ್ತಲೇ ಇದೆ' ಎಂದಿದ್ದಾರೆ.

'ಚರ್ಚ್ ಸ್ಟ್ರೀಟ್ ರಸ್ತೆ ನಿರ್ಮಿಸಿದ ಒಂದೇ ತಿಂಗಳಲ್ಲಿ ಸುರಿದ ಬಾರಿ ಮಳೆಗೆ ಸಂಪೂರ್ಣ ರಸ್ತೆ ಜಲಾವೃತವಾಗಿತ್ತು. ಆರೇಳು ತಿಂಗಳಿಂದ ಈ ರಸ್ತೆಯಲ್ಲಿ ಅಳವಡಿಸಿರುವ ಕಲ್ಲುಗಳು ಹಾಳಾಗಿವೆ ಎಂದು ವರದಿಯಾಗಿದೆ. ಗುಣಮಟ್ಟದ ರಸ್ತೆ ನಿರ್ಮಿಸದಿರುವುದು ಇದಕ್ಕೆಲ್ಲ ಕಾರಣ. ಅಲ್ಲದೆ, ವಾರ್ಷಿಕವಾಗಿ ₹4.8 ಕೋಟಿ ನಿರ್ವಹಣೆಯ ಗುತ್ತಿಗೆಯನ್ನು ನೀಡಲಾಗಿದೆ' ಎಂದು ಅವರು ದೂರಿದ್ದಾರೆ.

'ಈ ಯೋಜನೆಯ ಕಾಮಗಾರಿ ಬಗ್ಗೆ ಸಿಐಡಿ ಅಥವಾ ಲೋಕಾಯುಕ್ತದಿಂದ ತನಿಖೆ ನಡೆಸುವಂತೆ ಮುಖ್ಯಮಂತ್ರಿಯವರಿಗೆ ತಾವು ಪತ್ರ ಬರೆಯಬೇಕು' ಎಂದು ವಿನಂತಿಸಿದ್ದಾರೆ.

ನಿರ್ವಹಣೆ ಗುತ್ತಿಗೆ ನೀಡಿಲ್ಲ: 'ಚರ್ಚ್ ಸ್ಟ್ರೀಟ್‌ನಲ್ಲಿ ವಾಹನ ಸಂಚಾರ ಅತಿ ಹೆಚ್ಚಾಗಿದ್ದು, ವಾಣಿಜ್ಯ ಚಟುವಟಿಕೆಯೂ ಅತಿಯಾಗಿದೆ. ಹೀಗಾಗಿ ಕೆಲವು ಕಲ್ಲುಗಳು ಹೊರಬಂದಿವೆ. ಅವುಗಳನ್ನು ದುರಸ್ತಿ ಮಾಡಲಾಗುತ್ತಿದೆ. ರಸ್ತೆ ಅಭಿವೃದ್ಧಿಯಾಗಿ ಎರಡೂವರೆ ವರ್ಷವಾಗಿದ್ದು ಗುತ್ತಿಗೆದಾರರೇ ನಿರ್ವಹಣೆ ಮಾಡುತ್ತಿದ್ದಾರೆ. ಯಾವುದೇ ರೀತಿಯ ನಿರ್ವಹಣೆ ಗುತ್ತಿಗೆಯನ್ನು ನೀಡಿಲ್ಲ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಹೇಳಿದರು.

'ಟೆಂಡರ್‌ಶ್ಯೂರ್ ಯೋಜನೆಯಡಿ 12 ರಸ್ತೆಗಳಲ್ಲಿ 13.41 ಕಿ.ಮೀ ಅಭಿವೃದ್ಧಿಪಡಿಸಲಾಗಿದೆ. ಈ ಎಲ್ಲ ರಸ್ತೆಗಳಿಗೆ ನಿರ್ವಹಣೆ ಗುತ್ತಿಗೆಯನ್ನು ₹4.3 ಕೋಟಿಗೆ ನೀಡಲು ಯೋಜಿಸಲಾಗಿತ್ತು. ಆದರೆ, ಅದು ಅನುಷ್ಠಾನವಾಗಿಲ್ಲ' ಎಂದರು.

ಎಂಎಸ್‌ಎಂಇ: ರಿಯಾಯಿತಿಗಳ ತಿಳಿವಳಿಕೆ ಅಗತ್ಯ

ಮಾರಾಟಗಾರರ ಅಭಿವೃದ್ಧಿ ಕಾರ್ಯಕ್ರಮ, ಕೈಗಾರಿಕಾ ವಸ್ತು ಪ್ರದರ್ಶನ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಶುಕ್ರವಾರ ಕಾಸಿಯಾ ಆಯೋಜಿಸಿದ್ದ ವಸ್ತು ಪ್ರದರ್ಶನವನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕಿ ಸಿ.ಸತ್ಯಭಾಮ ವೀಕ್ಷಿಸಿದರು. ಕಾಸಿಯಾ ಅಧ್ಯಕ್ಷ ಕೆ.ಎನ್.ನರಸಿಂಹಮೂರ್ತಿ ಹಾಜರಿದ್ದರು

ಬೆಂಗಳೂರು: 'ರಾಜ್ಯದ ಸೂಕ್ಷ್ಮ, ಸಣ್ಣ ಪ್ರಮಾಣದ ಕೈಗಾರಿಕೆಗಳು ಕೋವಿಡ್ ಸಾಂಕ್ರಾಮಿಕ ರೋಗದ ಸವಾಲಿನಿಂದ ಈಗ ಹೊರಬರುತ್ತಿವೆ' ಎಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿರ್ದೇಶಕಿ ಸಿ.ಸತ್ಯಭಾಮ ಅಭಿಪ್ರಾಯಪಟ್ಟರು.

ಸೂಕ್ಷ್ಮ, ಸಣ್ಣ, ಮಧ್ಯಮ ಕೈಗಾರಿಕೆ ಸಚಿವಾಲಯ, ಎಂಎಸ್‌ಎಂಇ ಅಭಿವೃದ್ಧಿ ಕಚೇರಿ, ಕರ್ನಾಟಕ ಸಣ್ಣ ಕೈಗಾರಿಕೆ ಸಂಘವು ಶುಕ್ರವಾರ ಆಯೋಜಿಸಿದ್ದ 'ಮಾರಾಟಗಾರರ ಅಭಿವೃದ್ಧಿ ಕಾರ್ಯಕ್ರಮ ಮತ್ತು ಕೈಗಾರಿಕೆ ವಸ್ತು ಪ್ರದರ್ಶನ' ಉದ್ಘಾಟಿಸಿ ಅವರು ಮಾತನಾಡಿದರು.

'ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕಾಸಿಯಾ ಆಯೋಜಿಸಿರುವ ಈ ವಸ್ತು ಪ್ರದರ್ಶನವು ಸಮಯೋಚಿತ ಹಾಗೂ ಪ್ರಸ್ತುತ' ಎಂದು ಶ್ಲಾಘಿಸಿದರು.

'ರಾಜ್ಯ ಮತ್ತು ಕೇಂದ್ರ ಸರ್ಕಾರವು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆ ಪ್ರೋತ್ಸಾಹಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳ ಕುರಿತು ಜಾಗೃತಿ ಮೂಡಿಸುವುದು ಅಗತ್ಯ' ಎಂದು ಹೇಳಿದರು.

ಎಂಎಸ್‌ಎಂಇ ಅಭಿವೃದ್ಧಿ ಸೌಲಭ್ಯ ಕಚೇರಿ ನಿರ್ದೇಶಕ ಜಿ.ಆರ್.ಅಕಾದಾಸ್, 'ಸರ್ಕಾರ ಯೋಜನೆ ಜಾರಿಗೊಳಿಸಿದ್ದರೂ ಮಾಹಿತಿ ಕೊರತೆ ಕಾರಣಕ್ಕೆ ಈ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಸಣ್ಣ ಪ್ರಮಾಣದ ಉದ್ಯಮಿಗಳಿಗೆ ಸರ್ಕಾರದಿಂದ ದೊರೆಯುವ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿಗಳ ಬಗ್ಗೆ ತಿಳಿವಳಿಕೆ ನೀಡುವುದು ಅಗತ್ಯ' ಎಂದು ಹೇಳಿದರು.

ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ ಮಾತನಾಡಿದರು.

ಎನ್ಐಸಿ ವ್ಯವಸ್ಥಾಪಕ ನಿರ್ದೇಶಕ ಶ್ರೀವತ್ಸನ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸುರೇಶ್, ಕಾಸಿಯಾ ಉಪಾಧ್ಯಕ್ಷ ಶಶಿಧರಶೆಟ್ಟಿ, ಗೌರವ ಪ್ರಧಾನ ಕಾರ್ಯದರ್ಶಿ ಬಿ.ಪ್ರವೀಣ, ಜಂಟಿ ಕಾರ್ಯದರ್ಶಿ ವೆಂಕಟೇಶನ್, ಜಂಟಿ ಕಾರ್ಯದರ್ಶಿ ಭೀಮಾಶಂಕರ ಬಿ. ಪಾಟೀಲ, ಖಜಾಂಚಿ ಶ್ರೀಪ್ರಕಾಶ ಹಾಜರಿದ್ದರು.

ಇನ್‌ಸ್ಪೆಕ್ಟರ್ ಅಮಾನತು



ಎಚ್.ಎಲ್. ನಂದೀಶ್

ಬೆಂಗಳೂರು: ವಹಿವಾಟು ಸಮಯ ಮೀರಿ ತಡರಾತ್ರಿಯವರೆಗೂ ತೆರೆದಿದ್ದ ಬಾರ್ ಆ್ಯಂಡ್ ರೆಸ್ಟೋರೆಂಟ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಕೆ.ಆರ್. ಪುರ ಇನ್‌ಸ್ಪೆಕ್ಟರ್ ಎಚ್.ಎಲ್. ನಂದೀಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಟಾನಿಕ್ ಬಾರ್ ತಡರಾತ್ರಿ 2 ಗಂಟೆಯವರೆಗೂ ತೆರೆದಿತ್ತು. ಈ ಬಗ್ಗೆ ಮಾಹಿತಿ ಕಲೆ ಹಾಕಿದ್ದ ಸಿಸಿಬಿ ಪೊಲೀಸರು, ದಾಳಿ ಮಾಡಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದರು.

'ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ರಾತ್ರಿ 1 ಗಂಟೆಯವರೆಗೆ ವಹಿವಾಟು ನಡೆಸಲು ಅವಕಾಶವಿದೆ. ಆದರೆ, ಟಾನಿಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ನಿತ್ಯವೂ ತಡರಾತ್ರಿಯವರೆಗೂ ವಹಿವಾಟು ನಡೆಸುತ್ತಿತ್ತು. ಇದು ಗೊತ್ತಿದ್ದರೂ ನಂದೀಶ್ ಕ್ರಮ ಕೈಗೊಂಡಿರಲಿಲ್ಲ' ಎಂಬುದಾಗಿ ಸಿಸಿಬಿ ಪೊಲೀಸರು, ಹಿರಿಯ ಅಧಿಕಾರಿಗಳಿಗೆ ವರದಿ ನೀಡಿದ್ದರು.

ಭಯೋತ್ಪಾದನೆ ದಮನಕ್ಕೆ ಸಜ್ಜು

ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಬೊಮ್ಮಾಯಿ

ಬೆಂಗಳೂರು: ಭಯೋತ್ಪಾದನೆಯ ದಮನಕ್ಕೆ ಪೊಲೀಸರಿಗೆ ಆಧುನಿಕ ಶಸ್ತ್ರಾಸ್ತ್ರಗಳ ಅಗತ್ಯವಿದ್ದು, ಅದಕ್ಕಾಗಿ ತರಬೇತಿ ಪಡೆದ ಪ್ರತ್ಯೇಕ ಕಮಾಂಡ್ ನೇಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಭಯೋತ್ಪಾದನೆಯ ವಿರುದ್ಧ ಹಿರಿಯ ಅಧಿಕಾರಿಗಳ ಜತೆಗೆ ಕಾನ್‌ಸ್ಟೆಬಲ್ ಹಂತದವರೆಗಿನ ಸಿಬ್ಬಂದಿ ಒಟ್ಟಾಗಿ ಕೆಲಸ ಮಾಡಬೇಕು. ಕರ್ನಾಟಕ ಪೊಲೀಸರು ಹಲವು ಘಟನೆಗಳಲ್ಲಿ ದಿಟ್ಟ ಹೋರಾಟ ನಡೆಸಿದ್ದಾರೆ. ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ದೇಶ ಹಾಗೂ ವಿದೇಶಿ ದುಷ್ಟಶಕ್ತಿಗಳು ಸಮಾಜದಲ್ಲಿ ಶಾಂತಿ ಕದಡಲು ನಡೆಸುತ್ತಿರುವ ಪ್ರಯತ್ನ ಮಟ್ಟಹಾಕಬೇಕು. ಅಪರಾಧಗಳ ಸಾಧ್ಯತೆ ಗ್ರಹಿಸಬೇಕು. ಅದಕ್ಕೆ ಅಗತ್ಯವಾದ ಯೋಜನೆ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪೊಲೀಸರ ಸಂಖ್ಯೆ ಹೆಚ್ಚಳ ಮಾಡಲಾಗಿದೆ. ಪ್ರತಿ ವರ್ಷ ಸರಾಸರಿ ಐದು ಸಾವಿರ ನೇಮಕವಾಗುತ್ತಿದೆ. ಹೊಸ ತಂತ್ರಜ್ಞಾನದ ಪರಿಚಯ, ಸೈಬರ್ ಅಪರಾಧಗಳ ಕುರಿತು ತರಬೇತಿ ನೀಡಲಾಗುತ್ತಿದೆ. ಪೊಲೀಸರ ತ್ಯಾಗ, ಬಲಿದಾನ ಹಾಗೂ ಸಾಧನೆಗಳನ್ನು ಜನರಿಗೆ ತಿಳಿಸಲು ಪೊಲೀಸ್ ವಸ್ತುಸಂಗ್ರಹಾಲಯ ಆರಂಭಿಸಲಾಗಿದೆ. ಮೃತ ಪೊಲೀಸರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್, ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಹಾಜರಿದ್ದರು.

ಹಬ್ಬಕ್ಕೆ ಯಶವಂತಪುರ–ಬೀದರ್ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೀದರ್: 'ದೀಪಾವಳಿ ಹಬ್ಬದ ಪ್ರಯುಕ್ತ ಯಶವಂತಪುರದಿಂದ ಕಲಬುರಗಿ, ಹುಮನಾಬಾದ್ ಮಾರ್ಗವಾಗಿ ಬೀದರ್‌ಗೆ ವಿಶೇಷ ರೈಲು ವ್ಯವಸ್ಥೆ ಮಾಡಲಾಗಿದೆ' ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ರೈಲು ಸಂಖ್ಯೆ 06597 ಅಕ್ಟೋಬರ್ 22ರ ಸಂಜೆ 5.20ಕ್ಕೆ ಯಶವಂತಪುರದಿಂದ ಹೊರಟು ಯಲಹಂಕ, ರಾಯಚೂರು, ಯಾದಗಿರಿ, ಕಲಬುರಗಿ ಮಾರ್ಗವಾಗಿ ಅಕ್ಟೋಬರ್ 23ರ ಬೆಳಿಗ್ಗೆ 6.09ಕ್ಕೆ ಹುಮನಾಬಾದ್ ಹಾಗೂ ಬೆಳಿಗ್ಗೆ 7ಕ್ಕೆ ಬೀದರ್‌ಗೆ ತಲುಪುವುದು ಎಂದು ಹೇಳಿದ್ದಾರೆ.

ರೈಲು ಸಂಖ್ಯೆ 06598 ಅಕ್ಟೋಬರ್ 23ರ ರಾತ್ರಿ 8.30ಕ್ಕೆ ಬೀದರ್‌ನಿಂದ ಹೊರಟು, ರಾತ್ರಿ 9.15ಕ್ಕೆ ಹುಮನಾಬಾದ್‌ಗೆ ತಲುಪಿ ಅಲ್ಲಿಂದ ಬಂದ ಮಾರ್ಗವಾಗಿ ಅಕ್ಟೋಬರ್ 24ರ ಬೆಳಿಗ್ಗೆ 10.30ಕ್ಕೆ ಯಶವಂತಪುರಕ್ಕೆ ತಲುಪಲಿದೆ ಎಂದು ತಿಳಿಸಿದ್ದಾರೆ.

ಪಂಜಾಬ್: ಹಳೆಯ ಪಿಂಚಣಿ ಜಾರಿ

ಚಂಡೀಗಢ (ಪಿಟಿಐ): ರಾಜ್ಯದಲ್ಲಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮರು ಜಾರಿ ಮಾಡಲು ಪಂಜಾಬ್ ಸರ್ಕಾರ ಶುಕ್ರವಾರ ನಿರ್ಧರಿಸಿದೆ. ಮುಖ್ಯಮಂತ್ರಿ ಭಗವಂತ ಮಾನ್ ಅವರು ಇದನ್ನು ದೀಪಾವಳಿ ಉಡುಗೊರೆ ಎಂದು ಬಣ್ಣಿಸಿದ್ದಾರೆ.

'ಸಂಪುಟ ಸಭೆ ಬಳಿಕ ಈ ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ, ಇದರಿಂದ ಲಕ್ಷಾಂತರ ಉದ್ಯೋಗಿಗಳಿಗೆ ಅನುಕೂಲವಾಗಲಿದೆ. ಜೊತೆಗೆ ಉದ್ಯೋಗಿಗಳಿಗೆ ಶೇಕಡಾ 6ರಷ್ಟು ತುಟ್ಟಿಭತ್ಯೆ ಸಹ ನೀಡಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಾಗಲೇ ಆಮ್ ಆದ್ಮಿ ಪಕ್ಷದ ಸರ್ಕಾರ ಹಳೆಯ ಪಿಂಚಣಿ ಮರು ಜಾರಿ ನಿರ್ಧಾರ ತೆಗೆದುಕೊಂಡಿದೆ.

ಅರವಿಂದ್ ಕೇಜ್ರಿವಾಲ್ ಭರವಸೆ: ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಇಲ್ಲಿಯೂ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮರುಜಾರಿ ಮಾಡುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭರವಸೆ ನೀಡಿದ್ದಾರೆ.

ಗ್ರೂಪ್ ಸಿ, ಡಿ ಹುದ್ದೆಗಳಿಗೆ ನೇಮಕ: ಪಂಜಾಬಿ ಭಾಷೆ ಬಲ್ಲವರಿಗೆ ಮಾತ್ರ ಗ್ರೂಪ್ ಸಿ ಮತ್ತು ಡಿ ದರ್ಜೆಯ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಸಂಬಂಧ ಕಾಯ್ದೆಗೆ ತಿದ್ದುಪಡಿ ತರಲು ಪಂಜಾಬ್ ಸಚಿವ ಸಂಪುಟ ಶುಕ್ರವಾರ ನಿರ್ಧರಿಸಿದೆ.

ಈ ಕುರಿತು ಅಧಿಕೃತ ಹೇಳಿಕೆ ನೀಡಿದ್ದು, ರಾಜ್ಯದಲ್ಲಿ ಪಂಜಾಬಿ ಭಾಷೆ ಮತ್ತು ಸಂಸ್ಕೃತಿಗೆ ಒತ್ತು ನೀಡುವ ಸರ್ಕಾರದ ನಿಲುವನ್ನು ಇನ್ನಷ್ಟು ಬಲಪಡಿಸಿದೆ ಎಂದು ತಿಳಿಸಿದೆ.

ಎಸ್‌ಬಿಐ ಸುಲ್ತಾನ್‌ಪೇಟೆ ಶಾಖೆಯಿಂದ ಪ್ರಧಾನ ಮಂತ್ರಿ ಮುದ್ರಾ ಸಾಲ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾ ಸಾಲದ ಶಿಬಿರವನ್ನು ಆಯೋಜಿಸಲಾಗಿತ್ತು. ಶಾಖೆಯ ವ್ಯವಸ್ಥಾಪಕ ಅಖಿಲೇಶ್ ಕುಮಾರ್ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಬ್ಯಾಂಕ್ ಅಧಿಕಾರಿಗಳಾದ ಅನುಪಮಾ ಶರ್ಮಾ, ಅರುಣ್ ಕುಮಾರ್, ಮನೀಶ್ ಇದ್ದಾರೆ.

ಸಿಐಡಿ ಶಿಫಾರಸಿಗೆ 8 ವರ್ಷದ ಬಳಿಕ ಉತ್ತರ

ಒಂದನೇ ಪುಟದಿಂದ...

ಮೂರು ವಲಯಗಳಲ್ಲಿ 2008–09ರಿಂದ 2011–12ನೇ ಸಾಲಿನ ವರೆಗೆ ಕೈಗೊಂಡಿರುವ ಕಾಮಗಾರಿಗಳಲ್ಲಿ ಬಹಳಷ್ಟು ಅಕ್ರಮಗಳು ನಡೆದಿದ್ದು, ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿರುವುದರಿಂದ ಈ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪಾಲಿಕೆ ಆಯುಕ್ತರು ಪಾಲಿಕೆಯ ತಾಂತ್ರಿಕ ಹಾಗೂ ಜಾಗೃತ ಕೋಶಕ್ಕೆ (ಟಿವಿಸಿಸಿ) ಸೂಚಿಸಿದ್ದರು. ವಿಭಾಗವು ಕೆಲವು ಪ್ರಕರಣಗಳನ್ನು ಸಾಂಕೇತಿಕವಾಗಿ ಪರಿಶೀಲಿಸಿತ್ತು. ಕಾಮಗಾರಿ ಸಂಕೇತಗಳನ್ನು (ಜಾಬ್ ಕೋಡ್) ನಕಲಿಯಾಗಿ ಸೃಷ್ಟಿಸಿ ಅಪಾರವಾದ ಹಣವನ್ನು ಬಿಲ್‌ಗಳ ಮೂಲಕ ಕ್ಲೇಮು ಮಾಡಿರುವುದು, ಕೆಟಿಪಿಪಿ ಕಾಯ್ದೆಗೆ ವ್ಯತಿರಿಕ್ತವಾಗಿ ಟೆಂಡರ್ ಪ್ರಕ್ರಿಯೆ ನಡೆಸಿರುವುದು, ಲೋಕೋಪಯೋಗಿ ಕೋಡ್‌ಗೆ ವಿರುದ್ಧವಾಗಿ ಕಾಮಗಾರಿ ಕೈಗೊಂಡಿರುವುದು, ನಿಯಮಬಾಹಿರವಾಗಿ ಕೆಲವೇ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಿರುವುದನ್ನು ಪತ್ತೆ ಮಾಡಿತ್ತು. ಬಳಿಕ ಪಾಲಿಕೆಯ ವಿಶೇಷ ಆಯುಕ್ತರು ಬಿಎಂಟಿಎಫ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ್ದರು. ನಂತರ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿತ್ತು.

ಅಕ್ರಮ ನಡೆಸಿದ್ದು ಹೇಗೆ?

- ಬಿಬಿಎಂಪಿಯ ವಲಯ ಮಟ್ಟದಲ್ಲಿ ಜಂಟಿ ಆಯುಕ್ತರು ಅಧ್ಯಕ್ಷರಾಗಿರುವ ಟೆಂಡರ್ ಅನುಮೋದನಾ ಸಮಿತಿಗೆ ₹30 ಲಕ್ಷದಿಂದ ₹60 ಲಕ್ಷದ ವರೆಗಿನ ಟೆಂಡರ್‌ಗಳನ್ನು ಅನುಮೋದಿಸಲು ಅಧಿಕಾರ ಇದೆ. ಆದರೆ, 2008ರಿಂದ 2012ನೇ ಸಾಲಿನ ವರೆಗೆ ಪಶ್ಚಿಮ ವಲಯದಲ್ಲಿ ₹60 ಲಕ್ಷ ಮೇಲ್ಪಟ್ಟ ಮೊತ್ತದ ಟೆಂಡರ್‌ಗಳನ್ನು ವಲಯ ಮಟ್ಟದ ಸಮಿತಿಯೇ ಅಧಿಕಾರ ವ್ಯಾಪ್ತಿ ಮೀರಿ ಅನುಮೋದಿಸಿದೆ. ನೂರಾರು ಪ್ರಕರಣಗಳಲ್ಲಿ ನಿಯಮ ಉಲ್ಲಂಘಿಸಲಾಗಿದೆ ಎಂದು ಸಿಐಡಿ ಹೇಳಿದೆ.
- ಕೆಟಿಪಿಪಿ ನಿಯಮಗಳು 2000ರ ಪ್ರಕಾರ, ₹50 ಲಕ್ಷಕ್ಕೂ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಬೇಕು. ಗುತ್ತಿಗೆದಾರರ ತಾಂತ್ರಿಕ ಅರ್ಹತೆ ಅಳೆಯಲು ತಾಂತ್ರಿಕ ಮೌಲ್ಯಮಾಪನ ಮಾಡಬೇಕು. ₹50 ಲಕ್ಷದ ಮಿತಿಯೊಳಗೆ (₹49.99 ಲಕ್ಷ, 49.97 ಲಕ್ಷ ಇತ್ಯಾದಿ) ಅಂದಾಜು ಪಟ್ಟಿ ತಯಾರಿಸಲಾಗಿದೆ. ಬಳಿಕ ರಾಷ್ಟ್ರೀಯ ಹೆದ್ದಾರಿ ದರ ಪಟ್ಟಿಗೆ ಅನುಗುಣವಾಗಿ ಅಂದಾಜು ಮೊತ್ತವನ್ನು ₹70 ಲಕ್ಷ, 72 ಲಕ್ಷಕ್ಕೆ ಏರಿಸಲಾಗಿದೆ. ನಿಯಮ ಉಲ್ಲಂಘಿಸಿ ಟೆಂಡರ್ ಮೊತ್ತಗಳನ್ನು ನಿರ್ಧರಿಸಿ ಕೋಟ್ಯಂತರ ರೂಪಾಯಿ ನಷ್ಟ ಉಂಟು ಮಾಡಲಾಗಿದೆ ಎಂದು ಸಿಐಡಿ ವರದಿಯಲ್ಲಿ ತಿಳಿಸಿದೆ.

67 ಕಾಮಗಾರಿಗಳ ತನಿಖೆ ಪೂರ್ಣಗೊಳಿಸಿದ್ದ ಸಿಐಡಿ, 33 ಎಂಜಿನಿಯರ್‌ಗಳು ಹಾಗೂ 31 ಗುತ್ತಿಗೆದಾರರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಈ ಕಾಮಗಾರಿಗಳಲ್ಲಿ ₹6.22 ಕೋಟಿ ಆರ್ಥಿಕ ನಷ್ಟ ಉಂಟಾಗಿದೆ ಎಂದೂ ಹೇಳಿತ್ತು. ಬಳಿಕ 285 ಪ್ರಕರಣಗಳ ತನಿಖೆ ನಡೆಸಿತ್ತು. ಗಾಂಧಿನಗರ ಹಾಗೂ ಮಲ್ಲೇಶ್ವರ ವಿಭಾಗಗಳಲ್ಲಿ ಭಾರಿ ಅಕ್ರಮಗಳು ನಡೆದಿರುವುದನ್ನು ಪತ್ತೆ ಹಚ್ಚಿತ್ತು. ಈ ವೇಳೆ, ಶ್ರೀರಾಮ ರೆಡ್ಡಿ ಹಾಗೂ ವಿ.ಪಿ.ಇಕ್ಕೇರಿ ಅವರು ಪಶ್ಚಿಮ ವಲಯದ ಜಂಟಿ ಆಯುಕ್ತರಾಗಿದ್ದರು.

ರಸ್ತೆ ಡಾಂಬರೀಕರಣ ಕಾಮಗಾರಿಗಳಲ್ಲಿ ರಾಷ್ಟ್ರೀಯ ಹೆದ್ದಾರಿ ದರಗಳನ್ನು ಅಳವಡಿಸಿಕೊಂಡು ಪಾಲಿಕೆಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟು ಮಾಡಲಾಗಿದೆ. ಅಧಿಕಾರ ವ್ಯಾಪ್ತಿ ಮೀರಿ ಟೆಂಡರ್‌ಗಳನ್ನು ಅನುಮೋದಿಸಿ ಅಕ್ರಮ ಎಸಗಲಾಗಿದೆ ಎಂದು ಸಿಐಡಿ ತಿಳಿಸಿತ್ತು.

ನಗರದಲ್ಲಿ ಇಂದು

ಕನ್ನಡ ಸಾಹಿತ್ಯದಲ್ಲಿ ವೈಚಾರಿಕ ನೆಲೆಗಳ ಕುರಿತು ಉಪನ್ಯಾಸ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಉಪನ್ಯಾಸ: ಬಿ.ಜಿ. ಗಂಗಾಧರಯ್ಯ, ಅಧ್ಯಕ್ಷತೆ: ವೈ. ಚಿದಾನಂದಪ್ಪ, ಆಯೋಜನೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಮಹಾನಗರ ಪಾಲಿಕೆ ಬಾಲಕ–ಬಾಲಕಿಯರ ಪ್ರೌಢಶಾಲೆ, ಗಾಂಧಿನಗರ, ಬೆಳಿಗ್ಗೆ 10

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ: ಅತಿಥಿಗಳು: ಎನ್. ಕುಮಾರ್, ಉಪಸ್ಥಿತಿ: ಸಿ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಸುವರ್ಣ ಅಮರನಾಥ್, ಆಯೋಜನೆ: ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ, ಸ್ಥಳ: ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ರೋಜಗಾರ್ ಮೇಳ: ಅತಿಥಿಗಳು: ಪ್ರಲ್ಹಾದ್ ಜೋಶಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 10.30

ವಿಶ್ವ ಪಾರ್ಶ್ವವಾಯು (ಸ್ಟ್ರೋಕ್) ದಿನಾಚರಣೆ: ಉದ್ಘಾಟನೆ: ಡಾ.ಕೆ. ಸುಧಾಕರ್, ಆಯೋಜನೆ: ಬೆಂಗಳೂರು ಪಾರ್ಶ್ವವಾಯು ಸೇವಾ ಸಂಘ, ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜಿನ ಸಭಾಂಗಣ, ಬೆಳಿಗ್ಗೆ 11

2022–23ನೇ ಸಾಲಿನ ಎನ್‌ಎಸ್‌ಎಸ್ ಕಾರ್ಯಚಟುವಟಿಕೆಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಡಾ. ಅಂಜನಪ್ಪ, ಟಿ.ಎಂ., ಅತಿಥಿಗಳು: ಕಡಬಗೆರೆ ಮುನಿರಾಜು, ಅಧ್ಯಕ್ಷತೆ: ಎಸ್. ಎನ್. ನಾಗರಾಜರೆಡ್ಡಿ, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 11.45

ನಾದಸಿರಿ–2022, ರಾಜ್ಯಮಟ್ಟದ ಸಂಗೀತೋತ್ಸವ, ನಾದ ಸರಸ್ವತಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ದಿನೇಶ ಗುರೂಜಿ, ಪ್ರಶಸ್ತಿ ಪ್ರದಾನ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಮೃತ್ಯುಂಜಯ ಶೆಟ್ಟರ್, ಪ್ರಶಸ್ತಿ ಪುರಸ್ಕೃತರು: ಸತೀಶ್ ಹಂಪಿಹೊಳಿ, ಆಯೋಜನೆ: ನಿನಾದ ಸಂಸ್ಕೃತಿ ಕಲಾಕೇಂದ್ರ, ಸ್ಥಳ: ಪತ್ತಿ ಸಭಾಂಗಣ, ಎನ್. ಆರ್. ಕಾಲೊನಿ, ಸಂಜೆ 4.15

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನ–06: ಸಾನ್ನಿಧ್ಯ: ತೋಂಟದ ಸಿದ್ಧರಾಮ ಸ್ವಾಮೀಜಿ, ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಸಮ್ಮೇಳನಾಧ್ಯಕ್ಷೆ: ಎಂ.ಎಸ್. ಆಶಾದೇವಿ, ಉದ್ಘಾಟನೆ: ವಿ. ಸೋಮಣ್ಣ, ಎಸ್. ಟಿ. ಸೋಮಶೇಖರ್, ಸೌಮ್ಯರೆಡ್ಡಿ, ಅಧ್ಯಕ್ಷತೆ: ಮಲೆಯೂರು ಗುರುಸ್ವಾಮಿ, ಕೃತಿ ಬಿಡುಗಡೆ: ಬಿ.ಎಲ್. ಶಂಕರ್, ಆಯೋಜನೆ: ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ 8ನೇ ಬ್ಲಾಕ್, ಸಂಜೆ 4.30

ಶುಭಾ ಎಚ್.ಎಸ್., ವಿಶ್ರಿತಿ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಶುಭಾ ಎಚ್.ಎಸ್., ವಿಶ್ರಿತಿ ಆರ್., ಆಯೋಜನೆ: ಅರ್ಕಾ ಕಲಾಕುಟೀರದ ಸಭಾಂಗಣ, ಜೆ.ಪಿ.ನಗರ, ಸಂಜೆ 5.30

ಬ್ರಹ್ಮರಥೋತ್ಸವ: ವರಸಿದ್ಧಿ ವಿನಾಯಕ ಸ್ವಾಮಿಯ ಮಂಡಲ ಪೂಜೆ ಪ್ರಯುಕ್ತ, ಆಂಜನೇಯಸ್ವಾಮಿ, ವರಸಿದ್ಧಿ ವಿನಾಯಕ ಸ್ವಾಮಿ, ಗ್ರಾಮ ದೇವತೆ ಮಾರಮ್ಮ ದೇವಿ, ಪಂಚಲಿಂಗೇಶ್ವರ ಸ್ವಾಮಿ, ಮುನೇಶ್ವರಸ್ವಾಮಿ, ಕೋದಂಡರಾಮ ಹಾಗೂ ಚಾಮುಂಡೇಶ್ವರ ದೇವಿಯ ರಥೋತ್ಸವ, ಸ್ಥಳ: ರಾಜಮಹಲ್ ಗುಟ್ಟಹಳ್ಳಿ, ಸಂಜೆ 6

ಊಂಜಲ್ ಸಂಗೀತೋತ್ಸವ: ಗಾಯನ: ಸಂಧ್ಯಾ ಸಂಜೀವ್, ಪಿಟೀಲು: ಶಶಿಧರ್, ಮೃದಂಗ್: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ, ವಯ್ಯಾಲಿ ಕಾವಲ್, ಸಂಜೆ 6

ಬಸವರಾಜ ಕಟ್ಟೀಮನಿ ಅವರ ರಕ್ತಧ್ವಜ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಸಂಗೀತ: ಗಜಾನನ.ಟಿ. ನಾಯ್ಕ, ತಬಲ: ಅಕ್ಷಯ್ ಭೋಂಸ್ಲೆ, ಆಯೋಜನೆ: ದೃಶ್ಯ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



ಸುಭಾಷಿತ
ದೇವರು ವಿಗ್ರಹದೊಳಗಿಲ್ಲ, ನಿಮ್ಮ ಭಾವನೆಗಳೇ ನಿಮ್ಮ ದೇವರು, ನಿಮ್ಮ ಆತ್ಮವೇ ದೇವಸ್ಥಾನ.
-ಚಾಣಕ್ಯ

ಬಿಡಿಎ ಅಕ್ರಮಗಳ ತಡೆಗೆ ಕಠಿಣ ಕ್ರಮ ಅನಿವಾರ್ಯ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಸತಿ ಸೌಕರ್ಯದ ಕೊರತೆ ನೀಗುವುದು ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ ಅಸ್ತಿತ್ವಕ್ಕೆ ಬಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶಿಷ್ಟಾಚಾರ, ನಿಯಮಾವಳಿ ಮತ್ತು ನ್ಯಾಯಾಲಯದ ಆದೇಶಗಳಿಗೆ ಕಿಂಚಿತ್ತೂ ಗೌರವವಿಲ್ಲದಂತೆ ಕೆಲಸ ಮಾಡುತ್ತಿದೆ ಎಂಬುದು ಸುಪ್ರೀಂ ಕೋರ್ಟ್ ಇತ್ತೀಚಿನ ದಿನಗಳಲ್ಲಿ ನಡೆಸಿದ ಎರಡು ಪ್ರಮುಖ ಪ್ರಕರಣಗಳ ವಿಚಾರಣೆಗಳಲ್ಲಿ ಬಹಿರಂಗವಾಗಿದೆ. ಶಿವರಾಮ ಕಾರಂತ ಬಡಾವಣೆ ನಿರ್ಮಾಣದಲ್ಲಿನ ಲೋಪಗಳ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಬಿಡಿಎ ಆಡಳಿತ ಮತ್ತು ಅಲ್ಲಿನ ಅಧಿಕಾರಿಗಳ ಮೇಲೆ ಅವಿಶ್ವಾಸ ವ್ಯಕ್ತಪಡಿಸಿರುವ ನ್ಯಾಯಾಲಯವು ಶಿವರಾಮ ಕಾರಂತ ಬಡಾವಣೆ ನಿರ್ಮಾಣದ ಪ್ರಕ್ರಿಯೆಯ ಮೇಲುಸ್ತುವಾರಿಗಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ತ್ರಿಸದಸ್ಯ ಸಮಿತಿಯನ್ನು ನೇಮಿಸಿದೆ. ಬಿಡಿಎ ತನ್ನದೇ ನಿಯಮ ಮತ್ತು ಸುಪ್ರೀಂ ಕೋರ್ಟ್ ಆದೇಶಗಳನ್ನು ಉಲ್ಲಂಘಿಸಿ ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಕೆಲವು ಪ್ರಭಾವಿ ವ್ಯಕ್ತಿಗಳಿಗೆ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ದುಬಾರಿ ಬೆಲೆಯ ಬದಲಿ ನಿವೇಶನಗಳ ಹಂಚಿಕೆ ಮಾಡಿದ್ದ ಪ್ರಕರಣವನ್ನೂ ನ್ಯಾಯಾಲಯ ಈಗ ವಿಚಾರಣೆಯ ವ್ಯಾಪ್ತಿಗೆ ತೆಗೆದುಕೊಂಡಿದೆ. ಈ ಪ್ರಕರಣದ ವಿಚಾರಣೆಯಲ್ಲಿ ಬಿಡಿಎ ಆಡಳಿತದಲ್ಲಿನ ಹುಳುಕುಗಳು ಒಂದೊಂದಾಗಿ ಬಯಲಿಗೆ ಬರುತ್ತಿವೆ.

ಪ್ರಭಾವಿ ವ್ಯಕ್ತಿಗಳಿಗೆ ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಿರುವ ಬದಲಿ ನಿವೇಶನಗಳನ್ನು ವಾಪಸ್ ಪಡೆಯಲು ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಎಲ್ಲ ಪ್ರಕ್ರಿಯೆಗಳನ್ನೂ ವಿಳಂಬವಿಲ್ಲದೆ ಪೂರ್ಣಗೊಳಿಸಬೇಕು

ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕೆಲವು ದಿನಗಳ ಹಿಂದೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಐಎಎಸ್ ಅಧಿಕಾರಿ ಎಂ.ಬಿ. ರಾಜೇಶ್ ಗೌಡ ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ವರ್ಗಾವಣೆ ಮಾಡುವಂತೆ ಆದೇಶಿಸಿತ್ತು. ಇದೇ ಪ್ರಕರಣದಲ್ಲಿ ನಿಯಮ ಉಲ್ಲಂಘಿಸಿರುವ ಆರೋಪದ ಮೇಲೆ ಬಿಡಿಎ ಕಾರ್ಯದರ್ಶಿ ಸಿ.ಎಲ್. ಆನಂದ್ ಮತ್ತು ಉಪಕಾರ್ಯದರ್ಶಿ ಎನ್.ಎನ್. ಮಧು ಅವರನ್ನೂ ವರ್ಗಾವಣೆ ಮಾಡುವಂತೆ ಈ ಹಿಂದಿನ ವಿಚಾರಣೆ ವೇಳೆ ನ್ಯಾಯಾಲಯ ನಿರ್ದೇಶನ ನೀಡಿದೆ. 2021ರ ಅಕ್ಟೋಬರ್‌ನಲ್ಲಿ ಆದೇಶವೊಂದನ್ನು ಹೊರಡಿಸಿದ್ದ ಸುಪ್ರೀಂ ಕೋರ್ಟ್, 'ಈಗಾಗಲೇ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಲಭ್ಯವಿರುವ ಎಲ್ಲ ನಿವೇಶನಗಳು ಮತ್ತು ಒತ್ತುವರಿದಾರರಿಂದ ವಶಪಡಿಸಿಕೊಂಡ ಜಮೀನುಗಳಲ್ಲಿ ರೂಪಿಸುವ ಎಲ್ಲ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕವೇ ಮಾರಾಟ ಮಾಡಬೇಕು' ಎಂದು ನಿರ್ದೇಶನ ನೀಡಿತ್ತು. ಆದರೆ, ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಸಚಿವ ಜ್ಞಾನೇಂದ್ರ ಸೇರಿದಂತೆ ಏಳು ಪ್ರಭಾವಿ ವ್ಯಕ್ತಿಗಳಿಗೆ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ. 2006ರಲ್ಲಿ 'ಜಿ' ಕೋಟಾದಡಿ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಹಂಚಿಕೆ ಮಾಡಿದ್ದ ನಿವೇಶನವನ್ನು ಹಸ್ತಾಂತರಿಸಲು ಕಾನೂನು ತೊಡಕುಗಳು ಎದುರಾದ ಕಾರಣದಿಂದ 2021ರಲ್ಲಿ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಗೃಹ ಸಚಿವರು ಸಮಜಾಯಿಷಿ ನೀಡಿದ್ದಾರೆ. ಅವರ ಸಮರ್ಥನೆ ಏನೇ ಇದ್ದರೂ, ಸಾವಿರಾರು ಮಂದಿ ಅರ್ಜಿದಾರರು ಹಲವು ವರ್ಷಗಳಿಂದ ನಿವೇಶನ ಹಂಚಿಕೆಗಾಗಿ ಕಾಯುತ್ತಿರುವಾಗ ಕೆಲವೇ ಮಂದಿ ಗಣ್ಯ ವ್ಯಕ್ತಿಗಳಿಗೆ ಆದ್ಯತೆಯ ಮೇಲೆ ಬದಲಿ ನಿವೇಶನ ಹಂಚಿಕೆ ಮಾಡುವ ಅಗತ್ಯವೇನು ಎಂಬ ಪ್ರಶ್ನೆಗೆ ಬಿಡಿಎ ಉತ್ತರಿಸಬೇಕಾಗುತ್ತದೆ. ಈಗ ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಮಾತ್ರ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ರಾಜ್ಯ ಸರ್ಕಾರ ಪಾಲಿಸಿದೆ. ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಿರುವ ಬದಲಿ ನಿವೇಶನಗಳ ಮಂಜೂರಾತಿಯನ್ನು ರದ್ದುಗೊಳಿಸುವುದರ ಜತೆಗೆ ಫಲಾನುಭವಿಗಳಿಂದ ಆಸ್ತಿಯನ್ನು ಬಿಡಿಎ ಹೆಸರಿಗೆ ವರ್ಗಾಯಿಸುವ ಪತ್ರಗಳನ್ನೂ ನೋಂದಣಿ ಮಾಡಿಸುವಂತೆ ನ್ಯಾಯಪೀಠ ನಿರ್ದೇಶನ ನೀಡಿತ್ತು. ಈ ಪ್ರಕ್ರಿಯೆಯನ್ನು ಬಿಡಿಎ ಆಡಳಿತ ಈವರೆಗೂ ಪೂರ್ಣಗೊಳಿಸಿಲ್ಲ. ಪ್ರಭಾವಿ ವ್ಯಕ್ತಿಗಳಿಗೆ ನಿಯಮ ಉಲ್ಲಂಘಿಸಿ ಹಂಚಿಕೆ ಮಾಡಿರುವ ನಿವೇಶನಗಳನ್ನು ವಾಪಸ್ ಪಡೆಯಲು ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಎಲ್ಲ ಪ್ರಕ್ರಿಯೆಗಳನ್ನೂ ವಿಳಂಬವಿಲ್ಲದೇ ಪೂರ್ಣಗೊಳಿಸುವುದು ಪ್ರಾಧಿಕಾರದ ಹೊಣೆಗಾರಿಕೆ. ಇದನ್ನು ಚಾಚೂತಪ್ಪದೆ ಪಾಲಿಸುವ ಮೂಲಕ ನಿವೇಶನ ಹಂಚಿಕೆಯ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕುವ ಮೇಲ್ಪಂಕ್ತಿ ಪ್ರದರ್ಶಿಸಬೇಕಿದೆ.

ಶಿವರಾಮ ಕಾರಂತ ಬಡಾವಣೆ ಕಾಮಗಾರಿ ಕುಂಟುತ್ತಾ ಸಾಗಿದ್ದು, 2,500 ಅರ್ಜಿದಾರರಿಗೆ ಯಾವಾಗ ನಿವೇಶನ ಹಂಚಿಕೆಯಾಗಬಹುದು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಇಲ್ಲದಂತಾಗಿತ್ತು. ಈಗ ಬಡಾವಣೆ ನಿರ್ಮಾಣದ ಪ್ರಕ್ರಿಯೆಗಳ ಮೇಲುಸ್ತುವಾರಿಗೆ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯನ್ನು ನೇಮಿಸಿರುವುದರಿಂದ ಒಂದಷ್ಟು ಭರವಸೆ ಮೂಡಿದೆ. 1976ರಲ್ಲಿ ಬಿಡಿಎ ಅಸ್ತಿತ್ವಕ್ಕೆ ಬಂದಾಗಿನಿಂದ ಇದೇ ಮೊದಲ ಬಾರಿಗೆ ಬಡಾವಣೆ ನಿರ್ಮಾಣವು ನ್ಯಾಯಾಂಗದ ಮೇಲುಸ್ತುವಾರಿಯ ವ್ಯಾಪ್ತಿಗೆ ಬಂದಿದೆ. ಅರ್ಕಾವತಿ ಮತ್ತು ಕೆಂಪೇಗೌಡ ಬಡಾವಣೆಗಳಲ್ಲಿ ಮೂಲಸೌಕರ್ಯಗಳ ಕೊರತೆಯಿಂದ ನಿವೇಶನ ಪಡೆದವರು ಮನೆ ನಿರ್ಮಿಸಲಾಗದ ಪರಿಸ್ಥಿತಿ ಇದೆ. ಈ ಬಡಾವಣೆಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳನ್ನೂ ನ್ಯಾಯಾಲಯವು ಮೇಲುಸ್ತುವಾರಿ ಸಮಿತಿಯ ವ್ಯಾಪ್ತಿಗೆ ಒಪ್ಪಿಸಬಹುದು. ಬಿಡಿಎ ಆಡಳಿತ ಜಡ್ಡುಗಟ್ಟಿದಂತಾಗಿದ್ದು, ನ್ಯಾಯಾಲಯಗಳ ಆದೇಶ ಹೆಚ್ಚೇನೂ ಪರಿಣಾಮ ಬೀರದು ಎಂಬಂತಹ ಸ್ಥಿತಿ ಇದೆ. ಕೇವಲ ಅಧಿಕಾರಿಗಳ ವರ್ಗಾವಣೆಯಿಂದ ಯಾವ ಬದಲಾವಣೆಯೂ ಆಗದು. ಅಕ್ರಮ ಎಸಗುವ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸುವುದು, ತನಿಖೆಗೆ ಆದೇಶಿಸುವುದು ಮುಂತಾದ ಕಠಿಣವಾದ ಶಿಸ್ತು ಕ್ರಮ ಜರುಗಿಸಬೇಕಿದೆ.

ದಿನದ ಟ್ವೀಟ್

ಸಂವಹನ ಚತುರ

ರಾಜ್ಯಶಾಸ್ತ್ರವನ್ನು 'ಸಂಪೂರ್ಣವಾಗಿ' ಒತ್ತಟ್ಟಿಗಿಟ್ಟು ನೋಡಿ, ನರೇಂದ್ರ ಮೋದಿ ಅವರು ರಾಜಕೀಯ ಸಂವಹನದಲ್ಲಿ ಪಿಎಚ್.ಡಿ ಪಡೆದಿದ್ದಾರೆ: ಅದು ಕೇದಾರನಾಥ ಅಥವಾ ಕಾಶಿ ಅಥವಾ ಕೋಪನ್‌ಹೇಗನ್ ಯಾವುದೇ ಆಗಿರಲಿ, ತಮ್ಮ ಎದುರು ಇರುವವರ ಜೊತೆ ಸಂಪರ್ಕ ಸಾಧಿಸುವಾಗ ತಂತ್ರಗಾರಿಕೆಯಲ್ಲಿ ಎಂದಿಗೂ ಹಿಂದೆ ಬೀಳುವುದಿಲ್ಲ. ಸಮಕಾಲೀನ ರಾಜಕಾರಣದಲ್ಲಿ ಯಾರೊಬ್ಬರೂ ಅವರ ಹತ್ತಿರಕ್ಕೂ ಬರುವುದಿಲ್ಲ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ನಾನು ಸರ್ಕಾರಿ ಶಾಲೆಯಲ್ಲಿ ಓದಿದವ. ತಿಂಗಳಿಗೆ ಇಂತಿಷ್ಟು ದೇಣಿಗೆ ಅಂತ ಇದ್ದಿದ್ರೆ ನನ್ನ ಜೊತೆ ಓದಿದೋರಲ್ಲಿ ತುಂಬಾ ಜನ ಶಾಲೆಗೆ ಬರೋದನ್ನ ನಿಲ್ಸಿರೋರು ಅನ್ನಿಸುತ್ತೆ. ಇಂತಹ ನಿರ್ಣಯಗಳಿಂದ ಹಲವಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಇದು ಖಂಡನೀಯ.

(ಸರ್ಕಾರಿ ಶಾಲೆಗಳಲ್ಲಿ ಪೋಷಕರು ತಿಂಗಳಿಗೆ ₹ 100 ದೇಣಿಗೆ ನೀಡಬೇಕೆಂಬ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಪ್ರತಿಕ್ರಿಯೆ)

ನರೇಶ್ ಭಟ್, ಕಿರುಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಬುಧವಾರ, 22-10-1997

• ಕಾಡುಗಳ್ಳ ವೀರಪ್ಪನ್‌ನಿಂದ ಎಲ್ಲ ಒತ್ತೆಯಾಳುಗಳ ಬಿಡುಗಡೆ

ಬೆಂಗಳೂರು, ಅ. 21– ಬಂಡೀಪುರ ಅರಣ್ಯ ಪ್ರದೇಶದಿಂದ 13 ದಿನಗಳ ಹಿಂದೆ ಅಪಹರಿಸಲ್ಪಟ್ಟಿದ್ದ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ ಸೇನಾನಿ ಹಾಗೂ ಕೃಷಿ ವಿಜ್ಞಾನಿ ಡಾ.ಮೈಥಿ ಅವರು ಸೇರಿದಂತೆ ಆರು ಜನ ಒತ್ತೆಯಾಳುಗಳನ್ನು ಕುಖ್ಯಾತ ನರಹಂತಕ ವೀರಪ್ಪನ್ ಇಂದು ಬೆಳಿಗ್ಗೆ ಸ್ವಇಚ್ಛೆಯಿಂದ ಬಿಡುಗಡೆ ಮಾಡಿದ.

ವೀರಪ್ಪನ್ ಈ ತಿಂಗಳ 25ರ ಒಳಗಾಗಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದಲ್ಲಿ ಜಂಟಿ ಕಾರ್ಯಾಚರಣೆ ಆರಂಭಿಸಲು ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ನಿರ್ಧರಿಸಿದ್ದವು.

• ಉತ್ತರಪ್ರದೇಶಕ್ಕೆ ರಾಷ್ಟ್ರಪತಿ ಆಡಳಿತ ಜಾರಿಗೆ ಕೇಂದ್ರದ ಶಿಫಾರಸು

ನವದೆಹಲಿ, ಅ. 21– ಉತ್ತರಪ್ರದೇಶದ ವಿಧಾನಸಭೆಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲು ಕೇಂದ್ರ ಸಚಿವ ಸಂಪುಟವು ಇಂದು ಶಿಫಾರಸು ಮಾಡಿದೆ.

ಏಳು ತಾಸುಗಳ ಸುದೀರ್ಘ ಸಭೆಯ ನಂತರ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸುವಂತೆ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರಿಗೆ ಕೇಂದ್ರ ಸಂಪುಟ ಶಿಫಾರಸು ಮಾಡಿತು.

50 ವರ್ಷಗಳ ಹಿಂದೆ

ಭಾನುವಾರ, 22-10-1972

• '1974ರ ವೇಳೆಗೆ ಹೇಮಾವತಿ ಜಲಾಶಯ ನಿರ್ಮಾಣ ಪೂರ್ಣ'

ಹಾಸನ, ಅ. 21– ಹೇಮಾವತಿ ಜಲಾಶಯ ನಿರ್ಮಾಣ ಯೋಜನೆಯನ್ನು 1974ರ ವೇಳೆಗೆ ಪೂರೈಸಿ, ನೀರು ಸಂಗ್ರಹಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ತಿಳಿಸಿದರು.

ಇದರಿಂದಾಗಿ ಹಾಸನಕ್ಕೆ ಹೇಮಾವತಿ ಕುಡಿಯುವ ನೀರಿನ ಪೂರೈಕೆ ಯೋಜನೆಯನ್ನು ಸಾಕಷ್ಟು ಮೊದಲೇ ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿದೆಯೆಂದು ಅವರು ಹೇಳಿದರು.

ಯಾತ್ರೆ ಹೊರಟಿರುವ ಎಲ್ಲರನ್ನೂ ಹರಸಬೇಕು ಅನ್ನುತ್ತೀನಿ ನಾನು...

ಭಾರತವನ್ನು ಜೋಡಿಸುವ ಯಾತ್ರೆ

ವಿಶ್ಲೇಷಣೆ

ಪ್ರಸನ್ನ

ಈ ದೇಶವು ಮತ್ತೆ ಚೂರಾಗುವುದು ಎಂಬ ಹೆದರಿಕೆಯಿಂದಾಗಿ, ಅದನ್ನು ಭದ್ರವಾಗಿ ಜೋಡಿಸುವ ಪ್ರಯತ್ನಗಳು ನಡೆದಿರುವುದು ಗೋಚರಿಸತೊಡಗಿವೆ. ಆದರೆ ಒಳಿತಿನ ಪ್ರಯತ್ನಗಳು ಇಂದು ನಿನ್ನೆಯವಲ್ಲ, ನಡೆದೇ ಇವೆ. ನಮ್ಮ ಹಿರಿಯರು ಅಂತಹ ಚಳವಳಿಗಳನ್ನು ರಚನಾತ್ಮಕ ಚಳವಳಿಗಳು ಎಂದು ಕರೆದಿದ್ದರು. ರಚನಾತ್ಮಕ ಚಳವಳಿಗಳು ದೇಶವನ್ನೂ ಒಟ್ಟಾಗಿಸಿದವು, ಜನರನ್ನೂ ಒಟ್ಟಾಗಿಸಿದ್ದವು, ಹಿಂದೆಲ್ಲ.

ನಾವು ಕನ್ನಡಿಗರು ಅಂತಹ ಚಳವಳಿಗಳನ್ನು ನವೋದಯವೆಂದು ಕರೆದು, ಯಾವುದನ್ನು ಕಲೆ ಎನ್ನಲಾಗುತ್ತದೆಯೋ ಅದಕ್ಕೂ ಸಾಮಾಜಿಕ, ಸಾಂಸ್ಕೃತಿಕ ಚಳವಳಿಗಳಿಗೂ ಇರುವ ಅಂತರ್‌ಸಂಬಂಧದತ್ತ ಬೊಟ್ಟು ಮಾಡಿದ್ದೆವು. ಇದು ಏಕೆಂದರೆ, ನಮ್ಮ ವಚನಕಾರ ಕಾಯಕ ಜೀವಿಗಳು, ದಾಸ ಭಿಕ್ಷುಗಳು ಎಲ್ಲವನ್ನೂ ಏಕಕಾಲದಲ್ಲಿ ನಿಭಾಯಿಸಿದ್ದರು. ಕಲೆ, ಸಂಸ್ಕೃತಿ, ಸಮಾಜ ಎಲ್ಲವನ್ನೂ ಒಗ್ಗೂಡಿಸುವ ಪ್ರಯತ್ನ ಮಾಡಿದ್ದರು. ನಮ್ಮ ಕುವೆಂಪು, ಕಾರಂತ, ಬೇಂದ್ರೆ ಬರೆದರು, ನಾವು ನಾಟಕ ಆಡಿದೆವು. ವರನಟ ರಾಜಕುಮಾರ್ ಅಂತಹವರು ಭಾವಿಸಿ ತೋರಿದರು. ಬೀದಿ ಬದಿಯ ದಾಸಯ್ಯಗಳು, ನೀಲಗಾರರು ಹಾಗೂ ಜಂಗಮರು ಈಗಲೂ ಈ ಆಧುನಿಕೋತ್ತರ ಯುಗದಲ್ಲಿಯೂ ಹಾಡುತ್ತ, ಬೇಡುತ್ತ ಅದೇ ಆಶಯವನ್ನು ಬಿತ್ತರಿಸುತ್ತಿದ್ದಾರೆ. ಅಂಚೆಯವ, ಹಮಾಲಿಯವ, ಚಮ್ಮಾರರವ, ನೇಕಾರ್ತಿಯವಳು, ತಾಯಿತಂದೆ, ಮೇಷ್ಟರು... ಹೀಗೆ ಎಲ್ಲರೂ ಮಾಡುತ್ತಿರುವುದು ತುಂಡು ರೊಟ್ಟಿಯ ಕೆಲಸವೂ ಹೌದು, ರೊಟ್ಟಿಯು ನಾಳಿನವರಿಗೂ ಸಿಕ್ಕುತ್ತಿರಲಿ ಎಂಬ ಲೋಕಕಲ್ಯಾಣದ ಕೆಲಸವೂ ಹೌದು ತಾನೇ?

ಆದರೆ ಹಾಲಿ ನಡೆದಿರುವ ಯಾತ್ರೆ ರಾಜಕೀಯ ಕ್ಷೇತ್ರದಿಂದ ಬಂದಿದೆ. ಅದಕ್ಕೆ ಕಾರಣವೂ ಇದೆ. ಲೋಕ ಕಲ್ಯಾಣ ಅಪಾಯಕ್ಕೆ ಸಿಲುಕಿರುವುದು ರಾಜಕಾರಣದಿಂದಾಗಿ. ರಾಕ್ಷಸಾಕಾರತಾಳಿದೆ ರಾಜಕಾರಣ. ಮಾತ್ರವಲ್ಲ, ರಾಕ್ಷಸಾಕಾರದ ಉದ್ದಿಮೆಗಳು, ರಾಕ್ಷಸಾಕಾರದ ಮಾರುಕಟ್ಟೆ, ರಾಕ್ಷಸ ಲಾಭದ ಹಿಂದೆ ಬಿದ್ದು, ತಾನೇ ರಾಕ್ಷಸನಂತಾಗಿದೆ ಅದು. ರಾವಣಾಸುರನಂತೆ ಲಂಕಾಸುರಿಯನ್ನು ಭವ್ಯವಾಗಿಸುತ್ತ, ಗ್ರಾಮವಾಸಿಗಳು ಹಾಗೂ ಅರಣ್ಯವಾಸಿಗಳನ್ನು ಹೊಟ್ಟೆಬಾಕ ರಾಕ್ಷಸರ ಮಡಿಲಿಗೆ ತಳ್ಳಿದೆ. ಜನರನ್ನೂ ನೋಯಿಸುತ್ತಿದೆ, ನೆಲ ಜಲ ಕಾಡುಗಳನ್ನೂ ನೋಯಿಸುತ್ತಿದೆ. ಕುಡಿಯುವ ಗಾಳಿಯನ್ನೂ ಬಿಡದೆ ವಿಷವಾಗಿಸಿದೆ. ಆಳುವ ಪಕ್ಷ, ವಿರೋಧ ಪಕ್ಷ, ವಿದೇಶಿ ಪಕ್ಷ, ಹಿಂದೂ, ಮುಸಲ್ಮಾನ, ಕ್ರೈಸ್ತ ಪಕ್ಷ ಎಂಬಂಥ ತಾರತಮ್ಯಗಳನ್ನೆಲ್ಲ ಮರೆಯಾಗಿಸಿ ಹೂಂಕರಿಸುತ್ತಿದೆ ಇಂದಿನ ರಾಜಕಾರಣ. ಇರಾನಿನ ಖೊಮೇನಿಯಿರಲಿ, ರಷ್ಯಾದ ಪುಟಿನ್ನನಿರಲಿ, ದಕ್ಷಿಣ ಅಮೆರಿಕದ ಡಿಕ್ಟೇಟರನಿರಲಿ, ನಮ್ಮ ಪ್ರಧಾನಿ, ಮುಖ್ಯಮಂತ್ರಿ ಯಾರೇ ಇರಲಿ, ಎಲ್ಲರೂ ರಾಜಧರ್ಮ ಮರೆತಿದ್ದಾರೆ. ದೇವರು ಸಿಟ್ಟಾಗಿ ಮುಖ ತಿರುಗಿಸಿ ಕುಳಿತಿದ್ದಾನೆ. ಇದು ಪರಿಸ್ಥಿತಿ.

ಇಂತಹ ಪರಿಸ್ಥಿತಿಯೊಳಗೆ, ಅವರೊಳಗಿನವನೇ ಒಬ್ಬನಾದ ರಾಹುಲ್ ಗಾಂಧಿ ಎಂಬ ವ್ಯಕ್ತಿಗೆ ಭಾರತ ಜೋಡಿಸಬೇಕು ಎಂದು ಅನ್ನಿಸಿದೆ. ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆಯವರಿಗೆ ಅನ್ನಿಸಿಲ್ಲವೇ ನಿರುದ್ಯೋಗ ಬೆಳೆಯಲುಬಿಟ್ಟು ತಪ್ಪು ಮಾಡಿದೆವು ಎಂದು? ಹಾಗೆಯೇ ಮೋಹನ ಭಾಗವತ ಅವರಿಗೆ ಅನ್ನಿಸಲಿಲ್ಲವೇ ಮಸೀದಿಗೆ ಹೋಗಿ ಮುಸಲ್ಮಾನರೊಟ್ಟಿಗೆ ಮಾತನಾಡಬೇಕೆಂದು? ಹಾಗೇ ಇಂಥ ಆಶಯಗಳನ್ನು ನಾವು ಹೇಗೆ ಗ್ರಹಿಸಬೇಕು ಎಂಬುದು ಪ್ರಶ್ನೆ. ಹರಸಬೇಕು ಅನ್ನುತ್ತೀನಿ ನಾನು. 'ನೀನು ಯಶಸ್ವಿಯಾಗು ಮಹರಾಯ! ನಿನ್ನ ಹೆಸರಿನ ಭಾಗವಾಗಿರುವ ರಾಹುಲ ಕಳಚಿಬಿದ್ದರೂ ಪರವಾಗಿಲ್ಲ. ಪೂರ್ಣರೂಪದ ಗಾಂಧಿಯಾಗಿ ಹೊರಹೊಮ್ಮು!' ಅನ್ನುತ್ತೀನಿ. ಅತ್ತ, ನೆಲ, ಜಲ ಕಾಡಿನ ಸಲುವಾಗಿ ಯಾತ್ರೆ ಹೊರಟಿರುವ, ಆರ್‌ಎಸ್‌ಎಸ್ ಜೊತೆಯಲ್ಲೇ ಇದ್ದ ಗೋವಿಂದಾಚಾರ್ಯ ಕೂಡ ಯಶಸ್ವಿಯಾಗಬೇಕು ಅನ್ನುತ್ತೀನಿ.

ಭಾರತೀಯ ಮುಸಲ್ಮಾನರನ್ನೇ ತೆಗೆದುಕೊಳ್ಳಿ. ಈ ದೇಶ ಒಡೆದಾಗ ದೇಶ ಒಡೆದವರ ಜೊತೆ ಹೋಗಲಿಲ್ಲ ಅವರು. ಅವರೀಗ ಭಾರತೀಯ ಪ್ರಜೆಗಳು. ಅವರಲ್ಲಿ ಅನೇಕರಿಗೆ ಈಗಲೂ ಧರ್ಮ ಹಾಗೂ ದೇಶದ ನಡುವೆ ದ್ವಂದ್ವ ಇದ್ದೀತು. ಅವರ ನಡುವೆ ಕಳ್ಳಕಾಕರೂ ಇದ್ದಾರು. ಯಾರಲ್ಲಿಲ್ಲ ಹೇಳಿ ದ್ವಂದ್ವ ಅಥವಾ ಕೆಸರು? ಆದರೆ 18 ಕೋಟಿಯಷ್ಟಿರುವ ಒಂದು ಭಾರತೀಯ ಪ್ರಜಾಗುಂಪನ್ನು ನಾವು ಹೇಗೆ ನಡೆಸಿಕೊಳ್ಳುತ್ತೇವೆ ಎಂಬುದು ಪ್ರಶ್ನೆ ತಾನೆ? ಮನೆಯೊಳಗೆ ಅತ್ತೆ ಸೊಸೆಯರು ಕಚ್ಚಾಡುತ್ತಿದ್ದಾರೆ ಎನ್ನಿ. ಮನೆಯೊಡೆಯ ಹೇಗೆ ನಿಭಾಯಿಸುತ್ತಾನೆ? ಮನೆಯೊಡೆಯನಾಗಿ ಜಗಳವನ್ನು ಬಿಜೆಪಿ ಸರಿಯಾಗಿ ನಿಭಾಯಿಸುತ್ತಿಲ್ಲ. ಜಗಳದ ಲಾಭ ಪಡೆದುಕೊಳ್ಳಲೆಂದೇ ಜಗಳ ಹೆಚ್ಚಿಸುತ್ತಿದೆ ಅದು ಎಂಬ ಅನುಮಾನ ಮೂಡತೊಡಗಿದೆ ನನಗೆ.

ಹಾಗೆ ನೋಡಿದರೆ, ಕಾಂಗ್ರೆಸ್ ಮಾಡಿದ ಅಪರಾಧ ಮುಸಲ್ಮಾನರ ಓಲೈಕೆಯಾಗಿರಲಿಲ್ಲ. ರಾಕ್ಷಸ ರಾಜಕಾರಣದ ಓಲೈಕೆಯಾಗಿತ್ತು. ಜನ ನೊಂದರು, ಗ್ರಾಮ ನೊಂದಿತು, ಪ್ರಕೃತಿ ನೊಂದಿತು. ಹೆಸರಿನಲ್ಲಿ ಗಾಂಧೀಜಿಯನ್ನು ಉಳಿಸಿಕೊಂಡು ನಿಜದಲ್ಲಿ ತಳ್ಳಿಹಾಕಿತ್ತು ಕಾಂಗ್ರೆಸ್. ದುರಂತವೆಂದರೆ, ಬಿಜೆಪಿ ಮತ್ತೊಂದು ತುದಿ ಹಾಯ್ದು ಅದನ್ನೇ ಮಾಡುತ್ತಿದೆ. ಮಾತ್ರವಲ್ಲ, ಕಾಂಗ್ರೆಸ್ಸಿಗರಲ್ಲಿ ಅಷ್ಟಾಗಿ ಇರದೆ ಇದ್ದ ತೀವ್ರತರ ಅನುಮಾನ, ಆತಂಕ ಹಾಗೂ ಸಿನಿಕತೆಗಳು ಅವರನ್ನು ಬಾಧಿಸುತ್ತಿರುವಂತಿದೆ.

ಸುಳ್ಳುಗಳ ಉತ್ಪಾದನೆ ನಡೆದಿದೆ. ಮುಸಲ್ಮಾನರ ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಿದೆ ಎಂಬ ಸುದ್ದಿಯನ್ನೇ ತೆಗೆದುಕೊಳ್ಳಿ. ಅಂಕಿ ಅಂಶಗಳ ಪ್ರಕಾರ, ಭಾರತದ ಜನಸಂಖ್ಯೆ ಕಡಿಮೆಯಾಗುತ್ತಿದೆ. ಮಾತ್ರವಲ್ಲ ಮುಸಲ್ಮಾನರನ್ನೂ ಸೇರಿಸಿದಂತೆ ಕಡಿಮೆಯಾಗುತ್ತಿದೆ. ಒಂದು ಕಾಲದಲ್ಲಿ ಅವರ ಜನಸಂಖ್ಯೆ ವೇಗವಾಗಿ ಬೆಳೆದಿತ್ತು ನಿಜ. ಆದರದು ಮುಲ್ಲಾಗಳ ಮಾತಿನಿಂದಾಗಿ ಅಲ್ಲ. ಅಜ್ಞಾನ ಹಾಗೂ ಅನಕ್ಷರತೆಯ ಕಾರಣದಿಂದಾಗಿ ಹಾಗಾಗಿತ್ತು. ಈಗಲೂ ಅಜ್ಞಾನ ಹಾಗೂ ಬಡತನ ಹೆಚ್ಚಿರುವ ರಾಜ್ಯಗಳಲ್ಲಿ ಜನಸಂಖ್ಯೆಯ ಇಳಿತದ ಪ್ರಮಾಣವು ಕಡಿಮೆಯೇ ಇದೆ.

ಇದಕ್ಕಿಂತ ವಿಪರೀತವಾದ ಸುಳ್ಳುಗಳನ್ನು ಹರಡಲಾಗುತ್ತಿದೆ. ಆಟೊ ಚಾಲಕನೊಬ್ಬನ ಬಾಯಲ್ಲಿ ಕೇಳಿದ್ದ ಮಾತು ಕೇಳಿ: ಜವಾಹರಲಾಲ್ ನೆಹರೂ ಸಾಬರಂತೆ, ಶೇಕ್ ಅಬ್ದುಲ್ಲಾನ ಸಹೋದರನಂತೆ, ಇಂದಿರಾ ಗಾಂಧಿ ಮದುವೆಯಾದದ್ದೂ ಸಾಬರನ್ನೇ ಅಂತೆ. ಹಾಗಾಗಿ ಇಡೀ ಕಾಂಗ್ರೆಸ್ ಸಂತಾನವೇ, ನಮ್ಮವರೇ ಆದ ಕುರುಬರ ಸಿದ್ದರಾಮಯ್ಯನವರೂ ಸೇರಿದಂತೆ ಸಾಬರದ್ದಂತೆ. ಹಾಗಾಗಿ ಆತ, ಪಾಪ ಇಷ್ಟವಿರದಿದ್ದರೂ, ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ವೋಟು ಮಾಡಬೇಕಾಗಿದೆಯಂತೆ, ಹಿಂದೂ ಹಿತ ಕಾಯಲಿಕ್ಕಾಗಿ. ಮೋಹನ ಭಾಗವತರು ಖುದ್ದಾಗಿ ಈ ಎಲ್ಲ ಸುಳ್ಳಿನ ಉತ್ಪಾದಕರು ಎಂದು ಹೇಳಿದರೆ ಅತಿರೇಕವಾಗುತ್ತದೆ. ಆದರೆ ಇಂತಹ ಮಾತುಗಳನ್ನು ಖಂಡಿಸದೆ ಉಳಿಯುವುದು, ಹಾಗುಳಿದು ತಾನು ಹಿಂದೂ ಹಿತ ಕಾಯುವವನು ಎಂದು ಬಿಂಬಿಸುವುದು, ತಪ್ಪು. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಅಂತಹ ತಪ್ಪುಗಳನ್ನು ಮಾಡತೊಡಗಿವೆ.

'ನೀನೇಕೆ ಸೇರುತ್ತಿಲ್ಲ, ರಾಹುಲ್ ಗಾಂಧಿಯವರ ಯಾತ್ರೆಯಲ್ಲಿ?' ಎಂದು ಲೇಖಕ ಮಿತ್ರರೊಬ್ಬರು ಕೇಳಿದರು. 'ಅವರೇ ಬದನವಾಳಿನ ಖಾದಿ ಕೇಂದ್ರಕ್ಕೆ ಬರುವಂತೆ ಮಾಡಿದೆವಲ್ಲ, ಗಾಂಧಿ ಜಯಂತಿಯ ದಿನ?' ಎಂದು ನಕ್ಕೆ. 'ನೀವೆಲ್ಲಿ ಮಾಡಿದಿರಿ' ಎಂದರು. 'ನಾವೆಂದರೆ ನಾನಲ್ಲ, ಅನೇಕ ರಚನಾತ್ಮಕ ಕಾರ್ಯಕರ್ತರು ಸೇರಿ ಬದನವಾಳಿನತ್ತ ನಾಡಿನ ಗಮನ ಸೆಳೆದಿದ್ದರು ತಾನೆ, ಬದನವಾಳು ಸತ್ಯಾಗ್ರಹ ಎಂಬ ಹೆಸರಿನಲ್ಲಿ ಕೆಲವು ವರ್ಷಗಳ ಹಿಂದೆ, ಅಷ್ಟು ಸಾಲದೆ?' ಎಂದೆ. ಈ ದೇಶದ ಮೂಲೆ ಮೂಲೆಗಳಲ್ಲಿ ಬದನವಾಳುಗಳು ಉಳಿದಿವೆ, ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅವುಗಳತ್ತ ಲಕ್ಷ್ಯ ಸೆಳೆಯಲು ಯತ್ನಿಸುತ್ತಿರುವ ರಚನಾತ್ಮಕ ಕಾರ್ಯಕರ್ತರು ಹಾಗೂ ಸಂಘಟನೆಗಳು ಸಕ್ರಿಯವಾಗಿವೆ. ಅವರೆಲ್ಲರ ಆಶಯಕ್ಕೆ ರಾಜಕೀಯ ಶಕ್ತಿ ನೀಡಬಲ್ಲವರು ಗೆಲ್ಲುತ್ತಾರೆ. ಮಿಕ್ಕವರು ಸೋಲುತ್ತಾರೆ. ಗಾಂಧೀಜಿ ಕಾಲಕ್ಕೆ ಬದನವಾಳು ಸುಂದರ ಸಂಕೇತ ಮಾತ್ರವೇ ಆಗಿತ್ತು. ಆರ್ಥಿಕ ಪರ್ಯಾಯವಾಗಲಿಲ್ಲ ಅದು. ಈಗಲೂ ಆಗಿಲ್ಲ. ಆದರೆ ಪ್ರಳಯ ಬರಲಿದೆಯೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ನಮಗೂ ಪ್ರಳಯದ ಬಿಸಿಗಾಳಿ ಬಡಿಯತೊಡಗಿದೆ. ಜಗಳವು ರಾಹುಲ್ ಹಾಗೂ ಮೋದಿಯವರ ನಡುವೆ ಉಳಿದಿಲ್ಲವೀಗ.

ಅಥವಾ ಪ್ಲಾಸ್ಟಿಕ್ಕಿನ ಕಸವನ್ನು ಸಾಂಕೇತಿಕವಾಗಿ ಗುಡಿಸಿದರೂ ಸಾಲದು. ಪವಿತ್ರ ಆರ್ಥಿಕತೆಯೆನ್ನಿ, ಅಹಿಂಸಾತ್ಮಕ ಆರ್ಥಿಕತೆಯೆನ್ನಿ, ಏನೇ ಅನ್ನಿ, ಇಡೀ ದೇಶ ಒಂದಾಗಿ ನಿಂತು ಜಾರಿಗೊಳಿಸಿದರೆ ಮಾತ್ರ ಪ್ರಳಯದ ಆಗಮನವನ್ನು ತಡೆಯಬಹುದು ನಾವು. ಇಲ್ಲದಿದ್ದರೆ ಹಿಂದೂ ಮುಸಲ್ಮಾನರಿಬ್ಬರಿಗೂ, ಮುನಿದ ದೇವರು ಒಂದೇ ಗತಿ ಕಾಣಿಸಲಿದ್ದಾನೆ.

ಚುರುಮುರಿ



ಖರ್ಗೆ, ಬಿನ್ನಿ ಜಿಂದಾಬಾದ್

• ಆನಂದ

'**ಕರ್ನಾಟಕಕ್ಕೆ** ಏನು ಸುಯೋಗರೀ...' ಎಂದು ಶ್ರೀಮತಿ ಶುರು ಹಚ್ಚಿದಳು.

'ಸುಯೋಗ? ಏನಿರಬಹುದು? ರಾಹುಲ್‌ಜಿ ಯಶಸ್ವಿಯಾಗಿ ಭಾರತ್ ಜೋಡೊ ಕರ್ನಾಟಕದ ಯಾತ್ರೆ ಮುಗಿಸಿ ಸಿದ್ದು, ಡಿಕೆಶಿ ಅವರನ್ನು ಜೋಡಿಸಿದ್ದೇ?'

'ಜೋಡಿಯಾಗಿದ್ದಾರೆ ಎಂದು ಈಗಲೇ ಹೇಗೆ ಹೇಳುವುದು? ನಾನು ಹೇಳ್ತಿರೋದೇ ಬೇರೆ. ಎರಡು ಮಹತ್ವದ ವಿಷಯಗಳು...'

'ಒಂದು ತಗೊಂಡರೆ ಇನ್ನೊಂದು ಫ್ರೀ?'

'ಅಂತಹ ಯೋಚನೇನೆ ನಿಮಗೆ. ನಮ್ಮ ಖರ್ಗೆ ಸಾಹೇಬ್ರು ದೇಶದ ಅತ್ಯಂತ ಈಗ ದೊಡ್ಡದಲ್ಲದಿದ್ರೂ ಹಳೆಯ ಪಕ್ಷದ ನಾಯಕತ್ವ ವಹಿಸಿಕೊಂಡಿರುವುದು ಮಹತ್ವದ ಸುದ್ದಿ ಅಲ್ಲವೆ?'

'ಖಂಡಿತ. ಆದರೆ ಅವರು ರಿಮೋಟ್ ಕಂಟ್ರೋಲ್ಡ್ ಅಧ್ಯಕ್ಷರಾಗ್ತಾರೆ ಅಂತಿದ್ದಾರೆ...'

'ಛೆ! ಛೆ! ಅವರು ಹೇಳೋ ಕೆಲಸ ನಾನು ಮಾಡ್ತೀನಿ ಅಂತ ರಾಹುಲ್‌ಜಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅಂದಮೇಲೆ ಅವರು ರಿಮೋಟ್ ಕಂಟ್ರೋಲ್ಡ್ ಅಂತ ಹೇಳಲಿಕ್ಕೆ ಆಗದು. ಅವರೇ ಹೈಕಮಾಂಡ್'.

'ಅಂದರೆ ಅವರು ಪಕ್ಷಕ್ಕೆ ಹೊಸ ಕಾಯಕಲ್ಪ ಕೊಡ್ತಾರೆ ಅಂತೀಯ?'

'ಕೊಡಬೇಕು. ಪಕ್ಷ ಈಗಾಗಲೇ ಐಸಿಯುನಲ್ಲಿದೆ. ಡಾ. ಖರ್ಗೆ ಅದಕ್ಕೆ ಏನಾದರೂ ಸಂಜೀವಿನಿ ಕೊಟ್ಟು ಐಸಿಯುನಿಂದ ಹೊರತರಬೇಕು'.

'ಪಾಪ! ನಮ್ಮ ಖರ್ಗೆ ಸಾಹೇಬ್ರು ಈ ವಯಸ್ಸಿನಲ್ಲಿ ಇಷ್ಟು ದೊಡ್ಡ ಭಾರ ಹೊರಬೇಕು. ರಾಜ್ಯಸಭಾ ಸದಸ್ಯರಾಗಿ ಆರಾಮಾಗಿದ್ದರು'.

'ಎಲ್ಲ ನಾಯಕರೂ ವಯಸ್ಸಾದವರೇ... ಬಿಎಸ್‌ವೈ ನೋಡಿ 80 ಆದರೂ ಎಷ್ಟು ಉತ್ಸಾಹದಲ್ಲಿದ್ದಾರೆ. ಬೇಕಿದ್ದರೆ ಇನ್ನೊಂದು ಸಲ ಸಿಎಂ ಆಗೋಕೂ ತಯಾರು'.

'ಅದ್ಸರಿ, ಇನ್ನೊಂದು ಮಹತ್ವದ ವಿಷಯ?'

'ನಮ್ಮವರೇ ಆದ ರೋಜರ್ ಬಿನ್ನಿ ರನ್‌ಔಟ್ ಆದ ಗಂಗೂಲಿ ಜಾಗಕ್ಕೆ ಬಂದು ಬ್ಯಾಟ್ ಮಾಡ್ತಿರೋದು'.

'ಹೌದಲ್ಲಾ! ಬಿಸಿಸಿಐ ಅಧ್ಯಕ್ಷರು. ಖರ್ಗೇಜಿ ಓಲ್ಡೆಸ್ಟ್ ಪಕ್ಷದ ಅಧ್ಯಕ್ಷರಾದರೆ ಬಿನ್ನೀಜಿ ರಿಚ್ಚೆಸ್ಟ್ ಕ್ರೀಡಾ ಮಂಡಳಿಯ ಅಧ್ಯಕ್ಷರು. ಇಬ್ಬರೂ ಕನ್ನಡದವರೇ'.

'ಕನ್ನಡಕ್ಕೆ ಇನ್ನೇನು ಬೇಕು? ಬಾರಿಸು ಕನ್ನಡದ ಡಿಂಡಿಮ'.

ಸಂಗತ

ಮಕ್ಕಳೆದುರು ಮಾದರಿಯಾಗಬೇಕಾದ್ದು...

ಬುದ್ಧಿ ಬೆಳೆದಂತೆಲ್ಲಾ ತನ್ನ ಭಾವಪರಿಧಿಯ ವಿಸ್ತಾರದಲ್ಲಿ ಹೆಚ್ಚೆಚ್ಚು ಸಂವೇದನಾಶೀಲ ಆಗಬೇಕಿದ್ದ ಮನುಷ್ಯಕುಲ ಈ ಪರಿ ಮೃಗೀಯವಾಗುತ್ತಿರಲು ಕಾರಣವೇನು?

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮನುಷ್ಯ ಪ್ರಕೃತಿಯ ಕೂಸು, ಪರಿಸರ ಇರುವಂತೆಯೇ ಅವನ ಇರವು. ಸಂಶೋಧನೆಗಳ ಪ್ರಕಾರ, ಜೀವಿಯ ಬೆಳವಣಿಗೆಯಲ್ಲಿ ಆನುವಂಶೀಯತೆ ಮತ್ತು ಪರಿಸರ ಪ್ರಮುಖ ಪಾತ್ರ ವಹಿಸುತ್ತವಾದರೂ ಜೀವಿಯ ಬೌದ್ಧಿಕ ಮತ್ತು ಮಾನಸಿಕ ವ್ಯಕ್ತಿತ್ವಗಳು ಆಮೂಲಾಗ್ರವಾಗಿ ರೂಪುಗೊಳ್ಳುವುದು ಪಾರಿಸರಿಕ ಪ್ರಭಾವದಲ್ಲಿಯೇ.

ತಾನಿರುವ ಪರಿಸರದ ಗತಿಶೀಲ ಪ್ರಕ್ರಿಯೆಗಳ ಬಗೆಗಿನ ಕುತೂಹಲ, ಹೊಂದಾಣಿಕೆ ಮತ್ತು ಸ್ಪಂದನೆಯ ಜೀವಂತಿಕೆಯಲ್ಲಿ ಮನುಷ್ಯಜೀವಿಯೊಂದರ ಬುದ್ಧಿ-ಭಾವಗಳು ವಿಕಸಿಸುತ್ತವೆ. ಪ್ರಕೃತಿಯೊಟ್ಟಿಗಿನ ಸಹವಾಸ ಮತ್ತು ಯೋಗ್ಯ ಸಹಭಾಗಿತ್ವದಲ್ಲಿ ಮನಸು ದಿನೇದಿನೇ ಅರಳುತ್ತದೆ. ನಮ್ಮೊಳಗೊಂದು ಸಂತುಲಿತ ವ್ಯಕ್ತಿತ್ವ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಈ ಅಂಶಗಳು ಹೆಚ್ಚು ಪೂರಕ.

ಆದರೆ, ಸಂಪಾದನೆಯೆಂದರೆ ಹಣ, ಆಸ್ತಿ, ಅಧಿಕಾರ, ಗೆಲುವು ಮಾತ್ರ ಅಂದುಕೊಂಡು ಅವುಗಳ ಹಿಂದೆ ಬಿದ್ದಿರುವ ಮನುಷ್ಯನ ಭಾವಪ್ರಪಂಚ ದಿನೇದಿನೇ ಬರಡಾಗುತ್ತಿದೆ. ಕಡೆಯಲ್ಲಿ ಕಾತರ, ಉತ್ಸಾಹ, ನಿರೀಕ್ಷೆ, ನಂಬಿಕೆಗಳ ಕೀಲಿಕೈಯನ್ನು ಕಳೆದುಕೊಂಡು ಪರದಾಡುವ ಮಾನಸಿಕತೆ ಅವನದ್ದು. ಮನಸು ಬೆಸೆಯಬೇಕಾದ ಕಡೆಗೆಲ್ಲಾ ಕೃತಕತೆ, ಅಹಂಕಾರಗಳು ಆವರಿಸಿವೆ. ಈಗೆಲ್ಲಾ ಕಟ್ಟುವುದಕ್ಕಿಂತ ಕೆಡವಲು ಉಮೇದು ಹೆಚ್ಚು. ಯಂತ್ರಗಳನ್ನೇ ಪೂರ್ಣ ಅವಲಂಬಿಸುತ್ತ ಬದುಕಿನಲ್ಲಿ ಮಾನವೀಯತೆಯ ಪಸೆ ಬತ್ತಿಸಿಕೊಂಡು ತಾನೂ ಯಾಂತ್ರಿಕಗೊಳ್ಳುತ್ತಿದ್ದಾನೆ. ಸದಾಕಾಲ ಮಾನವೀಯತೆಯ ಉಳಿವು, ಜೀವಪರ ನಿಲುವು, ಸುಸ್ಥಿರ ಬೆಳವಣಿಗೆಗಳನ್ನು ಕಾಪಿಟ್ಟುಕೊಳ್ಳಬೇಕಾದವನು ತನ್ನದೇ ಸೃಷ್ಟಿಯಾದ ಜಾತಿ, ಧರ್ಮ, ಭಾಷೆ, ಪ್ರದೇಶ, ಗಡಿಬೇಲಿಗಳ ಸಂಕೋಲೆಯೊಳಗೆ ಮತ್ತೆಮತ್ತೆ ಸಿಲುಕಿಕೊಳ್ಳುತ್ತಿದ್ದಾನೆ. ಹಾಗೆ ಹಗೆದ್ವೇಷಗಳನ್ನು ಉಸಿರಾಡುತ್ತ ನಿತ್ಯವೂ ನಿದ್ದೆ-ನೆಮ್ಮದಿಗಳನ್ನು ಕಳೆದುಕೊಂಡು ಹೊರಳಾಡುತ್ತಿರುವ ವಿಲಕ್ಷಣ ಜೀವಿಯೇ ಈ ಮನುಷ್ಯ. ಕಾಲಾಂತರದಿಂದ ಕಾಪಿಟ್ಟುಕೊಂಡುಬಂದ ಸಹಚರರ ಬಗೆಗಿನ ಒಲವು, ಪರಸ್ಪರರೊಟ್ಟಿಗಿನ ಸೌಹಾರ್ದ ಸಂಬಂಧಗಳನ್ನು ಜತನದಿಂದ ಸಂರಕ್ಷಿಸಿಕೊಳ್ಳದಿದ್ದಲ್ಲಿ ಉಳಿಗಾಲವಿಲ್ಲ ಎಂಬುದನ್ನು ಬೇಗ ಅರಿತಷ್ಟೂ ಕ್ಷೇಮ.

ದಾರ್ಶನಿಕರಾಗಿದ್ದ ಜಿಡ್ಡು ಕೃಷ್ಣಮೂರ್ತಿಯವರ ಮಾತಿನಂತೆ 'ಸಿಟ್ಟು, ಅಹಂಕಾರ, ಗೊಂದಲ ಮತ್ತು ಸಂಘರ್ಷ ಇವನ್ನೆಲ್ಲಾ ಪ್ರೀತಿ ಮಾತ್ರ ವಾಸಿಮಾಡಬಲ್ಲದು. ತೀವ್ರ ಥರದ ಎಡಪಂಥ ಅಥವಾ ಬಲಪಂಥ ವ್ಯವಸ್ಥೆಗಳು ಯಾರಿಗೂ ಯಾವತ್ತಿಗೂ ಅಮಲು ತರಬಲ್ಲವೇ ವಿನಾ ಸುಖ-ಶಾಂತಿಯನ್ನಲ್ಲ. ಪ್ರೀತಿ ಇರುವೆಡೆ ಒಡೆತನ ಇರುವುದಿಲ್ಲ, ಬಂಧುತ್ವ ಇರುತ್ತದೆ, ನಿರ್ಬಂಧವಲ್ಲ'. ಹೌದು, ನಮ್ಮ ಹಿಡಿಯಷ್ಟಗಲದ ಹೃದಯದಲ್ಲಿ ಇಡಿಯ ಜಗತ್ತನ್ನು ಹಿಡಿಸುವಷ್ಟು ಜಾಗವಿದೆ. ಕುಟುಂಬ ಸದಸ್ಯರಲ್ಲಿ ತೋರುವ ಪ್ರೀತಿ, ಕರುಣೆ, ಕಾಳಜಿಗಳನ್ನು 'ವಸುಧೈವ ಕುಟುಂಬಕಂ' ತತ್ವದಡಿ ಇನ್ನಿತರರಿಗೂ ಜೀವಕೋಟಿಗೂ ಹಂಚಬೇಕು, ಅವಷ್ಟನ್ನೇ ತಾನಲ್ಲಿ ಸಂಪಾದಿಸಿಕೊಳ್ಳಬೇಕು. ಮನುಷ್ಯ ಜನ್ಮಕ್ಕೆ ಅದು ಸಾಧ್ಯ ಮತ್ತು ಅತ್ಯಂತ ಹೆಚ್ಚು ಮಿದುಳಿನ ಬೆಳವಣಿಗೆ ಕಂಡಿರುವ ಜೀವಿಯೊಂದು ಬದುಕಬೇಕಾದ ರೀತಿಯೂ ಅದೇ. ಸ್ವಧರ್ಮದ ಮತ್ತನ್ನೇರಿಸಿಕೊಂಡು ದ್ವೇಷ ಕಾರುವುದಕ್ಕಿಂತ ಪರಧರ್ಮ ಸಹಿಷ್ಣುತೆಯಲ್ಲಿ ನರಜನ್ಮ ಮಾಗಬೇಕು. ಆಗಮಾತ್ರವೇ ನೆಲದ ಕಣಕಣವೂ ಕರುಣಾಮಯ, ಸಹ್ಯ, ಸುಂದರ. 'ಆನಂದಮಯ ಈ ಜಗ ಹೃದಯ'.

ಬುದ್ಧಿ ಬೆಳೆದಂತೆಲ್ಲಾ ತನ್ನ ಭಾವಪರಿಧಿಯ ವಿಸ್ತಾರದಲ್ಲಿ ಹೆಚ್ಚೆಚ್ಚು ಸಂವೇದನಾಶೀಲನಾಗಬೇಕಿದ್ದ ಮನುಷ್ಯಕುಲ ಈ ಪರಿ ಮೃಗೀಯವಾಗುತ್ತಿರಲು ಕಾರಣವೇನು? ಅರಿವು, ಪ್ರಜ್ಞೆಗಳನ್ನು ಬಿತ್ತಬೇಕಿದ್ದ ಶಿಕ್ಷಣಕ್ರಮವು ದಾರುಣವಾಗಿ ಸೋತುಹೋಯಿತೇ? ಇದು ದಯೆ, ದಾಕ್ಷಿಣ್ಯ, ಪ್ರೀತಿ, ಪ್ರಾಮಾಣಿಕತೆ, ಸಂಯಮ, ಸಹಬಾಳ್ವೆಯನ್ನು ಬಿತ್ತಬೇಕಿದ್ದ ಜಾಗೃತ ಸಮಾಜವಿಂದು ತನ್ನ ಹೊಣೆಗಾರಿಕೆ ಮರೆತ ಕುರುಹೇ? ಅನುಮಾನ ಕಾಡುತ್ತದೆ.

ಇತ್ತೀಚೆಗೆ ಸಭೆಯೊಂದರಲ್ಲಿ ಸ್ವಾಮೀಜಿಯೊಬ್ಬರು ಪೋಷಕವರ್ಗಕ್ಕೆ ಹೇಳಿದ ಕಿವಿಮಾತೇನೆಂದರೆ, 'ನಮ್ಮ ಮಕ್ಕಳೆದುರು ಮಾದರಿಯಾಗಿ ತೋರಬೇಕಾದ್ದು ಸುಶಿಕ್ಷಿತರು ಮತ್ತು ಸುಸಂಸ್ಕೃತರನ್ನು ಮಾತ್ರ. ನಾವೆಲ್ಲಾ ಅಂಥವರನ್ನು ಒಪ್ಪುತ್ತಾ ಮೆಚ್ಚುತ್ತಾ ಹೋದಂತೆ ತಾವೂ ಅವರಂತಾಗಬೇಕು ಅನ್ನುವುದು ಮಕ್ಕಳ ಮನದ ಆಶಯ, ಆದರ್ಶ ಮತ್ತು ಕನಸಾಗುತ್ತದೆ. ಮಾಧ್ಯಮಗಳು ಮತ್ತು ಮನೆಯ ಹಿರಿಯರೆಲ್ಲಾ ರಾಜಕಾರಣಿಗಳು, ಸಿನಿಮಾ ನಟನಟಿಯರನ್ನು ಸಾಧಕರೆಂದು ಹೊಗಳುತ್ತಿರುವ ಕಾರಣಕ್ಕೇ ಇವತ್ತಿನ ಮಕ್ಕಳು ಆತಂಕಕಾರಿ ಸ್ಥಿತಿಯನ್ನು ತಲುಪುತ್ತಿರುವುದು ಕೂಡ ಸಹಜವೆನಿಸುತ್ತದೆ. ರಾಜಕಾರಣಿಗಳನ್ನು ಆದರ್ಶವೆಂದು ಬಗೆವೆಡೆ ಮಕ್ಕಳು ಕುತಂತ್ರ ಬುದ್ಧಿ, ಕಪಟತನ ಮತ್ತು ಆತ್ಮವಂಚನೆಗಳನ್ನಷ್ಟೇ ಆರಾಧಿಸುವಂತಾಗುತ್ತಾರೆ. ಇನ್ನು ಕ್ರಿಕೆಟಿಗರು ಆದರ್ಶವಾದ ಕಡೆ ಮಕ್ಕಳು ಶೋಕಿ ಮನಃಸ್ಥಿತಿಯ ಗುಲಾಮರಾಗುವುದಿದೆ. ಎಲ್ಲದಕ್ಕಿಂತ ಸಿನಿಮಾದವರನ್ನು ಅಭಿಮಾನಿಗಳಾಗಿ ಅನುಸರಿಸಿದರಂತೂ ಮುಗಿಯಿತು ಮೂರುಹೊತ್ತೂ ಮೇಕಪ್ಪು, ಗಳಿಗೆಗೊಮ್ಮೆ ತಲೆಬಾಚಿಕೊಳ್ಳುವ ಮರುಳು. ಅಸಹಜ ಭಾಷೆ, ವೇಷ, ನಡೆ-ನಿಲುವು'!

ನಿಜ, ಮಾನವೀಯ ಕಳಕಳಿಯುಳ್ಳ ವಿಜ್ಞಾನಿಗಳು, ವಿದ್ಯಾವಂತರು, ಛಲವುಳ್ಳ ಕ್ರೀಡಾಳುಗಳು, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕ್ಷೇತ್ರದ ಕಟ್ಟಾಳುಗಳು, ಜೀವಪರ ತುಡಿತದ ಸಂತರು, ದಾರ್ಶನಿಕರು, ಹೋರಾಟಗಾರರೆಲ್ಲಾ ಮಕ್ಕಳು-ಯುವ ಸಮೂಹದೆದುರು ಆದರ್ಶವಾಗಿ ನೆಲೆಯಾಗಬೇಕು. ಆಗಮಾತ್ರವೇ ಮುಂದಿನ ತಲೆಮಾರು ಶಾಂತಿ, ನೆಮ್ಮದಿಯನ್ನೂ ಮಾನವೀಯತೆಯ ಪಸೆಯನ್ನೂ ಉಳಿಸಿಕೊಂಡೀತು.

ವಾಚಕರ ವಾಣಿ

ಸುತ್ತೋಲೆ ತಕ್ಷಣ ವಾಪಸ್ ಪಡೆಯಬೇಕು

ಸರ್ಕಾರಿ ಶಾಲೆಗಳ ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ಪೋಷಕರಿಂದ ತಿಂಗಳಿಗೆ ₹ 100 ದೇಣಿಗೆ ಸಂಗ್ರಹಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತರು ಸುತ್ತೋಲೆ ಹೊರಡಿಸಿರುವ ಸುದ್ದಿ (ಪ್ರ.ವಾ., ಅ. 21) ಓದಿ ಗಾಬರಿಯಾಯಿತು. ಸರ್ಕಾರಿ ಶಾಲೆಗಳ ನಿರ್ವಹಣೆಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಸರ್ಕಾರವು ಈ ಹಿಂದೆ ಅನುದಾನ ನೀಡುತ್ತಿತ್ತು. ಸರ್ಕಾರಿ ಶಾಲೆಗಳ ನಿರ್ವಹಣೆಗೆ ಹೆಚ್ಚಿನ ಅನುದಾನವನ್ನು ನೀಡಿ, ಅವುಗಳನ್ನು ಸಬಲೀಕರಣಗೊಳಿಸುವ ಬದಲು ಪೋಷಕರಿಂದ ದೇಣಿಗೆ ಸಂಗ್ರಹಿಸಲು ಹೊರಟಿರುವ ನಿರ್ಧಾರ ಖಂಡನೀಯ. ಬಡ ಕುಟುಂಬಗಳ ಮಕ್ಕಳೇ ಸರ್ಕಾರಿ ಶಾಲೆಗಳಿಗೆ ಹೆಚ್ಚಾಗಿ ಬರುವುದು. ಅವರನ್ನು ಶಾಲೆಗೆ ಕಳಿಸುವುದೇ ಪೋಷಕರಿಗೆ ದುಸ್ತರವಾಗಿರುವಾಗ ಅವರಿಂದ ದೇಣಿಗೆ ಸಂಗ್ರಹ ಮಾಡುವುದು ಜನವಿರೋಧಿ ನೀತಿಯಾಗುತ್ತದೆ.

ಸರ್ಕಾರವು ಮಠಮಾನ್ಯಗಳಿಗೆ ನೂರಾರು ಕೋಟಿ ಹಣವನ್ನು ನೀಡುತ್ತಿದೆ, ಪ್ರತಿಮೆಗಳ ನಿರ್ಮಾಣಕ್ಕೆ ಕೋಟಿಗಟ್ಟಲೆ ಹಣ ವ್ಯಯಿಸುತ್ತಿದೆ, ಅದ್ದೂರಿ ದಸರಾ ಸೇರಿದಂತೆ ಅನೇಕ ಉತ್ಸವಗಳಿಗೆ ಹಣ ವ್ಯಯಿಸುತ್ತಿದೆ. ಆದರೆ ಗ್ರಾಮಗಳ ಜ್ಞಾನದೇಗುಲಗಳಂತಿರುವ ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಿ, ಅವುಗಳ ಬೆಳವಣಿಗೆಗೆ ಕಾರಣವಾಗುವ ಬದಲು ಪೋಷಕರ ಜೇಬಿಗೇ ಕತ್ತರಿ ಹಾಕಲು ಹೊರಟಿರುವುದು ಒಪ್ಪಲು ಸಾಧ್ಯವಿಲ್ಲ. ಈ ನಿರ್ಧಾರವು ಸರ್ಕಾರಿ ಶಾಲೆಗಳನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ. ಈ ಸುತ್ತೋಲೆಯನ್ನು ಸರ್ಕಾರ ತಕ್ಷಣ ಹಿಂದಕ್ಕೆ ಪಡೆಯಬೇಕು. ಶಾಲೆಗಳಿಗೆ ನಿರ್ವಹಣಾ ಅನುದಾನವನ್ನು ಬಿಡುಗಡೆ ಮಾಡಬೇಕು.

ಈ. ಬಸವರಾಜು, ಡಾ. ಟಿ.ಗೋವಿಂದರಾಜು, ಅಲ್ಲಮಪ್ರಭು ಬೆಟ್ಟದೂರು, ಎಲ್.ಎನ್.ಮುಕುಂದರಾಜ್, ಇಸ್ಮಾಯಿಲ್ ಯಲಿಗಾರ, ಡಾ. ಆರ್.ಎನ್.ರಾಜಾನಾಯಕ್, ಎಂ.ಸಿ.ಡೋಂಗ್ರೆ, ಪ್ರಭಾ ಬೆಳವಂಗಲ, ಶಿವಶಂಕರ್ ಕೆ.ಎನ್.

ಚಿನ್ನ...ಅನ್ನ...!

ಮಾರಾಟದಲ್ಲಿ ಶೇ 30ರಷ್ಟು
ಹೆಚ್ಚಳವಾಗಿದೆಯಂತೆ
ಚಿನ್ನಾಭರಣ!
ಅದೇನು ಗೆದ್ದಿದೆಯೋ
ಕದ್ದಿದೆಯೋ
ಗ್ರಾಹಕರ ಮನಸನ್ನ!
ನಿನ್ನೆ ತಾನೇ ಓದಿದೆಯಣ್ಣ...
ಭಾರತಕ್ಕೆ ಹಸಿವಿನ
ಸೂಚ್ಯಂಕದಲ್ಲಿ
107ನೇ ಸ್ಥಾನ,
ಚಿನ್ನವೇನೋ ಸರಿ
ಆದರೆ...
ಅನ್ನ, ಹಸಿವಿನ
ಕಥೆ ಮಾತ್ರ ಹೀಗ್ಯಾಕಣ್ಣ?!

ಮ.ಗು.ಬಸವಣ್ಣ
ಸುತ್ತೂರು

ಹೊಸ ಸೇರ್ಪಡೆ!

ಕರ್ನಾಟಕದಲ್ಲಿ ಜೈಲಿನಿಂದಲೇ ಭೂಗತಲೋಕದ ಚಟುವಟಿಕೆಗಳನ್ನು ನಡೆಸಿದಂತಹ ಪಾತಕಿಗಳ ಉದಾಹರಣೆಗಳುಂಟು. ಅದೇ ರೀತಿ ಜೈಲಿನಿಂದಲೇ ಚುನಾವಣೆಗೆ ಸ್ಪರ್ಧಿಸಿ ಜಯ ಗಳಿಸಿದ ರಾಜಕಾರಣಿಗಳುಂಟು. ಸಾಮಾನ್ಯ ಕೈದಿಗಳು ಜೈಲಿನಿಂದಲೇ ಅಧ್ಯಯನ ಮಾಡಿ ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆದ ಉದಾಹರಣೆಗಳು ಉಂಟು. ಈಗ, ಸ್ವಾಮೀಜಿಯೊಬ್ಬರು ಜೈಲಿನಿಂದಲೇ ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ, ಮಠ ನಡೆಸುತ್ತಿರುವುದು ಹೊಸ ಸೇರ್ಪಡೆ!

ಜೆ.ಬಿ.ಮಂಜುನಾಥ, ಪಾಂಡವಪುರ

ಪಟಾಕಿ ಅಪಾಯ ಗಣನೆಗೆ ಬರಲಿ

ದೀಪಾವಳಿ ಮತ್ತೆ ಮನೆ ಬಾಗಿಲಿಗೆ ಬಂದಿದೆ. ಬಹುಪಾಲು ಮಂದಿ ಪಟಾಕಿ ಸಿಡಿಸುತ್ತಾರೆ. ಪಟಾಕಿಗಳನ್ನು ಸುಡುವುದರಿಂದ ಆಗುವ ಮಾಲಿನ್ಯ, ಹಾನಿಕಾರಕ ವಿಷ ಪದಾರ್ಥಗಳ ಬಿಡುಗಡೆಯಿಂದ ವಾತಾವರಣಕ್ಕೆ, ಓಜೋನ್ ಪದರಕ್ಕೆ ಆಗುವ ಹಾನಿಯ ಬಗ್ಗೆ ತಿಳಿದಿರುವವರು ಇವರಲ್ಲಿ ಎಷ್ಟು ಮಂದಿ ಇದ್ದಾರೆ? ಪಟಾಕಿಗಳನ್ನು ತಯಾರಿಸುವಾಗ ಮತ್ತು ಸುಡುವಾಗ ಸಂಭವಿಸುವ ಅವಘಡಗಳನ್ನು ಗಣನೆಗೆ ತೆಗೆದುಕೊಳ್ಳುವವರು ಯಾರು?

ಅವಘಡ ಸಂಭವಿಸಿದರೆ, ಅದರಿಂದಾಗಿ ಆಸ್ಪತ್ರೆಗೆ ಅಲೆದಾಡುವಂಥ ಕಷ್ಟ ಗೊತ್ತೇ ಇದೆ. ಮನೆಗಳಲ್ಲಿ ವೃದ್ಧರು, ರೋಗಿಗಳು ಇರುತ್ತಾರೆ. ಅವರಿಗೆ ಪಟಾಕಿ ಶಬ್ದ ಅಸಹನೀಯ ಆಗಬಹುದು, ಪ್ರಾಣಿಗಳಿಗೂ ಕಿರಿಕಿರಿ. ಇಂತಹ ಪಟಾಕಿ ಸುಡುವುದನ್ನು ಮೊದಲು ತ್ಯಜಿಸೋಣ. ಮನೆಯ ಸುತ್ತಲೂ ದೀಪಗಳನ್ನು ಹಚ್ಚಿ ದೀಪಾವಳಿಯನ್ನು ಆನಂದದಿಂದ ಆಸ್ವಾದಿಸೋಣ. ಪಟಾಕಿಗಳಿಗೆ ಖರ್ಚು ಮಾಡುವ ಹಣವನ್ನು ದಾನ ಧರ್ಮಕ್ಕೆ ವಿನಿಯೋಗಿಸಬಹುದು. ಮಕ್ಕಳಿಗೆ ಉಪಯುಕ್ತವಾದ ವಸ್ತುಗಳನ್ನು ಕೊಡಿಸಲು ಬಳಸಬಹುದು. ಇವೆಲ್ಲಕ್ಕಿಂತ ಮುಖ್ಯವಾಗಿ ಪರಿಸರ ಸಂರಕ್ಷಿಸೋಣ.

ಕೃಷ್ಣಚೈತನ್ಯ ಡಿ., ಗೋಣಿಕೊಪ್ಪಲು

ಉಚಿತ ಶಿಕ್ಷಣ: ಸರ್ಕಾರದ ಹೊಣೆಗಾರಿಕೆ ಏನು?

ಸರ್ಕಾರಿ ಶಾಲೆಯ ಮಕ್ಕಳ ಪೋಷಕರ ಹೆಗಲಿಗೆ ಶಾಲೆಯ ನಿರ್ವಹಣೆಯ ಖರ್ಚುವೆಚ್ಚಗಳ ಹೊಣೆ ವಹಿಸಲು ಸರ್ಕಾರ ಮುಂದಾಗಿರುವುದನ್ನು ತಿಳಿದು ಬೇಸರವಾಯಿತು. ಇಂತಹ ಅಸೂಕ್ಷ್ಮ ನಿರ್ಧಾರಗಳು ಪದೇ ಪದೇ ಆಗುತ್ತಿರುವುದನ್ನು ನೋಡಿದರೆ, ಸರ್ಕಾರಿ ಶಾಲೆಗಳನ್ನು ಮುಚ್ಚಲೇಬೇಕೆಂದು ಅಧಿಕಾರಿ ವರ್ಗ ಮತ್ತು ರಾಜಕಾರಣಿಗಳು ಶಪಥ ಮಾಡಿದಂತಿದೆ ಎಂದು ಅನ್ನಿಸುತ್ತದೆ. ಮಗು ಒಂದು ನೋಟ್‌ಪುಸ್ತಕ ಕೇಳಿದರೆ ಶಾಲೆಗೆ ಬಂದು ಶಿಕ್ಷಕರ ಜೊತೆ ಜಗಳ ಮಾಡುವ ಪೋಷಕರಿರುವಾಗ, ಅಂಥವರು ತಿಂಗಳಿಗೆ 100 ರೂಪಾಯಿ ಕೊಟ್ಟು ಮಕ್ಕಳನ್ನು ಶಾಲೆಗೆ ಕಳಿಸುವರೇ?

ಪೋಷಕರು ಹಣ ಕೊಟ್ಟು ಮಗುವನ್ನು ಸರ್ಕಾರಿ ಶಾಲೆಗೆ ಕಳಿಸುವುದಾದರೆ ಸಂವಿಧಾನದ ಆಶಯವಾದ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವಲ್ಲಿ ಸರ್ಕಾರದ ಹೊಣೆಗಾರಿಕೆ ಏನು? ನಗರಗಳ ಕೊಳೆಗೇರಿಗಳು ಮತ್ತು ಗ್ರಾಮೀಣ ಬಡವರ ಮಕ್ಕಳು ಉಚಿತ ಶಿಕ್ಷಣದಿಂದ ದೂರ ಉಳಿಯಬೇಕೆ?

ಹಡವನಹಳ್ಳಿ ವೀರಣ್ಣಗೌಡ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮಿತ್ ಶಾ ನೇತೃತ್ವದ ಸಂಸತ್ ಸಮಿತಿಯು ಹಿಂದಿ ಕುರಿತಂತೆ ಮಾಡಿರುವ ಶಿಫಾರಸು ಹಿಂದಿ ಹೇರಿಕೆಯ ಹುನ್ನಾರವೇ?

ಹಿಂದಿಗೆ ಮಾತ್ರ ಏಕೆ ಹೆಚ್ಚುಗಾರಿಕೆ?

ಹಿಂದಿಯೇತರ ರಾಜ್ಯದಲ್ಲಿ ಆಯಾ ರಾಜ್ಯದ ಭಾಷೆಯ ಬಳಕೆ ಹೆಚ್ಚಿಸದೇ ಇಂಗ್ಲಿಷ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಾದರೂ ಹೇಗೆ? ಹಿಂದಿ ಭಾಷಿಕರಲ್ಲದ ಜನರಿಗೆ ತಮ್ಮ ಭಾಷೆಯಲ್ಲೇ ಉದ್ಯೋಗ ಪರೀಕ್ಷೆ ಬರೆಯಲು ಅವಕಾಶ ನೀಡದೇ ಇಂಗ್ಲಿಷ್ ಮೇಲಿರುವ ಅವಲಂಬನೆಯನ್ನು ಹೇಗೆ ಕಡಿಮೆ ಮಾಡಲು ಸಾಧ್ಯ? ಸಂವಿಧಾನದ 348ನೇ ವಿಧಿಯ ಪ್ರಕಾರ, ಆಯಾ ರಾಜ್ಯದ ಭಾಷೆಯನ್ನು ಹೈಕೋರ್ಟ್‌ನಲ್ಲಿ ಬಳಸಲು ಅವಕಾಶ ನೀಡಬಹುದು ಎನ್ನುವ ಅಂಶವಿದ್ದರೂ ಹಿಂದಿಯೇತರ ಭಾಷೆಗಳಿಗೆ ಅವಕಾಶ ನೀಡದ ಸರಕಾರದ ನಡೆ ಎಷ್ಟು ಸರಿ?

ಪ್ರಜಾವಾಣಿ ಚರ್ಚೆ

• ಅರುಣ್ ಜಾವಗಲ್

ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ ನೇತೃತ್ವದ ರಾಜ್ಯಭಾಷೆಯ ಬಗೆಗಿನ ಸಂಸತ್ ಸಮಿತಿಯು ತನ್ನ ಶಿಫಾರಸುಗಳನ್ನು ರಾಷ್ಟ್ರಪತಿಯವರಿಗೆ ಇತ್ತೀಚೆಗೆ ಸಲ್ಲಿಸಿದೆ. ಈ ಶಿಫಾರಸಿನಲ್ಲಿ ಹಿಂದಿ ಭಾಷಿಕ ರಾಜ್ಯಗಳಲ್ಲಿರುವ ಐಐಟಿಯಂತಹ ತಾಂತ್ರಿಕ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿಯಲ್ಲಿ ಬೋಧನೆ ಮಾಡಲು ಮತ್ತು ಹಿಂದಿಯೇತರ ರಾಜ್ಯಗಳಲ್ಲಿ ಸ್ಥಳೀಯ ಭಾಷೆಯಲ್ಲಿ ಬೋಧನೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೇಳಲಾಗಿದೆ. ವಿಶ್ವಸಂಸ್ಥೆಯ ಆಡಳಿತ ಭಾಷೆಗಳಲ್ಲಿ ಹಿಂದಿಯನ್ನೂ ಒಳಪಡಿಸಬೇಕು, ಭಾರತ ಸರ್ಕಾರದ ಉದ್ಯೋಗ ಪರೀಕ್ಷೆಗಳಲ್ಲಿ ಇಂಗ್ಲಿಷ್ ಕಡ್ಡಾಯ ವಿಷಯವನ್ನು ತೆಗೆಯಬೇಕು, ಅಧಿಕಾರಿಗಳು ಹಿಂದಿ ಭಾಷಿಕ ರಾಜ್ಯಗಳಿಗೆ ವರ್ಗಾವಣೆಯಾಗಿ ಹೋಗಲು ಉದ್ದೇಶಪೂರ್ವಕವಾಗಿ ಹಿಂಜರಿಕೆ ತೋರಿದರೆ ಅಂಥವರಿಗೆ ಎಚ್ಚರಿಕೆ ಕೊಡುವ ಜೊತೆಗೆ, ಅವರ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿ ದಾಖಲಿಸಬೇಕು, ಸಂವಿಧಾನದ 348ನೇ ವಿಧಿ ಪ್ರಕಾರ, ಹಿಂದಿ ಭಾಷಿಕ ರಾಜ್ಯಗಳ ಹೈಕೋರ್ಟ್‌ಗಳ ಆದೇಶಗಳನ್ನು ಹಿಂದಿಗೆ ಭಾಷಾಂತರಿಸಬೇಕು ಎಂಬುದು ಸೇರಿದಂತೆ 100ಕ್ಕೂ ಹೆಚ್ಚಿನ ಶಿಫಾರಸುಗಳು ಇವೆ ಎನ್ನುವುದು ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಶಿಫಾರಸುಗಳಿಗೆ ಭಾರತದ ವಿವಿಧ ಕಡೆಗಳಿಂದ ವಿರೋಧವೂ ವ್ಯಕ್ತವಾಗಿದೆ.

ಹಿಂದಿ ಬಳಕೆ ಹೆಚ್ಚಿಸಬೇಕು ಎನ್ನುವ ಶಿಫಾರಸನ್ನು ವಿರೋಧಿಸುವವರು ಅರ್ಥಮಾಡಿಕೊಳ್ಳಬೇಕಾದ ಅನೇಕ ಅಂಶಗಳಿವೆ. ಮೊದಲನೆಯದಾಗಿ, ಈ ರೀತಿಯ ಶಿಫಾರಸುಗಳನ್ನು ನೀಡುತ್ತಿರುವುದು ಇದೇ ಮೊದಲೇನೂ ಅಲ್ಲ. 1950ರಿಂದ ಇಲ್ಲಿಯವರೆಗೆ ರಾಷ್ಟ್ರಪತಿಯವರಿಗೆ ಹತ್ತು ಬಾರಿ ಹಿಂದಿ ಭಾಷೆಯ ಬಳಕೆ ಹೆಚ್ಚಿಸಲು ಶಿಫಾರಸುಗಳನ್ನು ನೀಡಲಾಗಿದೆ. ಮುಖ್ಯವಾದ ವಿಚಾರವೆಂದರೆ, ಸಂವಿಧಾನದ 344ನೇ ವಿಧಿ ಪ್ರಕಾರವೇ ಈ ಶಿಫಾರಸುಗಳನ್ನು ಸಲ್ಲಿಸಲಾಗಿದೆ.

ಸಂವಿಧಾನದ 344ನೇ ವಿಧಿ ಪ್ರಕಾರ ರಾಜಭಾಷಾ ಸಮಿತಿಯನ್ನು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ರಚನೆ ಮಾಡಲಾಗುತ್ತದೆ. ಲೋಕಸಭೆಯ 20 ಸದಸ್ಯರು ಮತ್ತು ರಾಜ್ಯಸಭೆಯ 10 ಸದಸ್ಯರನ್ನು ಈ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಸಂವಿಧಾನದ 8ನೇ ಪರಿಚ್ಛೇದದ ಎಲ್ಲ ಭಾಷೆಗಳನ್ನು ಪ್ರತಿನಿಧಿಸುವ ಸದಸ್ಯರು ಈ ಸಮಿತಿಯಲ್ಲಿ ಇರುವಂತೆ ನೋಡಿಕೊಳ್ಳಲಾಗುತ್ತದೆ.

ಈ ಮೂಲಕ, ಹಿಂದಿಗೆ ಹೆಚ್ಚುಗಾರಿಕೆ ಕೊಡಬೇಕು ಎನ್ನುವ ಶಿಫಾರಸುಗಳಿಗೆ ಈ ಎಲ್ಲಾ ಭಾಷೆಯನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳ ಒಪ್ಪಿಗೆ ಇರುವಂತೆ ಮಾಡಲಾಗುತ್ತದೆ.

ಆಯೋಗವು ಯಾವೆಲ್ಲ ಅಂಶಗಳ ಮೇಲೆ ಶಿಫಾರಸು ನೀಡಬೇಕು ಎನ್ನುವುದನ್ನೂ ಸಂವಿಧಾನದಲ್ಲಿ ಹೇಳಲಾಗಿದೆ. ಭಾರತದ ಒಕ್ಕೂಟದ ಆಡಳಿತದಲ್ಲಿ ಹಿಂದಿ ಬಳಕೆಯನ್ನು ಹೆಚ್ಚಿಸಿ, ಇಂಗ್ಲಿಷ್ ಬಳಕೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ಈ ಸಮಿತಿಯು ಪ್ರತಿ ಐದು ವರ್ಷಕ್ಕೆ ಒಮ್ಮೆ ರಾಷ್ಟ್ರಪತಿಯವರಿಗೆ ಶಿಫಾರಸುಗಳನ್ನು ಸಲ್ಲಿಸುತ್ತದೆ. ರಾಷ್ಟ್ರಪತಿಯವರು ಒಪ್ಪಿಗೆ ನೀಡಿದರೆ, ಈ ಶಿಫಾರಸುಗಳ ಕೆಲವು ಅಂಶಗಳನ್ನು ಅಥವಾ ಎಲ್ಲಾ ಅಂಶಗಳನ್ನು ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಭಾರತವು ಭಾಷಾ ವೈವಿಧ್ಯದಿಂದ ಕೂಡಿದ ಒಕ್ಕೂಟ. ದೇಶದ ಆಡಳಿತದಲ್ಲಿ ವಿವಿಧ ಭಾಷೆಗಳನ್ನು ಹೆಚ್ಚು ಹೆಚ್ಚು ಬಳಸುವುದರಿಂದ ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಬಹುದು ಮತ್ತು ಕಾನೂನು ರಚನೆಯಲ್ಲಿ ಜನರ ಒಳಗೊಳ್ಳುವಿಕೆಯನ್ನು ಹೆಚ್ಚಿಸಬಹುದು. ಆದರೆ, ಭಾರತ ಸರ್ಕಾರವು 70 ವರ್ಷಗಳಿಂದ ಆಡಳಿತದಲ್ಲಿ ಹಿಂದಿ ಭಾಷೆಗೆ ಮಾತ್ರ ಹೆಚ್ಚುಗಾರಿಕೆ ನೀಡುವ ಮೂಲಕ ಹಿಂದಿಯೇತರ ಜನರನ್ನು ಆಡಳಿತದಿಂದ ಮತ್ತು ಕಾನೂನಿನ ರಚನೆಯಿಂದ ದೂರ ಉಳಿಯುವಂತೆ ಮಾಡಿದೆ. ರಾಜಭಾಷಾ ಸಮಿತಿಯ ಶಿಫಾರಸುಗಳು ಭಾರತ ಸರ್ಕಾರದ ಈ ನಡೆಗೆ ಪುಷ್ಟಿ ನೀಡುತ್ತಾ ಬಂದಿವೆ. ಇಂಗ್ಲಿಷ್ ಭಾಷೆಯ ಬಳಕೆ ಕಡಿಮೆ ಮಾಡಲು ಹಿಂದಿ ಭಾಷೆಯ ಬಳಕೆಯನ್ನು ಮಾತ್ರ ಹೆಚ್ಚಿಸುವುದರಿಂದ ಹಿಂದಿ ಭಾಷಿಕರಲ್ಲದ ಕೋಟ್ಯಂತರ ಮಂದಿಗೆ ಯಾವ ಉಪಯೋಗವೂ ಇಲ್ಲ. ಕೆಲವೆಡೆ ಹಿಂದಿಯೇತರ ನಾಗರಿಕರಿಗೆ ಅಪಾಯವನ್ನೂ ತಂದೊಡ್ಡಿದೆ.

ಭಾರತೀಯರೆಲ್ಲರನ್ನೂ ಪ್ರತಿನಿಧಿಸುವ ಮತ್ತು ಎಲ್ಲಾ ಭಾಷೆಗಳಿಗೂ ಮನ್ನಣೆ ನೀಡಲಾಗುವುದು ಎಂದು ಬಾಯಿ ಮಾತಿನಲ್ಲಿ ಮಾತ್ರ ಹೇಳುವ ಭಾರತ ಸರ್ಕಾರಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಬೇಕಿದೆ. ಆ ಪ್ರಶ್ನೆಗಳಲ್ಲಿ ಪ್ರಮುಖವಾದವು ಹೀಗಿವೆ: ಶಿಕ್ಷಣದಲ್ಲಿ ಭಾರತೀಯ ಭಾಷೆಯನ್ನು ಬಳಕೆ ಮಾಡುವುದು ಸ್ವಾಗತಾರ್ಹ ಕ್ರಮವಾಗಿದೆ. ಆದರೆ, ರಾಷ್ಟ್ರ ಮಟ್ಟದಲ್ಲಿ ಪರೀಕ್ಷೆ ನಡೆಸಿ, ಐಐಟಿಯಂತಹ ಸಂಸ್ಥೆಗಳ ಸೀಟ್‌ಗಳ ಹಂಚಿಕೆ ಮಾಡಲಾಗುತ್ತದೆ. ಹೀಗಾಗಿ ಐಐಟಿಯಂತಹ ಸಂಸ್ಥೆಗಳಲ್ಲಿ ಎಲ್ಲ ರಾಜ್ಯಗಳಿಗೆ ಸೇರಿದ ಮತ್ತು ವಿವಿಧ ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳಿರುತ್ತಾರೆ. ಹೀಗಿರುವಾಗ ಹಿಂದಿ ಭಾಷಿಕ ರಾಜ್ಯಗಳಲ್ಲಿ ಹಿಂದಿಯಲ್ಲಿ ಮತ್ತು ಹಿಂದಿಯೇತರ ಭಾಷಿಕ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಯಲ್ಲಿ ಬೋಧನೆ ನಡೆಸುವುದು ಹೇಗೆ ಸಾಧ್ಯ? ಶಿಕ್ಷಣದಲ್ಲಿ ಸ್ಥಳೀಯ ಭಾಷೆಗೆ ಹೆಚ್ಚುಗಾರಿಕೆ ಸಿಗಬೇಕೆಂದರೆ ಶಿಕ್ಷಣದ ಮೇಲಿನ ಹಿಡಿತ ರಾಜ್ಯ ಸರ್ಕಾರದ ಬಳಿ ಇರಬೇಕು. ರಾಜ್ಯ ಮಟ್ಟದಲ್ಲಿ ಪರೀಕ್ಷೆ ನಡೆದು ಸೀಟ್ ಹಂಚಿಕೆಯಾದಾಗ ಮಾತ್ರ ಸ್ಥಳೀಯ ಭಾಷೆಗೆ ಮಹತ್ವ ದೊರೆಯುತ್ತದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರಗಳಿಗೆ ಶಿಕ್ಷಣದ ಮೇಲಿನ ಹಿಡಿತವನ್ನು ಬಿಟ್ಟುಕೊಡಲು ಭಾರತ ಸರ್ಕಾರ ತಯಾರಿದೆಯೇ? ಅಥವಾ ಹಿಂದಿಗೆ ಹೆಚ್ಚುಗಾರಿಕೆ ನೀಡಿದಾಗ ವ್ಯಕ್ತವಾಗುವ ವಿರೋಧವನ್ನು ಕಡಿಮೆ ಮಾಡಲು ಆಯಾ ರಾಜ್ಯದ ಭಾಷೆಯಲ್ಲಿ ಬೋಧನೆ ಮಾಡಬೇಕು ಎನ್ನಲಾಗಿದೆಯೇ?

ಹಿಂದಿ ಭಾಷಿಕ ರಾಜ್ಯದ ಆಡಳಿತದಲ್ಲಿ ಇಂಗ್ಲಿಷ್‌ನ ಬಳಕೆಯನ್ನು ಕಡಿಮೆ ಮಾಡುವುದಕ್ಕೆ ಹಿಂದಿ ಭಾಷೆಯ ಬಳಕೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ, ಹಿಂದಿಯೇತರ ರಾಜ್ಯಗಳಲ್ಲೂ ಆಯಾ ಭಾಷೆಗಳ ಬಳಕೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆಯೇ? ಸಂವಿಧಾನದ 343ನೇ ವಿಧಿಯಲ್ಲಿ ಹಿಂದಿಯೊಂದೇ ಆಡಳಿತ ಭಾಷೆ ಎಂದು ಇರುವಾಗ, ಹಿಂದಿಯೇತರ ರಾಜ್ಯಗಳಲ್ಲಿ ಆಯಾ ರಾಜ್ಯ ಭಾಷೆಯನ್ನು ಬಳಕೆ ಮಾಡಲು ಹೇಗೆ ಕ್ರಮ ಕೈಗೊಳ್ಳಲಾಗುತ್ತದೆ? ಹಿಂದಿಯೇತರ ರಾಜ್ಯದಲ್ಲಿ ಆಯಾ ರಾಜ್ಯದ ಭಾಷೆಯ ಬಳಕೆ ಹೆಚ್ಚಿಸದೇ ಇಂಗ್ಲಿಷ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಾದರೂ ಹೇಗೆ? ಹಿಂದಿ ಭಾಷಿಕರಲ್ಲದ ಜನರಿಗೆ ತಮ್ಮ ಭಾಷೆಯಲ್ಲೇ ಉದ್ಯೋಗ ನೇಮಕಾತಿ ಪರೀಕ್ಷೆ ಬರೆಯಲು ಅವಕಾಶ ನೀಡದೇ ಇಂಗ್ಲಿಷ್ ಮೇಲಿರುವ ಅವಲಂಬನೆಯನ್ನು ಹೇಗೆ ಕಡಿಮೆ ಮಾಡಲು ಸಾಧ್ಯ? ಸಂವಿಧಾನದ 348ನೇ ವಿಧಿಯ ಪ್ರಕಾರ, ಆಯಾ ರಾಜ್ಯದ ಭಾಷೆಯನ್ನು ಹೈಕೋರ್ಟ್‌ನಲ್ಲಿ ಬಳಸಲು ಅವಕಾಶ ನೀಡಬಹುದು ಎನ್ನುವ ಅಂಶವಿದ್ದರೂ ಹಿಂದಿಯೇತರ ಭಾಷೆಗಳಿಗೆ ಅವಕಾಶ ನೀಡದ ಸರಕಾರದ ನಡೆ ಎಷ್ಟು ಸರಿ?

ಹಿಂದಿಗೆ ಮಾತ್ರ ಹೆಚ್ಚುಗಾರಿಕೆ ನೀಡುವುದು ಭಾರತ ಒಕ್ಕೂಟ ವೈವಿಧ್ಯಕ್ಕೆ ಧಕ್ಕೆ ಮಾಡುತ್ತದೆ. ಭಾರತ ಒಕ್ಕೂಟದಲ್ಲಿ ಆಡಳಿತ, ಉದ್ಯೋಗ, ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಬಳಕೆ ಹೆಚ್ಚಿಸುವುದು ಇಂದಿನ ಅಗತ್ಯಗಳಲ್ಲಿ ಪ್ರಮುಖವಾಗಿದೆ. ಭಾರತೀಯ ಭಾಷೆಗಳ ಬಳಕೆ ಹೆಚ್ಚಾಗಲು ಸಂವಿಧಾನದ 343ನೇ ವಿಧಿಗೆ ತಿದ್ದುಪಡಿ ಮಾಡಿ 8ನೇ ಪರಿಚ್ಛೇದದಲ್ಲಿ ಗುರುತಿಸಿರುವ 22 ಭಾಷೆಗಳಿಗೂ ಆಡಳಿತ ಭಾಷೆ ಸ್ಥಾನ ನೀಡಬೇಕಿದೆ. ಹಿಂದಿಗೆ ಮಾತ್ರ ಹೆಚ್ಚುಗಾರಿಕೆ ನೀಡಬೇಕು ಎನ್ನುವ ಶಿಫಾರಸುಗಳು ನಿಲ್ಲಬೇಕು ಎಂದರೆ ರಾಜಭಾಷಾ ಸಮಿತಿಯ ಬದಲಿಗೆ ಭಾರತೀಯ ಭಾಷಾ ಸಮಿತಿ ರಚನೆಯಾಗಬೇಕು, ಹಿಂದಿ ಭಾಷೆಯೊಂದರ ಬಳಕೆಯನ್ನು ಹೆಚ್ಚಿಸುವಂತೆ ಶಿಫಾರಸು ನೀಡಬೇಕು ಎನ್ನುವ ಬದಲಿಗೆ ಭಾರತೀಯ ಭಾಷೆಗಳ ಬಳಕೆ ಹೆಚ್ಚಿಸುವಂತೆ ಶಿಫಾರಸು ನೀಡಬೇಕು ಎಂದು ಸಂವಿಧಾನದ 344ನೇ ವಿಧಿಗೆ ತಿದ್ದುಪಡಿಯಾಗಬೇಕಿದೆ. ಜೊತೆಗೆ ಸಂವಿಧಾನದ 351ನೇ ವಿಧಿಯಲ್ಲಿ ಇರುವ ಹಿಂದಿ ಭಾಷೆಯ ಪ್ರಚಾರ ಭಾರತ ಸರ್ಕಾರದ ಕರ್ತವ್ಯ ಎನ್ನುವ ಅಂಶಕ್ಕೆ ತಿದ್ದುಪಡಿ ತರಬೇಕು. ಅದನ್ನು ಭಾರತೀಯ ಭಾಷೆಗಳ ಬಳಕೆ ಹೆಚ್ಚಿಸುವುದು ಭಾರತ ಸರ್ಕಾರದ ಕರ್ತವ್ಯ ಎಂದು ಮಾಡಬೇಕು. ಈ ತಿದ್ದುಪಡಿಗಳಾಗದೇ ಹಿಂದಿಯೇತರ ಭಾರತೀಯ ಭಾಷೆಗಳಿಗೆ, ಹಿಂದಿಯೇತರ ನಾಗರಿಕರಿಗೆ ಭವಿಷ್ಯವಿಲ್ಲ.

ಲೇಖಕ: ಕರ್ನಾಟಕ ರಕ್ಷಣಾ ವೇದಿಕೆಯ ಮುಖ್ಯ ವಕ್ತಾರ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 256

ಮದುವೆಗೆ ಆಮಂತ್ರಣ

ಲಗ್ನಪತ್ರಿಕೆಯನ್ನು ತಂದ ಹಿಮವಂತನ ದೂತರಿಗೆ ಸೂಕ್ತವಾದ ಸಂಭಾವನೆಯನ್ನು ಕೊಟ್ಟು, ಆದರದಿಂದ ಗೌರವಿಸಿದ ಮಹಾದೇವ. ಆಮಂತ್ರಣಕ್ಕೆ ಒಪ್ಪಿರುವುದಾಗಿ ಹೇಳಿ, ದೂತರಿಗೆ ಯಥೋಚಿತವಾದ ಆತಿಥ್ಯವನ್ನು ನೀಡಿದ.

ತನ್ನ ಮತ್ತು ಪಾರ್ವತೀ ವಿವಾಹಕ್ಕೆ ಹಿಮವಂತ ದಂಪತಿಗಳು ಸಂತೋಷದಿಂದ ಒಪ್ಪಿದ್ದಲ್ಲದೆ, ಅದ್ದೂರಿಯಾಗಿ ವಿವಾಹ ನಡೆಸುತ್ತಿರುವುದು ಶಿವನಿಗೆ ತುಂಬಾ ಸಂತೋಷ ಕೊಟ್ಟಿತು. ಸಪ್ತರ್ಷಿಗಳನ್ನು ಕೈಲಾಸಕ್ಕೆ ಕರೆಸಿಕೊಂಡು ಅವರ ಕಾರ್ಯವನ್ನು ಶ್ಲಾಘಿಸಿದ. ನೀವು ಹೋದ ಕಾರ್ಯವನ್ನು ಚೆನ್ನಾಗಿ ಸಾಧಿಸಿ ಬಂದಿದ್ದೀರಿ ಎಂದು ಪ್ರಶಂಸಿಸಿದ. 'ಹಿಮವಂತ ಕಳುಹಿಸಿದ ವಿವಾಹ ಆಮಂತ್ರಣವನ್ನು ಅಂಗೀಕರಿಸಿದ್ದೇನೆ. ಈ ಮಂಗಳಕಾರ್ಯಕ್ಕೆ ಕಾರಣರಾದ ನೀವೆಲ್ಲರೂ ಬರಬೇಕು' ಎಂದು ಕೋರಿದ. ಶಂಕರನ ಮಾತನ್ನು ಕೇಳಿ ಸಪ್ತರ್ಷಿಗಳು ಆನಂದಾತಿರೇಕದಲ್ಲಿ ತೇಲಿದರು.

ನಂತರ ಲೀಲಾಮಯನಾದ ಶಂಕರ ಸಂದೇಶಕಾರನಾದ ನಾರದನನ್ನು ಸ್ಮರಿಸಿದ. ಕೂಡಲೇ ನಾರದ ಶಿವನ ಬಳಿಗೆ ಬಂದು ನಮಸ್ಕರಿಸುತ್ತಾ ನಿಂತ. ಶಂಕರ ಸಂತುಷ್ಟನಾಗಿ 'ಎಲೈ ನಾರದಮುನೀಂದ್ರ! ನೀನು ನನ್ನ ಭಕ್ತೋತ್ತಮರಲ್ಲಿ ಶ್ರೇಷ್ಠನಾಗಿರುವ ಕಾರಣ ಈಗ ನಿನಗೊಂದು ಕಾರ್ಯವನ್ನು ಹೇಳುವೆ ಕೇಳು. ನಿನ್ನ ಉಪದೇಶದಂತೆ ಗಿರಿಜೆ ಮಹಾ ತಪಸ್ಸನ್ನಾಚರಿಸಿ ನನ್ನ ವಿವಾಹವಾಗುತ್ತಿದ್ದಾಳೆ. ಗಿರಿಜೆಯ ಅಖಂಡ ಭಕ್ತಿಗೆ ಮೆಚ್ಚಿ ನಾನು ಅವಳನ್ನು ಮದುವೆಯಾಗುತ್ತಿದ್ದೇನೆ. ಸಪ್ತರ್ಷಿಗಳು ನಮ್ಮ ವಿವಾಹ ಸಂಬಂಧವನ್ನು ಸಾಧಿಸಿ, ಅವರೇ ವಿವಾಹಲಗ್ನವನ್ನು ಶೋಧಿಸಿ ನಿಶ್ಚಯಿಸಿರುವರು. ಅದರಂತೆ ಹಿಮವಂತ ವಿವಾಹ ನಿಶ್ಚಯ ಮಾಡಿ ನನಗೆ ಆಮಂತ್ರಣ ಕಳುಹಿಸಿದ್ದಾನೆ. ಇಂದಿಗೆ ಏಳನೆಯ ದಿನದಲ್ಲಿ ಲೋಕಸಂಪ್ರದಾಯದಂತೆ ವಿವಾಹಮಹೋತ್ಸವವನ್ನು ಮಾಡಿಕೊಳ್ಳುವೆ' ಎಂದ.

ಶಂಕರನ ಮಾತನ್ನು ಕೇಳಿ ಹರ್ಷಿಸಿ, 'ಓ ಶಂಕರ, ನೀನು ಭಕ್ತಪರಾಧೀನ. ನಿನ್ನ ಭಕ್ತಳಾದ ಗಿರಿಜೆಗೆ ನೀನು ಕೊಟ್ಟ ವರ ನ್ಯಾಯಸಮ್ಮತವಾದುದು. ನಿನ್ನ ವಿವಾಹದಲ್ಲಿ ನಾನು ಮಾಡಬೇಕಾದ ಕಾರ್ಯ ಏನೆಂಬುದನ್ನು ನನ್ನಲ್ಲಿ ಅನುಗ್ರಹವಿಟ್ಟು ಹೇಳು. ನಿನ್ನ ಸೇವಕನಾದ ನನಗೆ ಮಾಡಬೇಕಾದ ಕಾರ್ಯದ ಅಪ್ಪಣೆಮಾಡು' ಎಂದ.

ಅದಕ್ಕೆ ಶಂಕರ, 'ಎಲೈ ನಾರದ, ನನ್ನ ಮದುವೆಗೆ ಬರುವಂತೆ ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳನ್ನೂ ಮುನಿಗಳನ್ನೂ ಸಿದ್ಧರನ್ನೂ ಆಹ್ವಾನಿಸು. ಇವರಲ್ಲದೆ ಇನ್ನೂ ಕರೆಯಬೇಕಾದವರೆಲ್ಲರಿಗೂ ಆಹ್ವಾನ ಕೊಟ್ಟು ಬರಮಾಡು. ಆಮಂತ್ರಿತರೆಲ್ಲರೂ ತಮ್ಮ ಪರಿವಾರಗಳೊಂದಿಗೆ, ಪತ್ನಿ-ಮಕ್ಕಳೊಡನೆ ಆದರದಿಂದ ಬರಲಿ. ನನ್ನ ಮದುವೆಯ ಉತ್ಸವಕ್ಕೆ ಯಾರು ಬರುವುದಿಲ್ಲವೋ, ಅವರು ದೇವತೆಗಳಾಗಲೀ, ಯಾರೇ ಆಗಲಿ, ಅವರು ನನ್ನ ಆಪ್ತರಲ್ಲ' ಎಂದ.

ಶಂಕರನ ಆಜ್ಞೆಯಂತೆ ಶಿವಭಕ್ತನಾದ ನಾರದ, ಎಲ್ಲಾ ದೇವತೆಗಳು, ಮುನಿಗಳು, ಸಿದ್ಧರು ಮೊದಲಾದ ಎಲ್ಲರ ಮನೆಗಳಿಗೂ ಹೋಗಿ ವಿವಾಹ ಆಮಂತ್ರಣವನ್ನು ಕೊಟ್ಟು ಬಂದ. ನಂತರ ಕೈಲಾಸಕ್ಕೆ ಬಂದು ಮದುವೆ ಕಾರ್ಯಕ್ಕಾಗಿ ಶಿವನ ಸೇವೆಯಲ್ಲಿ ನಿರತನಾದ. ಶಿವ ತನ್ನ ವಿವಾಹಕ್ಕೆ ಬರುವ ದೇವತೆಗಳು, ಮುನಿಗಳು, ಸಿದ್ಧರು ಮೊದಲಾದವರ ನಿರೀಕ್ಷಿಸುತ್ತಾ, ಮದುವೆ ದಿಬ್ಬಣದ ತಯಾರಿಯ ಸಂಭ್ರಮದಲ್ಲಿದ್ದ. ಅವನ ಗಣಗಳು ಶಿವಪಾರ್ವತಿ ಕಲ್ಯಾಣ ಸಮಾರಂಭದಲ್ಲಿ ಭಾಗವಹಿಸುವ ಕ್ಷಣಗಳನ್ನು ನೆನೆದು, ಹರ್ಷದಿಂದ ಕೈಲಾಸದ ಸುತ್ತಾ ನರ್ತನ ಮಾಡುತ್ತಾ, ಮಹೋತ್ಸಾಹಭರಿತರಾಗಿದ್ದರು.

ಕನ್ನಡವನ್ನು ಪ್ರೀತಿಸಿ, ಹಿಂದಿ ದ್ವೇಷ ಬೇಡ

• ಸತ್ಯನಾರಾಯಣ ಶಾನಭಾಗ

ಹಿಂದಿಯೂ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳಿಗೆ ಸಮಾನ ಪ್ರತಿರೋಧ ಒಡ್ಡುತ್ತಿರುವುದು ಇಂಗ್ಲಿಷ್ ಭಾಷೆ. ಇಂಗ್ಲಿಷ್‌ನ ಬೆನ್ನೇರಿ ಪಶ್ಚಿಮದ ಚಿಂತನಾ ಶೈಲಿ, ಆಚರಣೆಗಳು ನಮ್ಮ ಮನೆಯ ಪಡಸಾಲೆಗೆ ನಮಗರಿಯದಂತೇ ನುಗ್ಗಿವೆ ಎನ್ನುವುದನ್ನು ನಾವು ಗಮನಿಸಬೇಕು. ಆದರೆ, ಇಂಗ್ಲಿಷ್ ಭಾಷೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗದ ಸ್ಥಿತಿಯನ್ನು ನಾವು ತಲುಪಿದ್ದೇವೆ. ಹಾಗಾಗಿ ಪರ್ಯಾಯವಾಗಿ ಭಾರತೀಯ ಭಾಷೆಗಳನ್ನು ಪೋಷಿಸಬೇಕಾದ ತುರ್ತು ಎದುರಾಗಿದೆ

ರಾಜಭಾಷಾ ಅಧಿನಿಯಮ 1963ರ ಅಡಿಯಲ್ಲಿ 1976ರಲ್ಲಿ ರಚಿಸಲಾದ ಕೇಂದ್ರ ಗೃಹ ಸಚಿವರ ನೇತೃತ್ವದ ಸಂಸದೀಯ ರಾಜಾಭಾಷಾ ಸಮಿತಿಯು ತನ್ನ 11ನೇ ವರದಿಯನ್ನು ಇತ್ತೀಚೆಗೆ ರಾಷ್ಟ್ರಪತಿಯವರಿಗೆ ಸಲ್ಲಿಸಿದ ಮೇಲೆ ಆಗಾಗ ಕೇಳಿಬರುತ್ತಲೇ ಇರುವ ಹಿಂದಿ ಹೇರಿಕೆಯ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ಆಡಳಿತ ಸಂವಹನ, ಉನ್ನತ ಶಿಕ್ಷಣ, ಕೋರ್ಟ್ ಕಲಾಪಗಳಲ್ಲಿ ಹಿಂದಿಗೆ ಆದ್ಯತೆ ನೀಡಬೇಕು ಎಂದು ಸಮಿತಿಯ ವರದಿ ಶಿಫಾರಸು ಮಾಡಿದೆ ಎನ್ನುವ ಸಂಗತಿ ಮೊದಲು ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ವಿರೋಧಕ್ಕೆ ಕಾರಣವಾಯಿತು. ಕರ್ನಾಟಕದಲ್ಲಿಯೂ ವಿರೋಧದ ಧ್ವನಿ ಕೇಳಿಬಂತು. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ಪ್ರಧಾನಿ ನರೇಂದ್ರ ಮೋದಿಯವರಿಗೆ ಈ ಕುರಿತು ಪತ್ರ ಬರೆದದ್ದೇ ಅಲ್ಲದೇ 'ಹಿಂದಿ ಹೇರಿಕೆ'ಯನ್ನು ವಿರೋಧಿಸಿ ರಾಜ್ಯ ವಿಧಾನಸಭೆಯಲ್ಲಿ ಗೊತ್ತುವಳಿ ಅಂಗೀಕಾರವಾಗುವಂತೆ ನೋಡಿಕೊಂಡರು. 'ಬಹುತೇಕ ಸಾರ್ವಜನಿಕ ಕಚೇರಿಗಳಲ್ಲಿ ಭಾರತೀಯ ಭಾಷೆಗಳ ಬಳಕೆ ಕಳವಳಕಾರಿ ಉಂಟು ಮಾಡುವಷ್ಟು ಕಡಿಮೆ ಪ್ರಮಾಣದಲ್ಲಿದೆ. ರಾಜ್ಯಗಳಲ್ಲಿ ಇಂಗ್ಲಿಷ್ ಬದಲು ಆಯಾ ರಾಜ್ಯಗಳ ಭಾಷೆಗಳನ್ನು ಆದ್ಯತೆಕೊಟ್ಟು ಬಳಸಬೇಕು' ಎಂದೂ ಈ ಸಮಿತಿ ಶಿಫಾರಸು ಮಾಡಿದೆ ಎನ್ನುವುದು ಬಹುಶಃ ಇವರ ಗಮನಕ್ಕೆ ಬಂದಿರಲಿಕ್ಕಿಲ್ಲ. ಹಾಗೆಯೇ ಸುಮಾರು ಒಂದು ನೂರು ಶಿಫಾರಸುಗಳಿವೆ ಎನ್ನಲಾಗುವ ಈ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಲಾಗಿದ್ದು ಇನ್ನೂ ಸಂಸತ್ತಿನಲ್ಲಿ ಮಂಡನೆಯಾಗಿ ಬಹಿರಂಗವಾಗಿಲ್ಲ ಎನ್ನುವ ಸಂಗತಿಯೂ ಗಮನಕ್ಕೆ ಬಂದಿರಲಿಕ್ಕಿಲ್ಲ.

ಕೇಂದ್ರದ ಆಡಳಿತ ಭಾಷೆಗೆ ಸಂಬಂಧಿಸಿದಂತೆ ಸಂವಿಧಾನದ 343ನೇ ವಿಧಿಯಲ್ಲಿ ದೇವನಾಗರಿ ಲಿಪಿಯಲ್ಲಿ ಹಿಂದಿ ಭಾಷೆ ಕೇಂದ್ರದ ಅಧಿಕೃತ ಆಡಳಿತ ಭಾಷೆಯಾಗಬೇಕು ಮತ್ತು ಸಂವಿಧಾನ ಜಾರಿಗೆ ಬಂದು ಹದಿನೈದು ವರ್ಷಗಳವರೆಗೆ ಮಾತ್ರ ಇಂಗ್ಲಿಷ್ ಭಾಷೆಯನ್ನೂ ಬಳಸಬಹುದು ಎಂದು ಹೇಳಲಾಗಿದೆ. ದಕ್ಷಿಣದ ರಾಜ್ಯಗಳ ಅದರಲ್ಲೂ ತಮಿಳುನಾಡಿನ ದ್ರಾವಿಡ ಆಂದೋಲನದ ವಿರೋಧದ ಕಾರಣ ಇಂಗ್ಲಿಷ್ ಬಳಕೆ ಮುಂದುವರಿದಿರುವುದು ನಿಜವಾದರೂ ಹಿಂದಿ ಕೇಂದ್ರದ ಆಡಳಿತ ಭಾಷೆಯಾಗಲಿ ಎನ್ನುವುದು ಸಂವಿಧಾನ ರಚಿಸಿದವರ ಆಶಯವಾಗಿತ್ತು ಎನ್ನುವುದೂ ಸತ್ಯ. ಮಹಾತ್ಮ ಗಾಂಧಿಯವರೂ ಸೇರಿದಂತೆ ಬಹುತೇಕ ನಾಯಕರಲ್ಲಿ ಹಿಂದಿಯ ಬಗ್ಗೆ ಒಲವಿತ್ತು ಎನ್ನುವುದಕ್ಕೆ ಉಲ್ಲೇಖಗಳು ಸಿಗುತ್ತವೆ.

ಹಿಂದಿ ವಿರೋಧದ ಬೇರುಗಳನ್ನು ಹುಡುಕುತ್ತ ಹೊರಟರೆ ತಮಿಳುನಾಡಿನ ಪೆರಿಯಾರ್ ನೇತೃತ್ವದ ದ್ರಾವಿಡ ಚಳವಳಿಗೆ ಹೋಗಿ ನಿಲ್ಲುತ್ತದೆ. 1930ರ ದಶಕದಲ್ಲಿ ಸಿ. ರಾಜಗೋಪಾಲಾಚಾರಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಲೆಗಳಲ್ಲಿ ಹಿಂದಿಯನ್ನು ಪರಿಚಯಿಸಲು ಹೊರಟಾಗ ದ್ರಾವಿಡ ಆಂದೋಲನವು ಪ್ರಬಲವಾಗಿ ವಿರೋಧಿಸಿತು. ಸ್ವಾತಂತ್ರ್ಯಾನಂತರವೂ ದ್ರಾವಿಡ ಆಂದೋಲನ ಮೂಲದ ರಾಜಕೀಯ ಪಕ್ಷಗಳಿಗೆ ಉತ್ತರದ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಹಿಂದಿ ಕಂಡಿತು. ಇಂದಿಗೂ ತಮಿಳುನಾಡಿನಲ್ಲಿ ಪ್ರಬಲವಾಗಿರುವ ದ್ರಾವಿಡ ಚಳವಳಿಯ ಮೂಲದ ರಾಜಕೀಯ ಪಕ್ಷಗಳೂ ಸೇರಿದಂತೆ ದೇಶದ ಉಳಿದ ಪ್ರಾದೇಶಿಕ ಪಕ್ಷಗಳ ರಾಜಕೀಯ ಲಾಭಕ್ಕೆ ಹಿಂದಿ ವಿರೋಧ ಒಂದು ಸಲಕರಣೆಯಾಗಿರುವುದು ಮೇಲ್ನೋಟಕ್ಕೇ ಕಂಡುಬರುತ್ತದೆ. ಹಾಗಾಗಿ ಸ್ಪಷ್ಟವಾಗಬೇಕಾದದ್ದು ಪ್ರತಿರೋಧ ಹಿಂದಿ ಭಾಷೆಗೋ ಅಥವಾ ಹಿಂದಿ ಭಾಷೆ ಪ್ರತಿನಿಧಿಸುವ ದೆಹಲಿ ಕೇಂದ್ರಿತ ವ್ಯವಸ್ಥೆಯ ವಿರುದ್ಧವೋ? ಎರಡರ ನಡುವೆ ವ್ಯತ್ಯಾಸ ಇದೆ ಎನ್ನುವುದನ್ನು ಗ್ರಹಿಸಬೇಕು. ಬಹುಭಾಷಾ ಜ್ಞಾನ ಭಾರತೀಯರಲ್ಲಿ ಸಹಜವಾಗಿ ಇರುವಂತಹುದು. ತಮ್ಮ ಮಾತೃಭಾಷೆಯ ಜೊತೆಗೆ ಉಳಿದ ಒಂದೆರಡು ಭಾಷೆಗಳಲ್ಲಿ ಸಂವಹನ ನಡೆಸುವ ಸಾಮರ್ಥ್ಯವನ್ನು ನಮ್ಮ ದೇಶದ ಬಹುತೇಕ ಜನರಲ್ಲಿ ಕಾಣಬಹುದು. ಹಾಗೆಯೇ ಹಿಂದಿ ಭಾಷಿಕ ಪ್ರದೇಶಗಳನ್ನು ಬಿಟ್ಟು ಉಳಿದ ಪ್ರದೇಶಗಳಿಗೂ ಹಿಂದಿ ಭಾಷೆಯ ಜ್ಞಾನ ಅಲ್ಪಸ್ವಲ್ಪವಾದರೂ ಮುಟ್ಟಿದೆ. ಇದಕ್ಕೆ ಕಾರಣ ಶಾಲಾ ಪಠ್ಯವಲ್ಲ. ಯಾತ್ರಿಕರು-ವಲಸಿಗರಿರಬಹುದು, ರಾಷ್ಟ್ರ ಮಟ್ಟದ ಟಿ.ವಿ. ವಾಹಿನಿಗಳು, ಸಿನಿಮಾಗಳು ಕಾರಣವಿರಬಹುದು. ಹಾಗಾಗಿ ಯಾವುದೇ ಹಿಂದಿಯೇತರ ರಾಜ್ಯಕ್ಕೆ ಕಾಲಿಟ್ಟರೂ ಇಂಗ್ಲಿಷ್‌ಗಿಂತ ಹಿಂದಿ ಸಹಜವಾಗಿ ಸಂವಹನಕ್ಕೆ ನೆರವಾಗುತ್ತದೆ.

ಇಂಗ್ಲಿಷ್ ಅನ್ನ ನೀಡುವ ಭಾಷೆ. ಹಾಗಾಗಿ ಇಂಗ್ಲಿಷ್ ಬೇಕು. ಹಿಂದಿ ಬೇಡ, ಮಾತೃಭಾಷೆಯೂ ಬೇಡ ಎಂದು ಒಂದು ವರ್ಗ ಆಗ್ರಹಿಸುತ್ತದೆ. ಇದು ನಗರಕೇಂದ್ರಿತ ಉದ್ಯೋಗ ವರ್ಗದ ಗ್ರಹಿಕೆ ಎನ್ನುವುದು ಸ್ಪಷ್ಟ. ಕರ್ನಾಟಕದ ಕರಾವಳಿ, ಮಲೆನಾಡಿನ ಅಡಿಕೆ ವ್ಯಾಪಾರಿಗಳು ಕಾನ್ಪುರ ಮೊದಲಾದೆಡೆಯ ಉತ್ತರದ ವ್ಯಾಪಾರಿಗಳೊಂದಿಗೆ ವ್ಯವಹಾರ ಮಾಡುತ್ತಾರೆ. ಬಡತನಪೀಡಿತ ಪೂರ್ವೋತ್ತರ ರಾಜ್ಯಗಳ ಜನರು ದೇಶದ ವಿವಿಧೆಡೆಗಳಿಗೆ ಉದ್ಯೋಗವನ್ನರಸಿ ಹೋಗುತ್ತಾರೆ. ಬಹಳ ಹಿಂದೆಯೇ ಉಡುಪಿ ಸುತ್ತಲಿನ ಜನರು ಮುಂಬೈ, ಹೈದರಾಬಾದ್ ಮೊದಲಾದ ಕಡೆ ವಲಸೆ ಹೋಗಿ ಹೋಟೆಲ್ ಉದ್ಯಮವನ್ನಾರಂಭಿಸಿದರು. ಗುಜರಾತ್, ರಾಜಸ್ಥಾನಗಳ ಮಾರ್ವಾಡಿ ಸಮುದಾಯದವರು ದೇಶದ ಮೂಲೆಮೂಲೆಗಳಿಗೆ ಹೋಗಿ ಅಂಗಡಿಗಳನ್ನು ತೆರೆದರು. ಇವರೆಲ್ಲರಿಗೂ ಹಿಂದಿಯೇ ಸಂಪರ್ಕ ಭಾಷೆ.

ಭಾಷೆ ಸಂವಹನ ಮಾಧ್ಯಮ ಮಾತ್ರ ಅಲ್ಲ, ಸಂಸ್ಕೃತಿಯ ವಾಹಕವೂ ಹೌದು. ಆದರೆ, ಭಾರತೀಯ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು, ಜೀವನ ಮತ್ತು ಚಿಂತನೆಯನ್ನು ಭಾರತೀಯ ಭಾಷೆಯಷ್ಟು ಸಮರ್ಥವಾಗಿ ಇಂಗ್ಲಿಷ್ ಪ್ರತಿಬಿಂಬಿಸಲಾರದು. ಕಾಂತಾರದಂತಹ ಸಿನಿಮಾ ಮೂಲಕ ತುಳುನಾಡಿನ ಸಂಸ್ಕೃತಿಯ ಪರಿಚಯ ಉತ್ತರ ಭಾರತಕ್ಕೆ ಆಗುತ್ತಿದೆ ಎಂದರೆ ಹಿಂದಿ ಡಬ್ಬಿಂಗ್ ಕೂಡ ಕಾರಣ.

ಹಿಂದಿಯೂ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳಿಗೆ ಸಮಾನ ಪ್ರತಿರೋಧ ಒಡ್ಡುತ್ತಿರುವುದು ಇಂಗ್ಲಿಷ್ ಭಾಷೆ. ಇಂಗ್ಲಿಷ್‌ನ ಬೆನ್ನೇರಿ ಪಶ್ಚಿಮದ ಚಿಂತನಾ ಶೈಲಿ, ಆಚರಣೆಗಳು ನಮ್ಮ ಮನೆಯ ಪಡಸಾಲೆಗೆ ನಮಗರಿಯದಂತೇ ನುಗ್ಗಿವೆ ಎನ್ನುವುದನ್ನು ನಾವು ಗಮನಿಸಬೇಕು. ಆದರೆ, ಇಂಗ್ಲಿಷ್ ಭಾಷೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗದ ಸ್ಥಿತಿಯನ್ನು ನಾವು ತಲುಪಿದ್ದೇವೆ. ಹಾಗಾಗಿ ಪರ್ಯಾಯವಾಗಿ ಭಾರತೀಯ ಭಾಷೆಗಳನ್ನು ಪೋಷಿಸಬೇಕಾದ ತುರ್ತು ಎದುರಾಗಿದೆ. ಇಂಗ್ಲಿಷ್ ಭಾಷೆಯ ಸ್ಥಾನವನ್ನು ಹಿಂದಿಯು ಸಮರ್ಥವಾಗಿ ತುಂಬಬಹುದಾದರೆ ಅದನ್ನು ವಿರೋಧಿಸುವುದು ಸರಿಯಾದುದಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂವಹನಕ್ಕಾಗಿ ಇಂಗ್ಲಿಷ್, ಭಾರತದೊಳಗೆ ಸಂಪರ್ಕ ಮಾಧ್ಯಮವಾಗಿ ಹಿಂದಿ, ರಾಜ್ಯಗಳಲ್ಲಿ ಪ್ರಾದೇಶಿಕ ಭಾಷೆ – ಈ ತ್ರಿಭಾಷಾ ಸೂತ್ರ ವ್ಯಾವಹಾರಿಕವಾಗಿ ಸೂಕ್ತವಾಗಬಲ್ಲುದು.

ವಿಶ್ವದ ಅತಿಹೆಚ್ಚು ಜನರು ಮಾತನಾಡುವ ಭಾಷೆಗಳ ಪೈಕಿ ಹಿಂದಿ 3ನೇ ಸ್ಥಾನದಲ್ಲಿದೆ. ಹಿಂದಿ ಭಾಷಿಕರ ಸಂಖ್ಯೆ 60 ಕೋಟಿಗೂ ಹೆಚ್ಚು. ಆದರೂ ಯಾವೊಂದು ಭಾರತೀಯ ಭಾಷೆಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗದಿರಲು ನಾವು ಇಂಗ್ಲಿಷ್ ಭಾಷೆಯನ್ನು ಅಪ್ಪಿಕೊಂಡಿರುವುದು ಮತ್ತು ಒಂದು ವರ್ಗದ ಹಿಂದಿ ವಿರೋಧವೇ ಕಾರಣ.

'ಕನ್ನಡ ನುಡಿಯೂ ನಾಡೂ ನಮ್ಮ ನಡುಮನೆಯಾದರೂ ವಿಶ್ವವೆಂಬೀ ಪಗಡೀಪಟದಲ್ಲಿ ಭರತ ಭೂಮಿಯೇ ನಮ್ಮ ಕಟ್ಟೆಯ ಮನೆ... ಭಾರತೀಯ ಸಂಸ್ಕೃತಿಯೂ ಕರ್ನಾಟಕ ಸಂಸ್ಕೃತಿ... ಕರ್ನಾಟಕ ಸಂಸ್ಕೃತಿಯಲ್ಲಿ ಭಾರತ ಸಂಸ್ಕೃತಿ ಅಂತರ್ಯಾಮಿಯಾಗಿದೆ' ಎಂದು ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು ತಮ್ಮ 'ಕರ್ನಾಟಕತ್ವದ ವಿಕಾಸ' ಎನ್ನುವ ಗ್ರಂಥದಲ್ಲಿ ಅಭಿಪ್ರಾಯಪಡುತ್ತಾರೆ. ರಾಷ್ಟ್ರವನ್ನು ಭಾಷಾತತ್ವದ ಮೇಲೆ ವಿಭಾಗ ಮಾಡುವುದು 'ಆಯಾ ಪ್ರಾಂತದ ಜನರು ಗುಂಪಾಗಿ ಸೇರಿ ತಮ್ಮ ತಮ್ಮ ಉನ್ನತಿಯನ್ನು ಮಾಡಿಕೊಳ್ಳುವುದು ರಾಷ್ಟ್ರೀಯತ್ವಕ್ಕೆ ಪೋಷಕವಾದ ಉಪಾಯವೆಂದೂ ರಾಷ್ಟ್ರೋದ್ಧಾರಕ್ಕೆ ಅನುಕೂಲವಾದ ಸಂಗತಿ' ಎನ್ನುವ ಸ್ಪಷ್ಟತೆ ಇತ್ತು. ಇಂತಹ ರಾಷ್ಟ್ರೀಯ ದೃಷ್ಟಿಯಿದ್ದರೆ ಮಾತೃಭಾಷೆಯಾದ ಕನ್ನಡದ ಜೊತೆಗೆ ಹಿಂದಿಯೂ ಸೇರಿದಂತೆ ಉಳಿದೆಲ್ಲ ಭಾರತೀಯ ಭಾಷೆಗಳೂ ನಮ್ಮವೇ ಎನ್ನುವ ಭಾವ ಬರುತ್ತದೆ. ಕನ್ನಡದ ಪ್ರಗತಿ ಕನ್ನಡನಾಡಿನ ಅಭಿವೃದ್ಧಿ ಆದ್ಯತೆಯಾಗಬೇಕೇ ಹೊರತು ನಮ್ಮವರೇ ಆದ ನೆರಮನೆಯವರ ವಿರೋಧವಲ್ಲ ಎನ್ನುವ ಧೋರಣೆ ಬಲಿಯುತ್ತದೆ.

ಲೇಖಕ: ಐಟಿ ಉದ್ಯೋಗಿ, ಹವ್ಯಾಸಿ ಲೇಖಕ

ಪದಬಂಧ 5116

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪದ ಹೇಳಿದ ಪಾಮರನಿಗೆ ಸಿಕ್ಕಿರುವ ಮೋಕ್ಷ (5)
4.ಚಾಣಾಕ್ಷನಿಗೆ ದೊರೆತ ಕೃಪಾದೃಷ್ಟಿ! (3)
5.ಏನೂ ಗತಿಯಿರದ ಅಸಹಾಯಕ ಸ್ಥಿತಿ (3)
7.ಸಲ್ಲಾಪದ ಮಾತುಕತೆ (3)
9.ಪ್ರಸಂಗವೊಂದರಲ್ಲಿ ಸಿಕ್ಕಿರುವುದು ಒಳ್ಳೆಯ ಸಹವಾಸ! (3)
10.ಜೀರ್ಣಕ್ಕೆ ಸಹಕಾರಿ ಎನ್ನಲಾಗುವ ಸಂಬಾರ ದ್ರವ್ಯ (3)
13.ಸುಜ್ಞಾನ ಪಡೆದಿರುವ ಒಳ್ಳೆ ಮಂದಿ (3)
15.ವಲೀಮುಖ ನೋಡುತ್ತಿರುವ ಹುತ್ತ (3)
17. ನೀರಮೇಲಣ ಗುಳ್ಳೆ ಅದ್ಭುತವಾಗಿ ಕಾಣುತ್ತಿದೆಯಲ್ಲಾ (3)
18.ಕೆಂಗಲ್ ಹನುಮಂತಯ್ಯನವರು ಕಟ್ಟಿಸಿರುವ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಹದಿನೈದು ದಿನಗಳ ಅವಧಿಯನ್ನು ಪರೋಕ್ಷದಲ್ಲೇ ನೋಡಿ! (2)
2.ಮತಕ್ಕಾಗಿ ಸಾಧಿಸಿರುವ ದ್ವೇಷ (3)
3.ನಾದಿನಿಯ ಇಂಪಾದ ಸ್ವರ! (2)
4.ಕಲ್ಲಿಗೆ ತಾಕುತ್ತಿರುವ ದೊಡ್ಡ ಅಲೆ (3)
6.ಬಿಕ್ಕುತ್ತಿರುವವನದು ಈ ವಿಚಿತ್ರ ವರ್ತನೆ! (3)
7.ಗವಿಯಲ್ಲಿದ್ದಾಗ ಕಂಡಿದ್ದು ಮಧುರ ಸ್ವಪ್ನ (5)
8. ಸಹನೆಯಿಂದ ಜೊತೆಯಲ್ಲಿ ಬಾಳುವುದು (5)
11.ಪ್ರಭಾವ ಬೀರಿರುವ ಸಂವತ್ಸರ (3)
12.ಪ್ರತಿಪಾದನೆ ಮಾಡುವಾಗ ಎಸಗಿದ ತಪ್ಪು (3)
14.ದಿವಾನನ ಜೊತೆ ಬಂದಿರುವ ಆಳು (3)
16.ಈತ ಕವಿತೆ ರಚನೆಗಾರ (2)
17.ನವಗ್ರಹಗಳಲ್ಲಿ ಇದೊಂದು (2)



5115ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆತ್ಮಪ್ರಶಂಸೆ 6.ಕರುಳು
7.ಕೆಡುಕ 8.ಹವನ
10.ರಿಕ್ತಹಸ್ತ 11.ವೀರಗಾಥೆ
12.ಪರವಶ 13.ರಕ್ಷಾಪತ್ರ
14.ಲವಣ 16.ಕಲಭ
18.ದಾಸ್ತಾನು 20.ವಸತಿಗೃಹ

ಮೇಲಿಂದ ಕೆಳಕ್ಕೆ:
1.ಸುಂಕ 2.ಆಳು
3.ಪ್ರಭಾವ 4.ಸೆಕೆ
5.ಅಂಕ 8.ಹಸ್ತಕೌಶಲ
9.ನವೀಕರಣ 15.ವರ್ಧಂತಿ
16.ಕತ್ತೆ 17.ಭವ
18.ದಾಹ 19.ನುಚ್ಚು

ಸುಡೊಕು 5502

	9			5			2	1
3		5	2		1	7	9	
	1			9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5501 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಅಕ್ಟೋಬರ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣದ್ವಾದಶಿ ಗಂ. 18-03 ನಕ್ಷತ್ರ: ಪೂರ್ವಫಲ್ಗುನಿ ಗಂ. 13-50 ಯೋಗ: ಬ್ರಹ್ಮ ಗಂ. 17-12, ಕರಣ: ತೈತಿಲ ಗಂ. 18-03, ತುಲಾ ಮಾಸದ 04 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10:30 ಸೂರ್ಯೋದಯ : 06-26 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 25 ರಬಿಉಲ್ಲಾವಲ್
ದಿನ ವಿಶೇಷ : ಶನಿ ಪ್ರದೋಷ
ಅದೃಷ್ಟ ಸಂಖ್ಯೆ : 9, 12

ಮೇಷ: ಬಹಳ ದಿನಗಳ ನಂತರ ಆಫೀಸಿನ ಕೆಲಸದಲ್ಲಿ ಸಮಾಧಾನ ಹೊಂದುವಿರಿ. ಏರುಪೇರಾಗಿದ್ದ ವ್ಯಾಪಾರ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಲು ಅವಕಾಶ ಸಿಗಲಿದೆ. ಬಾಕಿ ಇದ್ದ ಯೋಜನೆ ಪೂರ್ಣಗೊಳಿಸಿ.

ವೃಷಭ: ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ. ಗುರಿಗಳು ಅಡೆತಡೆಯಿಲ್ಲದೆ ನೆರವೇರುವುದು. ಜೀವನೋಪಾಯಕ್ಕೆ ಪರ್ಯಾಯ ಮಾರ್ಗವೊಂದನ್ನು ಹುಡುಕುವ ಪ್ರಯತ್ನ ಮಾಡಿ.

ಮಿಥುನ: ಈ ದಿನ ನೀವು ಕೈ ಹಾಕಿದ ಕಾರ್ಯಗಳಲ್ಲಿ ವಿಳಂಬ ಉಂಟಾಗುವುದು ಅಥವಾ ಕೊನೇ ಕ್ಷಣದಲ್ಲಿ ನೆರವೇರುವ ಅನುಭವವಾಗಲಿದೆ. ಖರ್ಚಿನ ವಿಚಾರದಲ್ಲಿ ಎಚ್ಚರ ವಹಿಸುವುದು ಉತ್ತಮ. ವೈದ್ಯಕೀಯ ಖರ್ಚುಗಳು ಹೆಚ್ಚಲಿದೆ.

ಕರ್ಕಾಟಕ: ಸಜ್ಜನರ ಭೇಟಿಯಿಂದ, ಸಹವಾಸದಿಂದ ಕಾರ್ಯ ಕೈಗೂಡುವುದು. ಕುಟುಂಬದವರ ಹೆಚ್ಚಿನ ಜವಾಬ್ದಾರಿ ಇರುತ್ತದೆ. ರೇಷ್ಮೆ ಹಾಗೂ ಕಬ್ಬು ಬೆಳೆಗಳಿಂದ ನಿರೀಕ್ಷೆಗೂ ಮೀರಿದ ಲಾಭವಿರುವುದು.

ಸಿಂಹ: ನಿಮ್ಮ ಪ್ರತಿಯೊಂದು ಕೆಲಸಕ್ಕೂ ಬೆನ್ನೆಲುಬಾಗುವ ಧರ್ಮಪತ್ನಿಯ ಸಹಕಾರ ಮುನ್ನಡೆಗೆ ಪೂರಕವಾಗಲಿದೆ. ಹೊಸ ಕೆಲಸಕ್ಕೆ ಶ್ಲಾಘನೆ ಸಿಗಲಿದೆ. ಸಂತಾನ ಸುದ್ದಿ ಕೇಳಿ ಬರುವುದು. ವಿಶೇಷ ಔತಣಕೂಟದ ಅವಕಾಶವಿದೆ.

ಕನ್ಯಾ: ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರುವುದಿಲ್ಲ. ಆದ್ದರಿಂದ ವ್ಯವಹಾರದಲ್ಲಿ ಮತ್ತು ಖರ್ಚು ವೆಚ್ಚದಲ್ಲಿ ಮಿತಬಳಕೆಯನ್ನು ಸಾಧಿಸಿ. ಮಾನಸಿಕ ಸ್ಥಿತಿಯನ್ನು ಹತೋಟಿಗೆ ತರುವಲ್ಲಿ ಹೆಚ್ಚಿನ ಶ್ರಮ ಅಗತ್ಯ.

ತುಲಾ: ರಾಜಕೀಯ ವರ್ಗದವರಿಗೆ ತಮ್ಮ ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಇಂದು ಸಕಾಲ. ಸ್ನೇಹಿತರಲ್ಲಿ ಇಂದು ವ್ಯವಹರಿಸುವ ರೀತಿಯಲ್ಲಿ ಕಳೆದುಕೊಂಡ ವಿಶ್ವಾಸವನ್ನು ಪುನಃ ಪಡೆದುಕೊಳ್ಳುವ ಅವಕಾಶವಿರಲಿದೆ.

ವೃಶ್ಚಿಕ: ವಾಹನ ಚಾಲನೆಯಲ್ಲಿ ಅಥವಾ ವಾಹನದಲ್ಲಿ ಪ್ರಯಾಣಿಸುವಾಗ ಜಾಗ್ರತರಾಗಿರಿ. ಅನಾರೋಗ್ಯದ ಪರಿಸ್ಥಿತಿಯಲ್ಲಿ ಸ್ವಂತ ನಿರ್ಧಾರದಿಂದ ಔಷಧಿಯನ್ನು ತೆಗೆದುಕೊಳ್ಳಬೇಡಿ. ಅಡ್ಡ ಪರಿಣಾಮ ಬೀರುವ ಸಾಧ್ಯತೆಗಳಿದೆ.

ಧನು: ಅತಿಯಾದ ಆಲಸ್ಯವು ನಿಮ್ಮ ಕೆಲಸಕ್ಕೆ ಅಡ್ಡಿಯನ್ನು ಮಾಡಲಿದೆ ಹಾಗೂ ಅದರ ಪರಿಣಾಮವಾಗಿ ಜನರ ಅಪಹಾಸ್ಯಕ್ಕೆ ಕಾರಣರಾಗುವಿರಿ. ನವ ಉದ್ಯಮಿಗಳಿಗೆ ಹಿರಿಯರಿಂದ ತಿಳಿವಳಿಕೆಯ ಮಾತು, ಆಶೀರ್ವಾದ ಪ್ರಾಪ್ತಿ.

ಮಕರ: ಬ್ಯಾಂಕ್ ನೌಕರರು ವರ್ಗಾವಣೆ ಮಾಡಿಸಿಕೊಳ್ಳಲು ಪ್ರಯತ್ನ ಪಡಬಹುದು. ಮೊದಲ ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಲಿದೆ. ಸಂಜೆಯ ಸಮಯ ಪ್ರೀತಿ ಪಾತ್ರರೊಂದಿಗೆ ಕಳೆಯಲು ಬಯಸುವಿರಿ.

ಕುಂಭ: ದುರಭ್ಯಾಸದಿಂದ ದೂರ ಉಳಿಯುವ ಪ್ರಯತ್ನಕ್ಕೆ ತೊಂದರೆ ಮಾಡಿಯಾರು, ನಿರ್ಧಾರ ಬದಲಿಸಬೇಡಿ. ನಿವೇಶನದ ಅಥವಾ ಜಮೀನಿನ ತಕರಾರು ಇತ್ಯರ್ಥಗೊಳ್ಳುವುದು. ನೂತನ ವಸ್ತು ಖರೀದಿ ಯೋಗವಿದೆ.

ಮೀನ: ನಿಮ್ಮ ಮಕ್ಕಳ ನಡವಳಿಕೆಯಿಂದ ನಿಮ್ಮ ಗೌರವಕ್ಕೆ ಧಕ್ಕೆ ತರುವಂತಾಗಬಹುದು. ಮಕ್ಕಳ ಬಗ್ಗೆ ಹೆಚ್ಚಿನ ಗಮನವಿರಲಿ. ನಾಯಕತ್ವ ಹೊಂದಿರುವ ನಿಮಗೆ ಜನಬಲ ಕಡಿಮೆಯಾಗಲಿದೆ. ಗೋ ಸೇವೆಯಿಂದ ನೆಮ್ಮದಿ

ಸರ್ಕಾರಿ ಶಾಲೆಗೆ ₹ 100 ದೇಣಿಗೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಅಗತ್ಯವಿರುವ ಖರ್ಚುವೆಚ್ಚಗಳಿಗಾಗಿ ಮಕ್ಕಳ ಪೋಷಕರಿಂದ ದೇಣಿಗೆ ರೂಪದಲ್ಲಿ ಪ್ರತಿ ತಿಂಗಳು ₹ 100 ಸಂಗ್ರಹಿಸಲು ಎಸ್‌ಡಿಎಂಸಿಗಳಿಗೆ 'ಅನುಮತಿ' ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಹೊರಡಿಸಿದ್ದ ಸುತ್ತೋಲೆಗೆ ರಾಜ್ಯದಾದ್ಯಂತ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಅ.21ರ ಸಂಚಿಕೆಯ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಮಕ್ಕಳ ಪೋಷಕರಿಂದಲೇ ತಲಾ ₹ 100 ಸಂಗ್ರಹಿಸಬೇಕು ಎನ್ನುವ ಮೂಲಕ ಶಾಲೆಗಳನ್ನು ನಡೆಸಲಾಗುವುದಿಲ್ಲ ಎಂಬ ಯೋಗ್ಯತೆಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ.
ಡಾ.ಎಚ್.ಸಿ.ಮಹದೇವಪ್ಪ, ಮಾಜಿ ಸಚಿವ

ಪೋಷಕರಿಂದ ಹಣ ವಸೂಲಿ ಮಾಡುವ ಸುತ್ತೋಲೆ ಅನ್ಯಾಯದ ಪರಮಾವಧಿ. ರಾಜ್ಯ ಬಿಜೆಪಿ ಸರ್ಕಾರಕ್ಕೆ ಶಾಲೆಗಳನ್ನು ನಡೆಸುವ ಯೋಗ್ಯತೆ ಇಲ್ಲ.
ಡಿ.ಕೆ.ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

ಶಿಕ್ಷಣ ಸಚಿವರು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆದಿರುವ 'ಚೈಲ್ಡ್ ರೈಟ್ಸ್ ಟ್ರಸ್ಟ್' ಸಂಸ್ಥೆಯ ನಿರ್ದೇಶಕ ನಾಗಸಿಂಹ ಜಿ. ರಾವ್, ಪೋಷಕರ ಮೇಲೆ ಸ್ವಇಚ್ಛೆಯ ದೇಣಿಗೆಯ ಹೊರೆ ಸರ್ಕಾರ 'ನಮ್ಮ ಶಾಲೆ ನಮ್ಮ ಕೊಡುಗೆ' ಯೋಜನೆ ಅಡಿ ಶಾಲೆಗಳ ಅಭಿವೃದ್ಧಿಗೆ ದೇಣಿಗೆ ಸಂಗ್ರಹಿಸುವುದು ಒಳ್ಳೆಯ ನಿರ್ಧಾರ. ಆದರೆ, ದೇಣಿಗೆ ನೀಡುವ, ನೀಡದಿರುವ ಪೋಷಕರ ಮಕ್ಕಳ ಮಧ್ಯೆ ಅಂತರ ಹೆಚ್ಚಾಗುತ್ತದೆ. ದೇಣಿಗೆ ಮುಂದೆ ಶುಲ್ಕವಾಗಿ ಪರಿವರ್ತನೆಯಾಗುತ್ತದೆ. ಹಾಗಾಗಿ, ತಕ್ಷಣ ಸುತ್ತೋಲೆ ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರ ಶಿಕ್ಷಣಕ್ಕೆ ಹಣ ಒದಗಿಸುವ ತನ್ನ ಮೂಲಭೂತ ಜವಾಬ್ದಾರಿಯಿಂದ ನುಣುಚಿಕೊಂಡು, ಹೊರೆಯನ್ನು ಪೋಷಕರ ಹೆಗಲ ಮೇಲೆ ಹೊರಿಸಿದೆ. ಸರ್ಕಾರದ ಈ ನಿರ್ಧಾರ ಅತ್ಯಂತ ಆಘಾತಕಾರಿ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್ ಹೇಳಿದ್ದಾರೆ.

'ರಾಜ್ಯದ ಜನರಿಗೆ ಅನುಕೂಲಕರವಾದ ಯೋಜನೆಗಳಿಗೆ ಸಾವಿರಾರು ಕೋಟಿ ಹಣ ಪೋಲು ಮಾಡುವ ಸರ್ಕಾರ, ಪೋಷಕರಿಂದ ದೇಣಿಗೆ ಸಂಗ್ರಹಿಸುವ ನಿರ್ಧಾರ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ವಿಮುಖರಾಗಿಸುತ್ತದೆ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಯು.ಬಿ.ವೆಂಕಟೇಶ್ ಆತಂಕ ವ್ಯಕ್ತಪಡಿಸಿದ್ದಾರೆ. 'ಎಷ್ಟೋ ಮಕ್ಕಳು ಶಾಲೆಯಲ್ಲಿ ನೀಡುವ ಒಂದು ಹೊತ್ತಿನ ಊಟದ ಸಲುವಾಗಿ ಶಾಲೆಗೆ ಬರುತ್ತಿದ್ದಾರೆ. ಹಲವು ಮಕ್ಕಳಿಗೆ ಬಟ್ಟೆ ಇಲ್ಲ, ಕಾಲಿಗೆ ಚಪ್ಪಲಿ ಇಲ್ಲ. ಇಂತಹ ಮಕ್ಕಳ ಇರುವ ಪೋಷಕರಿಗೆ ಹಣ ಕೇಳುವುದು ಸರಿಯಲ್ಲ' ಎಂದು ಲಾಯರ್ಸ್ ಗಿಲ್ಡ್‌ನ ರಾಜ್ಯ ಸಂಚಾಲಕ ಅನೀಶ್ ಪಾಷ ಹೇಳಿದ್ದಾರೆ.

ವಿಫಲವಾದ ಅನುದಾನದ ಭರವಸೆ

ಶಿಕ್ಷಣ ಇಲಾಖೆ ಇದೇ ವರ್ಷದ ಜೂನ್‌ನಲ್ಲಿ ಹೊರಡಿಸಿದ್ದ ಸುತ್ತೋಲೆ ಪ್ರಕಾರ, 1ರಿಂದ 30ರವರೆಗೆ ಮಕ್ಕಳಿರುವ ಶಾಲೆಗೆ ₹ 10 ಸಾವಿರ, 31ರಿಂದ 100 ಮಕ್ಕಳಿದ್ದರೆ ₹ 25 ಸಾವಿರ, 251ಕ್ಕೂ ಹೆಚ್ಚಿದ್ದರೆ ₹ 75 ಸಾವಿರ, 1 ಸಾವಿರಕ್ಕಿಂತ ಹೆಚ್ಚು ಮಕ್ಕಳಿದ್ದರೆ ₹ 1ಲಕ್ಷ ಅನುದಾನವನ್ನು ನಿಭಾಯಿಸುವ ನಿಗದಿ ಮಾಡಿದೆ. ಆದರೂ, ದೇಣಿಗೆ ರೂಪದಲ್ಲಿ ವಸೂಲಿ ಮಾಡುತ್ತಿದ್ದಾರೆ' ಎಂದು ಕೆ.ಎನ್.ಸತೀಶ್ ದೂರಿದ್ದಾರೆ.

'ದಾಖಲೆಗಳ ಹೊರಲಿ ಭ್ರಷ್ಟಾಚಾರ ಹರಡುತ್ತಾ ಇರುವ ಜಗ್ಗಿ ವಾಸುದೇವ ಎಂಬ ವ್ಯಕ್ತಿಯ ಮಣ್ಣು ಉಳಿಸಿ ಅಭಿಯಾನಕ್ಕೆ ಸರ್ಕಾರ ₹ 100 ಕೋಟಿ ನೀಡಿದೆ. ಹಿಂದೆ ಜನರಿಂದ ತಲಾ ₹ 42 ಸಂಗ್ರಹಿಸಿದ್ದು ಅದರಿಂದ ಎಷ್ಟು ಮಣ್ಣನ್ನು ಉಳಿಸಿದ್ದಾರೆ. ಹಾದಿ ಬೀದಿಯಲ್ಲಿ ಹೊಡೆದಾಡಿಕೊಂಡು ಸಾಯುವ ಪುಂಡರಿಗೆ ₹ 25 ಲಕ್ಷ ಪರಿಹಾರ ನೀಡುವ ಸರ್ಕಾರಕ್ಕೆ ಸರ್ಕಾರಿ ಶಾಲೆಗಳನ್ನು ನಡೆಸಲು ಹಣಕಾಸು ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ' ಎಂದು ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಕುಟುಕಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಶುಕ್ರವಾರ ಆಂಧ್ರಪ್ರದೇಶದಿಂದ ರಾಯಚೂರು ಜಿಲ್ಲೆಗೆ ಪ್ರವೇಶಿಸಿತು

ಉತ್ಸವವಾದ ಭಾರತ್ ಜೋಡೊ ಯಾತ್ರೆ

ಪ್ರಜಾವಾಣಿ ವಾರ್ತೆ

ರಾಯಚೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯು ಶುಕ್ರವಾರ ಮಂತ್ರಾಲಯ ಮಾರ್ಗದಿಂದ ರಾಯಚೂರು ಜಿಲ್ಲೆಗೆ ಪ್ರವೇಶಿಸಿದ್ದು, ಅಕ್ಷರಶಃ ಉತ್ಸವದ ರೂಪ ತಳೆದಿದೆ.

ಜಿಲ್ಲಾ ಕೇಂದ್ರದ ದಕ್ಷಿಣ ಗಡಿ ತುಂಗಭದ್ರಾ ನದಿ ಸೇತುವೆ ಬಳಿ ರಾಹುಲ್ ಗಾಂಧಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಶಾಸಕರಾದ ಪ್ರಿಯಾಂಕ್ ಖರ್ಗೆ, ದದ್ದಲ ಬಸನಗೌಡ, ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೆವಾಲಾ ಸೇರಿ ಕಲಬುರಗಿ, ಯಾದಗಿರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ಕಾಂಗ್ರೆಸ್ ಶಾಸಕರು, ಮುಖಂಡರು ಸ್ವಾಗತಿಸಿದರು.

ರಾಯಚೂರಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ (ರಾ.ಹೆ.167) ಜನರು ಸೇರಿದ್ದರು. ಎಲ್ಲೆಡೆ ಕಾಂಗ್ರೆಸ್ ಧ್ವಜಗಳು ಹಾರಾಡುತ್ತಿದ್ದವು. ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಯಂಚಿನಲ್ಲಿ ನಿಂತಿದ್ದರು. ಸ್ಥಳೀಯ ಜಾನಪದ ಕಲಾ ತಂಡಗಳ ಕಲಾ ಪ್ರದರ್ಶನ ಯಾತ್ರೆಗೆ ಮೆರುಗು ತಂದವು. ಗಡಿಯಿಂದ 4 ಕಿ.ಮೀ. ದೂರದ ಗಿಲ್ಲೇಸುಗೂರು ಗ್ರಾಮದಲ್ಲಿ ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ ವಿರಾಮದ ಅವಧಿಯಲ್ಲಿ ರೈತರೊಂದಿಗೆ ಸಂವಾದ ನಡೆಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆಯಾದರು.

ರಾಯಚೂರಿನಿಂದ 14 ಕಿ.ಮೀ. ದೂರದ ಯರಗೇರಾ ಗ್ರಾಮಕ್ಕೆ ಪಾದಯಾತ್ರೆ ತಲುಪಿದ್ದು, ಅಲ್ಲಿಯೇ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಶನಿವಾರ ಸಂಜೆ ರಾಯಚೂರಿನ ವಾಲ್ಕಟ್ ಮೈದಾನದಲ್ಲಿ ಸಭೆ ಜರುಗಲಿದೆ.

ಅನಿವಾಸಿ ಪಾದಯಾತ್ರಿಗಳು

ಭಾರತ್ ಜೋಡೊ ಯಾತ್ರೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅನಿವಾಸಿ ಭಾರತೀಯರು ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡಿದ್ದಾರೆ. ಪಕ್ಷದಿಂದ ಮಾಡಿದ ವ್ಯವಸ್ಥೆಯನ್ನು ಬಳಸಿಕೊಳ್ಳದೆ ಕನ್ಯಾಕುಮಾರಿಯಿಂದ ಪಾದಯಾತ್ರೆ ಮಾಡಿಕೊಂಡು ಬರುತ್ತಿದ್ದಾರೆ.

'ಭಾರತ್ ಜೋಡೊ ಯಾತ್ರೆ ಆರಂಭದ ಸುದ್ದಿ ಕೇಳಿ ನಾನು ಅಮೆರಿಕದಿಂದ ಬಂದು ಇದರಲ್ಲಿ ಸೇರಿದ್ದೇನೆ. ನನಗೆ ಯಾವುದೇ ರಾಜಕೀಯ ಪಕ್ಷದ ಬಗ್ಗೆ ಒಲವು ಇಲ್ಲ. ಆದರೆ, ಭಾರತದ ಜನಜೀವನ ಕಣ್ಣಾರೆ ನೋಡುವ, ಜನರೊಂದಿಗೆ ಮಾತನಾಡಬೇಕೆಂಬ ಕನಸು ಹೊತ್ತು ಬಂದಿದ್ದೇನೆ. ಪಾದಯಾತ್ರೆ ವಿಶಿಷ್ಟ ಅನುಭವ ನೀಡುತ್ತಿದೆ. ಕಾಶ್ಮೀರದವರೆಗೂ ಹೋಗುತ್ತೇನೆ' ಎಂದು ಅಮೆರಿಕದಲ್ಲಿ ನೆಲೆಸಿರುವ ಬೆಂಗಳೂರು ಮೂಲದ ದಂತವೈದ್ಯ ಡಾ.ಸ್ನೇಹಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಶಾಲಾ ನಿರ್ವಹಣೆಗೆ ಪೋಷಕರಿಂದ ಶುಲ್ಕ ವಸೂಲಿಗೆ ವಿರೋಧ'

ಬೆಂಗಳೂರು: 'ಮುಖ್ಯಮಂತ್ರಿ ಹಾಗೂ ಸಚಿವರ ಶೇ 40ರಷ್ಟು ಕಮಿಷನ್ ದಂಧೆಯಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸ ಬರಿದಾಗಿದ್ದು, ಶಿಕ್ಷಣ ಇಲಾಖೆಯು ಶಾಲಾ ಮಕ್ಕಳ ಪೋಷಕರಿಂದ ತಿಂಗಳಿಗೆ ₹100 ಪಡೆಯುವ ಹಂತಕ್ಕೆ ತಲುಪಿದೆ' ಎಂದು ಆಮ್ ಆದ್ಮಿ ಪಕ್ಷದ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಲೇವಡಿ ಮಾಡಿದರು.

'ಈ ಹಿಂದೆ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಶೂಗಳನ್ನು ಖರೀದಿಸುವಂತೆ ರಾಜ್ಯ ಸರ್ಕಾರವು ಶಾಲೆಗಳಿಗೆ ಆದೇಶ ಹೊರಡಿಸಿತ್ತು. ಈಗ ಡೆಸ್ಕ್, ವಿದ್ಯುತ್ ಬಿಲ್ ಇನ್ನಿತರ ಖರ್ಚುಗಳಿಗಾಗಿ ವಿದ್ಯಾರ್ಥಿಗಳ ಪೋಷಕರಿಂದ ಪ್ರತಿ ತಿಂಗಳು ₹100 ಶುಲ್ಕ ಪಡೆಯುವಂತೆ ಶಿಕ್ಷಣ ಇಲಾಖೆಯು ಶಾಲೆಗಳ ಆಡಳಿತ ಮಂಡಳಿಗಳಿಗೆ ಸುತ್ತೋಲೆ ಹೊರಡಿಸಿದೆ. ಬಿಜೆಪಿ ಆಡಳಿತದಲ್ಲಿ ಮಿತಿಮೀರಿದ ಭ್ರಷ್ಟಾಚಾರದಿಂದ ಸರ್ಕಾರ ದಿವಾಳಿಯಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ–580 025.
Tel No: 0836 2322771 Fax No : 0836 2324307 Email ID: md.hescom.kn@gmail.com md.hescom.co.in
Corporate Identity Number(CIN): U31401KA2002SGC030437
ಸಂಖ್ಯೆ: ಹು.ವಿ.ಸ.ಕಂ.ನಿ/ಅ.ಅ(ಕಾ)/ಸಕಾಅ(ಕಾ)/ಸಅ(ಕಾ)/ಕ–51/2022–23/CYS5362 ದಿನಾಂಕ:20.10.2022

ಟೆಂಡರ ಪ್ರಕಟಣೆ (ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ಕಾ), ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿರವರು ಬೆಳಗಾವಿ ವಲಯ ವ್ಯಾಪ್ತಿಗೆ ಸಂಬಂಧಿಸಿದ ಸಿವಿಲ್ ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಅಹ್ವಾನಿಸಿರುತ್ತಾರೆ. ಕಾಮಗಾರಿಯವಿವರಗಳು ಈ ಕೆಳಗಿನಂತಿವೆ.

ಕ್ರ ಸಂ	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ	ಕಾಮಗಾರಿ ಮೊತ್ತ	ಕಾಮಗಾರಿ ಅವಧಿ (ತಿಂಗಳು)	ಷರಾ
1	Construction of First Floor and other developmental works to sub division office at Khanapur	5844	Rs.1,21,13,839.16	9	ಸಾಮಾನ್ಯ
2	Construction of O & M Division and Sub-Division office complex at Mudhol (GF+FF)	5845	Rs.3,63,62,033.81	12	ಸಾಮಾನ್ಯ
3	Construction of Division office building at Vijayapur including all developmental works.	5846	Rs.3,23,22,515.71	12	ಸಾಮಾನ್ಯ
4	Construction of City Sub Division-1 at Vijayapur including all developmental works.	5847	Rs.1,81,81,320.50	12	ಸಾಮಾನ್ಯ
5	Construction of City Sub Division-2 at Vijayapur including all developmental works.	5848	Rs.1,81,80,586.36	12	ಸಾಮಾನ್ಯ
6	Construction of Section office at Shivgiri of Rural Sub Division, Vijayapura including all developmental works.	5849	Rs.96,96,452.03	12	ಸಾಮಾನ್ಯ
7	Construction of Section office at Bhutnal of Rural Sub Division, Vijayapura including all developmental works.	5850	Rs.96,96,452.03	12	ಸಾಮಾನ್ಯ

ಸದರಿ ಟೆಂಡರಿನ ಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ದಿನಾಂಕ: 27.10.2022ರ ನಂತರ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ.0836–2223323 ಮೂಲಕ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನೀಯರರು(ಕಾ),
ನಿಗಮ ಕಛೇರಿ, ಹು.ವಿ.ಸ.ಕಂ.ನಿ, ಹುಬ್ಬಳ್ಳಿ.
ವಾ.ಸಾ.ಇ/ಧಾ/691/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ

18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012.
ವೆಬ್‌ಸೈಟ್: http://kea.kar.nic.in ಇ–ಮೇಲ್: keauthority-ka@nic.in

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹೆಚ್ಚುವರಿ ನಿಧಿ ರೂ.386.33 ಕೋಟಿಗಳನ್ನು ಸರ್ಕಾರದ ಮಾರ್ಗಸೂಚಿಗಳ ಅನ್ವಯ ನಿಶ್ಚಿತ ಠೇವಣಿಯಿರಿಸಲು ಟೆಂಡರ್ ಅರ್ಜಿ ಸಂಖ್ಯೆ: KEA/2022-23/AUCTION17 ಯನ್ನು ದಿನಾಂಕ: 20.10.2022 ರಂದು ಆಹ್ವಾನಿಸಲಾಗಿದ್ದು, ಆಸಕ್ತ ಟೆಂಡರ್‌ದಾರರು e-procurement ವೆಬ್‌ಸೈಟ್ http://eproc.karnataka.gov.in ರಲ್ಲಿ ದಿನಾಂಕ: 29.10.2022 ರವರೆಗೆ ಮಧ್ಯಾಹ್ನ 16.00 ಗಂಟೆಯ ಒಳಗೆ ತಮ್ಮ ಟೆಂಡರ್ ಆನ್‌ಲೈನ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ವಾಪ್ರ/2771/ಎಎಎ/2022–23

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ –2.0 ನಿರ್ದೇಶನಾಲಯ, ಆರ್ಥಿಕ ಇಲಾಖೆ

ಕೆಪಿಸಿಎಲ್ ಹಸಿರು ಕಟ್ಟಡ, 5ನೇ ಮಹಡಿ, ಪ್ಯಾಲೇಸ್ ರಸ್ತೆ, ಬೆಂಗಳೂರು – 560 001
ದೂರವಾಣಿ ಸಂಖ್ಯೆ: 080–22028205: ಇ–ಮೇಲ್ ವಿಳಾಸ: pdhrms2@karnataka.gov.in
ಸಂಖ್ಯೆ: ಆ.ಇ/ ಹೆಚ್‌ಆರ್‌ಎಮ್‌ಎಸ್/ಹೆಚ್–2/24/2022 ದಿನಾಂಕ: 21–10–2022

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (HRMS) 2.0 ಅಪ್ಲಿಕೇಶನ್‌ನ ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಎಕ್ಸ್‌ಪ್ರೆಶನ್ ಆಫ್ ಇಂಟ್ರೆಸ್ಟ್ (EoI)

ಪೂರ್ವಭಾವಿ ಟೆಂಡರ್ ಉಲ್ಲೇಖ ಸಂಖ್ಯೆ	HRMS2/2022/EOI/01
ಪ್ರಕಟಣೆಯ ದಿನಾಂಕ	30ನೇ ಸೆಪ್ಟೆಂಬರ್ 2022
ಸಲ್ಲಿಸಲು ಕೊನೆಯ ದಿನಾಂಕ	14ನೇ ನವೆಂಬರ್ 2022

ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ಯಲ್ಲಿ ವಿವರಗಳು ಲಭ್ಯವಿದ್ದು, ಟೆಂಡರ್ ಬಿಡ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ನಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ವಿಳಾಸವನ್ನು ಸಂಪರ್ಕಿಸಿ :– pmhrms2@karnataka.gov.in / conshrms2@karnataka.gov.in

ಸಹಿ/–
ಯೋಜನಾ ನಿರ್ದೇಶಕರು, ಹೆಚ್‌ಆರ್‌ಎಂಎಸ್–2
ಆರ್ಥಿಕ ಇಲಾಖೆ
DIPR/CP/VCPL/2729/2022-23

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ–583105.
ದೂರವಾಣಿ: 08392–242703, ಫ್ಯಾಕ್ಸ್: 08392– 242806
ಸಂಖ್ಯೆ:ವಿಶ್ರೀಕೃವಿಬ/ಆಡಳಿತ/ಟೆಂಡರ್/ವಿವನಿ–ಮೆಸ್/2022–23/811/IInd call
ದಿನಾಂಕ : 17.10.2022

ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು Providing Mess Facility At Girls Hostel Vijayanagara Sri Krishnadevaraya University, Ballari (IInd call) : ರೂ. 1,14,66,000/- ರ ಕೆಲಸಗಳನ್ನು ನಿರ್ವಹಿಸಲು ನಿಯಮಾನುಸಾರ ಅರ್ಹ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ–ಪ್ರೋಕ್ಯೂರ್ ಮೆಂಟ್ ವೆಬ್‌ಸೈಟ್ www.e-proc.karnataka.gov.in ಮುಖಾಂತರ ದಿನಾಂಕ:02.11.2022 ಸಂಜೆ:05.30 ಘಂಟೆಯವರೆಗೆ ಪಡೆದು ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/569/ಎಂಸಿಎ/2022–23

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ:ಕಾಇಂ:ಗ್ರಾ.ಕು.ನೀ & ನೈ ವಿ/ದಾ/ಸ.ಇಂ–1/ಜೆ.ಜೆ.ಎಂ/ಟೆಂಡರ್/841
ದಿನಾಂಕ:17/10/2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2021–22 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆಯ ದಾವಣಗೆರೆ ಮತ್ತು ಹೊನ್ನಾಳಿ ತಾಲ್ಲೂಕಿನ ಒಟ್ಟು 10ಗ್ರಾಮಗಳಿಗೆ10ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳು ರೂ.595.00 ಲಕ್ಷಗಳಿಗೆಅನುಮೋದನೆಯಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ–1, 2 ಮತ್ತು 3ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 31/10/2022 ರ ಸಂಜೆ 5.00 ಘಂಟೆಯ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/544/ ಎಂಸಿಎ/2022–23
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

ಬೆಳಗಾವಿ ಮಹಾನಗರ ಪಾಲಿಕೆ

ಸಂಖ್ಯೆ:ಸಿಸಿಬಿ:ಲೋ.ವಿ./ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ–13/2022–23 ದಿನಾಂಕ:18–10–2022

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ಪ್ರಕಾರ ಆ್ಯಕ್ಟ 2000 ನಿಯಮದಂತೆ Standard Bid Documents ನಿಯಮಗಳನ್ವಯ ಕಾಮಗಾರಿಗಳಿಗೆ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ಮಂಜೂರಾದ ಒಟ್ಟು 04 ಕಾಮಗಾರಿಗಳ ಕುರಿತು ಟೆಂಡರನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲ ಮುಖಾಂತರ ಅಹ್ವಾನಿಸಲಾಗಿದೆ. ಸದರಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 10–11–2022 ರಂದು ಇರುತ್ತದೆ. ವಿವರಗಳನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.eproc.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೋಕ್ಯೂರಮೆಂಟ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ
DIPR/BGM/RO-NO-1057/MCA/2022-23

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288
ಸಂಖ್ಯೆ: ಕವಶಿಸಸ/ಕಾಪಾಅ/ಟೆಂಡರ್–12/2022–23 ದಿನಾಂಕ: 20.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಬೆಂಗಳೂರು/ಮೈಸೂರು/ಕಲ್ಬುರ್ಗಿ/ಬೆಳಗಾವಿ ರೆವಿನ್ಯೂ ವಿಭಾಗಗಳಲ್ಲಿ ಕೈಗೊಂಡಿರುವ ವಸತಿ ಶಾಲೆಗಳ/ವಿದ್ಯಾರ್ಥಿ ನಿಲಯಗಳ/ಭವನಗಳ/ಮೂಲಭೂತ ಸೌಕರ್ಯಗಳು ಹಾಗೂ ಇತರೆ ಕಾಮಗಾರಿಗಳಿಗಾಗಿ ಅರ್ಹ/ನುರಿತ Third Party Consultancy ನೇಮಿಸಲು ಟೆಂಡರ್‌ನ್ನು (Indent No. KREIS/SERVICES/3RD PAR/BEL/CR-15/2022-23, KREIS/SERVICES/3RD PAR/KAL/CR-16/2022-23, KREIS/SERVICES/3RD PAR/BAN/CR-17/2022-23 & KREIS/SERVICES/3RDPAR/MYS/CR-18/2022-23) ಇ–ಪೋರ್ಟಲ್ ಮುಖಾಂತರ ದಿನಾಂಕ: 21.10.2022 ರಂದು ಟೆಂಡರ್‌ಗಳನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 05.11.2022 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ರಲ್ಲಿ ವೀಕ್ಷಿಸಬಹುದಾಗಿದೆ.

ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
DIPR/CP/2760/VCPL/2022-23

ಕೃಷಿ ವಿಶ್ವವಿದ್ಯಾನಿಲಯ

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ, ಬೆಂಗಳೂರು–560065.
ಟೆಂಡರ್ ಪ್ರಕಟಣೆ ಸಂಖ್ಯೆ: ಆಅ/ಟಿ.ಎನ್/485/2022–23,
ದಿನಾಂಕ : 18–10–2022 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ ಪಿಡಬ್ಲ್ಯೂಡಿ /ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1 ರಿಂದ 6ರವರೆಗಿನ ಕಾಮಗಾರಿಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: www.eproc.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 09.11.2022ರಂದು ಅಪರಾಹ್ನ 4.00 ಗಂಟೆಯವರೆಗೆ ಆಗಿರುತ್ತದೆ. ಹಣಕಾಸಿನ ಬಿಡ್ಡನ್ನು ದಿನಾಂಕ: 14.11.2022ರಂದು ಬೆಳಗ್ಗೆ 10.30ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ–ಪೋರ್ಟಲ್ ಸಹಾಯವಾಣಿ support@eprochelpdesk.com ಅಥವಾ 8046010000 ಮತ್ತು 8068948777 ಮತ್ತು ದೂರವಾಣಿ ಸಂಖ್ಯೆ: 080–23332765ಅನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಆಸ್ತಿ ಅಧಿಕಾರಿಗಳು
DIPR/CP/2744/Zenkar/2022-23

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ, ಕಾರವಾರ–581302

ಕ್ರ.ಸಂ. ಕಜಮಂ–122/ಕಾಮಗಾರಿ-II/2022 ದಿನಾಂಕ: 19.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿತೀಯ ಕರೆ)
(ಇ–ಪೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ) (ದ್ವಿ–ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ, ESI ಮತ್ತು EPF ರಲ್ಲಿ ನೋಂದಾಯಿತ ಗುತ್ತಿಗೆದಾರ / ಸಂಸ್ಥೆಗಳಿಂದ 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್' ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ನಿಗದಿತ ಸಿಬ್ಬಂದಿಗಳನ್ನು "ಡಿ ದರ್ಜೆ" ಕರ್ನಾಟಕ ಜಲಸಾರಿಗೆ ಮಂಡಳಿಗೆ ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ಅನುಭವವುಳ್ಳ ಆಸಕ್ತ ನೋಂದಾಯಿತ ಸಂಸ್ಥೆ / ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್ ಡಾಕ್ಯೂಮೆಂಟ್ ಮತ್ತು ಇತರ ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ http://eproc.karnataka.gov.in ನಿಂದ (Download) ಪಡೆದುಕೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವದಿ ವಿಸ್ತರಣೆಯ ಮಾಹಿತಿ ಹಾಗೂ ವಿವರಗಳನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಕಾಮಗಾರಿಯ ಹೆಸರು: (1) Providing "D" Group Manpower on outsource basis for various offices under Karnataka Maritime Board ಟೆಂಡರಿಗಿಟ್ಟ ಮೊತ್ತ (ಜಿ ಎಸ್ ಟಿ ಹೊರತುಪಡಿಸಿ): **ರೂ. 1,11,38,496.00** ಇ.ಎಂ.ಡಿ.ಮೊತ್ತ: As mentioned in E-procurement, ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: **28.10.2022 @ 17:00 hours** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **31.10.2022 @ 17:00 hours.**

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಟೆಂಡರ್‌ನ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕದೊಳಗೆ ಈ ಕಛೇರಿಯ ದೂರವಾಣಿ ಸಂ.: 08382 221035/221494 ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಬಂದರು ಇಂಜಿನೀಯರ್,
ಬಂದರು ಮತ್ತು ಒಳನಾಡು ಜಲಸಾರಿಗೆ ಕಾರವಾರ
DIPR/ADK/MCA/541/22-23 Dt.20.10.2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಮಹದೇವಪುರ ವಿಭಾಗ,
ಬೆಂಗಳೂರು – 560 048.
ಸಂ: ಕಾಪಾಅ/ಮದೇಪು/ಟೆಂಡ್/12/2022–23 ದಿನಾಂಕ: 21.10.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ (2ನೇ ಕರೆ)				
1	104	13.00 ರಿಂದ 30.00	16,250 ರಿಂದ 37,500	5
2	105	30.00	37,500	1
3	112	20.00	25,000	1
4	113	30.00	37,500	1
5	115	20.00 ರಿಂದ 25.00	25,000 ರಿಂದ 31,250	3
6	116	15.00 ರಿಂದ 22.50	18750 ರಿಂದ 28,125	3
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ (2ನೇ ಕರೆ)				
7	107	15.00 each	18,750 each	2
8	111	30.00	37,500	1
9	115	30.00	37,500	1
10	116	15.00 & 30.00	18,750 & 37,500	2
ಸಾಮಾನ್ಯ ಪ್ರವರ್ಗಕ್ಕೆ (2ನೇ ಕರೆ)				
11	83	15.00 ರಿಂದ 20.00	37,500 ರಿಂದ 50,000	3
12	104	8.00	20,000	1
13	105	20.00 ರಿಂದ 50.00	50,000 ರಿಂದ 1,00,000	3
14	106	10.00 ರಿಂದ 20.00	25,000 ರಿಂದ 50,000	3
15	107	12.00 ರಿಂದ 30.00	30,000 ರಿಂದ 60,000	4
16	108	15.00 ರಿಂದ 30.00	37,500 ರಿಂದ 60,000	2
17	109	15.00 ರಿಂದ 30.00	37,500 ರಿಂದ 60,000	2
18	110	10.00 ರಿಂದ 30.00	25,000 ರಿಂದ 60,000	3
19	111	20.00 ರಿಂದ 30.00	50,000 ರಿಂದ 60,000	4
20	112	10.00 ರಿಂದ 30.00	25,000 ರಿಂದ 60,000	6
21	113	10.00 ರಿಂದ 50.00	25,000 ರಿಂದ 1,00,000	7
22	114	15.00 ರಿಂದ 30.00	37,500 ರಿಂದ 60,000	5
23	115	5.00 ರಿಂದ 30.00	12,500 ರಿಂದ 60,000	10
24	116	5.00 ರಿಂದ o 22.50	12,500 ರಿಂದ 45,000	4
ಒಟ್ಟು ಕಾಮಗಾರಿಗಳ ಸಂಖ್ಯೆ				77

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ದಿನಾಂಕ : 28.10.2022 ರ ಸಂಜೆ 4.00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 16.11.2022 ರ ಸಂಜೆ 4.00 ಗಂಟೆಯವರೆಗೆ 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 17.11.2022 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770005
ಇ–ಮೇಲ್ : bcwdhelpline@gmail.com
ಸಂಖ್ಯೆ:BCWD-17012/22/2022-BCWD_SCHLR-BCWD ದಿನಾಂಕ:21.10.2022

ಪ್ರಕಟಣೆ

ಮೆಟ್ರಿಕ್–ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1 ಅಲೆಮಾರಿ / ಅರೆಅಲೆಮಾರಿ ವಿದ್ಯಾರ್ಥಿಗಳಿಂದ, 2022–23 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ **"ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ", "ಶುಲ್ಕ ಮರುಪಾವತಿ"**, ಮತ್ತು **"ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ"**, ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, **31.12.2022 ಕ್ಕೆ** ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	31.12.2022
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ:	https://ssp.postmatric.karnataka.gov.in
ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ: https://bcwd.karnataka.gov.in	
ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ :	8050770005
ಇಮೇಲ್ :	bcwdhelpline@gmail.com
ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್ :	postmatrichelp@karnataka.gov.in
ದೂರವಾಣಿ ಸಂಖ್ಯೆ :	080-35254757

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/2725/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಸರ್ವೇಕ್ಷಣಾ ಘಟಕ, ಮೈಸೂರು ಜಿಲ್ಲೆ, ಮೈಸೂರು.

ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು 570010.
ದೂ.ಸಂ.: 0821–2971847 E-Mail Id: dsomysuru@gmail.com
ಸಂಖ್ಯೆ:ಎನ್.ಹೆಚ್.ಎಂ/15thFC/ಮೈ/01/2022–23 ದಿ: 20.10.2022

ಇ–ಟೆಂಡರ್ ಪ್ರಕಟಣೆ

15ನೇ ಹಣಕಾಸು ಆಯೋಗದಡಿಯಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಹಾಗೂ ಉಪಕೇಂದ್ರಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಅಧಿಸೂಚನೆ ಸಂಖ್ಯೆ: ಎನ್.ಹೆಚ್.ಎಂ/15ನೇ ಹಣಕಾಸು/ಡಿ.ಹೆಚ್.ಎಸ್/ಮೈ/01/2022–23 ದಿ: 20.10.2022 **ಇ–ಟೆಂಡರ್ ಅಂದಾಜು ಮೊಬಲಗು ರೂ.1,83,58,000/– ಇ.ಎಂ.ಡಿ ರೂ.3,67,160/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್‌ಅಂದಾಜು ಮೌಲ್ಯ: ರೂ.183.58 ಲಕ್ಷ **2) ಇ.ಎಂ.ಡಿ ಮೊಬಲಗು:** ರೂ.3,67,160=00 **3) ಭದ್ರತಾ ಠೇವಣಿ:** ರೂ.5,50,740=00 **4) ಟೆಂಡರ್ ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ** ದಿ: 21.10.2022 ರಂದು ಮದ್ಯಾಹ್ನ 03:00 ಗಂಟೆಗೆ **5) ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ** ದಿ: 29.10.2022 ರಂದು ಮದ್ಯಾಹ್ನ 04:00 ಗಂಟೆಗೆ. **6) ಟೆಂಡರ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:** ದಿ: 15.11.2022 ರಂದು ಸಂಜೆ 04:30 ಗಂಟೆಗೆ. **7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ** ದಿ: 17.11.2022 ರಂದು ಸಂಜೆ 05:00 ಗಂಟೆಗೆ. **8) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** ದಿ: 19.11.2022 ರಂದು ಸಂಜೆ 05:30 ಗಂಟೆಗೆ. **9) ಟೆಂಡರ್ ತೆರೆಯುವ ಸ್ಥಳ:** ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಎನ್.ಪಿ.ಸಿ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು
DIPR/DDMYS/MCA/589/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ ಕೇಂದ್ರ–3)
ಅನೆಕ್ಸ್–2 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಕಾಪಾಅ/ಯೋಕೇ–3/ಟೆಂಡರ್/03/2022–23 ದಿನಾಂಕ: 21.10.2022

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (2ನೇ ಕರೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು ಯೋಜನೆ ಕೇಂದ್ರ–3, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಜಯಮಹಲ್ ನಾರಾಯಣ ಪಿಳ್ಳೈ ಬೀದಿ, ಬ್ರಾಡ್‌ವೇ, ಬ್ಯಾಡರಹಳ್ಳಿ, ಕ್ಲೀವ್‌ಲ್ಯಾಂಡ್ ಟೌನ್, ಪುಲಿಕೇಶಿನಗರ, ಪಿಳ್ಳಣ್ಣ ಗಾರ್ಡನ್, ಕೂಕ್ಸ್ ರಸ್ತೆ, ಭಾರತಿನಗರ, ಕಾಕ್ಸ್ ಟೌನ್, ಮರ್ಫಿ ಟೌನ್, ಗಂಗಾನಗರದ ಬೃ.ಬೆಂ.ಮ.ಪಾಲಿಕೆ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಕಟ್ಟಡಗಳು ಮತ್ತು ಹೆಚ್ಚುವರಿ ಮಹಡಿ ನಿರ್ಮಾಣ ಹಾಗೂ ಬೆಂಗಳೂರು ಬ್ರಾಡ್‌ವೇ ರಸ್ತೆಯಲ್ಲಿ ಹಫೀಜಾ ಶಾಲೆಯ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವುದು.	1095.00	₹ 15.00 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 05.11.2022ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 31.10.2022ರ ಸಂಜೆ 5:30 ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ ಇಲ್ಲಿ ದಿನಾಂಕ 03.11.2022ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–3, ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ 08.11.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ. ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–3

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.80	33,890	33,890
ಹಾರಂಗಿ	2,859	2,855.49	1,967	250
ಕಬಿನಿ	2,284	2,283.79	3,540	4,792
ಹೇಮಾವತಿ	2,922	2,921.75	5,604	4,422
ಲಿಂಗನಮಕ್ಕಿ	1,819	1,814	3,086	6,433
ಸೂಪಾ (ಮೀ)	564	553.85	5,136	912
ಮಾಣಿ	595	589	187	750
ತುಂಗಭದ್ರಾ	1,633	1,632.99	35,232	34,284
ಮಲಪ್ರಭಾ	2,079.50	2,079.50	1,394	1,394
ಘಟಪ್ರಭಾ	2,175	2,175	2,195	2,195
ಭದ್ರಾ	186	185	4,875	2,456
ಆಲಮಟ್ಟಿ (ಮೀ)	519.60	519.59	61,285	64,117
ನಾರಾಯಣಪುರ (ಮೀ)	492.25	492.02	55,000	42,000

* ನೆಲಮಟ್ಟದಿಂದ

ಮಳೆ: ಮೂರು ಮಂದಿ ಸಾವು

ಬೆಂಗಳೂರು: ರಾಜ್ಯದ ಮೈಸೂರು, ಹಾಸನ, ಬೀದರ್ ಸೇರಿದಂತೆ ಹಲವೆಡೆ ಶುಕ್ರವಾರವೂ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ.

ಹಾಸನದ ಹರ್ಷ ಮಹಲ್ ರಸ್ತೆಯಲ್ಲಿ ಗುರುವಾರ ರಾತ್ರಿ ಕಾಂಪೌಂಡ್ ಕುಸಿದು ಬೀದಿ ಬದಿಯಲ್ಲಿ ಹೇರ್‌ಪಿನ್, ಕ್ಲಿಪ್ ಮಾರುತ್ತಿದ್ದ ವಲ್ಲಭಾಯಿ ರಸ್ತೆಯ ಲೋಕೇಶ್ (50) ಮೃತಪಟ್ಟಿದ್ದಾರೆ.

ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಮುಧೋಳ (ಕೆ) ಹೊರ ವಲಯದ ಹೊಲದಲ್ಲಿ ಶುಕ್ರವಾರ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲು ಬಡಿದು ಚಿಮ್ಮೇಗಾಂವ್‌ನ ಕಚರೂಬಾಯಿ ಕೇರಬಾ ತೋಟಗೆ ಮತ್ತು ಕಿಶನ್ ವಿಠಲ್ ಕುಂಬಾರ್ ಮೃತಪಟ್ಟಿದ್ದು, ಅರ್ಚನಾ ಎಂಬುವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಮಳೆಯಿಂದಾಗಿ ಚಾಮುಂಡಿ ಬೆಟ್ಟದ ನಂದಿ ಮಾರ್ಗದಲ್ಲಿ ಮತ್ತೆ ಎರಡು ಕಡೆಗಳಲ್ಲಿ ರಸ್ತೆ ಕುಸಿದಿದೆ.

ಮಹಾರಾಷ್ಟ್ರದಲ್ಲಿ ನಿರಂತರ ಮಳೆ ಆಗುತ್ತಿರುವ ಕಾರಣ ವೀರ ಭಟ್ಕಳ ಅಣೆಕಟ್ಟೆಯಿಂದ 1.80 ಲಕ್ಷ ಕ್ಯುಸೆಕ್ ನೀರನ್ನು ಭೀಮಾ ನದಿಗೆ ಬಿಡಲಾಗುತ್ತಿದೆ. ಭೀ ಮಾ ಬ್ಯಾರೇಜ್ ತುಂಬಿದ್ದು, ಹಿನ್ನೀರಿನಿಂದ ಕೆಲ ಗ್ರಾಮಗಳ ಸಂಪರ್ಕ ಕಡಿತವಾಗಿದೆ.

ಕಟ್ಟಡ ಕುಸಿತ

ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪಾರಂಪರಿಕ ಕಟ್ಟಡ ಮಳೆಯಿಂದಾಗಿ ಶುಕ್ರವಾರ ಕುಸಿದಿದ್ದು, ಭಾರಿ ಅನಾಹುತ ತಪ್ಪಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. www.midnglb@rediffmail.com. ದೂರವಾಣಿ : 08472 –220196

ಐಎಫ್‌ಟಿ. ನಂ: ಕಾನಿಅ/ಸನೀಅವಿ/ಕ/ಯೋಜ–3/2022–23/3243 ದಿನಾಂಕ: 19–10–2022

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ– 1 & 3) ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2702 ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಹಾಗೂ 4702 ಕೆರೆಗಳ ಆಧುನೀಕರಣ ಅಡಿಯಲ್ಲಿ ಕಾಮಗಾರಿಗಳಿಗಾಗಿ ಇ–ಟೆಂಡರ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ. 13,38,168.54, ಗರಿಷ್ಠ ರೂ. 51,79,914.21, 3) ಗುತ್ತಿಗೆದಾರರ ಅರ್ಹತೆ ವಿವರ: 2ನೇ ದರ್ಜೆ ಮೇಲ್ಪಟ್ಟ (ಬಿಡ್‌ನಲ್ಲಿ ಇರುವಂತೆ), 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಇ–ಪ್ರೊಕ್ಯೂರ್‌ಮೆಂಟನಂತೆ, ಇ.ಎಂ.ಡಿ. ಮೊತ್ತ ಕನಿಷ್ಠ ರೂ. 33,500.00, ಗರಿಷ್ಠ ರೂ. 1,06,300.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : 02–11–2022 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 03–11–2022 ಸಾಯಂಕಾಲ 17.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–11–2022 ಸಾಯಂಕಾಲ 17.30 ಗಂಟೆಯ ವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : 05–11–2022 ಬೆಳಿಗ್ಗೆ 17.30 ಗಂಟೆಯ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.10) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/751/ಎಂ.ಸಿ.&ಎ/2022–23

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಾಗಿ ರಾಜ್ಯದ ವಿವಿಧೆಡೆ ನಿರ್ಮಿಸಲು ಉದ್ದೇಶಿಸಿರುವ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ಕಾಮಗಾರಿಗಳಿಗೆ (ಪ್ಯಾಕೇಜ್– 1 ರಿಂದ 10) ವಾಸ್ತುಶಿಲ್ಪ ಸಂಸ್ಥೆಗಳ ನೇಮಕಾತಿಗಾಗಿ e-Procurement ಮೂಲಕ ಈ ಕೆಳಕಂಡ ಅಧಿಸೂಚನೆಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇನ್ನಿತರ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಕೆಳಕಂಡ ವಿಳಾಸದಲ್ಲಿ ಮತ್ತು ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದಾಗಿದೆ. ವಿವರಗಳು ಕೆಳಕಂಡಂತೆ:

Notification No. KHB/C.E/Edu.Dept/Polytechnic/AEF/136 to 145/ 2022-23, Dated: 20.10.2022

ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 29.10.2022 ಸಂಜೆ 4.00 ಗಂಟೆ.

ಕಾಮಗಾರಿಗಳ ಬಗ್ಗೆ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್ ಜಾಲದಲ್ಲಿ ಸಂಪರ್ಕಿಸಬಹುದು.

ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕೆ.ಜಿ. ರಸ್ತೆ, ಬೆಂಗಳೂರು–560009. ದೂರವಾಣಿ: 080–22273511, 080–22100077 ಇ–ಮೇಲ್ ವಿಳಾಸ: cheifengineerkhb@gmail.com, website: www.karnatakahousing.com, https://eproc.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾತ್ರ/2751/ಅಕಾರ್/22–23

ಸಾಲಗಳ ವಸೂಲಾತಿ ನ್ಯಾಯಪೀಠ-3, ದೆಹಲಿ
4ನೇ ಮಹಡಿ, ಜೀವನ್ ತಾರಾ ಬಿಲ್ಡಿಂಗ್, ಪಾರ್ಲಿಮೆಂಟ್ ಸ್ಟ್ರೀಟ್, ನವದೆಹಲಿ – 110001

ಇವರ ಸಮ್ಮುಖದಲ್ಲಿ, ಬ್ಯಾಂಕ್‌ಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ಸಂದಾಯ ಆಗಬೇಕಿರುವ ಸಾಲಗಳ ವಸೂಲಾತಿ ಕಾಯ್ದೆ, 1993ರ ಸೆಕ್ಷನ್ 19(4) ಅನ್ನು ಸಾಲಗಳ ವಸೂಲಾತಿ ನ್ಯಾಯಪೀಠ (ಪ್ರೊಸೀಜರ್ ರೂಲ್ಸ್) ನಿಯಮಗಳು, 1993ರ ನಿಯಮ 12 ಮತ್ತು 13 ಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಜಾರಿಗೊಳಿಸಲಾದ ಪ್ರಕಟಣೆ.

ಒಎ 365/2022/ಡಿಆರ್‌ಟಿ 3 ಐಡಿಬಿಐ ಬ್ಯಾಂಕ್ ಲಿ., ಅರ್ಜಿದಾರ ವಿರುದ್ಧ ದಿಮೊಶ್ ಮಂಗದಾನ ಮತ್ತು ಇತರರು ಎದುರುದಾರರು

ಗೆ, ಡಿ–3. ಮೆ. ಸಿಎಂಆರ್‌ಎಸ್ ಇನ್ಫ್ರಾಸ್ಟ್ರಕ್ಚರ್ ಪ್ರೈ. ಲಿ., ಇದರ ನಿರ್ದೇಶಕರು, 589, 3ನೇ ಮಹಡಿ, ಸಿ–ಬ್ಲಾಕ್, ಏಸಸ್ ಲೇಔಟ್, ಬೆಂಗಳೂರು–560037 ಇವರ ಮುಖಾಂತರ

ಅದಾಗ್ಯೂ ಮೇಲ್ಕಂಡ ಅರ್ಜಿದಾರ ನಿಮ್ಮ ವಿರುದ್ಧ ಪ್ರಕರಣ ಹೂಡಿರುತ್ತಾರೆ ಮತ್ತು ನಿಮಗೆ ಸಾಮಾನ್ಯ ರೀತಿಯಲ್ಲಿ ನೋಟಿಸ್ ನೀಡುವುದು ಸಾಧ್ಯವಾಗುವುದಿಲ್ಲ ಎಂಬುದನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿರುತ್ತಾರೆ. ಆದ್ದರಿಂದ, ಈ ನೋಟಿಸ್‌ನ್ನು ಜಾಹೀರಾತು ಮೂಲಕ ನೀಡಲಾಗುತ್ತಿದ್ದು, ನೀವು 22.11.2022 **ರಂದು ಬೆಳಗ್ಗೆ 10:30** ಗಂಟೆಗೆ ಸದರಿ ನ್ಯಾಯಪೀಠದ ಎದುರು ಹಾಜರಾಗಬೇಕೆಂದು ನಿರ್ದೇಶನ ನೀಡಲಾಗಿದೆ.

ಸದರಿ ನ್ಯಾಯಪೀಠದ ಸಮ್ಮುಖದಲ್ಲಿ ಮೇಲೆ ತಿಳಿಸಲಾಗಿರುವ ದಿನಾಂಕದಂದು ನೀವು ಹಾಜರಾಗದಿದ್ದಲ್ಲಿ, ಸದರಿ ಪ್ರಕರಣವನ್ನು ನಿಮ್ಮ ಅನುಪಸ್ಥಿತಿಯಲ್ಲಿಯೇ ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುತ್ತದೆ.

ಕೋವಿಡ್ ಸಾಂಕ್ರಾಮಿಕ ಸ್ಥಿತಿ ಮುಂದುವರಿತಲೇ ಇರುವುದರಿಂದಾಗಿ, ಎಲ್ಲಾ ಪ್ರಕರಣಗಳನ್ನು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕೈಗೊಳ್ಳಲಾಗುತ್ತಿದೆ ಮತ್ತು ಅದಕ್ಕಾಗಿ :– (1) ಎಲ್ಲಾ ವಕೀಲರು/ದಾವೆದಾರರು **ಸಿಸ್ಕೊ ವೆಬೆಕ್ಸ್** ಅಪ್ಲಿಕೇಶನ್/ಸಾಫ್ಟ್‌ವೇರ್ ಡೌನ್‌ಲೋಡ್ ಮಾಡಿಕೊಳ್ಳಬೇಕು. (2) ಕ್ವಾಸಿ ಪ್ರಕರಣದ ಮುಂದಿನ ವಿಚಾರಣಾ ದಿನಾಂಕಕ್ಕೆ ಸಂಬಂಧಿತ **ಮೀಟಿಂಗ್ ಐಡಿ** ಮತ್ತು **ಪಾಸ್‌ವರ್ಡ್** ವಿವರಗಳನ್ನು, ರಜಿಸ್ಟ್ರಾರ್/ರಿಕವರಿ ಆಫೀಸರ್–1/ಮತ್ತು ರಿಕವರಿ ಆಫೀಸರ್–2 ಇವರಿಂದ ಪಡೆದುಕೊಳ್ಳಬಹುದು ಮತ್ತು ಮುಂದಿನ ದಿನಾಂಕಕ್ಕೆ ಒಂದು ದಿನ ಮುಂಚಿತವಾಗಿ ಡಿಆರ್‌ಟಿ'ಯ ಅಧಿಕೃತ **drt.gov.in** ಪೋರ್ಟಲ್‌ನಲ್ಲಿ, ಪಬ್ಲಿಕ್ ನೋಟಿಸ್ ಹೆಡ್‌ನಲ್ಲಿ ಕೂಡ ಲಭ್ಯವಿರುತ್ತದೆ. (3) ಯಾವುದೇ ತುರ್ತು ಕ್ವಾಸಿ ಪ್ರಕರಣದ ಸಂದರ್ಭದಲ್ಲಿ ವಕೀಲರು/ದಾವೆದಾರರು ಸಂಬಂಧಿತ ಸಿಬ್ಬಂದಿಯನ್ನು ದೂರವಾಣಿ ಸಂ. **23748469** ಸಂಖ್ಯೆಯಲ್ಲಿ ಸಂಪರ್ಕಿಸವುದು.

ನನ್ನ ಕೈಯಾರೆ ಮತ್ತು ಸದರಿ ನ್ಯಾಯಪೀಠದ ಮೊಹರಿನೊಂದಿಗೆ **27/09/2022**ರಂದು ನೀಡಲಾಗಿದೆ.

ನ್ಯಾಯಪೀಠದ ಆದೇಶದ ಮೇರೆಗೆ

Directorate of Health & Family Welfare Services
Arogya Soudha, 6th Floor, Magadi Road, Bengaluru-560023
Ph: 080-23295623, e-mail: ddehospital-hfws@karnataka.gov.in

No.: e-H/Sakala Programme/32/2019-20 (e-663916) Date : 20.10.2022

Walk-In-Interview

The Directorate of Health and Family Welfare Services invites suitable interested candidates for the Walk-in-Interview to the following post.

The post is temporary and purely on contractual basis upto **31.03.2023.** It may be continued as per requirement of the Department. The interested candidates should bring all the original documents along with one set of self-attested photocopy of certificates (Marks Card), passport size photograph and valid identity proof. The interested candidates should register their name on **31.10.2022 between 10.00 am to 10.30 am** for the respective post mentioned below:

1) Post: **Sakala Consultant.** Number of vacancies: **01.** Salary: Rs.25,000/-. Qualification: **Any Degree** (BA, BSc, B.Com), Experience : **Fresh Graduates.** Date, time & Location of Walk-in-interview: **31.10.2022 at 10.00 AM.** Location: **Meeting Hall, 3rd Floor, Directorate of Health and FW Services, Arogya Soudha, Bengaluru.**

For additional details regarding the post, please visit: **https://karunadu.karnataka.gov.in/hfw**

Sd/- Director
Health & Family Welfare Services

DIPR/CP/2763/BCPL /2022-23

ರೇಷ್ಮೆ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ. 1ನೇ ವಿಭಾಗ, ರೇಷ್ಮೆ ಇಲಾಖೆ
ನಂ. 14, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು–560 021.

ಸಂಖ್ಯೆ: ರೇಇ/ಕಾಇ.1/ಸಇ.1/ಟೆಂಡರ್/382/2022–23 ದಿನಾಂಕ:21.10.2022

ಟೆಂಡರ್ ಪ್ರಕಟಣೆ ಸಂಖ್ಯೆ: 09/2022–23 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ರೇಷ್ಮೆ ಇಲಾಖೆ, ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಸಂಬಂಧಿಸಿದಂತೆ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಅವಧಿ
1	Construction of Training Centre and office Building in the premises of Government Cocoon Market at Chikkaballapura, Chikkaballapura District Under RIDF-XXVII NABARD (WORK_INDENT113) (Re-Tender)	490.00	As per E-Portal	11 ತಿಂಗಳು (ಮಳೆಗಾಲ ಸೇರಿದಂತೆ)

1) ಆಸಕ್ತಿಯುಳ್ಳ ಅರ್ಜಿದಾರರು ಪೂರ್ವ ಅರ್ಹತಾ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ:25.10.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವ ಅರ್ಹತಾ ಸಭೆಯ ದಿನಾಂಕ: 10.11.2022ರ ಬೆಳಿಗ್ಗೆ 11:00 ಗಂಟೆಗೆ. 3) ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ದಿನಾಂಕ: 25.11.2022ರ ಸಂಜೆ 16:00 ಗಂಟೆಯೊಳಗೆ ಸಲ್ಲಿಸಬಹುದು. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 28.11.2022 ಬೆಳಿಗ್ಗೆ 11:00 ಗಂಟೆಗೆ (ಸಾಧ್ಯವಾದಲ್ಲಿ). 5) ತಿದ್ದುಪಡಿ (Corrigendum)/ ಅನುಬಂಧ (Addendum) ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು.

ವಾಸಾಸಂ/ವಾತ್ರ/ಬೆಂ/2723/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ

ಕ್ರಸಂ/ಪಂ.ರಾ.ಇಂ./ವಿ.ಹಾ/ಪ.ಶಿ–2/ಟೆಂಡರ್/2022–23/3964 ದಿನಾಂಕ:20–10–2022

(ಟೆಂಡರ್ ಪ್ರಕಟಣೆ 1ನೇ ಕರೆ)
(E–Gok ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

5054 ವಿಶೇಷ ಅಭಿವೃದ್ಧಿ ಅನುದಾನ ಲೆಕ್ಕ ಶೀರ್ಷಿಕೆಗಳಡಿ ಮಂಜೂರಿಗೊಂಡ ರಾಣೇಬೆನ್ನೂರು/ ಬ್ಯಾಡಗಿ ತಾಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

(1) ಸಿದ್ಧಾಪುರ– ಕೆಂಚ್ಚಾರ ರಸ್ತೆ (INDENT–91745) (2) ಗುಡಿಹೊನ್ನತ್ತಿ– ಹೊಸಹೊನ್ನತ್ತಿ ರಸ್ತೆ (INDENT– 91744) (3) ಹಳೇ ಬ್ಯಾಡಗಿ ರಸ್ತೆ ಚೆನ್ನಕೇರ ಹೊಲದಿಂದ ಗುಡ್ಡದ ಮಲ್ಲಾಪುರ ಹೊಲದವರೆಗೆ ರಸ್ತೆ (INDENT– 95057)

1) ಟೆಂಡರ್ ಫಾರಂಗಳನ್ನು ಇ–ಪ್ರಾಕ್ಯೂರ್ ಮೆಂಟ್ ಮುಖಾಂತರ ಪಡೆದುಕೊಳ್ಳಬಹುದಾದ ದಿನಾಂಕ : 20–10–2022.

2) ಚಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03–11–2022 ರ 16:00 ಗಂಟೆಯವರೆಗೆ

3) ಇ–ಪ್ರಾಕ್ಯೂರ್ ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ(ಸಾಧ್ಯವಾದಲ್ಲಿ): 04–11–2022, 17:00 ಗಂಟೆಗೆ (ಕ್ರಸಂ. 3)

4) ಇ–ಪ್ರಾಕ್ಯೂರ್ ಮೆಂಟ್ ಆರ್ಥಿಕ ಬಿಡ್ ತೆರೆಯುವ ದಿನಾಂಕ(ಸಾಧ್ಯವಾದಲ್ಲಿ): 07–11–2022, 11:00 ಗಂಟೆಗೆ(ಕ್ರಸಂ. 1,2)

ಟೆಂಡರ್ ಬಗ್ಗೆ ಸಂಪೂರ್ಣ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-Gok ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ www.eproc.karnatak.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್ ಪಂ.ರಾ.ಇಂ.ವಿಭಾಗ, ಹಾವೇರಿ

ವಾ.ಸಾ.ಇ/ಹಾವೇರಿ/326/2022–23/ದೇಶಾವಾದಜಾಹೀರಾತು

ಸಕ್ಷಮ ಪ್ರಾಧಿಕಾರ
ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿ. ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್, ಆಯುಕ್ತರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ನೃಪತುಂಗ ರಸ್ತೆ, ಭಾರತೀಯ ರಿಸರ್ವ್ ಬ್ಯಾಂಕ್ ಹತ್ತಿರ, ಬೆಂಗಳೂರು–560 001

ಸಂ: ಕೆಪಿಐಡಿ/ಸಿ.ಎ/ಸಿಎ–18/22–23 ದಿನಾಂಕ: 12.10.2022

ಸಾರ್ವಜನಿಕ ಪ್ರಕಟಣೆ

ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿಮಿಟೆಡ್ ಮತ್ತು ಕಣ್ವ ಗ್ರೂಪ್ ಆಫ್ ಕಂಪನೀಸ್ ದೂಷಿತ ಕಂಪನಿಯ ಠೇವಣಿದಾರರು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರುಗಳ ಹಿತಾಸಕ್ತಿ ಸಂರಕ್ಷಣೆ ಕಾಯ್ದೆ 2004ರ (ಕೆಪಿಐಡಿಎಫ್‌ಇ) ಕಲಂ 7(2)ರನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳುವಳಿಕೆ.

ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿಮಿಟೆಡ್ ಮತ್ತು ಕಣ್ವ ಗ್ರೂಪ್ ಆಫ್ ಕಂಪನೀಸ್ ದೂಷಿತ ಕಂಪನಿಗಳಿಗೆ **"ಆಡಳಿತ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ"** ರವರನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಇನ್ನು ಮುಂದೆ ಎಲ್ಲಾ ಕಾರ್ಯಗಳನ್ನು ಈ ಕಛೇರಿಯಲ್ಲಿ ನಡೆಸಲು ಸೂಚಿಸುತ್ತಾ ಠೇವಣಿದಾರರು ಕ್ಲೇಮ್ ಅರ್ಜಿಯನ್ನು **https://rcb.karnataka.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ **ದಿನಾಂಕ : 02–11–2022** ಆಗಿರುವುದು. ಈ ಪ್ರಾರಂಭಿಕ ದಿನಾಂಕದಿಂದ 1 ತಿಂಗಳು ಅಂದರೆ (30 ದಿನಗಳು) ಅರ್ಜಿಗಳನ್ನು ಸಲ್ಲಿಸುವ **ಕಡೆಯ ದಿನಾಂಕವಾದ 01–12–2022ರ ಸಂಜೆ 5.30ರ ಒಳಗಾಗಿ** ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಅಸ್ವಸ್ಥತೆ ದಾಖಲೆಗಳಿದ್ದಲ್ಲಿ ಅವರ ನಾಮನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ;

ಕ್ರ. ಸಂ.	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1.	ಠೇವಣಿದಾರರು (Depositor)	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು
2.	ನಾಮನಿರ್ದೇಶಿತರು (Nominee)	1. ಠೇವಣಿದಾರರ ಮರಣ ಪ್ರಮಾಣ ಪತ್ರ, 2. ವಂಶ ವೃಕ್ಷ (ತಹಸೀಲ್ದಾರರವರಿಂದ ಪಡೆದಿರತಕ್ಕದ್ದು) 3. ನಾಮನಿರ್ದೇಶಿತರ ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3.	ವಾರಸುದಾರರು (Legal Heirs)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಸೀಲ್ದಾರ್ ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮ (Nominee) ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ–ನ್ಯಾಯಾಲಯದ ಆದೇಶ. 5. ವಾರಸುದಾರರ ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರರ ಅಧಿಕಾರ (Authorization from other legal heirs).
4.	ಜಿ.ಪಿ.ಎ (General Power of Attorney)	1. ಠೇವಣಿದಾರರು ಅಸ್ವಸ್ಥತೆ ದಾಖಲಾತಿಗಳುವುದಕ್ಕೆ ಸಂಬಂಧಿಸಿದ ದಾಖಲೆಗಳು (ಗಂಭೀರ ಅರೋಗ್ಯ ಸಮಸ್ಯೆ ಇರುವವರು). ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2. ಹೊರದೇಶದಲ್ಲಿ ವಾಸಿಸುತ್ತಿರುವವರು Apostalised copy citizen card+ Passport 3. ಮೇಲಿನ ಕ್ರಸಂ. 1 ಮತ್ತು 2ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ ವಕೀಲರಿಂದ Notarized Power of Attorney Certificate ಸಲ್ಲಿಸತಕ್ಕದ್ದು, 4. ಜಿ.ಪಿ.ಎ ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5.	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ 2. ನಾಮನಿರ್ದೇಶಿತರ ಮರಣ ಪತ್ರ 3. ಗಾರ್ಡಿಯನ್ ನೇಮಕದ ದಾಖಲೆ 4. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು ಪ್ರತಿ ಕಂಪನಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು;

ಕ್ರ. ಸಂ.	ಠೇವಣಿದಾರರು/ ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1.	ಉಳಿತಾಯ ಖಾತೆ (savings account)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front page) ನಕಲು. 2. ಪಾಸ್‌ಬುಕ್‌ನಲ್ಲಿ ಠೇವಣಿದಾರರ ಕ್ಲೇಮಿನಿಂದ ಪಡೆದಿರುವ ವಹಿವಾಟಿನ ಪ್ರತಿ (Transaction statement page in passbook of Claimed amount) 3. ಠೇವಣಿದಾರರು/ನಾಮನಿರ್ದೇಶಿತರು/ವಾರಸುದಾರರು/ಜಿ.ಪಿ.ಎ ದಾರರು ಮೇಲಿನ ದಾಖಲೆಗಳನ್ನು ನೋಟರಿ/ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2.	ನಿರ್ದಿಷ್ಟ ಠೇವಣಿ	1. ಬಾಂಡ್ ಪ್ರಮಾಣ ಪತ್ರ / ನಿರ್ದಿಷ್ಟ ಠೇವಣಿ ಪ್ರಮಾಣ ಪತ್ರ / ಇತರೆ 2. ಠೇವಣಿದಾರರ ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3.	ಮರುಕಳಿಸುವ ಠೇವಣಿ (Recurring Deposit)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front page) ನಕಲು. 2. ಪಾಸ್‌ಬುಕ್‌ನಲ್ಲಿ ಠೇವಣಿದಾರರ ಕ್ಲೇಮಿನಿಂದ ಪಡೆದಿರುವ ವಹಿವಾಟಿನ ಪ್ರತಿ (Transaction statement page in passbook of Claimed Amount). 3. ಠೇವಣಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು
4.	ಪೂರಕ ದಾಖಲೆಗಳು (supporting documents)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front page) ನಕಲು. ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ (Cancelled Cheque). 2. ಠೇವಣಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5.	ಮೂಲ ಬಾಂಡ್ /ಇತರೆ ಪಡೆದು ಬದಲಿ ನೀಡಿದ ದಾಖಲೆಗಳು	

- ಕೆಪಿಐಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ತಪ್ಪಾಗಿ ಅಥವಾ ಆಧಾರವಿಲ್ಲದೆ ಸ್ವಯಂ–ಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ವಿರುದ್ಧ ನಿಯಮಾನುಸಾರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು.
- ಕೆಪಿಐಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ ಅಂದರೆ ದಿನಾಂಕ : 02–11–2022 ರಿಂದ ದಿನಾಂಕ : 01–12–2022 ರೊಳಗಾಗಿ, ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ ಮಾತ್ರ ಸಲ್ಲಿಸಲು ಕಾಲಾವಕಾಶ ನಿಗದಿಪಡಿಸಿದೆ.
- ಆನ್‌ಲೈನ್ ಮೂಲಕ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಯಾವುದೇ ಅವಕಾಶ ಇರುವುದಿಲ್ಲ.
- ಅರ್ಜಿಗಳನ್ನು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅರ್ಜಿದಾರರು **"ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ"** 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027. ಕಛೇರಿಯ ವೇಳೆಯಲ್ಲಿ ಭೇಟಿ ನೀಡಿ ಅಥವಾ **https://rcb.karnataka.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. **ಹೆಚ್ಚಿನ ಮಾಹಿತಿಗಾಗಿ ದೂ.: 080–22109665, 22109670 ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಲು ಸೂಚಿಸಿದೆ.**
- ಠೇವಣಿದಾರರು ಅಥವಾ ನಾಮನಿರ್ದೇಶಿತರು ಅಥವಾ ಜಿ.ಪಿ.ಎ ಹೊಂದಿರುವವರು ಮಾತ್ರ ಖುದ್ದಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿಗಳನ್ನು ಮಧ್ಯವರ್ತಿಗಳು ಸಲ್ಲಿಸಲು ಅವಕಾಶವಿರುವುದಿಲ್ಲ.
- ಅರ್ಜಿ ಸ್ವೀಕರಿಸುವ ಸ್ಥಳ : ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ, ಐ.ಎ.ಎ ಹಾಗೂ ಇತರೆ ವಂಚನೆ ಪ್ರಕರಣಗಳು, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು ರವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು.
- ಅರ್ಜಿದಾರರು ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿಮಿಟೆಡ್ ಮತ್ತು ಕಣ್ವ ಗ್ರೂಪ್ ಆಫ್ ಕಂಪನೀಸ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ಹೂಡಿಕೆ ಮಾಡಿದ್ದರೆ ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
- ಒಂದು ಬಾರಿ ಅರ್ಜಿ ಸಲ್ಲಿಸಿದ ನಂತರ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಮಾನ್ಯ ವಿಶೇಷ ನ್ಯಾಯಾಲಯದಿಂದ ಅನುಮತಿ/ಆದೇಶ ಪಡೆದನಂತರ ಮಾತ್ರ ಸ್ವೀಕರಿಸಲಾಗುವುದು.
- ಅರ್ಜಿ ಸಲ್ಲಿಸುವ ಮೊದಲು ಪ್ರತಿಗಳನ್ನು ಪರಿಶೀಲಿಸಿಕೊಳ್ಳುವುದು ಮಾಡಬೇಕಾಗುತ್ತದೆ.

ಸಹಿ/– ಸಕ್ಷಮ ಪ್ರಾಧಿಕಾರಿ ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ಲಿ. ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್, ಆಯುಕ್ತರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/RO2652/AAPL/2022-23

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080–29701510, ಇ–ಮೇಲ್: dce.tender2017@gmail.com

ಸಂಖ್ಯೆ: DCE/ITS/PUR/16/2022-INFO- (Computer No. 867658) ದಿನಾಂಕ: 21.10.2022

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ–ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: ಡಿಸಿಇ/2021–22/ಐಎನ್‌ಡಿ1124/Call-2 "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಕಾಲೇಜುಗಳಿಗೆ 6500 ಐಸಿಟಿಯುಕ್ತ ತರಗತಿಗಳಿಗೆ ಅಗತ್ಯ ಉಪಕರಣಗಳ ಸರಬರಾಜು, ಅನುಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ"	21.10.2022	27.10.2022 ಬೆಳಿಗ್ಗೆ 11.00 ಗಂಟೆಗೆ	10.11.2022 ಸಂಜೆ 5.30 ಗಂಟೆಗೆ

ಸಹಿ/– ಕಾಲೇಜು ಶಿಕ್ಷಣ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

DIPR/CP/2762/Zen/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಪ್ರಾಜೆಕ್ಟ್ ಸೆಂಟ್ರಲ್–2), ಅನೆಕ್ಸ್–2 ಬಿಲ್ಡಿಂಗ್, ಬಿಬಿಎಂಪಿ, ಬೆಂಗಳೂರು – 560002.

ಸಂಖ್ಯೆ: ಕಾಅ/ಪ್ರಾಸೆಂ–2/ಟೆಂಡರ್/07/2022–23 ದಿನಾಂಕ: 21–10–2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಪ್ರಾಜೆಕ್ಟ್ ಸೆಂಟ್ರಲ್–2, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ನಿರ್ಧರಿತ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರದಲ್ಲಿ ಪ್ರಮುಖ ಸಾರ್ವಜನಿಕ ಸ್ಥಳ ಮತ್ತು ಐತಿಹಾಸಿಕ ರಸ್ತೆಗಳು, ಟೆಂಡರ್ ಶ್ಯೂರ್ ರಸ್ತೆಗಳು ಮತ್ತು ವ್ಯಾಪ್ತಿ ಚಾಪಿಂಗ್ ರಸ್ತೆಗಳಲ್ಲಿ ಜಂಕ್ಷನ್ ಸುಧಾರಣೆ ಮತ್ತು ಸುಂದರೀಕರಣ.	1080.00	15.00 ಲಕ್ಷಗಳು (ರೂ. 1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಬಾಕಿಯನ್ನು ಬಿಡ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಿದ ಪಾವತಿಸಬೇಕು)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 27–10–2022 ರಂದು 17.30 ಗಂಟೆವರೆಗೆ ಇ–ಪೋರ್ಟಲ್ ಮೂಲಕ ಮಾತ್ರ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 28–10–2022ರಂದು 16.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಪ್ರಾಜೆಕ್ಟ್–ಸೆಂಟ್ರಲ್ ಇಲ್ಲಿ ನಡೆಸಲಾಗುತ್ತದೆ. 4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕ: 31–10–2022ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ. 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 02–11–2022 ರಂದು 16.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ – ಪ್ರಾಜೆಕ್ಟ್ ಸೆಂಟ್ರಲ್–2, ಬಿಬಿಎಂಪಿ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಪೋರ್ಟಲ್‌ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪ್ರಾಜೆಕ್ಟ್ ಸೆಂಟ್ರಲ್–2, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ.ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM–2021–22/ಇ–ಟೆಂಡರ್/2022–23/1673 ದಿನಾಂಕ:21–10–2022

ಇ–ಪ್ರೊಕ್ಯೂರ್‌ಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯರಾಜ್ಯಪಾಲರ ಪರವಾಗಿಕಾರ್ಯನಿರ್ವಾಹಕಅಭಿಯಂತರರು, ಗ್ರಾಮೀಣಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರುಇವರು KW-4 (Standard Bid Document) ನಮೂನೆಯಲ್ಲಿ ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ಸಿವಿಲ್ ನೋಂದಾಯಿತ ಹಾಗೂ ಇ–ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2021–22 ನೇ ಸಾಲಿನ JalJeevan Mission(JJM) ಯೋಜನೆ ಅಡಿಯ ಕೇಂದ್ರ(90%) ಮತ್ತು ಸಮುದಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜುಯೋಜನೆ ಕಾಮಗಾರಿಗಳಿಗೆ ಐಟಂವಾರುಟರ್ನ್‌ಕೀಆಧಾರದ ಮೇಲೆ ಇ–ಟೆಂಡರ್ ಆಹ್ವಾನಿಸಲಾಗಿದೆ.

1]ಇ–Payment/NEFT ಮುಖಾಂತರಅರ್ಜಿ ಸ್ವೀಕರಿಸುವ ದಿನಾಂಕ : 21–10–2022, 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ: 21–10–2022, 3] ಪ್ರಿ ಬಿಡ್ ಸಭೆ ದಿನಾಂಕ, ಸಮಯ ಮತ್ತು ಸ್ಥಳ: 27–10–2022 ಸಮಯ: ಬೆಳಿಗ್ಗೆ 11 :00 ಗಂಟೆಗೆ ಸ್ಥಳ: ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ರಾಯಚೂರುರವರ ಕಛೇರಿ, 2ನೇ ಮಹಡಿ, ಜಿಲ್ಲಾ ಪಂಚಾಯತ್ ರಾಯಚೂರು. 4] ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 31–10–2022 ಸಂಜೆ 5:30 ಗಂಟೆವರೆಗೆ 5] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02–11–2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ 6] ಆರ್ಥಿಕ ಬಿಡ್‌ತೆರೆಯುವ ದಿನಾಂಕ : 04–11–2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್http://eproc.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/374/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ
ಸಂಖ್ಯೆ:ಕಾಅ:ಪಂರಾಇಂವಿಮಂಡ್ಯ:ಟೆಂಪ್ರಸಂಖ್ಯೆ:13/2022–23
ದಿನಾಂಕ:20.10.2022.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :13/2022–23

ಕರ್ನಾಟಕ ಸರ್ಕಾರದ ರಾಜ್ಯಪಾಲರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **(ಟೆಂಡರ್‌ಗಳ ಮೊತ್ತ ಕನಿಷ್ಠ ರೂ.6.00 ಲಕ್ಷದಿಂದ ಗರಿಷ್ಠ ರೂ.50.00 ಲಕ್ಷದವರೆಗಿನ ಮೊತ್ತದ ಒಟ್ಟು 11 ಕಾಮಗಾರಿಗಳು).** ಟೆಂಡರ್‌ಗಳನ್ನು eprocurement portal **https://eproc.karnataka.gov.in** ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಟೆಂಡರ್ ದಾಖಲೆಯನ್ನು ಆನ್‌ಲೈನ್ (eprocurement portal **https://eproc.karnataka.gov.in**), ಪೋರ್ಟಲ್‌ನಲ್ಲಿ ದಿನಾಂಕ : 21.10.2022 ರಿಂದ ಪಡೆಯಬಹುದು. ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ : 02.11.2022ರ ಸಂಜೆ 4.00 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ

ವಾಸಾಸಂಇ/ಸಿ–ಮಂ/ಎಂಸಿ&ಎ/406/2022–23

ನಗರಸಭೆ ಕಾರ್ಯಾಲಯ ಬೀದರ

ನಂ.ಬಿಎಂಸಿ/ಇಎನ್‌ಜಿ/ಸಿಆರ್–544/2018–19/59/2022–23 ದಿನಾಂಕ:20–10–2022.

– : ಕೊರಿಜೆಂಡಮ್: –

ಈ ಕಛೇರಿಯ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆಯ ಸಂಖ್ಯೆ ಬಿಎಂಸಿ/ಇಎನ್‌ಜಿ/ಸಿಆರ್–544/2018–19/59/2022–23 ದಿನಾಂಕ:–18–10–2022ರಂತೆ ತಾಂತ್ರಿಕ ಲೋಪದೋಷದಿಂದ ಈ ಕೆಳಕಂಡಂತೆ ಇಂಡೆಂಟ್‌ಗಳನ್ನು ಬದಲಾವಣೆ ಮಾಡಲಾಗಿದೆ.

ಕ್ರ ಸಂ	ಪ್ರಕಟಿಸಲಾಗಿದ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಬದಲಾವಣೆ ಮಾಡಿದ ಕಾಮಗಾರಿಯ ಹೆಸರು	ಬದಲಾವಣೆ ಮಾಡಿದ ಅಂದಾಜು ಮೊತ್ತ
1.	[WORK_INDENT139882]:- Drilling of bore well in Ward No. 23, 33 CC Road in Ward No. 03 & 35 & RCC Bridge in Ward No. 11 in Bidar City (FOR SC CONTRACTORS)	Rs. 66.00	[WORK_INDENT140318]:- Drilling of bore well in Ward No. 23 & 33 & Construction of CC Road in Ward No. 03 in Bidar City	32.00
			[WORK_INDENT140319]:- Construction of bridge in Ward No. 11 & Construction of CC Road & Drain in Ward No. 35	34.0

ಈ ಮೇಲಿನ ಇಂಡೆಂಟ್ ಸಂಖ್ಯೆ 139882 ರೂ. 66.00 ಲಕ್ಷಗಳ ಬದಲಾಗಿ ಇಂಡೆಂಟ್ ಸಂಖ್ಯೆ 140318 ರೂ. 32.00ಲಕ್ಷ ಮತ್ತು ಇಂಡೆಂಟ್ ಸಂಖ್ಯೆ 140319 ರೂ. 34.00 ಲಕ್ಷಗಳ ನಮೂದಿಸಲಾಗಿದೆ. ಕಾರಣ ಗುತ್ತಿಗೆದಾರರು ಇಂಡೆಂಟ್ ಸಂಖ್ಯೆ 139882 ಬದಲಾಗಿ ಈ ಮೇಲಿನ ಎರಡು ಇಂಡೆಂಟ್ ಸಂಖ್ಯೆ 140318 & 140319ಗಳಿಗೆ ಟೆಂಡರ ಸಲ್ಲಿಸಬಹುದು.

ಇತರ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವದಿಲ್ಲ.

ಸಹಿ/– ಪೌರಾಯುಕ್ತರು ನಗರಸಭೆ ಬೀದರ

ವಾ.ಸಾ.ಸಂ.ಇ/ಬೀದರ/287/1/ಎಂಸಿ&ಎ/2022–23

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿಸಿದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಲ್ಲಿ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ (ಮೈಸೂರು) ಪ್ರೈವೇಟ್ ಅ. ಬೆಂಗಳೂರು

108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆಗಾಗಿ ರಾಜ್ಯದ ಪುಣ್ಯಭೂಮಿಗಳಿಂದ ಮೃತ್ತಿಕೆ ಸಂಗ್ರಹ ಅಭಿಯಾನ

‘ಕೆಂಪೇಗೌಡರಿಗೆ ಸರಿಯಾದ ಗೌರವ ಸಲ್ಲುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ರಾಜಧಾನಿಯನ್ನು ನಿರ್ಮಿಸಿದ ನಾಡಪ್ರಭು ಕೆಂಪೇಗೌಡರಿಗೆ ಅತ್ಯುನ್ನತ ಗೌರವ ಸಲ್ಲಿಸುವ ಕೆಲಸ ಎಂದೋ ಆಗಬೇಕಿತ್ತು. ಈ ಕೆಲಸವನ್ನು ಈಗ ತಮ್ಮ ಸರ್ಕಾರ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಶುಕ್ರವಾರ ನಡೆದ ಸಮಾರಂಭದಲ್ಲಿ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪನೆಗಾಗಿ ರಾಜ್ಯದ ಪುಣ್ಯಭೂಮಿಗಳಿಂದ ಮೃತ್ತಿಕೆ ಸಂಗ್ರಹಿಸುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಕೆಂಪೇಗೌಡರ ದೂರದೃಷ್ಟಿಯ ಫಲವಾಗಿ ಬೆಂಗಳೂರು ನಿರ್ಮಾಣವಾಯಿತು. ಅವರು ಜನರ ನಡುವೆಯೇ ಇದ್ದು ಜನರಿಗಾಗಿ ದೊಡ್ಡ ಕೆಲಸಗಳನ್ನು ಮಾಡಿದವರು. ಅಂತಹ ಮಹನೀಯರಿಗೆ ಗೌರವ ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ. ಈವರೆಗೆ ಕೆಂಪೇಗೌಡರಿಗೆ ಸೂಕ್ತ ಗೌರವ ಏಕೆ ನೀಡಿಲ್ಲ ಎಂದು ನಾನು ಕೇಳುವುದಿಲ್ಲ. ಅವರಿಗೆ ಸರಿಯಾದ ಗೌರವ ಸಲ್ಲಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇತಿಹಾಸ ಮರೆತರೆ ಭವಿಷ್ಯ ಮಂಕಾಗುತ್ತದೆ ಎಂಬ ಅರಿವು ನಮಗೆ ಇರಬೇಕು’ ಎಂದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಶುಕ್ರವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೆಂಪೇಗೌಡ ಪ್ರತಿಮೆ ಸ್ಥಾಪನೆಗಾಗಿ ‘ಪವಿತ್ರ ಮೃತ್ತಿಕೆ’ ಸಂಗ್ರಹಕ್ಕೆ ಚಾಲನೆ ನೀಡಿದರು. ಶಾಸಕ ಬಿ.ಎಸ್. ಯಡಿಯೂರಪ್ಪ, ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಂಸದ ಎಸ್. ಮುನಿಸ್ವಾಮಿ, ನಂಜಾವಧೂತ ಸ್ವಾಮೀಜಿ ಇದ್ದರು – ಪ್ರಜಾವಾಣಿ ಚಿತ್ರ

ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೆಂಪೇಗೌಡರ ಕಂಚಿನ ಪ್ರತಿಮೆ ಸ್ಥಾಪನೆಗೆ ಮಂಜೂರಾತಿ ನೀಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 11ರಂದು ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ಈ ಪ್ರತಿಮೆಯು ನಾಡಿನ ಪ್ರಗತಿಯ ಪ್ರೇರಣಾ ಪ್ರತಿಮೆಯಾಗಲಿದೆ ಎಂದು ಹೇಳಿದರು.

ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ಸಚಿವ ಆರ್. ಅಶೋಕ ನೇತೃತ್ವದ ಸಮಿತಿ ಕೆಂಪೇಗೌಡರ ಪ್ರತಿಮೆ ಸ್ಥಾಪನೆಯ ಪ್ರಸ್ತಾವ ಸಲ್ಲಿಸಿತ್ತು. ತಕ್ಷಣವೇ ಅನುದಾನ ಬಿಡುಗಡೆಗೆ ಮಂಜೂರಾತಿ ನೀಡಿದ್ದೆ. ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಕೊಡುಗೆಯನ್ನು ಈ ನಾಡು ಎಂದಿಗೂ ಮರೆಯುವುದಿಲ್ಲ’ ಎಂದರು.

ಟೀಕೆಗೆ ಆಕ್ಷೇಪ: ಕಂದಾಯ ಸಚಿವ ಆರ್. ಅಶೋಕ ಮಾತನಾಡಿ, ‘ಕೆಲವರು ಕೆಂಪೇಗೌಡರ ಕುರಿತು ಹಗುರವಾಗಿ ಮಾತನಾಡುತ್ತಿದ್ದಾರೆ. ಅವರೇನು ಚಕ್ರವರ್ತಿಯೆ? ಅವರಿಗೇಕೆ ಇಷ್ಟು ಮಹತ್ವ? ಎಂದು ಪ್ರಶ್ನಿಸುತ್ತಿದ್ದಾರೆ. ವ್ಯಕ್ತಿ ಎಷ್ಟು ದೊಡ್ಡವರು ಎಂಬುದಕ್ಕಿಂತ ಎಷ್ಟು ದೊಡ್ಡ ಕೆಲಸ ಮಾಡಿದ್ದಾರೆ ಎಂಬುದು ಮುಖ್ಯ’ ಎಂದು ಹೇಳಿದರು.

ಸಂಸದ ಡಿ.ವಿ. ಸದಾನಂದಗೌಡ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಸಚಿವರಾದ ಆರಗ ಜ್ಞಾನೇಂದ್ರ, ಡಾ.ಕೆ. ಸುಧಾಕರ್, ಮುನಿರತ್ನ, ಬೈರತಿ ಬಸವರಾಜ, ಎಂ.ಟಿ.ಬಿ. ನಾಗರಾಜ, ಕೆ.ಸಿ. ನಾರಾಯಣಗೌಡ, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಎಸ್. ಮುನಿಸ್ವಾಮಿ, ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಶಾಸಕರಾದ ಎಂ.ಕೃಷ್ಣಪ್ಪ, ಎಸ್. ರಘು, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸದಸ್ಯ ವೈ.ಎ ನಾರಾಯಣಸ್ವಾಮಿ, ಸದಸ್ಯ ಸಿ.ಪಿ. ಯೋಗೇಶ್ವರ್ ಉಪಸ್ಥಿತರಿದ್ದರು.

ಮೃತ್ತಿಕೆ ಸಂಗ್ರಹಕ್ಕೆ 20 ರಥ: ಅಶ್ವತ್ಥನಾರಾಯಣ

‘ಕೆಂಪೇಗೌಡರ ಕಂಚಿನ ಪ್ರತಿಮೆ ಸ್ಥಾಪಿಸುವ ಸ್ಥಳದಲ್ಲಿ ಬಳಸುವುದಕ್ಕೆ ರಾಜ್ಯದ ಪವಿತ್ರ ಭೂಮಿಗಳಿಂದ ಮೃತ್ತಿಕೆ ಸಂಗ್ರಹಿಸಲು 20 ರಥಗಳು ವಿವಿಧ ಜಿಲ್ಲೆಗಳಲ್ಲಿ ಸಂಚರಿಸಲಿವೆ’ ಎಂದು ಕೆಂಪೇಗೌಡರ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

‘ನವೆಂಬರ್ 7ರವರೆಗೂ ಅಭಿಯಾನ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಉಸ್ತುವಾರಿಯಲ್ಲಿ ಮೃತ್ತಿಕೆ ಸಂಗ್ರಹ ನಡೆಯಲಿದೆ. ಪ್ರತಿಮೆ ಸ್ಥಾಪಿಸುವ ಸ್ಥಳದಲ್ಲಿನ ಥೀಮ್ ಪಾರ್ಕ್ ಮತ್ತು ಗೋಪುರಗಳ ನಿರ್ಮಾಣಕ್ಕೆ ಮೃತ್ತಿಕೆ ಬಳಸಲಾಗುವುದು’ ಎಂದರು.

‘ವಿಧಾನಸೌಧದಲ್ಲಿ ತ್ವರಿತವಾಗಿ ಪ್ರತಿಮೆ ಸ್ಥಾಪಿಸಿ’

‘ವಿಧಾನಸೌಧದಲ್ಲೂ ಕೆಂಪೇಗೌಡರ ಪ್ರತಿಮೆ ಸ್ಥಾಪಿಸುವುದಾಗಿ ಸರ್ಕಾರ ಈಗಾಗಲೇ ಭರವಸೆ ನೀಡಿದೆ. ಆ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಆದಿಚುಂಚನಗರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಆಗ್ರಹಿಸಿದರು.

ಸುದ್ದಿ 2 ನಿಮಿಷ

ಲೋಕಾಯುಕ್ತ ದಾಳಿ: ಪಿಡಬ್ಲ್ಯುಡಿ ಎಇ ಮನೆಯಲ್ಲಿ ₹23 ಲಕ್ಷ ಪತ್ತೆ

ಮಡಿಕೇರಿ: ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸರು ಶುಕ್ರವಾರ ಮೂವರು ಅಧಿಕಾರಿಗಳ ನಿವಾಸಗಳ ಮೇಲೆ ದಾಳಿ ನಡೆಸಿ, ಲಕ್ಷಾಂತರ ರೂಪಾಯಿ ಹಣ, ಚಿನ್ನಾಭರಣಗಳನ್ನು ಪತ್ತೆ ಮಾಡಿದ್ದಾರೆ.

ಮಡಿಕೇರಿಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಡಿ.ನಾಗರಾಜ್, ಕುಶಾಲನಗರದ ಸಣ್ಣ ನೀರಾವರಿ ಇಲಾಖೆಯ ಕಿರಿಯ ಎಂಜಿನಿಯರ್ ರಫೀಕ್ ಹಾಗೂ ಈ ಹಿಂದೆ ಕುಶಾಲನಗರದಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ಎಂ.ಮಹೇಶ್ ಅವರ ನಿವಾಸಗಳ ಮೇಲೆ ದಾಳಿ ನಡೆದಿದೆ.

ನಾಗರಾಜ್ ಬಳಿ 2 ಮನೆ, 1,086 ಗ್ರಾಂ ಚಿನ್ನ, 9,928 ಗ್ರಾಂ ಬೆಳ್ಳಿ, ₹ 23.91 ಲಕ್ಷ ನಗದು, ಕುಟುಂಬದ ಸದಸ್ಯರ ಹೆಸರಿನಲ್ಲಿರುವ 11 ಬ್ಯಾಂಕ್ ಖಾತೆಗಳಲ್ಲಿ ₹ 59.36 ಲಕ್ಷ ಹಣ ಹಾಗೂ 2 ಕಾರುಗಳು ಪತ್ತೆಯಾಗಿವೆ.

ರಫೀಕ್ ಬಳಿ 2 ಮನೆ, 2 ಎಕರೆ ಕಾಫಿ ತೋಟ, 680 ಗ್ರಾಂ ಚಿನ್ನ, 250 ಗ್ರಾಂ ಬೆಳ್ಳಿ, ₹ 2.82 ಲಕ್ಷ ನಗದು, 1 ಇನ್ನೋವಾ ಕಾರು, 1 ಬೊಲೆರೊ ಜೀಪು, 1 ಸ್ಕೂಟರ್ ಪತ್ತೆಯಾಗಿವೆ.

ಮಹೇಶ್ ಬಳಿ 1 ಮನೆ, 200 ಗ್ರಾಂ ಚಿನ್ನ, 2.5 ಕೆ.ಜಿ ಬೆಳ್ಳಿ, ₹ 5,500 ನಗದು, ಕುಟುಂಬದ ಸದಸ್ಯರ ಹೆಸರಿನ 4 ಬ್ಯಾಂಕ್ ಖಾತೆಗಳಲ್ಲಿ ₹ 4.99 ಲಕ್ಷ ಹಣ, ತಲಾ 1 ಸ್ಕೂಟರ್, 1 ಕಾರು ಪತ್ತೆಯಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೊಯ್ಸಳ ಸಾಹಿತ್ಯೋತ್ಸವ ಇಂದಿನಿಂದ

ಹಾಸನ: ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಹೊಯ್ಸಳ ಸಾಹಿತ್ಯೋತ್ಸವ ಅ.22 ಹಾಗೂ 23ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಅ.22ರಂದು ಬೆಳಿಗ್ಗೆ 10ಕ್ಕೆ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಉದ್ಘಾಟಿಸಲಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಚಂದ್ರಶೇಖರ ಕಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ. ಕವಿ ಡಾ.ಎಚ್.ಎಸ್. ವೆಂಕಟೇಶಮೂರ್ತಿ ಆಶಯ ಭಾಷಣ ಮಾಡಲಿದ್ದಾರೆ. ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಶಿ, ಡಾ.ಬಿ.ಆರ್.ಲಕ್ಷ್ಮಣರಾವ್, ಗಿರೀಶ್‌ರಾವ್ ಹತ್ವಾರ್, ಶಾಸಕ ಪ್ರೀತಂ ಗೌಡ, ಜಿಲ್ಲಾಧಿಕಾರಿ ಎಂ.ಎಸ್.ಅರ್ಚನಾ, ಅಶೋಕ ಹಾರನಹಳ್ಳಿ ಪಾಲ್ಗೊಳ್ಳಲಿದ್ದಾರೆ.

70 ವಿದ್ವಾಂಸರು ಭಾಗವಹಿಸಲಿದ್ದಾರೆ. ಪತ್ರಿಕೋದ್ಯಮ, ಕಾನೂನು ವಿದ್ಯಾರ್ಥಿಗಳು ಸೇರಿ 570 ಮಂದಿ ಹಾಗೂ ಹೊರ ಜಿಲ್ಲೆಯಿಂದ 250 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ವಿದ್ವಾಂಸರು, ಆಹ್ವಾನಿತರು, ಪರಿಷತ್ತಿನ ಪದಾಧಿಕಾರಿಗಳು ಸೇರಿ ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ತಿಳಿಸಿದ್ದಾರೆ.

17,850 ಧ್ವನಿವರ್ಧಕಗಳಿಗೆ ಅನುಮತಿ

● ಭರತ್ ಜೋಶಿ

ಬೆಂಗಳೂರು: 10,889 ಮಸೀದಿಗಳೂ ಸೇರಿದಂತೆ ರಾಜ್ಯದಲ್ಲಿ ಒಟ್ಟು 17,850 ಧ್ವನಿವರ್ಧಕಗಳ ಬಳಕೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಧ್ವನಿವರ್ಧಕಗಳ ಬಳಕೆ ನಿಯಂತ್ರಣ ನಿಯಮಗಳ ಅಡಿಯಲ್ಲಿ ಪರವಾನಗಿ ಕೋರಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಮೇ 10ರಂದು ಗೃಹ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಅರ್ಜಿಗಳ ಪರಿಶೀಲನೆ ಪೂರ್ಣಗೊಳಿಸಿರುವ ಗೃಹ ಇಲಾಖೆ, ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ರೆಸ್ಟೋರೆಂಟ್‌ಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡಿದೆ.

ಎರಡು ವರ್ಷಗಳ ಅವಧಿಗೆ ಧ್ವನಿವರ್ಧಕಗಳ ಬಳಕೆಗೆ ಅನುಮತಿ ನೀಡಿದ್ದು, ₹ 450 ಶುಲ್ಕ ವಿಧಿಸಲಾಗಿದೆ. ಗೃಹ ಇಲಾಖೆ ಒದಗಿಸಿರುವ ಅಂಕಿಅಂಶಗಳ ಪ್ರಕಾರ, ಬೆಂಗಳೂರಿನಲ್ಲಿ ಅತ್ಯಧಿಕ 1,841 ಪರವಾನಗಿಗಳನ್ನು ನೀಡಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 744 ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡಲಾಗಿದೆ. ಇದು ರಾಜ್ಯದಲ್ಲೇ ಅತ್ಯಧಿಕ ಸಂಖ್ಯೆಯ ಮಸೀದಿಗಳು ಪರವಾನಗಿ ಪಡೆದ ಜಿಲ್ಲೆಯಾಗಿದೆ.

ಸುಪ್ರೀಂ ಕೋರ್ಟ್ ಆದೇಶದ ಅನ್ವಯ ರಾತ್ರಿ 10ರಿಂದ ಬೆಳಿಗ್ಗೆ 6ರವರೆಗಿನ ಅವಧಿಯಲ್ಲಿ ಮಸೀದಿಗಳಲ್ಲೂ ಧ್ವನಿವರ್ಧಕ ಬಳಕೆಗೆ ಅವಕಾಶ ನೀಡಬಾರದು ಎಂದು ಬಜರಂಗ ದಳ, ಶ್ರೀರಾಮ ಸೇನೆ ಸೇರಿದಂತೆ ಹಿಂದುತ್ವ ಪರ ಸಂಘಟನೆಗಳು ಪಟ್ಟು ಹಿಡಿದಿದ್ದವು. ಮಸೀದಿಗಳಲ್ಲಿ ಆಝಾನ್ ಕೂಗುವುದಕ್ಕೆ ಪ್ರತಿಯಾಗಿ ಕೆಲವೆಡೆ ದೇವಸ್ಥಾನಗಳಲ್ಲಿ ಹನುಮಾನ್ ಚಾಲೀಸಾ ಪಠಣವನ್ನೂ ಆರಂಭಿಸಿದ್ದರು.

ಮೇ 10ರಂದು ಸುತ್ತೋಲೆ ಹೊರಡಿಸಿದ್ದ ಗೃಹ ಇಲಾಖೆ, ಧ್ವನಿವರ್ಧಕ ಬಳಕೆಗೆ ಅನುಮತಿ ಕಡ್ಡಾಯಗೊಳಿಸಿತ್ತು. ಸುಪ್ರೀಂ ಕೋರ್ಟ್ ಮಾರ್ಗಸೂಚಿಯ ಪ್ರಕಾರ ನಿಗದಿತ ಪ್ರಮಾಣದ ಶಬ್ದದ ಮಿತಿಯನ್ನೂ ಜಾರಿಗೊಳಿಸುವಂತೆ ಸೂಚಿಸಿತ್ತು.

‘ಮಸೀದಿಗಳಲ್ಲಿ ನಿಯಮ ಪಾಲಿಸುತ್ತಿಲ್ಲ ಎಂಬುದು ನಮ್ಮ ಆಕ್ಷೇಪಕ್ಕೆ ಕಾರಣವಾಗಿತ್ತು. ಈಗ ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡಿರುವುದನ್ನು ಸರ್ಕಾರದ ವೈಫಲ್ಯ ಎಂದು ವ್ಯಾಖ್ಯಾನಿಸಲು ಆಗದು. ಅನುಮತಿ ಪಡೆದ ಬಳಿಕವೂ ಸುಪ್ರೀಂ ಕೋರ್ಟ್ ಮಾರ್ಗಸೂಚಿಯಂತೆ ಮಿತಿಯಲ್ಲಿ ಧ್ವನಿವರ್ಧಕ ಬಳಸುತ್ತಿರುವುದನ್ನೂ ಖಾತರಿಪಡಿಸಬೇಕು ಎಂಬುದು ನಮ್ಮ ಬೇಡಿಕೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಕ್ರಿಯಿಸಿದರು.

‘ಯಾವುದೇ ತಾರತಮ್ಯವಿಲ್ಲದೆ ಧ್ವನಿವರ್ಧಕ ಬಳಕೆಗೆ ಅನುಮತಿ ನೀಡಲಾಗಿದೆ. ಆದರೆ, ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ. ಈ ಕುರಿತು ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಧ್ವನಿ ಎತ್ತುತ್ತೇನೆ’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಹೇಳಿದರು.

‘ಸರ್ಕಾರದಿಂದ ತಾರತಮ್ಯ ಆಗಿಲ್ಲ’

‘ಧ್ವನಿವರ್ಧಕ ಬಳಕೆಗೆ ಅನುಮತಿ ನೀಡುವ ವಿಷಯದಲ್ಲಿ ರಾಜ್ಯ ಸರ್ಕಾರ ಯಾವುದೇ ತಾರತಮ್ಯ ಮಾಡಿಲ್ಲ. ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಅನುಮತಿ ಕೋರಿದ್ದ ಎಲ್ಲ ಅರ್ಜಿಗಳನ್ನೂ ಮಾನ್ಯ ಮಾಡಿದೆ’ ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನ ಶಾಫಿ ಸ–ಅದಿ ತಿಳಿಸಿದರು.

‘ಧ್ವನಿವರ್ಧಕ ಬಳಕೆಗೆ ನೀಡಿರುವ ಅನುಮತಿಯಲ್ಲಿರುವ ಷರತ್ತುಗಳು ಮತ್ತು ಸುಪ್ರೀಂ ಕೋರ್ಟ್ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲ ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಸುತ್ತೋಲೆಯನ್ನೂ ಹೊರಡಿಸಲಾಗಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

‘ಗಂಧದ ಗುಡಿ’ಗೆ ತೆರಿಗೆ ವಿನಾಯಿತಿ

ಪುನೀತ್ ರಾಜ್‌ಕುಮಾರ್

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅಭಿನಯದ ‘ಗಂಧದ ಗುಡಿ’ ಸಾಕ್ಷ್ಯಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

‘ಪುನೀತ್ ಪರ್ವ’ ಕಾರ್ಯಕ್ರಮದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಿಸರ್ಗ ಮತ್ತು ಅದರ ರಕ್ಷಣೆ ಕುರಿತಾದ ಸಾಕ್ಷ್ಯಚಿತ್ರ ಆಗಿರುವುದರಿಂದ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ ಎಂದರು.

ಸಿಇಟಿ: ಅಣಕು ಸೀಟು ಹಂಚಿಕೆ ಪ್ರಕಟ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶ ಆಯ್ಕೆಯ ಪೂರ್ವಭಾವಿಯಾಗಿ ಅಣುಕು ಸೀಟುಗಳ ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಸಿಇಟಿ ರ‍್ಯಾಂಕಿಂಗ್ ಅಭ್ಯರ್ಥಿಗಳು 21ರಿಂದ 26ರವರೆಗೆ ಆಯ್ಕೆಗಳನ್ನು ಬದಲಾಯಿಸಲು ಅವಕಾಶ ನೀಡಲಾಗಿದೆ. 28ರಂದು ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ. ಅ.29ರಿಂದ ನ.2ರವರೆಗೆ ಶುಲ್ಕ ಪಾವತಿ, ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು (ಚಾಯ್ಸ್ 1 ಅಭ್ಯರ್ಥಿಗಳಿಗೆ). ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ನ.3 ಕೊನೆಯ ದಿನ.

ಪೊಲೀಸರ ಮೇಲೆ ಹಲ್ಲೆ ಪ್ರಕರಣ: 31 ಮಂದಿ ಬಂಧನ

ಬೀದರ್: ಕಲಬುರಗಿ ಗ್ರಾಮೀಣ ಸಿಪಿಐ ಶ್ರೀಮಂತ ಇಲ್ಲಾಳ, ಮಹಾಗಾಂವ್ ಪೊಲೀಸ್ ಠಾಣೆಯ ಪಿಎಸ್‌ಐ ಆಶಾ ಹಾಗೂ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ 31 ಆರೋಪಿಗಳನ್ನು ಬೀದರ್ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ಪಿಸ್ತೂಲ್, ಒನ್ ಪ್ಲಸ್ ಮೊಬೈಲ್, 30 ಗ್ರಾಂ ಚಿನ್ನದ ಚೈನ್, ತಲಾ 10 ಗ್ರಾಂನ ಎರಡು ಚಿನ್ನದ ರಿಂಗ್, ವಾಚ್, ಕಟ್ಟಿಗೆಗಳು, ಬಾರಕೋಲು, ಟಾರ್ಚ್ ಸೇರಿ ಒಟ್ಟು ₹ 2.5 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಕಿಶೋರ ಬಾಬು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು

ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಂ ಮುಕ್ತ ಮಾತು
ಸೆಲೆಬ್ರಿಟಿ LIVE ಬೆಳಿಗ್ಗೆ 11ರಿಂದ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ದಲಿತರ ಧ್ವನಿಯಾಗಿ ಕಾರ್ಯ ನಿರ್ವಹಿಸುವೆ: ಅಶ್ವಿನಿ

ಡಾ.ಕೆ.ಪಿ.ಅಶ್ವಿನಿ

ಕೋಲಾರ: ‘ನನ್ನ ಯಶಸ್ಸಿಗೆ ಅಂಬೇಡ್ಕರ್ ಅವರ ಆಶಯ ಮತ್ತು ಆದರ್ಶಗಳೇ ಕಾರಣ. ಆ ನಿಟ್ಟಿನಲ್ಲಿ ಅವರ ಆದರ್ಶ ಹಾಗೂ ಸಂವಿಧಾನದ ಉದ್ದೇಶವನ್ನು ಜಾರಿ ಮಾಡಲು ಜಾಗತಿಕ ವೇದಿಕೆಯಲ್ಲಿ ಚರ್ಚಿಸುತ್ತೇನೆ’ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ (ಯುಎನ್‌ಎಚ್‌ಆರ್‌ಸಿ) ವಿಷಯ ತಜ್ಞೆಯಾಗಿ ಆಯ್ಕೆಯಾಗಿರುವ ಡಾ.ಕೆ.ಪಿ. ಅಶ್ವಿನಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಶ್ರೀರೇಣುಕಾ ಯಲ್ಲಮ್ಮ ಬಳಗದ ಅಭಿವೃದ್ಧಿ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

‘ದಲಿತ ಸಮುದಾಯದ ನನಗೆ, ಶ್ರಮದ ಫಲವಾಗಿ ಈ ಸ್ಥಾನ ಸಿಕ್ಕಿದೆ. ಸಮುದಾಯದ ಧ್ವನಿಯಾಗಿ ದೇಶದ ಬೆಳವಣಿಗೆಗೆ ಶ್ರಮಿಸುತ್ತೇನೆ’ ಎಂದರು.

‘ದಲಿತರ ಕಷ್ಟ, ಸುಖ ಅರಿತಿದ್ದೇನೆ. ದೇಶದ ಬುಡಕಟ್ಟು ಜನಾಂಗದ ಪರಿಸ್ಥಿತಿ ಬಗ್ಗೆ, ಜನಾಂಗೀಯ ಭೇದ, ವರ್ಣಭೇದ ನೀತಿ ಬಗ್ಗೆ ಮಾಹಿತಿ ಸಂಗ್ರಹಿಸಿ ಬದಲಾವಣೆಗೆ ಪ್ರಯತ್ನಿಸಿದ್ದು, ಇದಕ್ಕೆ ಕುಟುಂಬ ಹಾಗೂ ಸಮುದಾಯದ ಸಹಕಾರ ಪ್ರಮುಖವಾಗಿದೆ. ಮಂಡಳಿಯು ಇದನ್ನು ಗುರುತಿಸಿ ಗೌರವಿಸಿ ಉನ್ನತ ಸ್ಥಾನ ನೀಡಿದೆ’ ಎಂದು ಹೇಳಿದರು.

ಒಂಬತ್ತು ಜಿಲ್ಲಾಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು, ದಕ್ಷಿಣ ಕನ್ನಡ, ಚಿತ್ರದುರ್ಗ ಒಳಗೊಂಡಂತೆ ಒಂಬತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೇರಿದಂತೆ 21 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಕಪಿಲ್ ಮೋಹನ್–ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ. ಟಿ.ಕೆ. ಅನಿಲ್‌ಕುಮಾರ್–ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ). ಎನ್.ವಿ. ಪ್ರಸಾದ್–ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

ಎನ್. ಜಯರಾಮ್–ಕಾರ್ಯದರ್ಶಿ, ಕಂದಾಯ ಇಲಾಖೆ. ಬಗಾದಿ ಗೌತಮ್–ನಿರ್ದೇಶಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ. ಪಿ.ಐ. ಶ್ರೀವಿದ್ಯಾ– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ–ಆಡಳಿತ.

ಡಿ.ಎಸ್. ರಮೇಶ್–ಜಿಲ್ಲಾಧಿಕಾರಿ, ಚಾಮರಾಜನಗರ. ಎಚ್.ಎನ್. ಗೋಪಾಲಕೃಷ್ಣ– ಜಿಲ್ಲಾಧಿಕಾರಿ, ಮಂಡ್ಯ. ಕೆ.ಎಂ.ಜಾನಕಿ–ಹೆಚ್ಚುವರಿ ನಿರ್ದೇಶಕಿ, ಸಕಾಲ. ಕೆ.ವಿ.ರಾಜೇಂದ್ರ–ಜಿಲ್ಲಾಧಿಕಾರಿ, ಮೈಸೂರು.

ಎಸ್. ಅಶ್ವತಿ– ಆಯುಕ್ತೆ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು. ಮುಲ್ಲೈ ಮುಹಿಲನ್–ಆಯುಕ್ತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರಭುಲಿಂಗ ಕವಲಿಕಟ್ಟಿ–ಜಿಲ್ಲಾಧಿಕಾರಿ, ಉತ್ತರಕನ್ನಡ. ಎಂ.ಎಸ್. ದಿವಾಕರ–ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಿಪಂ, ಚಿತ್ರದುರ್ಗ. ಜಿ.ಆರ್.ಜೆ. ದಿವ್ಯಪ್ರಭು– ಜಿಲ್ಲಾಧಿಕಾರಿ, ಚಿತ್ರದುರ್ಗ. ನಳಿನಿ ಅತುಲ್–ಅಧ್ಯಕ್ಷ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ.

ರಘುನಂದ ಮೂರ್ತಿ–ಜಿಲ್ಲಾಧಿಕಾರಿ, ಹಾವೇರಿ. ಕುಮಾರ–ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ. ಭನ್ವರ್ ಸಿಂಗ್ ಮೀನಾ– ಪರೀಕ್ಷಾ ನಿಯಂತ್ರಕ, ಕರ್ನಾಟಕ ಲೋಕಸೇವಾ ಆಯೋಗ. ಪ್ರಕಾಶ್ ಜಿಟಿ ನಿಟ್ಟಾಲಿ– ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಎಸ್. ಆಕಾಶ್–ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಪಂ. ಕೊಡಗು.

ಲೋಕಾಯುಕ್ತಕ್ಕೆ ರಾವ್ ಐಜಿಪಿ

ಲೋಕಾಯುಕ್ತದಲ್ಲಿ ಖಾಲಿ ಇದ್ದ ಐಜಿಪಿ ಹುದ್ದೆಗೆ ಎಂ. ಸುಬ್ರಹ್ಮಣ್ಯೇಶ್ವರರಾವ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ರಾವ್ ಅವರು ಬೆಂಗಳೂರು ನಗರ ಪೂರ್ವ ವಲಯದ ಹೆಚ್ಚುವರಿ ಕಮಿಷನರ್ ಆಗಿ ಕೆಲಸ ಮಾಡುತ್ತಿದ್ದರು.

ಮುರುಘಾ ಶ್ರೀ ನ್ಯಾಯಾಂಗ ಬಂಧನ ವಿಸ್ತರಣೆ

ಚಿತ್ರದುರ್ಗ: ಇಬ್ಬರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದ ಪ್ರಕರಣದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹಾಗೂ ಹಾಸ್ಟೆಲ್‌ನ ಮಹಿಳಾ ವಾರ್ಡನ್‌ಗೆ ವಿಧಿಸಿದ್ದ ನ್ಯಾಯಾಂಗ ಬಂಧನದ ಅವಧಿ ನ.3ರವರೆಗೆ ವಿಸ್ತರಣೆಯಾಗಿದೆ.

ಇಬ್ಬರು ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಶುಕ್ರವಾರ ಕೊನೆಗೊಂಡಿತ್ತು. ಆರೋಪಿಗಳನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಅವಧಿಯನ್ನು ಮತ್ತೆ 14 ದಿನ ವಿಸ್ತರಿಸಿದರು.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ
ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಪ್ರಜಾವಾಣಿ ಕವಿ!



'ಪ್ರಜಾವಾಣಿ'ಗೆ 75, ಹಾಗೆಯೇ ಅದರೊಂದಿಗೆ ನಮ್ಮ ಮನೆಯ ನಂಟಿಗೂ 75. ಏಕೆಂದರೆ ನಮ್ಮ ತಂದೆ ರಾಜಾರಾಯರು 'ಪ್ರಜಾವಾಣಿ' ಪ್ರಾರಂಭವಾದಾಗಿನಿಂದಲೂ ಅದರ ನಿಷ್ಠಾವಂತ ಅಭಿಮಾನಿಗಳು. ಅವರ ನಂತರ ನಾನೂ ಅಷ್ಟೇ. ಈ ಅಭಿಮಾನಕ್ಕೆ ಕಾರಣ 'ಪ್ರಜಾವಾಣಿ'ಯು ವಾರ್ತಾಪತ್ರಿಕೆಯಾಗಿ ಅಂದಿನಿಂದ ಇಂದಿನವರೆಗೆ ಅನೂಚಾನವಾಗಿ ಉಳಿಸಿಕೊಂಡು ಬಂದಿರುವ ಓದುಗಸ್ನೇಹ, ವಸ್ತುನಿಷ್ಠತೆ, ವಿಶ್ವಾಸಾರ್ಹತೆ.

ನನ್ನನ್ನು ಕವಿಯಾಗಿ ಗುರುತಿಸಿ, ಬೆಳೆಸಿದ ಪ್ರಮುಖ ಪತ್ರಿಕೆಯೂ 'ಪ್ರಜಾವಾಣಿ'ಯೇ. ನನಗೆ 'ಪ್ರಜಾವಾಣಿ ಕವಿ' ಎಂಬ ಅಡ್ಡಹೆಸರೂ ಇದೆ. ಏಕೆಂದರೆ ಈವರೆಗೆ ನನ್ನ ನೂರಕ್ಕೂ ಹೆಚ್ಚು ಕವಿತೆಗಳು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿವೆ. ಇದೊಂದು ದಾಖಲೆಯೂ ಇರಬಹುದು. ಇದಕ್ಕಾಗಿ 'ಪ್ರಜಾವಾಣಿ'ಗೆ ನಾನು ಸದಾ ಕೃತಜ್ಞ. ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ನನ್ನ ನೆಚ್ಚಿನ, ಮೆಚ್ಚಿನ 'ಪ್ರಜಾವಾಣಿ'ಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇದರ ಶತಮಾನೋತ್ಸವವನ್ನು ನೋಡುವ ಭಾಗ್ಯವೂ ನನ್ನದಾಗಲಿ ಎಂದು ಹಾರೈಸುತ್ತೇನೆ.

-ಬಿ.ಆರ್.ಲಕ್ಷ್ಮಣರಾವ್

ಸಂಗಾತಿಯಾಯಿತು!

ನಾನು ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನವೋದಯ ವಿದ್ಯಾಸಂಸ್ಥೆಯಲ್ಲಿ ಐದು ದಶಕದ ಹಿಂದೆ ಓದುತ್ತಿದ್ದಾಗ ಬೆಳಿಗ್ಗೆ ಪ್ರಾರ್ಥನೆ ವೇಳೆ ನಿತ್ಯ ಅಂದಿನ ಕನ್ನಡ ದಿನಪತ್ರಿಕೆಗಳ ಸುದ್ದಿ ವಾಚಿಸುವ ಅವಕಾಶ ಸಿಕ್ಕಿತ್ತು. ಇದು ಮೂರು ವರ್ಷ ನಡೆಯಿತು. ಅದಿನಿಂದ ಪ್ರಜಾವಾಣಿ ನನ್ನ ಸಂಗಾತಿ. ಮುಂದೆ ಹಾಸನ ನಗರದಲ್ಲಿ ಬಳಗದ ದಿನಪತ್ರಿಕೆ ನಿಯತಕಾಲಿಕ ವಿತರಿಸುವ ಅವಕಾಶ (ನ್ಯಾಶನಲ್ ಪ್ರೆಸ್ ಹಾಸನ ಅಡಿ) ಸಿಕ್ಕಿದ್ದು ಸುಯೋಗ. ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿದ್ದ ಬಿ.ವಿ.ಮೂರ್ತಿ ಅವರ ವ್ಯಂಗ್ಯಚಿತ್ರ ಗಮನಿಸುತ್ತಲೇ ಬಂದ ನನಗೆ ಹವ್ಯಾಸಿ ವ್ಯಂಗ್ಯಚಿತ್ರಕಾರನಾಗಿ ಬೆಳೆಯಲು ಸಾಧ್ಯವಾಯಿತು. ಸಾವಿರಾರು ವ್ಯಂಗ್ಯ ಚಿತ್ರಗಳನ್ನು ಬರೆದೆ. ಪ್ರಜಾವಾಣಿಗೆ ಕೋಟಿನಮನ.

ಮತಿಘಟ್ಟ ಶಿವರಾಂ, ವ್ಯಂಗ್ಯಚಿತ್ರಕಾರ

ಲೇಖಕರ ಬೆಳೆಸಿದ ಹಿರಿಮೆ...

ಅದು 1975ರ ಆರಂಭ. ಆಗ ತಾನೆ ಪದವಿ ಕೋರ್ಸ್ ಆರಂಭಿಸಿದ್ದೆ. ಆ ಹುರುಪಿನಲ್ಲಿ ನಮ್ಮೂರಿನ ನಾಟಕದ ಮಾಸ್ತರ ಕುರಿತು ‘ಕೊಂಡಿಮುಳ್ಳುಗಳು’ ಎಂಬ ಚೊಚ್ಚಲ ಕತೆ ಬರೆದು ‘ಪ್ರಜಾವಾಣಿ’ಗೆ ಕಳುಹಿಸಿದ್ದೆ. ಅದು ಮೂರು ವಾರದ ನಂತರ ವಾಪಸು ಬಂತು. ನಿರಾಸೆಯೇನೊ ಆಯಿತು. ಆದರೆ ಕಥೆಯ ಪಕ್ಕ ಅಲ್ಲಲ್ಲಿ ತಿದ್ದುಪಡಿಗಳನ್ನು ನೀಡಿ, ಅದರಂತೆ ಪರಿಷ್ಕರಿಸಿ ಕಳುಹಿಸಿಕೊಡುವಂತೆ ಸೂಚಿಸಲಾಗಿತ್ತು. ಅದು ಎಂಥ ಖುಷಿಕೊಟ್ಟ ಸಂಗತಿ! ಇದು ಪ್ರಜಾವಾಣಿ ಯುವ ಲೇಖಕರಿಗೆ ಭರವಸೆ ತುಂಬುತ್ತಿದ್ದ ರೀತಿ.

ದಿಟ, ಅಂದಿನಿಂದಲೂ ಇಂದಿನವರೆಗೆ ಪ್ರಜಾವಾಣಿಯ ಪುಟ ತೆರೆಯದೇ ಮುಂಜಾನೆ ಕೆಲಸಗಳು ಆರಂಭವಾಗದಿರುವುದು ರೂಢಿ. ಓದುವವರು ಮತ್ತು ಬರೆಯುವವರನ್ನು ಬೆಳೆಸಿದ ಹಿರಿಮೆ ಪ್ರಜಾವಾಣಿಗಿದೆ. ಅಭಿನಂದನೆಗಳು.

ಕಾ.ತ.ಚಿಕ್ಕಣ್ಣ, ನಿವೃತ್ತ ಅಧಿಕಾರಿ

ಅಭಿಮಾನಿಯಾದೆ!

ಪತ್ರಿಕೆ ಓದಬೇಕೆನಿಸುವಷ್ಟರ ಪ್ರಾಯದಲ್ಲಿ (1977) ಕೊಳ್ಳಲು ಶಕ್ತನಾಗಿರಲಿಲ್ಲ. ಎರವಲಾಗಿ ದೊರಕಿದ್ದು ಪ್ರಜಾವಾಣಿ. ಆಸಕ್ತಿಯಿಂದ ಓದುತ್ತಾ ಅಭಿಮಾನಿಯಾದೆ. ಬೆಂಗಳೂರಿನಲ್ಲಿ ಅಪ್ರೆಂಟಿಸ್ ತರಬೇತಿ ಮುಗಿಸಿ ರಜೆಗೆ ನಮ್ಮೂರಿಗೆ (ಅದು ಆಗ ಒಂದು ಕುಗ್ರಾಮ) ಹೋಗಿದ್ದಾಗ ಹೊರಗಿನ ವರ್ತಮಾನ ಮತ್ತು ಉದ್ಯೋಗ ಮಾಹಿತಿಗಾಗಿ ಕಷ್ಟಪಟ್ಟು ‘ಪ್ರಜಾವಾಣಿ’ ಕೊಳ್ಳಲು ಶುರು ಮಾಡಿದೆ. ಎರಡೇ ದಿನದಲ್ಲಿ ಪ್ರಜಾವಾಣಿಯಲ್ಲಿ ಬಂದ ಉದ್ಯೋಗ ಜಾಹೀರಾತಿನಿಂದ ನನಗೆ ತಾತ್ಕಾಲಿಕ ಕೆಲಸ ಸಿಕ್ಕಿ ನಂತರ ಖಾಯಂ ಆಗಿ ಅತ್ಯುತ್ತಮ ಜೀವನ ರೂಪಿಸಿಕೊಂಡೆ.

ನನ್ನ ಭಾಷೆ ಮತ್ತು ಜ್ಞಾನ ವಿಕಾಸದಲ್ಲಿ ಪ್ರಜಾವಾಣಿಯ ಪಾತ್ರ ಅವಿಸ್ಮರಣೀಯ. ಜೀವನ ರೂಪಿಸಿದ ಮತ್ತು ಭಾಷೆಯ ಮೇಲಿನ ಹಿಡಿತ ಸಾಧಿಸಲು ನೆರವಾದ ಪ್ರಜಾವಾಣಿಯ ಅಭಿಮಾನಿ- ಇಂದಿಗೂ ಎಂದೆಂದಿಗೂ. ತಪ್ಪದೇ ಓದುತ್ತಲೇ ಇದ್ದೇನೆ. ಪ್ರಜಾವಾಣಿಗೆ ಶುಭವಾಗಲಿ

ನಾಗರಾಜಯ್ಯ. ಬಿ, ನಿಟ್ಟರಹಳ್ಳಿ, ಮಧುಗಿರಿ ತಾ.

ಈ ಪ್ರಜಾವಾಣಿ ನಿತ್ಯ ಶುಕ ಭಾಷಿಣಿ!!

ಹೇ ನಲ್ಮೆಯ ತರುಣಿ ಪ್ರಜಾವಾಣಿ!
ಎಪ್ಪತ್ತೈದು ವರ್ಷವೇನೆ ನಿನಗೆ ರಾಣಿ!?
ನಾ ನಂಬಲಾರೆ ಕಣೆ ಈ ಕಣಿ
ನೀನಿನ್ನೂ ಕನ್ನಡಿಗರ ಕಣ್ಣಿಗೆ ಇಪ್ಪತ್ತರ ಕಣ್ಮಣಿ
ಚಿರನೂತನ ನವಯೌವನ ತರುಣಿ.

ರಂಗುರಂಗಾಗಿ ಬರುವ ಅಂತೇ ಹೊತ್ತು ತರುವ
ಸುದ್ದಿ ವೈಯ್ಯಾರ ರಮಣಿ ದಿನಬೆಳಗಾದರೆ
ಇವಳನ್ನೆತ್ತಿಕೊಳ್ಳಿ ಎಂದು ಮುಂಜಾನೆಗೇ ನಮಗೆ
ಕಣ್‌ತೆರೆಸುತ್ತಾನೆ ಮನೆಮನಕೆ ಕಿರಣಸೂಸಿ ತರಣಿ!!

ಸಾಮಾಜಿಕ ಸಾಂಸ್ಕೃತಿಕ ಶೈಕ್ಷಣಿಕ ಧಾರ್ಮಿಕ
ರಾಜಕೀಯ ವಾರ್ತೆಗಳನ್ನೆಲ್ಲಾ ಬಿತ್ತುವ ಲೇ ಹರಿಣಿ
ನೀನು ಹೌದು ಹೌದು ಕೆಲವೊಮ್ಮೆ ಪ್ರಜಾಪ್ರಭುತ್ವದ
ರಕ್ಷಣೆಗೆ ಘರ್ಜಿಸುವ ಸಿಂಹಿಣಿ!! ಸಾಮಾನ್ಯ ಪ್ರಜೆಯ
ಹಕ್ಕು ಸಂರಕ್ಷಣಿ

ದಿನನಿತ್ಯ ಕನ್ನಡ ಭಾಷೆಯನ್ನು ಕಾಪಾಡುತ್ತಿರುವ
ಕಂಪು ಪೆಂಪಿನ ತಂಪು ತಂಪು ನಿನ್ನೊಡಲ ವಾಣಿ
ಸರ್ವಜನಾಂಗದ ಶಾಂತಿಯ ತೋಟದ ಹೇ
ಮುತ್ತಿನ ರಮಣಿ ನೀನು ಜನಮನಕೆ ಅಮೃತವರ್ಷಿಣಿ
ಹೇ ಓದುಗರ ರಮಣೀಯ ವಾಣಿ ಪ್ರಜಾವಾಣಿ
ನೂರ್ಕಾಲ ಬಾಳುತ್ತಿರು ಕನ್ನಡ ನೆಲದಲಿ ನೀ ಶುಕವಾಣಿ ನೀ ಶುಕಭಾಷಿಣಿ

–**ಹಿರೇಮಗಳೂರು ಕಣ್ಣನ್,** ಕನ್ನಡ ಪೂಜಾರಿ

‘ಘನತೆ ಕಾಪಾಡಿಕೊಂಡಿದೆ’



25ವರ್ಷಗಳಿಂದ ‘ಪ್ರಜಾವಾಣಿ’ ಓದುತ್ತಿದ್ದೇನೆ. ಎಲ್ಲ ಪತ್ರಿಕೆಗಳು ಕಣ್ಣೆದುರು ಇದ್ದರೂ ನಾನು ‘ಪ್ರಜಾವಾಣಿ’ ಪ್ರಿಯ. ಇದು ಸಮಗ್ರವಾಗಿ ಮೂಡಿ ಬರುವ ಏಕೈಕ ಪತ್ರಿಕೆ. ಶಿಕ್ಷಣ, ಕ್ರೀಡೆ, ಸಾಹಿತ್ಯ, ಕಲೆಗೆ ಸಮಾನವಾಗಿ ಆದ್ಯತೆಯನ್ನು ನೀಡಲಾಗುತ್ತಿದೆ. ಅದರಲ್ಲೂ ಜನರ ಬಡತನ, ಸಮಸ್ಯೆಗಳಿಗೆ ಪತ್ರಿಕೆ ಸ್ಪಂದಿಸುತ್ತದೆ. ದಶಕಗಳಿಂದ ತನ್ನ ಘನತೆಯನ್ನು ಕಾಪಾಡಿಕೊಂಡಿರುವ ಈ ಪತ್ರಿಕೆಯು ಪ್ರಜೆಗಳ ವಾಣಿಯಾಗಿದೆ.

–**ನರಸಿಂಹಲು ವಡವಾಟಿ,** ಅಂತರರಾಷ್ಟ್ರೀಯ ಕ್ಲಾರಿಯೋನೆಟ್ ವಾದಕರು, ರಾಯಚೂರು

ಮೂರು ದಿನಗಳ ‘ಸಂಗಂ’ ವಿಶ್ವಕವಿ ಸಮ್ಮೇಳನಕ್ಕೆ ಚಾಲನೆ

ದುರಿತ ಕಾಲದಲ್ಲಿ ಜೀವನಪ್ರೀತಿಯ ತಹತಹ...

ಪ್ರಜಾವಾಣಿ ವಾರ್ತೆ

ಬಳ್ಳಾರಿ (ಡಾ.ಜೋಳದರಾಶಿ ದೊಡ್ಡನಗೌಡರ ವೇದಿಕೆ): ಶಾಂತಿ, ಪ್ರೀತಿ, ಸಮಷ್ಟಿ ಭಾವ, ಜೀವನಪ್ರೀತಿ, ಸಂಭ್ರಮ, ಅವಮಾನ, ಅನುಮಾನ, ಸಂಚು, ಪಿತೂರಿ, ಅಸಹಾಯತನ ಆಕ್ರೋಶ, ಇವೆಲ್ಲವೂ ಕಾವ್ಯದ ವಿಷಯವಸ್ತುಗಳಾಗಿ ಜನರನ್ನು ತಲುಪಿದವು.

ಬಳ್ಳಾರಿಯ ಬಿಐಟಿಎಂ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಆರಂಭವಾಗಿರುವ ‘ಸಂಗಂ’ ವಿಶ್ವಕವಿ ಸಮ್ಮೇಳನದಲ್ಲಿ ಹೀಬ್ರು, ಸ್ಪ್ಯಾನಿಷ್, ಚಿಲಿ, ಇರಾನಿಯನ್ ಭಾಷೆಯಲ್ಲಿಯೂ, ಮರಾಠಿ, ಗುಜರಾತಿ, ಬಂಗಾಲಿ ಮುಂತಾದ ಭಾರತೀಯ ಭಾಷೆಯ ಕವಿತೆಗಳನ್ನು ವಾಚನ ಮಾಡಲಾಯಿತು.

ಬಳ್ಳಾರಿಯ ಅರಿವು ಸಂಸ್ಥೆ, ಕೇಂದ್ರ ಸಾಹಿತ್ಯ ಅಕಾಡೆಮಿ, ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಸಂಯುಕ್ತಾಶ್ರದಲ್ಲಿ ಆರಂಭವಾದ ಮೂರು ದಿನಗಳ ವಿಶ್ವಕವಿ ಸಮ್ಮೇಳನವನ್ನು ಕೇಂದ್ರಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಚಂದ್ರಶೇಖರ್ ಕಂಬಾರ ಅವರು ಆನ್‌ಲೈನ್ ಮೂಲಕ ಉದ್ಘಾಟಿಸಿದರು.

ಕನಸುಗಳೊಂದಿಗೆ ಜವಾಬ್ದಾರಿ ಆರಂಭವಾಗುತ್ತದೆ. ಜಗತ್ತಿನ ವಿವಿಧ ಭಾಗಗಳ ಕವಿಗಳನ್ನು ಅವರ ಭಾಷೆ ಮತ್ತು ಧ್ವನಿಯಲ್ಲಿ ಓದಿಸಬೇಕು ಎಂಬ ಕನಸಿತ್ತು. ಅದನ್ನು ಸಾಕಾರಗೊಳಿಸಲು ಬಳ್ಳಾರಿಯ ಅರವಿಂದ್ ಪಟೇಲ್ ತಂಡ ನಿರಂತರವಾಗಿ ಶ್ರಮಿಸಿದೆ ಎಂದು ಕವಿ ಎಚ್.ಎಸ್. ಶಿವಪ್ರಕಾಶ್ ಶ್ಲಾಘಿಸಿದರು.

ಪ್ರತಿಭಾಷೆಯಲ್ಲಿಯೂ ಸಾಕಷ್ಟು ಶಬ್ದಗಳಿವೆ. ಕವಿತೆಗಾಗಿ ಆಯ್ಕೆ ಮಾಡಿಕೊಳ್ಳುವ ಪದಗಳು ಪ್ರೀತಿ, ಮಾನವೀಯತೆ, ಅನುಕಂಪ, ಶಾಂತಿ ಮತ್ತು ಸೌಹಾರ್ದವನ್ನು ಸೂಚಿಸುವಂತಿರಬೇಕು ಎಂದು ಇಸ್ರೇಲ್‌ನ ದಿತಿ ರೊನೆನ್ ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- 15 ದೇಶಗಳು, 18 ಕವಿಗಳು
- 15 ರಾಜ್ಯಗಳ 18 ಕವಿಗಳು
- 3 ದಿನಗಳಲ್ಲಿ 21 ಗೋಷ್ಠಿಗಳು

ಸಂಗಂ ವಿಶ್ವಕವಿ ಸಮ್ಮೇಳನ

ಇದು ಕಾರ್ಪೊರೇಟ್ ಕವಿಗೋಷ್ಠಿಯಲ್ಲ, ಕವಿಗಳ ಕಾರ್ಪೊರೇಟ್. ಈ ಕಾರ್ಯಕ್ರಮವನ್ನು ಯಾವುದೇ ಕಾರ್ಪೊರೇಟ್ ಸಂಸ್ಥೆ ಪ್ರಾಯೋಜಿಸಿಲ್ಲ

ಎಚ್.ಎಸ್.ಶಿವಪ್ರಕಾಶ್, ಆಯೋಜಕರು ಸಂಗಂ ವಿಶ್ವಕವಿ ಸಮ್ಮೇಳನ

ಇಸ್ರೇಲಿನ ಲೇಖಕಿ ದಿತಿ ರೊನೆನ್ ಅವರು ಸಸಿಗೆ ನೀರೆರೆದು ವಿಶ್ವ ಕವಿ ಸಮ್ಮೇಳನಕ್ಕೆ ಚಾಲನೆ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ನಿಷ್ಠಿ ರುದ್ರಪ್ಪ, ಲೇಖಕ ಅಜಯ್ ಬಣಕಾರ್, ರಂಗಕರ್ಮಿ ಭೀಮಸೇನ್, ಬಿಐಟಿಎಂ ಕಾಲೇಜಿನ ನಿರ್ದೇಶಕ ಯಶವಂತ ಭೂಪಾಲ್, ಸಾರಿಗೆ ಸಚಿವ ಬಿ. ಶ್ರೀರಾಮುಲು, ಕಾರ್ಯಕ್ರಮದ ಮುಖ್ಯ ಸಂಘಟಕ ಎಸ್. ಪನ್ನರಾಜ್, ಕವಿ ಎಚ್.ಎಸ್. ಶಿವಪ್ರಕಾಶ್ ಇದ್ದಾರೆ

ಮೋದಿ ವರ್ಸಸ್ ಕವಿತೆ

ವಿಲ್ಸನ್ ಕಟೀಲ್ ಅವರು ‘ಸರ್ವಾಧಿಕಾರಿ ಪ್ರೀತಿಸಬೇಕಿತ್ತು’ ಎಂಬ ಕವಿತೆಯ ವಾಚನ ಮುಗಿಯುವ ಮೊದಲೇ ಕೆಲವರು ಎದ್ದು ನಿಂತು ಸರ್ವಾಧಿಕಾರಿ ಯಾರು ಎಂದು ಹೇಳಿ ಎಂದು ಪಟ್ಟು ಹಿಡಿದರು. ಇಡೀ ಸಭಾಂಗಣದಲ್ಲಿ ಕೆಲವು ಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು.

ಗಂಗಾವತಿಯ ರಾಮನಾಥ್ ಭಂಡಾರ್ಕರ್ ಎಂಬುವವರು ಸರ್ವಾಧಿಕಾರಿ ಯಾರು ಹೇಳಿ ಎಂದು ಗಲಾಟೆ ಆರಂಭಿಸಿದಾಗ, ಮುಂದಿನ ಸಾಲಿನಲ್ಲಿದ್ದ ವಿವಿಧ ದೇಶದ ಕವಿಗಳು ‘ಪ್ರೋಯೆಟ್ರಿ ಜಿಂದಾಬಾದ್’ ಎಂದು ಜಯಕಾರ ಹಾಕಲಾರಂಭಿಸಿದರು. ಇದಕ್ಕೆ ಪ್ರತಿಯಾಗಿ ರಾಮನಾಥ್ ಅವರ ಜೊತೆಗಿದ್ದವರು ‘ಮೋದಿ ಜಿಂದಾಬಾದ್’ ಎಂಬ ಜಯಕಾರವನ್ನೂ ಹಾಕಿದರು. ನಂತರ ಬಹಿಷ್ಕರಿಸಿ ಹೊರ ನಡೆದರು. ಗೋಷ್ಠಿ ಮತ್ತೆ ಮುಂದುವರಿಯಿತು.

ಕಂದಾಯ ಇಲಾಖೆಗಳಲ್ಲಿ ಕಡತ ವಿಲೇವಾರಿ ವಿಳಂಬ ● ಸ್ವಯಂಪ್ರೇರಿತ ಪ್ರಕರಣ ದಾಖಲು

ದುರಾಡಳಿತ: ಲೋಕಾಯುಕ್ತ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಕಚೇರಿಗಳಲ್ಲಿನ ದುರಾಡಳಿತ, ಕಡತ ವಿಲೇವಾರಿಯಲ್ಲಿನ ವಿಳಂಬ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ವಿಚಾರಣೆ ಆರಂಭಿಸಿದ್ದಾರೆ.

ಲೋಕಾಯುಕ್ತ ಪೊಲೀಸ್ ಮತ್ತು ನ್ಯಾಯಾಂಗ ವಿಭಾಗಗಳ ಅಧಿಕಾರಿಗಳ ಜಂಟಿ ತಂಡಗಳು ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ ಮತ್ತು ಉತ್ತರ ಉಪ ವಿಭಾಗಾಧಿಕಾರಿಗಳ ಕಚೇರಿಗಳು, ಉತ್ತರ, ದಕ್ಷಿಣ, ಪೂರ್ವ, ಯಲಹಂಕ ಮತ್ತು ಆನೇಕಲ್ ತಾಲ್ಲೂಕು ಕಚೇರಿಗಳಲ್ಲಿ ಸೆಪ್ಟೆಂಬರ್ 27ರಂದು ದಿಢೀರ್ ತಪಾಸಣೆ ಮಾಡಿದ್ದವು. ತನಿಖಾಧಿಕಾರಿಗಳು ಸಲ್ಲಿಸಿದ್ದ ವರದಿ ಆಧರಿಸಿ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳು ಮತ್ತು ಐವರು ತಹಶೀಲ್ದಾರ್‌ಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ತಪಾಸಣೆ ವೇಳೆ ಕಂಡುಬಂದಿರುವ ಲೋಪಗಳು ಹಾಗೂ ದುರಾಡಳಿತಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 21ರೊಳಗೆ ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಅಧಿಕಾರಿಗಳು ಮತ್ತು ಸಿಬ್ಬಂದಿ ಗುರುತಿನ ಚೀಟಿ ಧರಿಸದೇ ಇರುವುದು, ಮೇಜುಗಳ ಮೇಲೆ ಹೆಸರು ಮತ್ತು ಹುದ್ದೆಯ ಫಲಕ ಪ್ರದರ್ಶಿಸದೇ ಇರುವುದು, ಹಾಜರಾತಿ ವಹಿಗೆ ಸಹಿ ಮಾಡದಿರುವುದು, ನಗದು ಘೋಷಣೆ ಮಾಡದಿರುವುದು, ಸರ್ಕಾರದ ಕಡತಗಳ ನಿರ್ವಹಣೆಯಲ್ಲಿ ಲೋಪ ಎಸಗಿರುವುದು ಕಂಡುಬಂದಿದೆ ಎಂದು ತನಿಖಾ ತಂಡಗಳು ವರದಿ ನೀಡಿವೆ.

ಪ್ರಕರಣ ಬಾಕಿ: ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಅತಿ ಹೆಚ್ಚಿನ ಪ್ರಕರಣಗಳು ವಿಲೇವಾರಿಗೆ ಬಾಕಿ ಇರುವುದು, ವಿಚಾರಣೆ ಪೂರ್ಣಗೊಳಿಸಿದ್ದರೂ ಆದೇಶ ಹೊರಡಿಸಲು ಬಾಕಿ ಇರಿಸಿಕೊಂಡಿರುವುದು ತಪಾಸಣೆಯಲ್ಲಿ ಪತ್ತೆಯಾಗಿತ್ತು. ಕೆಲವು ಪ್ರಕರಣಗಳಲ್ಲಿ ವಿಚಾರಣಾ ದಿನಾಂಕ ನೀಡದಿರುವುದು ಹಾಗೂ 'ಆರ್ಡ್‌ ಶೀಟ್'ಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಪತ್ತೆಯಾಗಿತ್ತು ಎಂಬ ಅಂಶ ವರದಿಯಲ್ಲಿತ್ತು.

ಕಚೇರಿ ಅವಧಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಹರಟೆಯಲ್ಲಿ ನಿರತರಾಗಿದ್ದುದನ್ನೂ ತನಿಖಾ ತಂಡಗಳು ವರದಿಯಲ್ಲಿ ಉಲ್ಲೇಖಿಸಿದ್ದವು. ಸಕಾಲ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳ ವಿಲೇವಾರಿ ಮಾಡದಿರುವುದೂ ಪತ್ತೆಯಾಗಿತ್ತು. ಹಾಜರಾತಿ ಕಡತಕ್ಕೆ ಸಹಿ ಮಾಡದೆ ಗೈರಾಗಿರುವುದು ಕೂಡ ಕಂಡುಬಂದಿತ್ತು. ಸರ್ಕಾರದ ಕಚೇರಿಗಳಿಂದ ಬಂದಿರುವ ಕಡತಗಳನ್ನೂ ವಿಲೇವಾರಿ ಮಾಡದಿರುವುದು ಕೆಲವು ಕಚೇರಿಗಳಲ್ಲಿ ಪತ್ತೆಯಾಗಿದೆ.

ತಹಶೀಲ್ದಾರ್ ಕಚೇರಿ ಐಷಾರಾಮಿ ಕೊಠಡಿ!

ಬೆಂಗಳೂರು ಪೂರ್ವ (ಕೆ.ಆರ್. ಪುರ) ತಹಶೀಲ್ದಾರ್ ಅಜಿತ್ ಕುಮಾರ್ ರೈ ತಮ್ಮ ಕಚೇರಿಯನ್ನು ಐಷಾರಾಮಿ ಕೊಠಡಿಯನ್ನಾಗಿ ಪರಿವರ್ತಿಸಿದ್ದು, ಹಲವು ಸೌಲಭ್ಯಗಳುಳ್ಳ 'ಆ್ಯಂಟಿ ಚೇಂಬರ್' ಹೊಂದಿದ್ದಾರೆ ಎಂದು ಲೋಕಾಯುಕ್ತದ ಪೊಲೀಸ್ ಮತ್ತು ನ್ಯಾಯಾಂಗ ಅಧಿಕಾರಿಗಳ ತಂಡ ಲೋಕಾಯುಕ್ತರಿಗೆ ವರದಿ ಸಲ್ಲಿಸಿದೆ.

'ತಹಶೀಲ್ದಾರ್ ಕಚೇರಿಯಲ್ಲಿ ಚರ್ಮದ ಹೊದಿಕೆಯ ದುಬಾರಿ ಬೆಲೆಯ ಐಷಾರಾಮಿ ಕುರ್ಚಿ ಮತ್ತು ಸೋಫಾಗಳು ಇವೆ. ಹವಾ ನಿಯಂತ್ರಣ ವ್ಯವಸ್ಥೆ, ಟೆಲಿವಿಷನ್, ಫ್ರಿಡ್ಜ್, ಓವನ್, ಊಟದ ಟೇಬಲ್ ಮತ್ತಿತರ ಸೌಲಭ್ಯಗಳು ಕಚೇರಿ ಮತ್ತು ಆ್ಯಂಟಿ ಚೇಂಬರ್‌ನಲ್ಲಿವೆ' ಎಂಬ ಉಲ್ಲೇಖ ವರದಿಯಲ್ಲಿದೆ.

ಕೊಠಡಿ ನವೀಕರಣ ಹಾಗೂ ವಸ್ತುಗಳ ಖರೀದಿ ಕುರಿತು ಕಾರ್ಯಾದೇಶ ಒದಗಿಸಲು ಸೂಚಿಸಲಾಗಿತ್ತು. ಆದರೆ, ದಾಖಲೆ ಒದಗಿಸಲು ತಹಶೀಲ್ದಾರ್ ವಿಫಲರಾದರು. ಕೆಲವು ಬಿಲ್ಡರ್‌ಗಳು ಮತ್ತು ಅಪಾರ್ಟ್‌ಮೆಂಟ್‌ಗಳ ಮಾಲೀಕರು ಅಧಿಕಾರಿಗೆ ಈ ಸೌಲಭ್ಯ ಒದಗಿಸಿರುವ ಮಾಹಿತಿ ಲಭಿಸಿದೆ ಎಂದು ತನಿಖಾ ತಂಡ ಹೇಳಿದೆ.

ಸರ್ಕಾರಿ ಜಮೀನುಗಳ ಒತ್ತುವರಿ ತೆರವು, ಸಕಾಲ ಕಾಯ್ದೆಯಡಿ ಅರ್ಜಿಗಳ ವಿಲೇವಾರಿಯಲ್ಲಿ ಯಾವುದೇ ಪ್ರಗತಿ ಆಗದಿರುವುದು ಕಂಡುಬಂದಿದೆ ಎಂದು ವರದಿ ಹೇಳಿದೆ.

ರೇಜರ್ ಪೇ ವಂಚನೆ: ₹78 ಕೋಟಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೀನಾದಲ್ಲಿರುವ ವ್ಯಕ್ತಿಗಳು ಆ್ಯಪ್ ಮೂಲಕ ಸಾಲ ನೀಡಿ ವಂಚಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಐದು ಸ್ಥಳಗಳ ಮೇಲೆ ಬುಧವಾರ ದಾಳಿಮಾಡಿ ಶೋಧ ನಡೆಸಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ರೇಜರ್ ಪೇ ಕಂಪನಿಯ ವಿವಿಧ ಮರ್ಚೆಂಟ್ ಐಡಿ ಮತ್ತು ಬ್ಯಾಂಕ್ ಖಾತೆಗಳಲ್ಲಿದ್ದ ₹ 78 ಕೋಟಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ನಗರದ ಸೈಬರ್ ಅಪರಾಧ ವಿಭಾಗದ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ 18 ಪ್ರಕರಣಗಳ ತನಿಖೆಯ ಮುಂದುವರಿದ ಭಾಗವಾಗಿ ಇ.ಡಿ ಈ ಕಾರ್ಯಾಚರಣೆ ನಡೆಸಿದೆ. ಹಿಂದೆಯೂ ಕೂಡ ಶೋಧ ನಡೆಸಿ, ಹಣ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಈ ಪ್ರಕರಣದಲ್ಲಿ ಈವರೆಗೆ ಒಟ್ಟು ₹ 95 ಕೋಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಚೀನಾದ ಪ್ರಜೆಗಳು ಭಾರತೀಯ ನಾಗರಿಕರ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡು ಕಂಪನಿಗಳನ್ನು ತೆರೆದು ಆ್ಯಪ್ ಮೂಲಕ ಸಾಲ ನೀಡಿ ಜನರನ್ನು ವಂಚಿಸುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ರೇಜರ್ ಪೇ ಕಂಪನಿಯ ಕಚೇರಿಗಳು ಹಾಗೂ ಈ ಕಂಪನಿಯ ಹಣಕಾಸು ವಹಿವಾಟು ನಿರ್ವಹಣಾ ಕೇಂದ್ರದ ಮೇಲೆ ದಾಳಿಮಾಡಿ, ಶೋಧ ನಡೆಸಲಾಗಿದೆ ಎಂದು ತನಿಖಾ ಸಂಸ್ಥೆ ಮಾಹಿತಿ ನೀಡಿದೆ.

ಪಟಾಕಿ ಗಾಯ: ಮಿಂಟೊದಲ್ಲಿ 24 ಗಂಟೆ ಸೇವೆ

ಹಸಿರು ಪಟಾಕಿಯಿಂದಲೂ ಕಣ್ಣಿಗೆ ಹಾನಿ ಸಾಧ್ಯತೆ ● ಮುನ್ನೆಚ್ಚರಿಕೆ ವಹಿಸಲು ವೈದ್ಯರಿಂದ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದರೆ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು, ಚಿಕಿತ್ಸೆ ನೀಡಲು ಮಿಂಟೊ ಕಣ್ಣಿನ ಆಸ್ಪತ್ರೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. 24x7 ವೈದ್ಯಕೀಯ ಸೇವೆ ನೀಡಲು ಆಸ್ಪತ್ರೆ ಮುಂದಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ನಿರ್ದೇಶಕಿ ಡಾ. ಸುಜಾತಾ ರಾಥೋಡ್, 'ಹಬ್ಬದ ಸಂದರ್ಭದಲ್ಲಿ ಬೆಳಕಿನಿಂದ ಕತ್ತಲೆಗೆ ಹೋಗಬಾರದು. ಎಲ್ಲ ರೀತಿಯ ಪಟಾಕಿಗಳನ್ನು ಪೂರ್ಣ ಪ್ರಮಾಣದಲ್ಲಿ ನಿಷೇಧ ಮಾಡಬೇಕಿದೆ. ಆದರೆ, ಆ ಉದ್ಯಮವನ್ನು ನಂಬಿಕೊಂಡವರ ಬಗ್ಗೆ ಗಮನ ಹರಿಸಬೇಕಲ್ಲ' ಎಂದರು.

'ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ' ಎಂದು ಹೇಳಿದರು.

ಪ್ರತ್ಯೇಕ ವಾರ್ಡ್: 'ಪಟಾಕಿ ಗಾಯಗಳ ಚಿಕಿತ್ಸೆಗೆ 30 ಹಾಸಿಗೆಗಳ ಪ್ರತ್ಯೇಕ ವಾರ್ಡ್ ಮೀಸಲಿಡಲಾಗುತ್ತದೆ. ವೈದ್ಯರು ಹಾಗೂ ಸಿಬ್ಬಂದಿಗೆ ಒಂದು ವಾರ ರಜೆ ಇರುವುದಿಲ್ಲ. ಅವಘಡಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಆದರೂ ಇನ್ನಷ್ಟು ಜಾಗೃತಿ ಅಗತ್ಯವಿದೆ' ಎಂದರು.

'ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವೈದ್ಯರು ಸೇರಿ ಅಗತ್ಯ ಸಿಬ್ಬಂದಿಯಿದ್ದು, ಅಗತ್ಯ ಔಷಧಗಳ ವ್ಯವಸ್ಥೆಯಾಗಿದೆ' ಎಂದರು.

ಆಸ್ಪತ್ರೆಯ ನಿವಾಸಿ ವೈದ್ಯಾ ಧಿಕಾರಿ (ಆರ್‌ಎಂಒ) ಡಾ. ಹರೀಶ್ ಇದ್ದರು. ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸಹಾಯವಾಣಿ: 9480832430 ಅಥವಾ 948174013

ಸುರಕ್ಷಿತ ದೀಪಾವಳಿ ಆಚರಣೆ ಬಗ್ಗೆ ಡಾ. ಸುಜಾತಾ ರಾಥೋಡ್ ಭಿತ್ತಿಪತ್ರ ಬಿಡುಗಡೆ ಮಾಡಿದರು. ಆರ್‌ಎಂಒ ಡಾ. ಹರೀಶ್ ಹಾಗೂ ಶುಶ್ರೂಷಕರು ಇದ್ದಾರೆ



ಹಸಿರು ಪಟಾಕಿಯಿಂದ ಹಾನಿಯಾಗುವುದಿಲ್ಲ ಎಂಬ ತಪ್ಪುಕಲ್ಪನೆಯಿಂದ ಹೊರಬರಬೇಕು. ಪಟಾಕಿ ಸಿಡಿಸುವಾಗ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು.

ಡಾ. ಸುಜಾತಾ ರಾಥೋಡ್,
ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ

ವೈದ್ಯರು ನೀಡಿದ ಸಲಹೆಗಳು

- ಪಟಾಕಿ ಖರೀದಿಸಲೇಬೇಕಾದಲ್ಲಿ ಐಎಸ್‌ಐ ಗುರುತಿನ ಹಸಿರು ಪಟಾಕಿಗಳನ್ನು ಖರೀದಿಸಿ
- ಪಟಾಕಿಗಳ ಮೇಲಿರುವ ಎಚ್ಚರಿಕೆ, ಸೂಚನೆ ಅನುಸರಿಸಿ
- ಕನಿಷ್ಠ 2-3 ಅಡಿ ದೂರದಿಂದ ಪಟಾಕಿ ಹಚ್ಚಿ
- ಪಟಾಕಿ ಹಚ್ಚಲು ಉದ್ದನೆಯ ಕೋಲು ಬಳಸಿ
- ಮೈದಾನ, ಖಾಲಿ ಜಾಗಗಳಲ್ಲಷ್ಟೇ ಪಟಾಕಿ ಹಚ್ಚಿ
- ಬೆಂಕಿ ಹಾಗೂ ಥಟ್ಟನೆ ಹೊತ್ತಿಕೊಳ್ಳುವ ವಸ್ತುಗಳ ಬಳಿ ಪಟಾಕಿ ಸಂಗ್ರಹಿಸಿಡಬೇಡಿ
- ಪಟಾಕಿ ಸುಡುವುದಕ್ಕೆ ಗಾಜಿನ ಬಾಟಲಿಗಳನ್ನು ಬಳಸಬೇಡಿ. ಇದರಿಂದ ಸಿಡಿಯುವ ಚೂರುಗಳು ಕಣ್ಣಿಗೆ ಹಾನಿ ಮಾಡಬಹುದು
- ಮಕ್ಕಳು ಒಂಟಿಯಾಗಿ ಪಟಾಕಿ ಸಿಡಿಸುವುದಕ್ಕೆ ಅವಕಾಶ ನೀಡಬೇಡಿ. ಜತೆಯಲ್ಲಿ ಪಾಲಕರು ಇರಲಿ
- ಪಟಾಕಿ ಸಿಡಿದಾಗ ಕಿಡಿ ಬಿದ್ದರೆ ಕಣ್ಣನ್ನು ಉಜ್ಜಿಕೊಳ್ಳಬೇಡಿ
- ಅರೆಬರೆ ಸುಟ್ಟ ಪಟಾಕಿ ತುಣುಕನ್ನು ಗಾಳಿಯಲ್ಲಿ ಎಸೆಯಬೇಡಿ
- ಕೈಯಲ್ಲೇ ಪಟಾಕಿ ಸಿಡಿಸುವ ಸಾಹಸ ಬೇಡ
- ಅರೆಬರೆ ಸುಟ್ಟ ಪಟಾಕಿಯನ್ನು ಕೈಯಿಂದ ಹೊಸಕಿ ನಂದಿಸಲು ಯತ್ನಿಸಬೇಡಿ

'ಹಾನಿ: ತಕ್ಷಣದ ಕ್ರಮ ಹೀಗಿರಲಿ'

'ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸ್ವಚ್ಛವಾದ ಕರವಸ್ತ್ರದಿಂದ ಕಣ್ಣನ್ನು ಮುಚ್ಚಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕಣ್ಣನ್ನು ಉಜ್ಜುವುದು, ನೀರಿನಿಂದ ತೊಳೆದುಕೊಳ್ಳುವುದು ಮಾಡಬಾರದು.'

'ಕೂಡಲೇ ಹತ್ತಿರದ ಕಣ್ಣಿನ ಆಸ್ಪತ್ರೆಗೆ ತೆರಳಿ, ತುರ್ತು ಚಿಕಿತ್ಸೆ ಪಡೆಯಬೇಕು. ಪಟಾಕಿ ಹೊಡೆದ ಬಳಿಕ ಅದರ ಮೇಲೆ ನೀರು ಹಾಕಬೇಕು. ಇದರಿಂದ ಮಾಲಿನ್ಯದ ಪ್ರಮಾಣ ಕಡಿಮೆ ಆಗುವ ಜತೆಗೆ ಸುಟ್ಟ ಪಟಾಕಿಗಳ ಬಿಸಿ ತುಂಡುಗಳನ್ನು ಅರಿವಿಲ್ಲದೆಯೇ ಮೆಟ್ಟುವುದು ತಪ್ಪಲಿದೆ' ಎಂದು ಡಾ. ಸುಜಾತಾ ರಾಥೋಡ್ ತಿಳಿಸಿದರು.

'ನೇತ್ರ ರಕ್ಷಣೆ: ಮುನ್ನೆಚ್ಚರಿಕೆಯೇ ಮದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಸಂದರ್ಭದಲ್ಲಿ ಸಿಡಿಸುವ ಪಟಾಕಿಯಿಂದಾಗಿ ಕಣ್ಣುಗಳಿಗೆ ಹಾನಿಯಾಗುತ್ತಿರುವ ಘಟನೆಗಳು ಪ್ರತಿ ವರ್ಷ ನಡೆಯುತ್ತಿದೆ. ಹೀಗಾಗಿ, ಪಟಾಕಿ ಸಿಡಿಸುವಾಗ ಮುನ್ನೆಚ್ಚರಿಕೆ ಮತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಸಲಹೆ ನೀಡಿದೆ.

ಪಟಾಕಿ ಸಿಡಿಸುವಾಗ ಮಕ್ಕಳೇ ಹೆಚ್ಚು ಅನಾಹುತಕ್ಕೆ ಸಿಲುಕುತ್ತಿದ್ದಾರೆ. ಕೈ ಮತ್ತು ಕಣ್ಣುಗಳಿಗೆ ಗಾಯವಾಗುವುದು ಸಾಮಾನ್ಯವಾಗಿದೆ. ಆದ್ದರಿಂದ, ಪಟಾಕಿ ಸಿಡಿಸಲು ಮಕ್ಕಳಿಗೆ ಅವಕಾಶ ನೀಡಬೇಡಿ ಎಂದು ತಿಳಿಸಿದೆ.

ಪಟಾಕಿಗಳನ್ನು ಸಾಧ್ಯವಾದಷ್ಟು ಸಿಡಿಸದೆ ಇರುವುದು ಅತ್ಯುತ್ತಮ. ಸುರಕ್ಷಿತವಾದ ಮತ್ತು ಸಂಭ್ರಮದ ದೀಪಾವಳಿ ಆಚರಿಸಿ. ಈ ಮೂಲಕ ಆರೋಗ್ಯ ಮತ್ತು ಪರಿಸರ ಕಾಪಾಡಲು ಆದ್ಯತೆ ನೀಡಿ. ಪಟಾಕಿ ಸಿಡಿಸಿ ಕಣ್ಣಿಗೆ ಗಾಯಗಳಾದ ಕೆಲವು ಸಂದರ್ಭಗಳಲ್ಲಿ ದೃಷ್ಟಿಯನ್ನು ಸಹ ಕಳೆದುಕೊಂಡ ಉದಾಹರಣೆಗಳಿವೆ. ಪಟಾಕಿ ಸಿಡಿಸುವುದರಿಂದ ಉಂಟಾಗುವ ಹೊಗೆಯಿಂದಲೂ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಚಿಕಿತ್ಸೆಗಿಂತಲೂ ಮುಂಜಾಗ್ರತೆಯೇ ಮದ್ದು ಎನ್ನುವುದನ್ನು ಅರಿತುಕೊಳ್ಳಬೇಕು ಎಂದು ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್‌ನ ವೈದ್ಯಕೀಯ ನಿರ್ದೇಶಕ ಡಾ. ರೇಖಾ ಗ್ಯಾನ್‌ಚಂದ್ ಅವರು ತಿಳಿಸಿದ್ದಾರೆ.

ನೇತ್ರದಾನ ಮಾಡುವವರು ಮೊಬೈಲ್ ಸಂಖ್ಯೆ: 9740556666. ವೆಬ್‌ಸೈಟ್: bwlionseyehospital.org

ದೀಪಾವಳಿ: ವಿದ್ಯುತ್ ಕಡಿತ ಮಾಡದಂತೆ ಸೂಚನೆ

ಬೆಂಗಳೂರು: ದೀಪಾವಳಿ ಸಂದರ್ಭದಲ್ಲಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಗಮನ ಹರಿಸುವಂತೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಸ್ಕಾಂ ವ್ಯಾಪ್ತಿಯ ಗ್ರಾಹಕರಿಗೆ ಯಾವುದೇ ರೀತಿಯ ವಿದ್ಯುತ್ ವ್ಯತ್ಯಯವಾಗದಂತೆ ಕ್ರಮಕೈಗೊಳ್ಳಬೇಕು. ಹಬ್ಬ ಮುಗಿಯುವವರೆಗೂ ವಿದ್ಯುತ್ ಮಾರ್ಗಗಳ ದುರಸ್ತಿ, ಜೋಡಣೆ ಹಾಗೂ 'ಲೈನ್ ಕ್ಲಿಯರೆನ್ಸ್' ಕಾರ್ಯ ಕೈಗೆತ್ತಿಕೊಳ್ಳದಂತೆಯೂ ಸೂಚಿಸಿದ್ದಾರೆ.

ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಕಂಡುಬಂದಲ್ಲಿ ತಕ್ಷಣವೇ ಸರಿಪಡಿಸಬೇಕು ಎಂದು ಅವರು ಸಿಬ್ಬಂದಿಗೆ ನಿರ್ದೇಶನ ನೀಡಿದ್ದಾರೆ.

ಪುಣೆ ರೇಸ್

ಮಸ್ಟೀರಿಯನ್ ಗೆಲ್ಲುವ ನಿರೀಕ್ಷೆ

ಟೈಮ್ಸ್ ಆಫ್ ಇಂಡಿಯಾ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಸ್ಟೀರಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರಿಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟೌಸಿಯಂಟ್ 6, ಸ್ಲಾಮ್ ಡಂಕ್ 5, ಶೆರಾ 3
2ನೇ ರೇಸ್: ನಾದರನ್ ಸಿಂಗರ್ 1, ಸ್ಟಾರ್ಸ್ ಫಾರ್ ಯು 6, ಟ್ರೈಸ್ಟಾರ್ 5
3ನೇ ರೇಸ್: ಮಸ್ಟೀರಿಯನ್ 6, ಗ್ರೇಟ್ ಗನ್ಸ್ 1, ಟೈಮ್ 7
4ನೇ ರೇಸ್: ಪೈರ್ಹಸ್ 11, ಹೌಸ್ ಆಫ್ ಲಾರ್ಡ್ಸ್ 9, ಪರ್ಫೆಕ್ಟ್ ವಿನ್ 5
5ನೇ ರೇಸ್: ಕಿಂಗ್ಸ್ ಬೆಸ್ಟ್ 2, ಫಿಂಚ್ 8, ಯೂರಿಬಿಕ್ ಸ್ಟಾರ್ 4
6ನೇ ರೇಸ್: ತೂಫಾನ್ 5, ಮಲ್ಟಿಎನ್ಸ್ಟ್ರಿಪ್ಟೆಡ್ 2, ಅಲೈಡ್ ಅಟ್ಯಾಕ್ 13

ಉತ್ತಮ ಬೆಟ್: ಪೈರ್ಹಸ್

ಜಾಕ್‌ಪಾಟ್	ಟ್ರಿಬಲ್
3,4,5,6	3,4,5

ಪರಸ್ಪರ ಅಂತರ ಕಾಯ್ದುಕೊಳ್ಳಿ



ನಿಮ್ಮ ದೀಪಾವಳಿ ಜಗಮಗಿಸಲಿ
ನಮ್ಮ ಹ್ಯಾಪಿ ಆಫರ್ಸ್ ನೊಂದಿಗೆ.

BPL Happy Little Things

ಆಕರ್ಷಕ ಫೈನಾನ್ಸ್ ಸ್ಕೀಮ್ಸ್

ಚಿನ್ನ ಗೆಲ್ಲಿ ಪ್ರತಿದಿನ*
ಕ್ಯಾಶ್ ಬ್ಯಾಕ್ 20%* ವರೆಗೆ
ಪಡೆಯಿರಿ ಖಚಿತ ಗಿಫ್ಟ್ಸ್ ಪ್ರತಿ ಖರೀದಿಯೊಂದಿಗೆ*

TO WIN, SMS BPL 56767

AVAILABLE AT Reliance digital | Jio | reliancedigital.in | ADISHWAR ELECTRO WORLD | ಯುನಿಲೆಟ್ Finance partners: HDFC BANK FESTIVE TREATS | ICICI Bank | AXIS BANK | IDFC FIRST Bank | kotak | AU | one card | FEDERAL BANK | AMERICAN EXPRESS | BAJAJ FINSERV | pine labs PAY LATER

Bangalore:- **Authorised Distributor**: **Sethu Enterprises** – Bangalore, Urban, Rural Tumkur,Kolar- 9686467688/9036020661/9731241818. **Authorised Dealers**: **Unilet Appliances –Toll Free-9243585858** Showrooms: Bommanahalli,Challakere,Chitradurga, Cox Town, Devanahalli, Dlf City, Doddaballapura, Frazer Town, Ganganagar, Hanumanthnagar, Hassan, Hebbagudi, Hegganahalli, Hesaraghatta, Hiriyur, Hongasandara, Hosakote, Hrbr Layout, Hsr Layout, K R Puram, Kengeri, Kolar, Kothanur, Mandya, Maratha Halli 2, Mathikere, Mysore Vijayanagar, Mysore, Kuvempu Nagar, Mysore, Rajkumar Road, Nagarbhavi, Nelamangala, Peenya , R T Nagar , Rajajinagar, Rajarajeshwari Nagar, Ramamurthynagar , Ramnagar , Sahakarnagar, Sanjaynagar, Shivamogga, Sunkadakatte, Tumkur, Vijayanagar, Yelahanka. **Adishwar Electro World** :Rajajinagar- 9731306572, Banashankari- 9731307254, Chandra Layout-9731306558,Hrbr Layout-9731306621,Marathalli -9731306703/6733, Hsr Layout-9731306550,Premium Rjn-9731306731,Rammurthy Nagar-8861007307,Jayanagar-9731306617,Nagarbhavi-9731306616,Mathikere-9731306684 , Sarjapur-9731307230,Jp Nagar-8861007298,Sunkadakkatte-9686680764 , Vidyaranyapura-9731306692,Hosur Road-9591997265,Vijaynagar-9731306631,Bannergatta-9731306625,Peenya-6361202778,Channasandra-9731306766 , Amruthalli-9731306614\6671,Thanisandra-9731306763,Ke geri-9731306634,Hegganahalli-9591997257,Heebagodi -9731307257,Yelahanka -9731306702, White Field-9513499851,Uttarahalli-9731306547,Hennur-9731306571-Kr Puram-9108023817,Hoskote-9731306767,R T Nagar-9731306593,Madevpura-9148151731,Begur Road-9731306604,Konanakunte-9731306705,Tumkur-9591997270,Tiptur-9731306552 Kunigal-9731306663. **Jayanagar:** Devi International 7204707152/9844207628. **Jayanagat/Rv Road**: Grihavaibhava- 9448354514. **Electronic City**: Baron Electronics– 9886048988 / 9916782686, Anekal – 9945597666 Dommasandra – 88667733514. **Golrahatti** :S.N Home World-8660389522,Peenya Dasarahalli – 900818284. **Ganga Nagar**: Anand Home World –9845022594. **Kolar**: Ravi Enterprises– 9845229626. Customer Toll Fre No: **1800-889-1047**.

*Terms and Conditions apply. Paper Finance available through Bajaj/HDFC/IDFC. Fixed EMI options also available on select products. No cost EMI available on all leading banks on credit/debit cards. Up to 20% Cash Back available up to ₹7,500/- on HDFC/ICICI/Axis/IDFC/Amex/Kotak/AU/One Card/Federal Banks debit/credit cards, on minimum transaction value ₹12,000/- on BPL range of selected products through Pine Lab POS. Offer valid up to 31st October 2022. Zero processing fee available on selected schemes and banks. Contact your nearest store for more details. Images are for representation purpose only and actual product/ gift may vary. Daily gold prize offer valid from 3rd October to 24th October 2022. Gold Scheme not valid in Tamil Nadu. BPL is a registered trademark of BPL Limited and is used under license by Reliance Retail Limited.

ಷೇರುಪೇಟೆ ವಹಿವಾಟು

▲ 112



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,564
ಇಂದಿನ ಅಂತ್ಯ	17,576
▲	64
ದಿನದ ಗರಿಷ್ಠ	17,670

ವಿನಿಮಯ ದರ

$ ಡಾಲರ್	82.88
£ ಪೌಂಡ್	92.87
€ ಯುರೊ	81.10
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹460
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1610)
ಸೋಯಾ (ರಿಫೈನ್ಡ್)	₹1340 (1340)
ಸೂರ್ಯಕಾಂತಿ (ರಿಫೈನ್ಡ್)	₹1570 (1530)
ಪಾಮೋಲಿನ್	₹980 (980)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹142
ಗುಡ್ ಲಾಟ್	₹136.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹205-615
ದ್ವಿತಳಿ (ಬಿ.ವಿ)	₹336-822

ಚಿನ್ನದ ದರ ₹372 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ ₹ 372ರಷ್ಟು ಇಳಿಕೆ ಕಂಡು ₹ 50,139ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 799ರಷ್ಟು ಇಳಿಕೆಯಾಗಿ ₹ 56,089ರಂತೆ ಮಾರಾಟವಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ತಗ್ಗಿದ ರಿಲಯನ್ಸ್ ಲಾಭ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಒಟ್ಟು ₹ 13,656 ಕೋಟಿ ಲಾಭ ಗಳಿಸಿದೆ. ಆಕಸ್ಮಿಕ ಲಾಭ ತೆರಿಗೆಯು ಕಂಪನಿಯ ಲಾಭ ಪ್ರಮಾಣವನ್ನು ತಗ್ಗಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 13,680 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಲಾಭವು ಅತ್ಯಲ್ಪ ಪ್ರಮಾಣದಲ್ಲಿ ಕುಸಿದಿದೆ.

ಆಕಸ್ಮಿಕ ಲಾಭ ತೆರಿಗೆ ಇಲ್ಲವಾಗಿದ್ದರೆ ಕಂಪನಿಯ ಲಾಭವು ಶೇ 20ರಷ್ಟು ಹೆಚ್ಚಿರುತ್ತಿತ್ತು. ಕಂಪನಿಯು ₹ 4,039 ಕೋಟಿಯನ್ನು ಆಕಸ್ಮಿಕ ಲಾಭ ತೆರಿಗೆಯಾಗಿ ಸಲ್ಲಿಸಿದೆ.

ಈ ವರ್ಷದ ಜೂನ್ ತ್ರೈಮಾಸಿಕದ ಲಾಭಕ್ಕೆ ಹೋಲಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದ ಲಾಭವು ಶೇ 24ರಷ್ಟು ಕಡಿಮೆ ಆಗಿದೆ. ಆದರೆ, ಕಂಪನಿಯ ರಿಟೇಲ್ ವಹಿವಾಟು ಮತ್ತು ದೂರಸಂಪರ್ಕ ವಹಿವಾಟು ವಿಭಾಗಗಳು ಉತ್ತಮ ಲಾಭ ಗಳಿಸಿವೆ.

ಜಿಯೊ ಇನ್ಫೊಕಾಂ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 4,518 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿ ₹ 3,528 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 28ರಷ್ಟು ಹೆಚ್ಚಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಜಿಯೊ ಇನ್ಫೊಕಾಂ ಕಾರ್ಯಾಚರಣಾ ವರಮಾನ ಶೇ 20.2ರಷ್ಟು ಹೆಚ್ಚಾಗಿ ₹ 22,521 ಕೋಟಿಗೆ ತಲುಪಿದೆ.

ರಿಲಯನ್ಸ್ ರಿಟೇಲ್‌ನ ತೆರಿಗೆ ಪೂರ್ವ ಲಾಭವು ಶೇ 51ರಷ್ಟು ಹೆಚ್ಚಾಗಿದ್ದು ₹ 4,404 ಕೋಟಿಗೆ ತಲುಪಿದೆ.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ) ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಿದ ₹ 2.50 ಕೋಟಿ ಮೊತ್ತದ ಚೆಕ್ ಅನ್ನು ವಸತಿ ಸಚಿವ ವಿ. ಸೋಮಣ್ಣ ಮತ್ತು ನಿಗಮದ ಅಧ್ಯಕ್ಷ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಡಾ.ಕೆ. ಸುಧಾಕರ್ ಮತ್ತು ಮುನಿರತ್ನ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಎಸ್‌ಐಐಡಿಸಿ ಮಂಡಳಿಯ ನಿರ್ದೇಶಕರಾದ ಸಿ.ಎನ್. ಗಾಯತ್ರಿ ದೇವಿ, ಮಹದೇವಸ್ವಾಮಿ, ಭಾರತಿ ಮಲ್ಲಿಕಾರ್ಜುನಪ್ಪ ಅಳವಂಡಿ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್. ರವಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ. ಪ್ರಕಾಶ್ ಇದ್ದರು.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಸೆಪ್ಟೆಂಬರ್‌ನಲ್ಲಿ ತಗ್ಗಿದ ಉಕ್ಕಿನ ಬೆಲೆ

ನವದೆಹಲಿ (ಪಿಟಿಐ): ಕಳೆದ ಆರು ತಿಂಗಳ ಅವಧಿಯಲ್ಲಿ ದೇಶಿ ಮಾರುಕಟ್ಟೆಯಲ್ಲಿ ಉಕ್ಕಿನ ಬೆಲೆಯು ಶೇಕಡ 40ರಷ್ಟು ಕಡಿಮೆ ಆಗಿದ್ದು, ಪ್ರತಿ ಟನ್‌ಗೆ ₹ 57 ಸಾವಿರಕ್ಕೆ ತಲುಪಿದೆ ಎಂದು ಸ್ಟೀಲ್‌ಮಿಂಟ್ ಸಂಸ್ಥೆ ಹೇಳಿದೆ.

ದೇಶದಿಂದ ಉಕ್ಕು ರಫ್ತು ಮಾಡಲು ಶೇಕಡ 15ರಷ್ಟು ತೆರಿಗೆ ಪಾವತಿಸಬೇಕು ಎಂಬ ನಿಯಮ ಜಾರಿಗೊಳಿಸಿದ ನಂತರದಲ್ಲಿ ಹೊರದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇಲ್ಲವಾಗಿದೆ. ಹೀಗಾಗಿ ಬೆಲೆ ಕಡಿಮೆ ಆಗಿದೆ ಎಂದು ಸಂಸ್ಥೆ ತಿಳಿಸಿದೆ.

ಉಕ್ಕಿನ ಬೆಲೆಯು ಏಪ್ರಿಲ್‌ನಲ್ಲಿ ಪ್ರತಿ ಟನ್‌ಗೆ ₹ 78,800ಕ್ಕೆ ತಲುಪಿತ್ತು. ಇದು ಗರಿಷ್ಠ ಮಟ್ಟವಾಗಿತ್ತು. ಇದಕ್ಕೆ ಶೇ 18ರಷ್ಟು ಜಿಎಸ್‌ಟಿ ಸೇರಿಸಿದಾಗ, ಖರೀದಿದಾರ ಕೊಡಬೇಕಿರುವ ಬೆಲೆಯು ₹ 93 ಸಾವಿರ ಆಗುತ್ತಿತ್ತು.

ಏಪ್ರಿಲ್ ತಿಂಗಳ ಅಂತ್ಯದ ವೇಳೆಗೆ ಉಕ್ಕಿನ ಬೆಲೆಯು ಕಡಿಮೆ ಆಗಲು ಶುರುವಾಯಿತು. ಜೂನ್ ಅಂತ್ಯದ ಹೊತ್ತಿಗೆ ಇದು ಟನ್‌ಗೆ ₹ 60,200ಕ್ಕೆ ತಲುಪಿತು ಎಂದು ಸ್ಟೀಲ್‌ಮಿಂಟ್ ಹೇಳಿದೆ. ಸೆಪ್ಟೆಂಬರ್ ಮಧ್ಯದ ಸುಮಾರಿಗೆ ಬೆಲೆಯು ₹ 57 ಸಾವಿರಕ್ಕೆ ತಲುಪಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/49/2022–23 ದಿನಾಂಕ: 21–10–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಾಣಿಜ್ಯ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ ಶ್ರೀನಿವಾಸ್ ನರಸಿಂಹಯ್ಯ ಬಿನ್ ಲೇಟ್ ನರಸಿಂಹಯ್ಯ ಗಂಗಯ್ಯ,	ನೆಲಮಂಗಲ	ತ್ಯಾಮಗೊಂಡ್ಲು	ಮಹಿಮಾಪುರ	45/3ಎ	01–05	ವ್ಯವಸಾಯ	ವಾಣಿಜ್ಯ
					45/3ಬಿ	00–38		
					ಒಟ್ಟು	02–03		

ಷರಾ:– ಪ್ರಸ್ತಾಪಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಉದ್ದೇಶದ ವಿನ್ಯಾಸಗಳು ಅನುಮೋದನೆಯಾಗಿದ್ದು, ವಾಣಿಜ್ಯ ಚಟುವಟಿಕೆ ಕೇಂದ್ರ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನು ಒಳಗೊಂಡ ವಾಣಿಜ್ಯ ಚಟುವಟಿಕೆ ಕೇಂದ್ರ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 25 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು "ವ್ಯವಸಾಯ" ವಲಯದಿಂದ "ವಾಣಿಜ್ಯ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2730/2022–23

ನಗರಸಭಾ ಕಾರ್ಯಾಲಯ, ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಎಇ/ಸಿಆರ್/07/2022–23 ದಿನಾಂಕ: 17.10.2022

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡಂತೆ ವಿವಿಧ ಅನುದಾನಗಳಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆಗೆ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ **http://eproc.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. **(1)** ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: **05.11.2022 ರ ಸಂಜೆ 5.30 ಗಂಟೆವರೆಗೆ. (2)** ಟೆಂಡರ್‌ನ್ನು ತೆರೆಯುವ ದಿನಾಂಕ: **07.11.2022 ರ ಬೆಳಗ್ಗೆ 10.30 ಗಂಟೆಗೆ.**

ಪ್ಯಾ ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
	2022–23ನೇ ಸಾಲಿಗೆ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ			
1	DMA/2022-23/WS/WORK_INDENT139837	44.70	89400.00	3 ತಿಂಗಳು
2	DMA/2022-23/WS/WORK_INDENT139839	45.11	90300.00	3 ತಿಂಗಳು
3	DMA/2022-23/WS/WORK_INDENT139842	45.26	90600.00	3 ತಿಂಗಳು
4	DMA/2022-23/RD/WORK_INDENT139851	54.36	108800.00	3 ತಿಂಗಳು
5	DMA/2022-23/RD/WORK_INDENT139852	23.78	50000.00	3 ತಿಂಗಳು
6	DMA/2022-23/OW/WORK_INDENT139857	20.00	50000.00	3 ತಿಂಗಳು
	2022–23 ಎಸ್.ಎಫ್.ಸಿ ಮುಕ್ತನಿಧಿ ಅನುದಾನ			
7	DMA/2022-23/OW/WORK_INDENT139858	16.80	42000.00	3 ತಿಂಗಳು
8	DMA/2022-23/RD/WORK_INDENT139859	6.72	16800.00	3 ತಿಂಗಳು
	2019–20ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ)			
9	DMA/2022-23/WS/WORK_INDENT139860	2.08	5200.00	1 ತಿಂಗಳು
10	DMA/2022-23/RD/WORK_INDENT139862	3.24	8100.00	1 ತಿಂಗಳು
	2020–21ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ)			
11	DMA/2022-23/RD/WORK_INDENT139863	3.76	9400.00	1 ತಿಂಗಳು
12	DMA/2022-23/OW/WORK_INDENT139864	1.53	3900.00	1 ತಿಂಗಳು
	2019–20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ			
13	DMA/2022-23/OW/WORK_INDENT135864/CALL-2	95.00	1,90,000.00	3 ತಿಂಗಳು
14	DMA/2022-23/EL/WORK_INDENT135878/CALL-2	10.00	25,000.00	2 ತಿಂಗಳು
	2022–23 ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ			
15	DMA/2022-23/WS/WORK_INDENT135884/CALL-2	5.00	12,500.00	1 ತಿಂಗಳು
	ಸ್ವಚ್ಛ ಭಾರತ್ ಮಿಷನ್ ಯೋಜನೆ			
16	CMC/HS/IEC/CR/03/2020-21/CALL-3	10.00	25000.00	3 ತಿಂಗಳು
	2022–23ನೇ ಸಾಲಿನ ನಗರಸಭೆ ನಿಧಿ			
17	DMA/2022-23/WS/WORK_INDENT139996	7.65	19200.00	1 ತಿಂಗಳು
18	DMA/2022-23/WS/WORK_INDENT139997	5.33	13300.00	1 ತಿಂಗಳು
19	CMC/KOL/VEHLCLES-OFFICE/2022-23	19.20	48000.00	1 ವರ್ಷ
20	CMC/HS/ABC/TENDER/2022-23	15.00	37,500.00	1 ತಿಂಗಳು
21	DMA/2022-23/WS/WORK_INDENT139432	20.00	50,000.00	1 ವರ್ಷ
22	DMA/2022-23/WS/WORK_INDENT139433	20.00	50,000.00	1 ವರ್ಷ
23	DMA/2022-23/WS/WORK_INDENT139434	18.34	48,000.00	1 ವರ್ಷ
	ಪರಿಶಿಷ್ಟಜಾತಿ ವರ್ಗಕ್ಕೆ ಮೀಸಲಾತಿ			
	2022–23ನೇ ಸಾಲಿಗೆ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ			
24	DMA/2022-23/WS/WORK_INDENT139846	29.99	30000.00	3 ತಿಂಗಳು
25	DMA/2022-23/OW/WORK_INDENT139848	48.27	48300.00	3 ತಿಂಗಳು
26	DMA/2022-23/OW/WORK_INDENT139853	12.00	15000.00	2 ತಿಂಗಳು
	2019–20ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ (ಉಳಿಕೆ)			
27	DMA/2022-23/RD/WORK_INDENT139861	2.08	2600.00	1 ತಿಂಗಳು
	ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾತಿ			
	2022–23ನೇ ಸಾಲಿಗೆ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ			
28	DMA/2022-23/OW/WORK_INDENT139856	28.00	28000.00	3 ತಿಂಗಳು
	2022–23ನೇ ಸಾಲಿನ ನಗರಸಭೆ ನಿಧಿ			
29	DMA/2022-23/RD/WORK_INDENT139435	15.00	18,800.00	1 ತಿಂಗಳು

ಸೂಚನೆ:– ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಅಧ್ಯಕ್ಷರು, ನಗರಸಭೆ, ಕೋಲಾರ | ಸಹಿ/- ಉಪಾಧ್ಯಕ್ಷರು, ನಗರಸಭೆ, ಕೋಲಾರ | ಸಹಿ/- ಪೌರಾಯುಕ್ತರು, ನಗರಸಭೆ, ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 345/ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ದಿ. ಕೆ. ಎಸ್. ರಾಮೇಗೌಡರು
ನಿರ್ದೇಶಕರು
ದಿ ಸಿಟಿಜನ್ ಕೋ. ಆಪರೇಟಿವ್ ಬ್ಯಾಂಕ ಲಿ.,
ನಿರ್ದೇಶಕರು
ಸತ್ಯನಾರಾಯಣ ಹೌಸಿಂಗ್ ಸೊಸೈಟಿ
(ನಿವೃತ್ತ ಹಿರಿಯ ಟೆಕ್ನಿಕಲ್ ಅಧಿಕಾರಿ ಸಿಎಮ್‌ಟಿಐ)
ನಿಧನ: 22–10–2021
ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ
ನಿತ್ಯ ನೂತನ ನಿರಂತರ ಹಾಗೂ ಅಮರ.

ನಿಮ್ಮ ಆತ್ಮಕ್ಕೆ ಶಾಂತಿ ಕೋರುವ:
ಶ್ರೀಮತಿ ಕೆ.ಆರ್. ನಾಗರತ್ನ ಮತ್ತು ಶ್ರೀ ಕೆ. ಶಿವಣ್ಣ
ಶ್ರೀಮತಿ ಕೆ.ಆರ್. ಭಾರತಿ ಮತ್ತು ಶ್ರೀ ಜಿ.ಎಸ್. ಲೋಕೇಶ್
ಶ್ರೀಮತಿ ಕೆ.ಆರ್. ಭಾಮಿನಿ ಮತ್ತು ಶ್ರೀ ಎಸ್. ಆರ್. ಪ್ರಕಾಶ್
ಹಾಗೂ ಮೊಮ್ಮಕ್ಕಳು.

ಶಿವಗಣಾರಾಧನೆ

ಶ್ರೀಮತಿ ಕೆ. ಜಿ. ಮಂಜುಳ
ಇವರು 14–10–22ನೇ ಶುಕ್ರವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಶಿವಗಣಾರಾಧನೆಯನ್ನು ದಿನಾಂಕ: 23–10–2022ನೇ ಭಾನುವಾರ ಬೆಳಿಗ್ಗೆ 10:30ಕ್ಕೆ ಮೃತರ ಸ್ವಗೃಹ ಕಾನಾಹೊಸಹಳ್ಳಿ ಗ್ರಾಮ ಕೂಡ್ಲಿಗಿ ತಾಲ್ಲೂಕು, ವಿಜಯನಗರ ಜಿಲ್ಲೆ ಇಲ್ಲಿ ಏರ್ಪಡಿಸಲಾಗಿದೆ.

ಇಂತಿ ದುಃಖತಪ್ತರು: ಮೃತರ ಪತಿ
ಶ್ರೀ ಕೆ. ಜಿ. ಕುಮಾರ ಗೌಡ (ನಿವೃತ್ತ ಇಂಜಿನಿಯರ್)
ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು.
98453 72504

NAME CHANGE ANNOUNCEMENT
Log on to :
dhclassifieds.com

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485

ಅಡಿಕೆ

ಬಂಟ್ವಾಳ	
ಕೋಕ	12500-25000
ಹಳತು	48000-56000
ಹೊಸನಗರ	
ಬಿಳಿಗೋಟು	27399-27399
ಚಾಲಿ	37511-38799
ಕೆಂಪುಗೋಟು	36400-38399
ರಾಶಿ	47009-50339
ಕುಮಟ	
ಚಿಪ್ಪು	26019-33119
ಕೋಕ	16019-31029
ಹೊಸಚಾಲಿ	37509-42019
ಹಳೆಚಾಲಿ	44099-44099
ಪುತ್ತೂರು	
ಕೋಕ	11000-26000
ಹೊಸತು	35500-48500
ಶಿವಮೊಗ್ಗ	
ಬೆಟ್ಟೆ	50600-53909
ಗೊರಬಲು	17019-37299
ಹೊಸತು	47169-47599
ರಾಶಿ	46009-50399
ಸರಕು	59100-80696
ಸಿದ್ದಾಪುರ	
ಬಿಳಿಗೋಟು	30669-36969
ಚಾಲಿ	37109-41299
ಕೋಕ	26299-34616
ಕೆಂಪುಗೋಟು	27119-34019
ರಾಶಿ	46109-49199
ತಟ್ಟಿಬೆಟ್ಟೆ	37849-45109
ಶಿರಸಿ	
ಬೆಟ್ಟೆ	24000-47999
ಬಿಳಿಗೋಟು	19699-35899
ಚಾಲಿ	35029-42412
ಕೆಂಪುಗೋಟು	14199-33121
ರಾಶಿ	44539-48901
ಯಲ್ಲಾಪುರ	
ಬಿಳಿಗೋಟು	25762-35623
ಚಾಲಿ	36009-42201
ಕೋಕ	18012-32899
ಕೆಂಪುಗೋಟು	26899-36142
ರಾಶಿ	48000-53899
ತಟ್ಟಿಬೆಟ್ಟೆ	38125-47610

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15600	16100	195.10 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2057 ಡಾಲರ್ಸ್

ಎಸ್‌ಬಿಐ ಠೇವಣಿ ಬಡ್ಡಿದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 2 ಕೋಟಿಗಿಂತ ಕಡಿಮೆ ಮೊತ್ತದ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹೆಚ್ಚಿಸಿದೆ. ಇದು ಶನಿವಾರದಿಂದ ಜಾರಿಗೆ ಬರಲಿದೆ.

ವಿವಿಧ ಅವಧಿಯ ಠೇವಣಿಗಳ ಮೇಲಿನ ಬಡ್ಡಿ ದರವು ಕನಿಷ್ಠ ಶೇ 0.25ರಿಂದ ಗರಿಷ್ಠ ಶೇ 0.80ರವರೆಗೆ ಹೆಚ್ಚಲಿದೆ ಎಂದು ಎಸ್‌ಬಿಐ ತಿಳಿಸಿದೆ.

ಏರಿಕೆ ವಿವರ: 46ರಿಂದ 179 ದಿನಗಳವರೆಗಿನ ಠೇವಣಿಗೆ ಹೊಸ ಬಡ್ಡಿ ದರ ಶೇ 4.50. 180ರಿಂದ 210 ದಿನಗಳವರೆಗಿನ ಠೇವಣಿಗೆ ಶೇ 5.25. 211ದಿನಗಳಿಂದ 1 ವರ್ಷದೊಳಗಿನ ಠೇವಣಿಗೆ ಶೇ 5.50. 1-2 ವರ್ಷಗಳು ಶೇ 6.10. 2-3 ವರ್ಷಗಳು ಶೇ 6.25. 3-5 ವರ್ಷಗಳು ಹಾಗೂ 5-10 ವರ್ಷಗಳು ಶೇ 6.10.

ಹಿರಿಯ ನಾಗರಿಕರಿಗೆ 3-5 ವರ್ಷಗಳ ಠೇವಣಿಗೆ ಶೇ 6.60ರಷ್ಟು, 5-10 ವರ್ಷಗಳ ಠೇವಣಿಗೆ ಶೇ 6.90ರಷ್ಟು ಬಡ್ಡಿ ಸಿಗಲಿದೆ.

ಉದ್ದಿಮೆಗೆ ಹಿನ್ನಡೆ: ಗೂಗಲ್

ನವದೆಹಲಿ (ಪಿಟಿಐ): ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ತನಗೆ ₹ 1,337 ಕೋಟಿ ದಂಡ ವಿಧಿಸಿರುವುದು ಭಾರತದ ಗ್ರಾಹಕರು ಮತ್ತು ಉದ್ದಿಮೆಗಳಿಗೆ ದೊಡ್ಡ ಹಿನ್ನಡೆ ಎಂದು ಗೂಗಲ್ ಕಂಪನಿ ಹೇಳಿದೆ.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಗೂಗಲ್ ಕಂಪನಿಗೆ ಸಿಸಿಐ ದಂಡ ವಿಧಿಸಿದೆ. ಸಿಸಿಐ ನಿರ್ಧಾರವನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

21-10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1620)
ಒಂದು ವಾರದ ಡೆಲಿವರಿ	1595 (1615)
ಸೋಯಾ ಕಚ್ಚಾ	1265 (1260)
ಪಾಮ್ ವಾರದ ಡೆಲಿವರಿ	978 (978)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1420)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,000 (49,975)
ಬೆಳ್ಳಿ ಕೆ.ಜಿ 55,600 (56,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ಸ್, ರಿಸೆಪ್ಷನಿಸ್ಟ್, ಆಫೀಸ್ ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಕ್ಲಾರ್ಕ್ಸ್ ಟೆಲಿಕಾಲರ್ಸ್ ಪರ್ಛೇಸ್/ ಸ್ಟೋರ್ಕೀಪರ್ಸ್ ಎಲೆಕ್ಟ್ರಿಷಿಯನ್ಸ್ ರಮ್ಯ: 7204367465/ 8050107101

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Electronic City

KHB ALLOTTED Shop for sale in KHB Surya City Electronic City Clear Absolute Sale Deed Title 90 SQFT for 13 lakhs Contact Raghavendra 9606866368

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ

Business Offers

Machinery & Tools

ತೆಂಗಿನನಾರು ತೆಗೆಯುವ Machine set conveyor ಸಹಿತ ಹಾಗೂ ಬುಲ್ ಟ್ರಾಕ್ಟರ್ ಕಡಿಮೆ ಬೆಲೆಗೆ ಮಾರಾಟಕ್ಕಿದೆ. ಸಂಪರ್ಕಿಸಿ : 9845223896

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ವೈಯಕ್ತಿಕ

Lost

ಕಳೆದಿದೆ
ವಿ. ಶ್ರೀನಿವಾಸಮೂರ್ತಿಯಾದ ನಾನು ಕೆ.ಎನ್. ವಿಜಯಲಕ್ಷ್ಮಿ ರವರ ಶುದ್ಧ ಕ್ರಯ ಪತ್ರವಾದ ದಾಖಲೆ ನಂ. JRB/CRD/Regn/36/4913/83-84, ದಿನಾಂಕ: 28.04.1983, Site no. 37 ಮನೆ ಸ್ಥಳಾಂತರಿಸುವಾಗ ಕಳೆದುಹೋಗಿರುತ್ತದೆ. ಈ ಬಗ್ಗೆ ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ನಂಬರಿಗೆ ತಿಳಿಸಿ: 63603 52430.

ಪ್ರವಾಸ

Travel

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು4. 9342514289 9686721196

05.11.2022ರಿಂದ 13ದಿನಗಳು ಎಸಿ.ಬಸ್ಸು, ಎಸಿ.ರೂಂನೊಂದಿಗೆ ಪಂಚರಾಮಕ್ಷೇತ್ರ ಸಮೇತ ಭದ್ರಾಚಲಂ,ಅನ್ನಾವರಂ,ವಿಶಾಖಪಟ್ಟಣ,ವಾಸವಿಪೆನ್ನಗೊಂಡ ದ್ವಾರಕಾ,ತಿರುಮಲ`ಇತ್ಯಾದಿ. 27.11.2022ರಿಂದ 8ದಿನಗಳು ವಿಮಾನ, ಎಸಿ.ರೂಂ,`ಎಸಿ.ಬಸ್ಸು ನೊಂದಿಗೆ`ಕಾಶಿ,ಗಯಾ, ನೈಮಿಷಾರಣ್ಯ,ಅಯೋಧ್ಯ ಅಹಮದಾಬಾದ್` ವಿಷ್ಣು`ಟ್ರಾವೆಲ್`ಲೈನ್ಸ್, #164/3`ಆರ್.ವಿ.ರಸ್ತೆ, ಬೆಂಗಳೂರು.ಸಂಪರ್ಕಿಸಿ: 8105657052/ 9480182865

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 14.11.2022, ಗುಜರಾತ್,ದ್ವಾರಕ,ನಾಗನಾಥ್, ಸೋಮನಾಥ. 03.11.2022, ಕಾಶಿ,ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯ: 9591017782, 9964527782

DH DECCAN HERALD | ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ಅರುಣಾಚಲ ಪ್ರದೇಶದ ಅಪ್ಪರ್ ಸಿಯಾಂಗ್ ಜಿಲ್ಲೆಯಲ್ಲಿ ಘಟನೆ

ಹೆಲಿಕಾಪ್ಟರ್ ಪತನ, ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಗುವಾಹಟಿ: ಸೇನೆಯ ಸುಧಾರಿತ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಅರುಣಾಚಲಪ್ರದೇಶದ ಅಪ್ಪರ್ ಸಿಯಾಂಗ್ ಜಿಲ್ಲೆಯ ಮಿಗ್ಗಿಂಗ್ ಎಂಬಲ್ಲಿ ಶುಕ್ರವಾರ ಪತನಗೊಂಡಿದ್ದು, ನಾಲ್ವರು ಸಿಬ್ಬಂದಿ ಮೃತಪಟ್ಟಿದ್ದು, ಒಬ್ಬರು ನಾಪತ್ತೆಯಾಗಿದ್ದಾರೆ ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಹೆಲಿಕಾಪ್ಟರ್‌ನಲ್ಲಿ ಐದು ಮಂದಿ ಇದ್ದರು. ದೈನಂದಿನ ತಾಲೀಮು ನಿರತವಾಗಿದ್ದ ಸಂದರ್ಭದಲ್ಲಿ ಬೆಳಿಗ್ಗೆ 10.43ರ ವೇಳೆಗೆ ಹೆಲಿಕಾಪ್ಟರ್ ಪತನವಾಯಿತು. ಘಟನಾ ಸ್ಥಳದಲ್ಲಿ ನಾಲ್ವರ ಶವಗಳು ಸಿಕ್ಕಿವೆ. ನಾಪತ್ತೆಯಾಗಿರುವ ಮತ್ತೊಬ್ಬ ಸಿಬ್ಬಂದಿಯ ಶೋಧ ಕಾರ್ಯ ನಡೆಯುತ್ತಿದೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

ಹೆಲಿಕಾಪ್ಟರ್ ಪತನಗೊಂಡ ಸ್ಥಳವು ಚೀನಾದ ಗಡಿಯಿಂದ ಸುಮಾರು 35 ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ಪರ್ವತಗಳಿಂದ ಕೂಡಿದ್ದು, ಶೋಧ ಹಾಗೂ ರಕ್ಷಣಾ ಕಾರ್ಯಕ್ಕೆ ತೊಂದರೆಯಾಗಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಈ ತಿಂಗಳು ಸೇನಾ ಹೆಲಿಕಾಪ್ಟರ್ ಪತನಗೊಂಡ ಎರಡನೇ ಘಟನೆ ಇದಾಗಿದೆ. ಅಕ್ಟೋಬರ್ 5ರಂದು ತವಾಂಗ್ ಜಿಲ್ಲೆಯಲ್ಲಿ ಚೀತಾ ಹೆಲಿಕಾಪ್ಟರ್ ಪತನವಾಗಿ, ಒಬ್ಬ ಪೈಲಟ್ ಮೃತಪಟ್ಟಿದ್ದರು.

‘ಅಪಘಾತ ಹೆಚ್ಚಳ: ಸೇನಾಧಿಕಾರಿಗಳ ಕಳವಳ’

ಇಟಾನಗರ: ಸೇನೆಯ ಸುಧಾರಿತ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಅರುಣಾಚಲಪ್ರದೇಶದ ಮಿಗ್ಗಿಂಗ್ ಎಂಬಲ್ಲಿ ಪತನಗೊಂಡಿರುವ ಬೆನ್ನಲ್ಲೇ, ಸೇನೆಯ ಹೆಲಿಕಾಪ್ಟರ್‌ಗಳು, ಯುದ್ಧವಿಮಾನಗಳನ್ನು ಒಳಗೊಂಡ ಅಪಘಾತಗಳ ಸಂಖ್ಯೆಯಲ್ಲಿನ ಹೆಚ್ಚಳ ಕಳವಳಕಾರಿ ಹಾಗೂ ಚಿಂತನೆಗೀಡು ಮಾಡುವಂತಿದೆ.

ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ ಎಎಲ್‌ಎಚ್ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಹೊಂದಿದೆ. ಈ ಹೆಲಿಕಾಪ್ಟರ್ ಅನ್ನು ‘ರುದ್ರ ಮಾರ್ಕ್–4’ ಎಂದೂ ಕರೆಯಲಾಗುತ್ತದೆ. ಎಚ್‌ಎಎಲ್ ಇದನ್ನು ಅಭಿವೃದ್ಧಿಪಡಿಸಿದೆ.

ಎರಡು ಶಕ್ತಿಶಾಲಿ ಎಂಜಿನ್‌ಗಳನ್ನು ಹೊಂದಿರುವ ಈ ಹೆಲಿಕಾಪ್ಟರ್ ಪರ್ವತಗಳಿಂದ ಕೂಡಿದ ಪ್ರದೇಶದಲ್ಲಿನ ಮಿಗ್ಗಿಂಗ್ ಗ್ರಾಮದ ಬಳಿ ಪತನವಾಗಿದೆ.

‘ಈ ಹೆಲಿಕಾಪ್ಟರ್ ಪತನವಾಗಿರುವ ಬಗ್ಗೆ ಹೆಚ್ಚಿನ ಮಾಹಿತಿ ಸದ್ಯಕ್ಕಿಲ್ಲ. ಆದರೆ, ಹೆಲಿಕಾಪ್ಟರ್ ಹಾಗೂ ಯುದ್ಧವಿಮಾನಗಳಲ್ಲಿ ಅಧಿಕ ಸುರಕ್ಷತೆಗೆ ಸಂಬಂಧಿಸಿದ ಸಾಧನಗಳನ್ನು ಅಳವಡಿಸಬೇಕು ಎಂಬುದು ನನ್ನ ಬಲವಾದ ಅಭಿಪ್ರಾಯ’ ಎಂದು ಹೆಸರು ಹೇಳಲು ಇಚ್ಛಿಸದ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

‘ಭಗವದ್ಗೀತೆಯಲ್ಲೂ ಜಿಹಾದ್’

ಕಾಂಗ್ರೆಸ್‌ನ ಶಿವರಾಜ್ ಪಾಟೀಲ್ ಹೇಳಿಕೆಗೆ ಬಿಜೆಪಿ ಆಕ್ಷೇಪ

ನವದೆಹಲಿ (ಪಿಟಿಐ): ಭಗವದ್ಗೀತೆ ಗ್ರಂಥದಲ್ಲಿ ಮತ್ತು ಕ್ರೈಸ್ತ ಧರ್ಮದಲ್ಲೂ ಜಿಹಾದ್ ಇದೆ ಎಂದು ಲೋಕಸಭೆಯ ಮಾಜಿ ಸ್ಪೀಕರ್, ಕಾಂಗ್ರೆಸ್‌ನ ಮುಖಂಡ ಶಿವರಾಜ್ ಪಾಟೀಲ್ ಹೇಳಿದ್ದಾರೆ. ಈ ಹೇಳಿಕೆಯಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ. ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕಾಂಗ್ರೆಸ್‌ನ ಮೊಹ್ಸಿನಾ ಕಿದ್ವಾಯಿ ಅವರ ಜೀವನ ಚರಿತ್ರೆಯನ್ನು ಗುರುವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವರಾಜ್ ಪಾಟೀಲ್ ಬಿಡುಗಡೆ ಮಾಡಿದ್ದರು. ಆನಂತರ ಮಾತನಾಡಿದ್ದ ಅವರು ಭಗವದ್ಗೀತೆಯಲ್ಲಿಯೂ ಜಿಹಾದ್ ವಿಚಾರಗಳಿವೆ ಎಂದು ಹೇಳಿದ್ದರು.

‘ಜಿಹಾದ್ ಕುರಾನ್‌ನಲ್ಲಿ ಮಾತ್ರವಲ್ಲ. ಬದಲಿಗೆ ಮಹಾಭಾರತದಲ್ಲೂ ಇದೆ. ಮಹಾಭಾರತದ ಭಾಗವಾದ ಗೀತೆಯಲ್ಲಿ, ಶ್ರೀಕೃಷ್ಣ ಅರ್ಜುನನಿಗೆ ಜಿಹಾದ್ ಬೋಧಿಸುತ್ತಾನೆ. ಇದು ಕ್ರೈಸ್ತ ಧರ್ಮದಲ್ಲಿಯೂ ಇದೆ’ ಎಂದು ಅವರು ಹೇಳಿದ್ದರು.

> **ತಮ್ಮ ಹೇಳಿಕೆ ಬಗ್ಗೆ ಶಿವರಾಜ್ ಪಾಟೀಲ್ ಸ್ಪಷ್ಟನೆ ನೀಡಿದ್ದಾರೆ. ಭಗವದ್ಗೀತೆಯು ಭಾರತೀಯ ನಾಗರಿಕತೆಯ ಪ್ರಮುಖ ಆಧಾರಸ್ತಂಭ. ಈ ಕುರಿತು ನಮ್ಮ ನಿಲುವು ಸ್ಪಷ್ಟವಾಗಿದೆ**
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಹಿರಿಯ ನಾಯಕ

‘ನೀವು ಎಷ್ಟೇ ವಿವರಿಸಿದರೂ, ಜನರಿಗೆ ಅರ್ಥವಾಗುವುದಿಲ್ಲ. ಅವರು ಶಸ್ತ್ರಗಳನ್ನು ಹಿಡಿದು ನಿಮ್ಮೆದುರು ಬರುತ್ತಾರೆ. ನೀವು ಓಡಲೂ ಸಾಧ್ಯವಿಲ್ಲ, ನೀವು ಮಾಡುತ್ತಿರುವುದು ಜಿಹಾದ್ ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ನೀವು ತಪ್ಪು ಮಾಡುತ್ತಿದ್ದೀರಿ ಎನ್ನಲೂ ಸಾಧ್ಯವಿಲ್ಲ. ಶಸ್ತ್ರ ಹಿಡಿದು ಹೆದರಿಸಿ ಜನರಿಗೆ ಏನನ್ನೋ ಅರ್ಥ ಮಾಡಿಸಬಹುದು ಎಂಬ ಸ್ಥಿತಿ ಇರಬಾರದು. ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದ್ದರು.

ಈ ಹೇಳಿಕೆಯನ್ನು ಬಿಜೆಪಿ ನಾಯಕರು ಖಂಡಿಸಿದ್ದಾರೆ. ಕಾಂಗ್ರೆಸ್ ಹಿಂದೂ ವಿರೋಧಿ ಎಂದು ಬಿಜೆಪಿ ನಾಯಕರು ಟೀಕಿಸಿದ್ದಾರೆ. ಇನ್ನೊಂದೆಡೆ, ಈ ಸ್ವರೂಪದ ಹೇಳಿಕೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ.

> **ಹಿಂದೂ, ಹಿಂದುತ್ವ ಮತ್ತು ಹಿಂದುಸ್ತಾನವನ್ನು ಕಾಂಗ್ರೆಸ್ ಮೊದಲಿನಿಂದಲೂ ಅವಮಾನಿಸುತ್ತಲೇ ಬಂದಿದೆ. ಪಾಟೀಲ್ ಹೇಳಿಕೆ ಇದರಲ್ಲಿ ಹೊಸ ಅಧ್ಯಾಯ**
>
> **ಪ್ರೇಮ್ ಶುಕ್ಲಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

> **ಹಿಂದೂ ಭಯೋತ್ಪಾದನೆ ಎಂಬ ಪದವನ್ನು ಕಾಂಗ್ರೆಸ್ ಹುಟ್ಟುಹಾಕಿತ್ತು, ರಾಮಮಂದಿರವನ್ನು ವಿರೋಧಿಸಿತ್ತು, ರಾಮನ ಅಸ್ತಿತ್ವವನ್ನೇ ಪ್ರಶ್ನಿಸಿತ್ತು**
>
> **ಶಹಜಾದ್ ಪೂನಾವಾಲಾ,** ಬಿಜೆಪಿ ವಕ್ತಾರ

ಕನ್ನಡ ದಿನಪತ್ರಿಕೆ ಸಂಪಾದಕರಿಗೆ ನೋಟಿಸ್

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತು ಅವಹೇಳನಕಾರಿಯಾಗಿ ಬರೆದಿದ್ದ ಕನ್ನಡ ದಿನಪತ್ರಿಕೆಯೊಂದರ ಪ್ರಧಾನ ಸಂಪಾದಕರಿಗೆ ನೋಟಿಸ್ ನೀಡಲಾಗಿದೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ ಹೇಳಿದೆ.

‘ರಾಷ್ಟ್ರಪತಿ ವಿರುದ್ಧ ಅವಹೇಳನಕಾರಿಯಾಗಿ ಬರೆದುದರ ಬಗ್ಗೆ ಮಾಡಲಾಗಿದ್ದ ಪೋಸ್ಟ್ ಅನ್ನು ರಾಷ್ಟ್ರೀಯ ಮಹಿಳಾ ಆಯೋಗವು ಪರಿಗಣಿಸಿದೆ. ಅಕ್ಟೋಬರ್ 26ರ ಮಧ್ಯಾಹ್ನ 12.30ಕ್ಕೆ ಖುದ್ದಾಗಿ ಹಾಜರಾಗುವಂತೆ ಆ ಪತ್ರಕರ್ತರಿಗೆ ನೋಟಿಸ್ ನೀಡಲಾಗಿದೆ’ ಎಂದು ಆಯೋಗವು ಶುಕ್ರವಾರ ಬೆಳಿಗ್ಗೆ ಟ್ವೀಟ್ ಮಾಡಿದೆ.

ಇದಕ್ಕೂ ಮುನ್ನ ಮೊಹಮ್ಮದ್ ಮಫಾಜ್ ಎಂಬುವವರು ಈ ಬಗ್ಗೆ ಅಕ್ಟೋಬರ್ 9ರಂದು ಟ್ವೀಟ್ ಮಾಡಿದ್ದರು. ‘(ಕನ್ನಡ ದಿನಪತ್ರಿಕೆ ವಿಶ್ವವಾಣಿ) ಪತ್ರಕರ್ತ (ಪ್ರಧಾನ ಸಂಪಾದಕ) ರಾಷ್ಟ್ರಪತಿ ಅವರನ್ನು ಅವಹೇಳನ ಮಾಡಿದ್ದಾರೆ’ ಎಂದು ಮಫಾಜ್ ಟ್ವೀಟ್ ಮಾಡಿದ್ದರು.

ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಪ್ರಕಟವಾಗಿದ್ದ ಲೇಖನದ ಎರಡು ಚಿತ್ರಗಳನ್ನೂ ಅವರು ಹಂಚಿಕೊಂಡಿದ್ದರು. ಜತೆಗೆ ಟ್ವೀಟ್ ಅನ್ನು ರಾಷ್ಟ್ರಪತಿ ಭವನದ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದರು.

ಈ ಟ್ವೀಟ್ ಅನ್ನು ಪರಿಶೀಲಿಸುತ್ತೇವೆ ಎಂದು ಆಯೋಗವು ಗುರುವಾರ ಸಂಜೆ, ಮಫಾಜ್ ಅವರ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿತ್ತು. ಶುಕ್ರವಾರ ಮತ್ತೊಂದು ಪ್ರತಿಕ್ರಿಯೆ ನೀಡಿ, ನೋಟಿಸ್ ನೀಡಿರುವ ಮಾಹಿತಿಯನ್ನು ನೀಡಿದೆ.

ಮಹಿಳಾ ಘಟಕ ವಿಸರ್ಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ತನ್ನ ಮಹಿಳಾ ಘಟಕವನ್ನು ವಿಸರ್ಜಿಸಿದ್ದು, ಘಟಕದ ಮಹಿಳಾ ಸದಸ್ಯೆಯೊಬ್ಬರು ‘ಇದು ಅನ್ಯಾಯ ಮತ್ತು ಕಾನೂನುಬಾಹಿರ’ ಎಂದು ಸಾರ್ವಜನಿಕವಾಗಿ ದೂರಿದ್ದಾರೆ.

ಹಿಜಾಬ್ ಕುರಿತು ಮಹಿಳಾ ಘಟಕದ ಸದಸ್ಯೆಯರೊಂದಿಗಿನ ಭಿನ್ನಾಭಿಪ್ರಾಯವೇ ಈ ಕ್ರಮಕ್ಕೆ ಕಾರಣವೆಂದೂ ಸದಸ್ಯರು ಆರೋಪಿಸಿದ್ದಾರೆ.

‘ಮಹಿಳಾ ಘಟಕವನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗಿದೆ. ಅದು ಮತ್ತೆ ಕಾರ್ಯನಿರ್ವಹಿಸಲಿದೆ’ಎಂದು ಮಂಡಳಿಯ ಕಾರ್ಯಕಾರಿ ಸದಸ್ಯ ಖಾಸಿಂ ರಸೂಲ್ ಇಲ್ಯಾಸ್ ವಿವರಣೆ ನೀಡಿದ್ದಾರೆ.

‘ಅಗ್ನಿ ಪ್ರೈಮ್’ ಯಶಸ್ವಿ

ಬಾಲೇಶ್ವರ (ಒಡಿಶಾ): ಸ್ವದೇಶಿಯಾಗಿ ಅಭಿವೃದ್ಧಿಪಡಿಸಿರುವ ಹೊಸ ತಲೆಮಾರಿನ ‘ಅಗ್ನಿ ಪ್ರೈಮ್’ ಮಧ್ಯಮ ಶ್ರೇಣಿಯ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಶುಕ್ರವಾರ ಎಪಿಜೆ ಅಬ್ದುಲ್ ಕಲಾಂ ದ್ವೀಪದ ಉಡಾವಣಾ ಕೇಂದ್ರ್ರದದಲ್ಲಿ ಯಶಸ್ವಿಯಾಗಿ ನಡೆದಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ(ಡಿಆರ್‌ಡಿಒ) ಮೂಲಗಳು ಹೇಳಿವೆ.

NEW BANASHANKARI Opp. Big Bazaar Ph: 99000 46931 | NEW AKSHAY NAGAR DLF City, Opp. Hiranandani Ph: 99000 46943 | BASVESHWARA NAGAR Modi Hospital Road Ph: 99000 46934. | HONGASANDRA Opp SBI, Begur Road Ph: 95915 26018 | NEW BOMMANAHALLI Next to Shell Petrol Ph: 99000 46913 | COX TOWN Next to Gymkhana Ph: 99000 46930 | NEW FRAZER TOWN Opp. Canara Bank Ph: 99000 12851 | GANGA NAGAR Opp Vishal Medicals Ph: 99000 46949 | HANUMANTH NAGAR Opp. Canara Bank Ph: 99000 46940. | HEBBAGODI Opp SKF, Next to KFC Ph: 76195 55541 | HEGGANAHALLI Opp Bus Stop Ph: 76195 55506 | HESARAGHATTA MN RD Opp. Karnataka Bank Ph: 76195 55543 | HRBR LAYOUT Near Banaswadi Club Ph: 99000 46946

HSR LAYOUT Opp NIFT, 27 Main Ph: 99000 18126 | KOTHANUR Next to Empire Hotel Ph: 99002 37116 | K R PURAM Nr. TC Palya signal Ph: 76195 55537 | MARATHAHALLI Opp. Innovative Ph: 91484 50665/64 | MATHIKERE Old Raghu Med. Blg Ph: 91484 50662 | NAGARBHAVI Ambedkar Col. Signal Ph: 99725 97017 | R.T NAGAR Next to Police Station Ph:99000 29308 | SANJAY NAGAR Next to HDFC Bank Ph: 99000 46928 | SUNKADAKATTE Magadi Road Ph: 76195 55509 | RAMA MURTHY NAGAR Next to Honda Showroom Ph:99000 46915 | RR NAGAR Opp. BBMP Office Ph: 99000 18217 | SAHAKAR NAGAR Next to Swati Garden Ph: 99000 46937

PEENYA T DASARAHALLI Next to Honda Showroom Ph: 91485 70490 | VIJAYANAGAR Opp. Water Tank Ph: 99000 12420 | YELAHANKA NEW TOWN Opp Yelahanka Central Mall Ph: 99000 46918 | HOSAKOTE Next to Chemmanur Ph: 91081 78999 | KENGERI Opp. DS Max Ph: 99000 12609 | RAMANAGARA Nr. Izoor P Stn. Ph: 99000 98795 | DEVANAHALLI Opp. Indian Oil Ph: 91481 40111 | NELAMANGALA Opp. Shell Petrol Station Ph: 99001 15781 | KOLAR Opp Honda Ph: 99001 09852 | TUMKUR Opp. SIT, Batwadi Ph: 91086 71999 | DODDABALLAPUR Talulk Office Road Ph: 99000 46923

LG BEST SHOPS: BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559.

*Terms and conditions apply. On select brands and products. Limited period offers. Images are for representation only, not actual products. Gifts are as per the offers of Brands. Free gift not applicable for samsung. Only company offers. Finance at the sole discretion of the financier. #20% cash back as per the offers by banks and finance companies.

51 SUPER STORES | BENGALURU | MYSORE | TUMKUR | HOSAKOTE | RAMANAGAR | KOLAR | NELAMANGALA | MANDYA | CHITRADURGA | DODDABALLAPUR | SHIVAMOGGA | HASSAN

ಚುಟುಕು ವಿಶ್ವಕಪ್ ನೆತ್ತಿಯ ಮೇಲೆ ಮಳೆಬಿಲ್ಲು!

ಆಸ್ಟ್ರೇಲಿಯಾದಲ್ಲಿ ಈಗ ಮಳೆಯ ಆಟ ಜೋರಾಗಿ ನಡೆಯುತ್ತಿದೆ. ಶನಿವಾರ ಆರಂಭವಾಗಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದ ಪಂದ್ಯಗಳ ಮೇಲೂ ಮಳೆಮೋಡಗಳು ಆವರಿಸಿವೆ.

ಇದರ ನಡುವೆಯೇ ಚುಟುಕು ಕ್ರಿಕೆಟ್ ಹಬ್ಬಕ್ಕೆ ವೇದಿಕೆ ಸಜ್ಜಾಗಿದೆ. ಇದೇ ಮೊದಲ ಬಾರಿ ಟಿ20 ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸುತ್ತಿರುವ ಆಸ್ಟ್ರೇಲಿಯಾ ಹಾಲಿ ಚಾಂಪಿಯನ್ ಕೂಡ ಹೌದು.

ಹೋದ ವರ್ಷ ಕೋವಿಡ್ ಕಾರಣದಿಂದಾಗಿ ತಟಸ್ಥ ತಾಣವಾದ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಟೂರ್ನಿ ನಡೆದಿತ್ತು. 2020ರಲ್ಲಿ ನಡೆಸಬೇಕಿದ್ದ ಟೂರ್ನಿಯನ್ನು ಆಸ್ಟ್ರೇಲಿಯಾ ಈ ವರ್ಷ ಆಯೋಜಿಸುತ್ತಿದೆ.

ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್

ವಿಂಡೀಸ್ ಔಟ್, ಐರ್ಲೆಂಡ್ ಇನ್

ಹೋಬರ್ಟ್ (ಪಿಟಿಐ): ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವು ಈ ಬಾರಿಯ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಘಾತ ಅನುಭವಿಸಿದೆ. ಇಲ್ಲಿನ ಬೆಲ್ಲೆರಿವ್ ಓವಲ್ ಕ್ರೀಡಾಂಗಣದಲ್ಲಿ ಶುಕ್ರವಾರ ತಂಡವು ಒಂಬತ್ತು ವಿಕೆಟ್‌ಗಳಿಂದ ಐರ್ಲೆಂಡ್‌ಗೆ ಮಣಿದು ಟೂರ್ನಿಯಿಂದ ಹೊರಬಿದ್ದಿತು.

ವೆಸ್ಟ್ ಇಂಡೀಸ್ 2012 ಹಾಗೂ 2016ರಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು.

ಬಿ ಗುಂಪಿನ ಈ ಹಣಾಹಣಿಯಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನಿಕೋಲಸ್ ಪೂರನ್ ನಾಯಕತ್ವದ ವಿಂಡೀಸ್, 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 146 ರನ್ ಕಲೆಹಾಕಿತು. ಮಧ್ಯಮಕ್ರಮಾಂಕದಲ್ಲಿ ಬ್ರೆಂಡನ್ ಕಿಂಗ್ (ಔಟಾಗದೆ 62) ಮಾತ್ರ ತಂಡದ ಪರ ಉತ್ತಮವಾಗಿ ಆಡಿದರು.

ಐರ್ಲೆಂಡ್ ತಂಡದ ಗೆರೆತ್ ಡೆಲಾನಿ (16ಕ್ಕೆ 3) ವೃತ್ತಿಜೀವನದ ಶ್ರೇಷ್ಠ ಬೌಲಿಂಗ್ ಮಾಡಿ ವಿಂಡೀಸ್ ರನ್ ಗಳಿಕೆಗೆ ಕಡಿವಾಣ ಹಾಕಿದರು. ಐರ್ಲೆಂಡ್ ತಂಡವು ಈ ಗುರಿಯನ್ನು 18ನೇ ಓವರ್‌ನಲ್ಲಿ ಕೇವಲ ಒಂದು ವಿಕೆಟ್ ಕಳೆದುಕೊಂಡು ತಲುಪಿತು.

ಐರ್ಲೆಂಡ್ ತಂಡದ ಪಾಲ್ ಸ್ಟರ್ಲಿಂಗ್ ಎಎಫ್‌ಪಿ ಚಿತ್ರ

ಇನಿಂಗ್ಸ್ ಆರಂಭಿಸಿದ ಅನುಭವಿ ಪಾಲ್ ಸ್ಟರ್ಲಿಂಗ್ (ಔಟಾಗದೆ 66) ಮತ್ತು ನಾಯಕ ಆ್ಯಂಡಿ ಬಲ್ಬಿರ್ನಿ ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 7.2 ಓವರ್‌ಗಳಲ್ಲಿ 73 ರನ್ ಕಲೆಹಾಕಿದರು. 37 ರನ್ ಗಳಿಸಿದ್ದ ವೇಳೆ ಬಲ್ಬಿರ್ನಿ ಔಟಾದರು. ಬಳಿಕವೂ ಸೊಗಸಾಗಿ ಬ್ಯಾಟ್ ಬೀಸಿದ ಸ್ಟರ್ಲಿಂಗ್, ಮುರಿಯದ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ ಲಾರ್ಸನ್ ಟಕ್ಕರ್ (ಔಟಾಗದೆ 45) ಜೊತೆಗೂಡಿ 60 ಎಸೆತಗಳಲ್ಲಿ 77 ರನ್ ಪೇರಿಸಿದರು. ತಂಡವು ಜಯದ ಸಂಭ್ರಮ ಆಚರಿಸಿತು.

ಈ ಜಯದೊಂದಿಗೆ ಐರ್ಲೆಂಡ್ ಎರಡನೇ ಬಾರಿಗೆ ವಿಶ್ವಕಪ್‌ನ ಎರಡನೇ ಹಂತಕ್ಕೆ ಪ್ರವೇಶ ಪಡೆಯಿತು. 2009ರಲ್ಲಿ ಮೊದಲ ಬಾರಿಗೆ ಸೂಪರ್ 8ರ ಹಂತಕ್ಕೆ ಅರ್ಹತೆ ಗಿಟ್ಟಿಸಿತ್ತು. ಜಿಂಬಾಬ್ವೆಗೆ ಮೊದಲ ಸೂಪರ್ 12: ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಜಿಂಬಾಬ್ವೆ ತಂಡವು ಐದು ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ತಂಡಕ್ಕೆ ಸೋಲುಣಿಸಿ ಮೊದಲ ಬಾರಿ ಸೂಪರ್ 12 ಹಂತ ಪ್ರವೇಶಿಸಿತು. ವೇಗಿ ಟೆಂಡಾಯಿ ಚತಾರ (14ಕ್ಕೆ 2) ಹಾಗೂ ಸಿಕಂದರ್ ರಾಜಾ (40 ರನ್, 20ಕ್ಕೆ 1 ವಿಕೆಟ್) ಜಿಂಬಾಬ್ವೆ ಜಯದಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5ಕ್ಕೆ 146 (ಜಾನ್ಸನ್ ಚಾರ್ಲ್ಸ್ 24, ಬ್ರೆಂಡನ್ ಕಿಂಗ್ ಔಟಾಗದೆ 62, ಓಡೀನ್ ಸ್ಮಿತ್ ಔಟಾಗದೆ 19; ಗೆರೆತ್ ಡೆಲಾನಿ 16ಕ್ಕೆ 3). ಐರ್ಲೆಂಡ್: 17.3 ಓವರ್‌ಗಳಲ್ಲಿ 150 (ಪಾಲ್ ಸ್ಟರ್ಲಿಂಗ್ ಔಟಾಗದೆ 66, ಆ್ಯಂಡಿ ಬಲ್ಬಿರ್ನಿ 37, ಲಾರ್ಸನ್ ಟಕ್ಕರ್ ಔಟಾಗದೆ 45; ಅಕೀಲ್ ಹುಸೇನ್ 38ಕ್ಕೆ 1). **ಫಲಿತಾಂಶ:** ಐರ್ಲೆಂಡ್ ತಂಡಕ್ಕೆ 9 ವಿಕೆಟ್‌ಗಳ ಜಯ

ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 6ಕ್ಕೆ 132 (ಜಾರ್ಜ್ ಮನ್ಸಿ 54, ರಿಚಿ ಬ್ಯಾರಿಂಗ್ಟನ್ 13, ಕಾಲಮ್ ಮೆಕ್‌ಲಾಯ್ಡ್ 25;ಟೆಂಡಾಯಿ ಚತಾರ 14ಕ್ಕೆ 2, ರಿಚರ್ಡ್ ನಗರಾವ 28ಕ್ಕೆ 2, ಸಿಕಂದರ್ ರಾಜಾ 20ಕ್ಕೆ 1). **ಫಲಿತಾಂಶ:** ಜಿಂಬಾಬ್ವೆ ತಂಡಕ್ಕೆ ಐದು ವಿಕೆಟ್‌ಗಳ ಜಯ

ಇಂದಿನ ಹೈಲೈಟ್‌ಗಾಗಿ ಇಲ್ಲಿ ಸ್ಕ್ಯಾನ್ ಮಾಡಿ

ಟಿ 20 ವಿಶ್ವಕಪ್ ವೇಳಾಪಟ್ಟಿ -2022

ದಿನಾಂಕ	ಪಂದ್ಯ	ಆರಂಭ	ಸ್ಥಳ
ಅ.22	ಆಸ್ಟ್ರೇಲಿಯಾ–ನ್ಯೂಜಿಲೆಂಡ್	ಮ.12.30	ಸಿಡ್ನಿ
ಅ.22	ಇಂಗ್ಲೆಂಡ್–ಅಫ್ಗಾನಿಸ್ತಾನ	ಸಂ.4.30	ಪರ್ತ್
ಅ.23	ಶ್ರೀಲಂಕಾ–ಐರ್ಲೆಂಡ್	ಬೆ.9.30	ಹೋಬರ್ಟ್
ಅ.23	ಭಾರತ–ಪಾಕಿಸ್ತಾನ	ಮ.1.30	ಮೆಲ್ಬರ್ನ್
ಅ.24	ಬಾಂಗ್ಲಾದೇಶ–ನೆದರ್ಲೆಂಡ್ಸ್	ಬೆ.9.30	ಹೋಬರ್ಟ್
ಅ.24	ದಕ್ಷಿಣ ಆಫ್ರಿಕಾ–ಜಿಂಬಾಬ್ವೆ	ಮ.1.30	ಹೋಬರ್ಟ್
ಅ.25	ಆಸ್ಟ್ರೇಲಿಯಾ–ಶ್ರೀಲಂಕಾ	ಸಂ.4.30	ಪರ್ತ್
ಅ.26	ಐರ್ಲೆಂಡ್–ಇಂಗ್ಲೆಂಡ್	ಬೆ.9.30	ಮೆಲ್ಬರ್ನ್
ಅ.26	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಮ.1.30	ಮೆಲ್ಬರ್ನ್
ಅ.27	ದಕ್ಷಿಣ ಆಫ್ರಿಕಾ–ಬಾಂಗ್ಲಾದೇಶ	ಬೆ.8.30	ಸಿಡ್ನಿ
ಅ.27	ನೆದರ್ಲೆಂಡ್ಸ್–ಭಾರತ	ಮ.12.30	ಸಿಡ್ನಿ
ಅ.27	ಪಾಕಿಸ್ತಾನ–ಜಿಂಬಾಬ್ವೆ	ಸಂ.4.30	ಪರ್ತ್
ಅ.28	ಅಫ್ಗಾನಿಸ್ತಾನ–ಐರ್ಲೆಂಡ್	ಬೆ.9.30	ಮೆಲ್ಬರ್ನ್
ಅ.28	ಆಸ್ಟ್ರೇಲಿಯಾ–ಇಂಗ್ಲೆಂಡ್	ಮ.1.30	ಮೆಲ್ಬರ್ನ್
ಅ.29	ನ್ಯೂಜಿಲೆಂಡ್–ಶ್ರೀಲಂಕಾ	ಮ.1.30	ಸಿಡ್ನಿ
ಅ.30	ಬಾಂಗ್ಲಾದೇಶ–ಜಿಂಬಾಬ್ವೆ	ಬೆ.8.30	ಬ್ರಿಸ್ಬೇನ್
ಅ.30	ನೆದರ್ಲೆಂಡ್ಸ್–ಪಾಕಿಸ್ತಾನ	ಮ.12.30	ಪರ್ತ್
ಅ.30	ಭಾರತ–ದಕ್ಷಿಣ ಆಫ್ರಿಕಾ	ಸಂ.4.30	ಪರ್ತ್
ಅ.31	ಆಸ್ಟ್ರೇಲಿಯಾ–ಐರ್ಲೆಂಡ್	ಮ.1.30	ಬ್ರಿಸ್ಬೇನ್
ನ.1	ಅಫ್ಗಾನಿಸ್ತಾನ–ಶ್ರೀಲಂಕಾ	ಬೆ.9.30	ಬ್ರಿಸ್ಬೇನ್
ನ.1	ಇಂಗ್ಲೆಂಡ್–ನ್ಯೂಜಿಲೆಂಡ್	ಮ.1.30	ಬ್ರಿಸ್ಬೇನ್
ನ.2	ಜಿಂಬಾಬ್ವೆ–ನೆದರ್ಲೆಂಡ್ಸ್	ಬೆ.9.30	ಅಡಿಲೇಡ್
ನ.2	ಭಾರತ–ಬಾಂಗ್ಲಾದೇಶ	ಮ.1.30	ಅಡಿಲೇಡ್
ನ.3	ಪಾಕಿಸ್ತಾನ–ದಕ್ಷಿಣ ಆಫ್ರಿಕಾ	ಮ.1.30	ಸಿಡ್ನಿ
ನ.4	ಐರ್ಲೆಂಡ್–ನ್ಯೂಜಿಲೆಂಡ್	ಬೆ.9.30	ಅಡಿಲೇಡ್
ನ.4	ಆಸ್ಟ್ರೇಲಿಯಾ–ಅಫ್ಗಾನಿಸ್ತಾನ	ಮ.1.30	ಅಡಿಲೇಡ್
ನ.5	ಶ್ರೀಲಂಕಾ–ಇಂಗ್ಲೆಂಡ್	ಮ.1.30	ಸಿಡ್ನಿ
ನ.6	ದಕ್ಷಿಣ ಆಫ್ರಿಕಾ–ನೆದರ್ಲೆಂಡ್ಸ್	ಬೆ.5.30	ಅಡಿಲೇಡ್
ನ.6	ಪಾಕಿಸ್ತಾನ–ಬಾಂಗ್ಲಾದೇಶ	ಬೆ.9.30	ಅಡಿಲೇಡ್
ನ.6	ಜಿಂಬಾಬ್ವೆ–ಭಾರತ	ಮ.1.30	ಮೆಲ್ಬರ್ನ್
ನ.9	ಸೆಮಿಫೈನಲ್1	ಮ.1.30	ಸಿಡ್ನಿ
ನ.10	ಸೆಮಿಫೈನಲ್2	ಮ.1.30	ಅಡಿಲೇಡ್
ನ.13	ಫೈನಲ್	ಮ.1.30	ಮೆಲ್ಬರ್ನ್

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಆಸ್ಟ್ರೇಲಿಯಾಕ್ಕೆ ವಿಲಿಯಮ್ಸನ್ ಪಡೆ ಸವಾಲು

ಪ್ರಶಸ್ತಿ ಮೊತ್ತ (ಕೋಟಿಗಳಲ್ಲಿ)

₹13.23	ವಿಜೇತರು
₹6.62	ರನ್ನರ್ಸ್‌ಅಪ್
ತಲಾ ₹3.31	ಸೆಮಿಫೈನಲಿಸ್ಟ್

ಸಿಡ್ನಿ/ ಪರ್ತ್ (ಎಎಫ್‌ಪಿ): ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಮತ್ತು ಟಿ20 ಕ್ರಿಕೆಟ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್ ತಂಡಗಳು, ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿಯೆಡೆಗಿನ ಅಭಿಯಾನವನ್ನು ಶನಿವಾರ ಆರಂಭಿಸಲಿವೆ.

ಸಿಡ್ನಿಯಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ ತನ್ನ ಸಾಂಪ್ರದಾಯಿಕ ಎದುರಾಳಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಪರ್ತ್‌ನಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಅಫ್ಗಾನಿಸ್ತಾನದ ಜತೆ ಪೈಪೋಟಿ ನಡೆಸಲಿದೆ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯಲಿರುವ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆಯೂ ಇದೆ. ಆದ್ದರಿಂದ ಎರಡೂ ತಂಡಗಳು ಅಂತಿಮ ಹನ್ನೊಂದರ ಬಳಗದ ಬಗ್ಗೆ ಶುಕ್ರವಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

‘ಮಳೆ ಬಂದರೆ ಓವರ್‌ಗಳು ಕಡಿತಗೊಳ್ಳುವ ಸಾಧ್ಯತೆಯಿದೆ. ಅದಕ್ಕೆ ತಕ್ಕಂತೆ ಯೋಜನೆ ರೂಪಿಸುವ ಸವಾಲು ನಮ್ಮ ಮುಂದಿದೆ’ ಎಂದು ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ನುಡಿದಿದ್ದಾರೆ.

ತಾವು ಇನಿಂಗ್ಸ್ ಆರಂಭಿಸುವುದನ್ನು ಖಚಿತಪಡಿಸಿರುವ ಅವರು, ‘ಜೋಶ್ ಇಂಗ್ಲಿಸ್ ಬದಲು ತಂಡದಲ್ಲಿ ಸ್ಥಾನ ಪಡೆದಿರುವ ಕ್ಯಾಮರಾನ್ ಗ್ರೀನ್ ಮೊದಲ ಪಂದ್ಯದಲ್ಲಿ ಆಡುವುದಿಲ್ಲ’ ಎಂದಿದ್ದಾರೆ.

ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರೂ ಅಂತಿಮ ಇಲೆವೆನ್ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿಲ್ಲ. ‘ಬೆರಳಿನ ಗಾಯದಿಂದ ಬಳಲುತ್ತಿರುವ ಆಲ್‌ರೌಂಡರ್ ಡೆರಿಲ್ ಮಿಚೆಲ್ ಹೊರತುಪಡಿಸಿ ಉಳಿದ ಎಲ್ಲರೂ ಫಿಟ್ ಆಗಿದ್ದಾರೆ’ ಎಂದಿದ್ದಾರೆ.

ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್

ಇಂಗ್ಲೆಂಡ್‌ಗೆ ಅಫ್ಗನ್ ಸವಾಲು: ಪರ್ತ್‌ನಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಅಫ್ಗಾನಿಸ್ತಾನವನ್ನು ಎದುರಿಸಲಿದೆ.

ಜೋಸ್ ಬಟ್ಲರ್ ನೇತೃತ್ವದ ಇಂಗ್ಲೆಂಡ್, ಕಪ್ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆ. ಎಯೊನ್ ಮಾರ್ಗನ್ ಅವರಿಂದ ನಾಯಕತ್ವದ ಜವಾಬ್ದಾರಿ ಹೊತ್ತುಕೊಂಡ ಬಳಿಕ ಬಟ್ಲರ್, ತಂಡವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುತ್ತಿದ್ದಾರೆ. ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳ ಎದುರಿನ ಸರಣಿಯಲ್ಲಿ ಗೆದ್ದಿರುವ ಇಂಗ್ಲೆಂಡ್, ಶುಭಾರಂಭದ ನಿರೀಕ್ಷೆಯಲ್ಲಿದೆ.

‘ನಾವು ವಿಶ್ವಕಪ್‌ಗೆ ತಕ್ಕ ಸಿದ್ಧತೆ ಮಾಡಿಕೊಂಡು ಬಂದಿದ್ದೇವೆ. ಕಳೆದ ಹತ್ತು ಟಿ20 ಪಂದ್ಯಗಳಲ್ಲಿ ತಂಡ ಶ್ರೇಷ್ಠ ಪ್ರದರ್ಶನ ನೀಡಿದೆ’ ಎಂದು ಬಟ್ಲರ್ ಶುಕ್ರವಾರ ಹೇಳಿದರು. ಬಟ್ಲರ್ ಅಲ್ಲದೆ ಬ್ಯಾಟರ್‌ಗಳಾದ ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಮೊಯೀನ್ ಅಲಿ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಮೊಹಮ್ಮದ್ ನಬಿ ನೇತೃತ್ವದ ಅಫ್ಗಾನಿಸ್ತಾನ ತಂಡ ಈಚೆಗೆ ನಡೆದ ಏಷ್ಯಾಕಪ್ ಟೂರ್ನಿಯಲ್ಲಿ ಚೆನ್ನಾಗಿ ಆಡಿತ್ತು. ಯುಎಇನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳನ್ನು ಮಣಿಸಿತ್ತು. ಪಾಕಿಸ್ತಾನದ ಎದುರು ಕೊನೆಯ ಓವರ್‌ನಲ್ಲಿ ಸೋತು, ಫೈನಲ್ ಪ್ರವೇಶಿಸುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡಿತ್ತು.

‘ನಮ್ಮನ್ನು ಈ ಬಾರಿಯೂ ಅಪಾಯಕಾರಿ ತಂಡ ಎಂದೇ ಪರಿಗಣಿಸಲಾಗುತ್ತಿದೆ. ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡರೆ, ನಮಗೂ ಇನ್ನಷ್ಟು ಎತ್ತರಕ್ಕೇರಬಹುದು’ ಎಂದು ತಂಡದ ಕೋಚ್ ಜೊನಾಥನ್ ಟ್ರಾಟ್ ಹೇಳಿದ್ದಾರೆ.

ಏಳು ಕ್ರೀಡಾಂಗಣಗಳ ವಿವರ

ಕ್ರೀಡಾಂಗಣ	ನಿರ್ಮಾಣ/ ಕಾರ್ಯಾರಂಭ	ಸಾಮರ್ಥ್ಯ
ಓವಲ್, ಅಡಿಲೇಡ್	1871	53,500
ಗಾಬಾ, ಬ್ರಿಸ್ಬೇನ್	1895	42,000
ಬೆಲ್ಲೆರಿವ್ ಓವಲ್	1914	9,500
ಎಂಸಿಜಿ, ಮೆಲ್ಬರ್ನ್	1853	1ಲಕ್ಷ
ಪರ್ತ್	2018	65,000
ಎಸ್‌ಸಿಜಿ, ಸಿಡ್ನಿ	1848	48,000
ಕರ್ದಿನಿಯಾ ಪಾರ್ಕ್ ಜೀಲಾಂಗ್	1941	40,000

ಪಂದ್ಯದಲ್ಲಿ ತಂಡವೊಂದರ ಗರಿಷ್ಠ ಮೊತ್ತ

ತಂಡ	ಮೊತ್ತ	ಎದುರಾಳಿ	ವರ್ಷ
ಶ್ರೀಲಂಕಾ	6ಕ್ಕೆ 260	ಕೀನ್ಯಾ	2007
ಕನಿಷ್ಠ ಮೊತ್ತ			
ನೆದರ್ಲೆಂಡ್ಸ್	39	ಶ್ರೀಲಂಕಾ	2014

ಪಂದ್ಯವೊಂದರಲ್ಲಿ ಗರಿಷ್ಠ ವೈಯಕ್ತಿಕ ಮೊತ್ತ

ಆಟಗಾರ	ದೇಶ	ರನ್	ಎದುರಾಳಿ	ವರ್ಷ
ಬ್ರೆಂಡನ್ ಮೆಕಲಂ	ನ್ಯೂಜಿಲೆಂಡ್	123	ಬಾಂಗ್ಲಾದೇಶ	2012
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	117	ದಕ್ಷಿಣ ಆಫ್ರಿಕಾ	2007
ಅಲೆಕ್ಸ್ ಹೇಲ್ಸ್	ಇಂಗ್ಲೆಂಡ್	116*	ಶ್ರೀಲಂಕಾ	2014

ತಂಡಗಳ ನಾಯಕರ ಟಿ20 ಸಾಧನೆ

ತಂಡ	ನಾಯಕ	ಪಂದ್ಯ	ರನ್	ವಿಕೆಟ್	ಶ್ರೇಷ್ಠ ಸಾಧನೆ
ಭಾರತ	ರೋಹಿತ್ ಶರ್ಮ	142	3,737	1	118 ರನ್
ಆಸ್ಟ್ರೇಲಿಯಾ	ಆ್ಯರನ್ ಫಿಂಚ್	100	3,013	0	172 ರನ್
ಪಾಕಿಸ್ತಾನ	ಬಾಬರ್ ಅಜಂ	92	3,231	0	122 ರನ್
ಇಂಗ್ಲೆಂಡ್	ಜೋಸ್ ಬಟ್ಲರ್	97	2,377	0	101 ರನ್
ನ್ಯೂಜಿಲೆಂಡ್	ಕೇನ್ ವಿಲಿಯಮ್ಸನ್	81	2,225	6	95 ರನ್
ದಕ್ಷಿಣ ಆಫ್ರಿಕಾ	ತೆಂಬಾ ಬವುಮಾ	28	565	0	72 ರನ್
ದಸುನ್ ಶನಕಾ	ಶ್ರೀಲಂಕಾ	77	1,163	21	74 ರನ್/ 16ಕ್ಕೆ 3 ವಿಕೆಟ್
ಅಫ್ಗಾನಿಸ್ತಾನ	ಮೊಹಮ್ಮದ್ ನಬಿ	101	1,669	83	89 ರನ್/ 10ಕ್ಕೆ 4 ವಿಕೆಟ್
ಬಾಂಗ್ಲಾದೇಶ	ಶಕೀಬ್ ಅಲ್ ಹಸನ್	104	2,199	122	84 ರನ್/ 20ಕ್ಕೆ 5 ವಿಕೆಟ್
ಜಿಂಬಾಬ್ವೆ	ಕ್ರೇಗ್ ಎರ್ವಿನ್	51	1,087	0	68 ರನ್
ನೆದರ್ಲೆಂಡ್ಸ್	ಸ್ಕಾಟ್ ಎಡ್ವರ್ಡ್ಸ್	46	561	0	42 ರನ್
ಐರ್ಲೆಂಡ್	ಆ್ಯಂಡ್ರ್ಯೂ ಬಲ್ಬಿರ್ನಿ	82	1,711	0	83 ರನ್

ಅತಿ ಹೆಚ್ಚು ಸಿಕ್ಸರ್

ಆಟಗಾರ	ದೇಶ	ಪಂದ್ಯ	ಸಿಕ್ಸರ್
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	33	63
ಯುವರಾಜ್ ಸಿಂಗ್	ಭಾರತ	31	33
ಶೇನ್ ವಾಟ್ಸನ್	ಆಸ್ಟ್ರೇಲಿಯಾ	24	31

ಅತಿ ಹೆಚ್ಚು ರನ್

ಆಟಗಾರ	ತಂಡ	ಅವಧಿ	ಪಂದ್ಯ	ರನ್	ಗರಿಷ್ಠ
ಮಹೇಲ ಜಯವರ್ಧನೆ	ಶ್ರೀಲಂಕಾ	2007-2014	31	1016	100
ಕ್ರಿಸ್ ಗೇಲ್	ವೆಸ್ಟ್ ಇಂಡೀಸ್	2007-2021	33	965	117
ತಿಲಕರತ್ನೆ ದಿಲ್‌ಶಾನ್	ಶ್ರೀಲಂಕಾ	2007-2016	35	897	96*

ಅತಿ ಹೆಚ್ಚು ವಿಕೆಟ್

ಬೌಲರ್	ತಂಡ	ಅವಧಿ	ಪಂದ್ಯ	ವಿಕೆಟ್	ಅತ್ಯುತ್ತಮ
ಶಕೀಬ್ ಅಲ್ ಹಸನ್	ಬಾಂಗ್ಲಾದೇಶ	2007-2021	31	41	9ಕ್ಕೆ 4
ಶಾಹೀದ್ ಅಫ್ರಿದಿ	ಪಾಕಿಸ್ತಾನ	2007-2016	34	39	11ಕ್ಕೆ 4
ಲಸಿತ್ ಮಾಲಿಂಗ	ಶ್ರೀಲಂಕಾ	2007-2014	31	38	31ಕ್ಕೆ 5

ಪಾಕ್ ಬ್ಯಾಟರ್ ಮಸೂದ್ ತಲೆಗೆ ಪೆಟ್ಟು

ಮೆಲ್ಬರ್ನ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಅಗ್ರ ಕ್ರಮಾಂಕದ ಬ್ಯಾಟರ್ ಶಾನ್ ಮಸೂದ್ ಅವರು ಅಭ್ಯಾಸದ ವೇಳೆ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮೆಲ್ಬರ್ನ್‌ನ ಕ್ರಿಕೆಟ್ ಅಂಗಣದಲ್ಲಿ ಶುಕ್ರವಾರ ಅಭ್ಯಾಸ ನಡೆಸುತ್ತಿದ್ದ ವೇಳೆ ಚೆಂಡು ತಲೆಗೆ ಬಡಿದು 33 ವರ್ಷದ ಮಸೂದ್ ಗಾಯಗೊಂಡಿದ್ದಾರೆ.

ಸ್ಪಿನ್ನರ್ ಎಸೆದ ಚೆಂಡಿಗೆ, ಸ್ಟ್ರೈಕ್‌ನಲ್ಲಿದ್ದ ಮೊಹಮ್ಮದ್ ನವಾಜ್ ಬಿರುಸಾಗಿ ಬ್ಯಾಟ್ ಬೀಸಿದ್ದಾರೆ. ರಭಸದಿಂದ ಬಂದ ಚೆಂಡು ಮತ್ತೊಂದು ಬದಿಯಲ್ಲಿ ನಿಂತಿದ್ದ ಮಸೂದ್ ತಲೆಗೆ ಬಡಿದಿದೆ. ನೋವಿನಿಂದ ಮಸೂದ್ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಮಸೂದ್ ಹೆಲ್ಮೆಟ್ ಧರಿಸಿರಲಿಲ್ಲ. ತಕ್ಷಣ ತಂಡದ ವೈದ್ಯರು ಪರೀಕ್ಷಿಸಿದ್ದಾರೆ.

ಭಾರತ–ಪಾಕ್ ಪಂದ್ಯಕ್ಕೆ ವರ್ಷಧಾರೆ?

ಮೆಲ್ಬರ್ನ್ (ಪಿಟಿಐ): ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಕುತೂಹಲಕ್ಕೆ ಕಾರಣವಾಗಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದ ವೇಳೆ ಮಳೆ ಸುರಿಯುವ ಸಾಧ್ಯತೆ ಇದೆ.

ಸ್ಥಳೀಯ ಹವಾಮಾನ ಇಲಾಖೆಯು ನೀಡಿರುವ ವರದಿಗಳ ಪ್ರಕಾರ ಪಂದ್ಯದ ಅವಧಿಯ ಶೇ 90ರಷ್ಟು ಭಾಗದಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಸುಮಾರು ಒಂದರಿಂದ ಐದು ಮಿಲಿಮೀಟರ್ ಪ್ರಮಾಣದ ಮಳೆ ಸುರಿಯಬಹುದು.

ಶುಕ್ರವಾರ ಸಂಜೆಯೂ ಮೆಲ್ಬರ್ನ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಭಸದ ಮಳೆಯಾಗಿದೆ. ಭಾನುವಾರವೂ ಇದೇ ತರಹದ ವರ್ಷಧಾರೆಯಾಗಬಹುದು ಎನ್ನಲಾಗಿದೆ. ಪಂದ್ಯದ ಟಿಕೆಟ್‌ಗಳು ಈಗಾಗಲೇ ಸಂಪೂರ್ಣವಾಗಿ ಬಿಕರಿಯಾಗಿವೆ.ಎಷ್ಟೇ ಮಳೆಯಾದರೂ ಕನಿಷ್ಠ ಐದು ಓವರ್‌ಗಳ ಇನಿಂಗ್ಸ್‌ನ ಪಂದ್ಯ ನಡೆಯುವ ಭರವಸೆಯನ್ನೂ ಇಲ್ಲಿ ಅಭಿಮಾನಿಗಳು ವ್ಯಕ್ತಪಡಿಸುತ್ತಾರೆ.

ಭಾರತ ತಂಡದ ಅಕ್ಷರ್ ಪಟೇಲ್, ಮೊಹಮ್ಮದ್ ಶಮಿ, ವಿರಾಟ್ ಕೊಹ್ಲಿ ಹಾಗೂ ಅರ್ಷದೀಪ್ ಸಿಂಗ್

ಗುರುವಾರ ರಾತ್ರಿ ಮೆಲ್ಬರ್ನ್‌ಗೆ ಬಂದಿಳಿದಿರುವ ಉಭಯ ತಂಡಗಳ ಆಟಗಾರರು ಶುಕ್ರವಾರ ಅಭ್ಯಾಸ ನಡೆಸಿದರು. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಾಗೂ ಉಳಿದ ಬ್ಯಾಟರ್‌ಗಳು ಪಾಕ್ ತಂಡದ ವೇಗಿ ಶಹೀನ್ ಶಾ ಅಫ್ರಿದಿ ಅವರ ಎಸೆತಗಳನ್ನು ಎದುರಿಸುವ ಕೌಶಲವನ್ನು ಅಭ್ಯಾಸ ಮಾಡಿದರು. ಮೊಹಮ್ಮದ್ ಶಮಿ ಮತ್ತು ಅರ್ಷದೀಪ್ ಸಿಂಗ್ ಬಹಳ ಹೊತ್ತು ಅಭ್ಯಾಸ ನಡೆಸಿದರು.

ವಿಶ್ವ ಶೂಟಿಂಗ್: ಸಾಗರ್‌ಗೆ ಚಿನ್ನ, ಬೆಳ್ಳಿ ಪದಕ

ಕೈರೊ (ಪಿಟಿಐ): ಭಾರತದ ಸಾಗರ್ ಡಾಂಗಿ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಹಾಗೂ ಬೆಳ್ಳಿ ಗೆದ್ದರು.

ಶುಕ್ರವಾರ ನಡೆದ ಜೂನಿಯರ್ ಪುರುಷರ 10 ಮೀ. ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಸಾಗರ್, ವರುಣ್ ತೋಮರ್ ಮತ್ತು ಸಾಮ್ರಾಟ್ ರಾಣಾ ಅವರನ್ನೊಳಗೊಂಡ ಪುರುಷರ ತಂಡ ಚಿನ್ನ ಗೆದ್ದರೆ, 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಸಾಗರ್ ಬೆಳ್ಳಿ ಜಯಿಸಿದರು. ಈ ವಿಭಾಗದ ಕಂಚು ಭಾರತದ ವರುಣ್ ತಮ್ಮದಾಗಿಸಿಕೊಂಡರು.

ಜೂನಿಯರ್ ಮಿಶ್ರ ತಂಡ ವಿಭಾಗದಲ್ಲಿ ನ್ಯಾನ್ಸಿ ಮತ್ತು ಕಾರ್ತಿಕ್ ಶಬರಿ ರಾಜ್ ಕಂಚು ಗೆದ್ದರು. ಒಂಬತ್ತು ದಿನಗಳ ಸ್ಪರ್ಧೆಗಳ ಬಳಿಕ ಭಾರತ ತಂಡ 11 ಚಿನ್ನ, 7 ಬೆಳ್ಳಿ ಮತ್ತು 12 ಕಂಚು ಸೇರಿದಂತೆ ಒಟ್ಟು 30 ಪದಕಗಳೊಂದಿಗೆ ಚೀನಾ ಬಳಿಕ ಎರಡನೇ ಸ್ಥಾನದಲ್ಲಿದೆ.

ಹಾಕಿ: ಭಾರತಕ್ಕೆ ಮಲೇಷ್ಯಾ ಸವಾಲು

ಜೊಹರ್‌ಬಹ್ರು, ಮಲೇಷ್ಯಾ (ಪಿಟಿಐ): ಭಾರತ ಯುವ ಹಾಕಿ ತಂಡವು ಶನಿವಾರ ಇಲ್ಲಿ ಆರಂಭವಾಗಲಿರುವ ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸುವ ನಿರೀಕ್ಷೆಯಲ್ಲಿದೆ.

21 ವರ್ಷದೊಳಗಿನ ಪುರುಷರ ಈ ಟೂರ್ನಿಯಲ್ಲಿ ಭಾರತವು ಎರಡು ಬಾರಿ ಚಾಂಪಿಯನ್ (2013 ಹಾಗೂ 2014) ಆಗಿತ್ತು. 2012, 2015, 2018 ಹಾಗೂ 2019ರಲ್ಲಿ ರನ್ನರ್ಸ್ ಅಪ್ ಆಗಿತ್ತು. 2011 ಹಾಗೂ 2016ರಲ್ಲಿ ಬಿಟ್ಟರೆ ಉಳಿದ ಟೂರ್ನಿಗಳಲ್ಲಿ ಭಾರತವು ಪದಕ ಜಯಿಸಿದೆ. ಕೋವಿಡ್ ಬಿಕ್ಕಟ್ಟಿನಿಂದಾಗಿ 2020 ಹಾಗೂ 2021ರಲ್ಲಿ ಟೂರ್ನಿ ನಡೆದಿರಲಿಲ್ಲ. ಹಾಕಿ ಆಡುವ ದೇಶಗಳ ಸೀನಿಯರ್ ತಂಡಗಳಿಗೆ ಪ್ರತಿಭಾಶೋಧದ ವೇದಿಕೆಯಾಗಿರುವ ಈ ಟೂರ್ನಿಯು ಮಹತ್ವದ್ದಾಗಿದೆ.

ಭಾರತ ತಂಡವನ್ನು ಉತ್ತಮ್ ಸಿಂಗ್ ಮುನ್ನಡೆಸಲಿದ್ದಾರೆ. ಮೊದಲ ಪಂದ್ಯದಲ್ಲಿ ಆತಿಥೇಯ ಮಲೇಷ್ಯಾವನ್ನು ಎದುರಿಸಲಿದೆ. ಹೋದ ವರ್ಷ ನಡೆದ ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸಿದ್ದ ತಂಡದ ಬಹುತೇಕ ಆಟಗಾರರು ಈ ಬಾರಿ ಇದ್ದಾರೆ.

ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ (ಅ. 23), ಜಪಾನ್ (ಅ. 25), ಆಸ್ಟ್ರೇಲಿಯಾ (ಅ.26) ಹಾಗೂ ಗ್ರೇಟ್ ಬ್ರಿಟನ್ (ಅ.28) ಎದುರು ಭಾರತವು ಆಡಲಿದೆ.

ಬ್ರಿಟನ್ ಪ್ರಧಾನಿ: ಮುಂಚೂಣಿಯಲ್ಲಿ ಬೋರಿಸ್ ಜಾನ್ಸನ್– ಸುನಕ್

ಲಂಡನ್ (ಎಎಫ್‌ಪಿ/ಎಪಿ/ ರಾಯಿಟರ್ಸ್): ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ಅವರ ರಾಜೀನಾಮೆಯಿಂದ ತೆರವಾಗಲಿರುವ ಸ್ಥಾನಕ್ಕೆ ಒಂದು ವಾರದೊಳಗೆ ಚುನಾವಣೆ ನಡೆಯಲಿದೆ. ಕನ್ಸರ್ವೇಟಿವ್ (ಟೋರಿ) ಪಕ್ಷದ ಸಂಸದರು ವರ್ಷದಲ್ಲಿ ಎರಡನೇ ಸಲ ತಮ್ಮ ಹೊಸ ನಾಯಕರನ್ನು ಆಯ್ಕೆ ಮಾಡಲಿದ್ದಾರೆ.

ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ಮಾಜಿ ಹಣಕಾಸು ಸಚಿವ, ಭಾರತೀಯ ಮೂಲದ ರಿಷಿ ಸುನಕ್ ಅವರ ಹೆಸರು ಪ್ರಧಾನಿ ಸ್ಥಾನದ ಸ್ಪರ್ಧೆಯ ಮುಂಚೂಣಿಯಲ್ಲಿದೆ. ಕೇವಲ ಮೂರು ತಿಂಗಳ ಹಿಂದೆಯಷ್ಟೇ ಹುದ್ದೆ ತ್ಯಜಿಸಿದ್ದ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅಸಾಧಾರಣ ರೀತಿಯ ಪುನರಾಗಮನ ಎದುರು ನೋಡುತ್ತಿದ್ದಾರೆ.

ರಿಷಿ ಸುನಕ್

ಜಾನ್ಸನ್

ಬೋರಿಸ್ ಜಾನ್ಸನ್, ರಿಷಿ ಸುನಕ್ ಹಾಗೂ ಪೆನ್ನಿ ಮೊರ್ಡಾಂಟ್ ಅವರ ನಡುವೆ ಸ್ಪರ್ಧೆ ಏರ್ಪಡುವ ನಿರೀಕ್ಷೆ ಇದೆ. ಸಮೀಕ್ಷೆಗಳು ಮತ್ತು ಬುಕ್ಕಿಗಳ ಕಣ್ಣು ಸುನಕ್ ಮೇಲೆ ನೆಟ್ಟಿದೆ. ಚುನಾವಣಾ ಪ್ರಕ್ರಿಯೆ ಶುಕ್ರವಾರವೇ ಶುರುವಾಗಿದ್ದು, ಫಲಿತಾಂಶ ಬರುವ ಸೋಮವಾರ ಅಥವಾ ಶುಕ್ರವಾರ ಪ್ರಕಟವಾಗಲಿದೆ.

ಉಗ್ರ ಸಂಘಟನೆಗಳಿಗೆ ನೆರವು ‘ಕಂದು ಪಟ್ಟಿ’ಯಿಂದ ಪಾಕಿಸ್ತಾನ ಹೊರಕ್ಕೆ

ಪ್ಯಾರಿಸ್ (ರಾಯಿಟರ್ಸ್): ಭಯೋತ್ಪಾದನಾ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವ ಬೆಳವಣಿಗೆ ಕುರಿತು ಕಣ್ಗಾವಲು ಕುರಿತ ‘ಕಂದು ವಲಯ’ (ಗ್ರೇ ಲೀಸ್ಟ್) ಪಟ್ಟಿಯಿಂದ ಪಾಕಿಸ್ತಾನವನ್ನು ನಾಲ್ಕು ವರ್ಷಗಳ ನಂತರ ಕೈಬಿಡಲಾಗಿದೆ.

ಉಗ್ರರ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುವ ಕುರಿತಂತೆ ಜಾಗತಿಕವಾಗಿ ಕಣ್ಗಾವಲು ಸಂಸ್ಥೆ ಆರ್ಥಿಕ ಕ್ರಿಯಾಯೋಜನೆ ಕಾರ್ಯಪಡೆ (ಎಫ್‌ಎಟಿಎಫ್) ಈ ಪಟ್ಟಿ ಸಿದ್ಧಪಡಿಸಲಿದೆ. ವಸ್ತುಸ್ಥಿತಿ ಪರಿಶೀಲನೆ, ಸ್ಥಳ ಭೇಟಿ ಬಳಿಕ ಸಂಸ್ಥೆ ಈ ತೀರ್ಮಾನವನ್ನು ತೆಗೆದುಕೊಂಡಿದೆ.

ಸುಳ್ಳು ಮಾಹಿತಿ: ಇಮ್ರಾನ್ ಐದು ವರ್ಷ ಅನರ್ಹ

ಇಸ್ಲಾಮಾಬಾದ್ (ಪಿಟಿಐ): ವಿದೇಶಗಳ ನಾಯಕರು ನೀಡಿದ ಉಡುಗೊರೆಗಳ ಮಾರಾಟದಿಂದ ದೊರೆತ ಆದಾಯದ ಮಾಹಿತಿ ಬಚ್ಚಿಟ್ಟು, ಸುಳ್ಳು ಅಫಿಡವಿಟ್ ಸಲ್ಲಿಸಿದ ಆರೋಪದ ಮೇಲೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಐದು ವರ್ಷಗಳವರೆಗೆ ಅನರ್ಹಗೊಳಿಸಿ ಚುನಾವಣಾ ಆಯೋಗ ಆದೇಶಿಸಿದೆ.

ಇಮ್ರಾನ್ ಖಾನ್ ಐದು ವರ್ಷಗಳ ಕಾಲ ಸಂಸತ್ ಸದಸ್ಯರಾಗುವಂತಿಲ್ಲ. ಸರ್ಕಾರದ ಯಾವುದೇ ಹುದ್ದೆಯನ್ನು ಹೊಂದುವಂತಿಲ್ಲ ಎಂದು ಮುಖ್ಯ ಚುನಾವಣಾ ಆಯುಕ್ತ ಸಿಕಂದರ್ ಸುಲ್ತಾನ್ ರಾಜಾ ನೇತೃತ್ವದ ಐವರು ಸದಸ್ಯರ ಪೀಠ ಸರ್ವಾನುಮತದ ಆದೇಶ ನೀಡಿದೆ.

ಭ್ರಷ್ಟಾಚಾರ ತಡೆ ಕಾನೂನುಗಳಡಿ ಖಾನ್ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿಯೂ ಪೀಠ ಹೇಳಿದೆ. ಇದರಿಂದ ಪಾಕಿಸ್ತಾನ್ ತೆಹ್ರಿಕ್ -ಇ- ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷರೂ ಆದ ಇಮ್ರಾನ್ ಖಾನ್ ಅವರಿಗೆ ಬಹುದೊಡ್ಡ ಹಿನ್ನಡೆಯಾಗಿದೆ.

ಆಯೋಗದ ಈ ಆದೇಶವನ್ನು ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಪಿಟಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಅಸಾದ್ ಉಮರ್ ಪ್ರತಿಕ್ರಿಯಿಸಿದ್ದಾರೆ.

‘ಆಯೋಗದ ಈ ಆದೇಶ ಸ್ವೀಕಾರ್ಹವಲ್ಲ’ ಎಂದಿರುವ ಪಕ್ಷದ ನಾಯಕ ಫವಾದ್ ಚೌಧರಿ, ಇದರ ವಿರುದ್ಧ ಪ್ರತಿಭಟನೆ ನಡೆಸುವಂತೆ ಖಾನ್ ಬೆಂಬಲಿಗರಿಗೆ ಕರೆ ನೀಡಿದ್ದಾರೆ.



ಇಮ್ರಾನ್ ಖಾನ್

ಪ್ರೊ ಕಬಡ್ಡಿ ಲೀಗ್: ಪುಣೇರಿ ಪಲ್ಟನ್‌ಗೆ ಗೆಲುವು

ಯು ಮುಂಬಾಗೆ ಜಯ

ಪ್ರಜಾವಾಣಿ ವಾರ್ತೆ

ಯು ಮುಂಬಾ ಮತ್ತು ಹರಿಯಾಣ ಸ್ಟೀಲರ್ಸ್ ತಂಡಗಳ ಪೈಪೋಟಿ

ಬೆಂಗಳೂರು: ರೇಡರ್ ಗುಮಾನ್ ಸಿಂಗ್ ಹಾಗೂ ನಾಯಕ, ಡಿಫೆಂಡರ್ ಸುರಿಂದರ್ ಸಿಂಗ್ ಅವರ ಆಟದ ಬಲದಿಂದ ಯು ಮುಂಬಾ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ರೋಚಕ ಜಯ ಸಾಧಿಸಿತು.

ಕಂಠೀರವ ಒಳಾಂಗಣದ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ 32–31ರಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಸೋಲಿಸಿತು.

ಗುಮಾನ್ ಒಂಬತ್ತು ಮತ್ತು ಸುರಿಂದರ್ ಸಿಂಗ್ ಆರು ಪಾಯಿಂಟ್ಸ್ ಕಲೆಹಾಕಿದರು. ಸ್ಟೀಲರ್ಸ್ ತಂಡದ ಮಂಜೀತ್ (4 ಪಾಯಿಂಟ್ಸ್), ಜೈದೀಪ್ (4) ಹಾಗೂ ಅಮೀರ್‌ಹುಸೇನ್ (4) ಅವರ ಆಟ ವ್ಯರ್ಥವಾಯಿತು.

ಆರಂಭದಿಂದ ಉಭಯ ತಂಡಗಳು ಜಿದ್ದಾಜಿದ್ದಿ ಪೈಪೋಟಿ ನಡೆಸಿದವು. ಮೊದಲಾರ್ಧದ ಅಂತ್ಯಕ್ಕೆ ಮುಂಬಾ 17–15ರಿಂದ ಮುನ್ನಡೆ ಸಾಧಿಸಿತು. ಆದರೆ ದ್ವಿತೀಯಾರ್ಧದಲ್ಲಿ ಉತ್ತಮ ಆಟವಾಡಿದರೂ ಹರಿಯಾಣದ ಸೋಲು ತಪ್ಪಲಿಲ್ಲ.

ದಿನದ ಇನ್ನೊಂದು ಪಂದ್ಯವೂ ಭಾರೀ ರೋಚಕತೆಯಿಂದ ಕೂಡಿತ್ತು. ಈ ಸೆಣಸಾಟದಲ್ಲಿ ಪುಣೇರಿ ಪಲ್ಟನ್ ತಂಡವು 27–25ರಿಂದ ಬೆಂಗಾಲ್ ವಾರಿಯರ್ಸ್ ಎದುರು ಗೆದ್ದಿತು.

ಪುಣೇರಿ ಪರ ನಾಯಕ ಫಜಲ್ ಅತ್ರಾಚಲಿ ಅವರು ಡಿಫೆನ್ಸ್‌ನಲ್ಲಿ ಆರು ಪಾಯಿಂಟ್ಸ್ ಕಲೆಹಾಕಿದರೆ, ಅಸ್ಲಂ ಇನಾಂದಾರ್ (5) ಮತ್ತು ಸೋಮ್‌ವೀರ್ (5) ಕೂಡ ಮಹತ್ವದ ಕೊಡುಗೆ ನೀಡಿದರು.

ಬೆಂಗಾಲ್ ತಂಡಕ್ಕಾಗಿ ನಾಯಕ ಮಣಿಂದರ್ ಸಿಂಗ್ (6) ಮತ್ತು ಗಿರೀಶ (4) ಅವರ ಆಟ ಫಲ ನೀಡಲಿಲ್ಲ.

ಪಂದ್ಯದ ಮೊದಲಾರ್ಧ ಮುಗಿದಾಗ ಪುಣೇರಿ 11–15ರಿಂದ ಹಿಂದಿತ್ತು. ಆದರೆ ಬಳಿಕ ಪುಟಿದೆದ್ದು ಗೆಲುವು ಒಲಿಸಿಕೊಂಡಿತು.

ದಿನದ ಕೊನೆಯ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 37–33 ರಲ್ಲಿ ದಬಂಗ್ ಡೆಲ್ಲಿ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು

ಯು ಮುಂಬಾ–ಬೆಂಗಳೂರು ಬುಲ್ಸ್
ರಾತ್ರಿ 7.30

ಜೈಪುರ ಪಿಂಕ್ ಪ್ಯಾಂಥರ್ಸ್–ತೆಲುಗು ಟೈಟನ್ಸ್
ರಾತ್ರಿ 8.30

ಹರಿಯಾಣ ಸ್ಟೀಲರ್ಸ್– ಗುಜರಾತ್ ಜೈಂಟ್ಸ್ ರಾತ್ರಿ 9.30

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	6	5	1	0	26
ಜೈಪುರ	5	4	1	0	21
ಪುಣೇರಿ	6	3	2	1	19
ಬೆಂಗಾಲ್	6	3	6	0	16
ಬೆಂಗಳೂರು	5	3	2	0	16
ಮುಂಬಾ	5	3	2	0	16

ಮೈಸೂರಿನಲ್ಲಿ ರಾಜ್ಯ ಸೈಕ್ಲಿಂಗ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಅರಮನೆ ನಗರಿಯಲ್ಲಿ ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಆಶ್ರಯದಲ್ಲಿ ಶನಿವಾರ ಹಾಗೂ ಭಾನುವಾರ 13ನೇ ರಾಜ್ಯ ಸೈಕ್ಲಿಂಗ್ ಚಾಂಪಿಯನ್‌ಷಿಪ್ ನಡೆಯಲಿದೆ.

‘ಶನಿವಾರ ಬೆಳಿಗ್ಗೆ 7ಕ್ಕೆ ಉತ್ತನಹಳ್ಳಿಯಲ್ಲಿ ಚಾಂಪಿಯನ್‌ಷಿಪ್ ಪ್ರಾರಂಭವಾಗಲಿದೆ. 14 ವರ್ಷದೊಳಗಿನ, 16 ವರ್ಷದೊಳಗಿನ ಹಾಗೂ 18 ವರ್ಷದೊಳಗಿನ ಬಾಲಕ ಹಾಗೂ ಬಾಲಕಿಯರು, 23 ವರ್ಷದೊಳಗಿನವರು ಹಾಗೂ ಪುರುಷ, ಮಹಿಳಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯುತ್ತವೆ. ನೋಂದಣಿ ಶುಲ್ಕ ಇರುವುದಿಲ್ಲ. ವಿಜಯಪುರ, ಬೆಳಗಾವಿ, ಬಾಗಲಕೋಟೆ, ತುಮಕೂರು, ಗದಗ, ಬೆಂಗಳೂರು, ಮೈಸೂರು ಸೇರಿದಂತೆ 14 ಜಿಲ್ಲೆಗಳು ಮತ್ತು 3 ಕ್ರೀಡಾ ಹಾಸ್ಟೆಲ್‌ಗಳಿಂದ 250 ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯಿಂದ ಮಾನ್ಯತೆ ಪಡೆದ ಚಾಂಪಿಯನ್‌ಷಿಪ್ ಇದಾಗಿದೆ’ ಎಂದು ಸಂಘಟನಾ ಕಾರ್ಯದರ್ಶಿ ಎನ್. ಲೋಕೇಶ್ ವಿವರ ನೀಡಿದರು.

‘ವೈಯಕ್ತಿಕ ಟೈಂ ಟ್ರಯಲ್ ಹಾಗೂ ಮಾಸ್ ಸ್ಟಾರ್ಟ್ ರೇಸ್‌ಗಳಲ್ಲಿ ಪೈಪೋಟಿ ನಡೆಯಲಿವೆ. ಪ್ರತಿ ವಿಭಾಗದಲ್ಲಿ ವಿಜೇತರಾದ ಪಟುಗಳು ಮುಂಬರುವ ರಾಷ್ಟ್ರೀಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ’ ಎಂದು ತಿಳಿಸಿದರು.

ಡಿ. 6ರಿಂದ ಅಂಧರ ಮೂರನೇ ಟಿ20 ವಿಶ್ವಕಪ್ ಟೂರ್ನಿ

ಏಳು ತಂಡಗಳ ಸೆಣಸಾಟ

ಪ್ರಜಾವಾಣಿ ವಾರ್ತೆ

ಟಿ20 ವಿಶ್ವಕಪ್ ಟೂರ್ನಿಯ ದಿನಾಂಕ ಮತ್ತು ತಂಡ ಪ್ರಕಟಣೆಯ ಸಂದರ್ಭದಲ್ಲಿ ಸಿಎಬಿಐ ಪ್ರಧಾನ ಕಾರ್ಯದರ್ಶಿ ಇ.ಜಾನ್ ಡೇವಿಡ್, ಅಧ್ಯಕ್ಷ ಮಹಾಂತೇಶ್ ಜಿ.ಕೆ. ಮತ್ತು ಭಾರತ ತಂಡದ ನಾಯಕ ಅಜಯ್‌ಕುಮಾರ್ ರೆಡ್ಡಿ ಪಾಲ್ಗೊಂಡಿದ್ದರು– ಪ್ರಜಾವಾಣಿ ಚಿತ್ರ

ಬೆಂಗಳೂರು: ಅಂಧರ ಮೂರನೇ ಟಿ20 ವಿಶ್ವಕಪ್ ಟೂರ್ನಿಯು ಡಿಸೆಂಬರ್ ಆರರಿಂದ 17ರವರೆಗೆ ಭಾರತದಲ್ಲಿ ನಡೆಯಲಿದೆ.

ಕೆಎಸ್‌ಸಿಎಯಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತ ಅಂಧರ ಕ್ರಿಕೆಟ್ ಸಂಸ್ಥೆಯ (ಸಿಎಬಿಐ) ಅಧ್ಯಕ್ಷ ಜಿ.ಕೆ. ಮಹಾಂತೇಶ್ ಈ ವಿಷಯ ತಿಳಿಸಿದರು.

‘ಬೆಂಗಳೂರು ಸೇರಿದಂತೆ ಎಂಟು ನಗರಗಳಲ್ಲಿ ಟೂರ್ನಿ ಆಯೋಜನೆಯಾಗಲಿದ್ದು, ಆತಿಥೇಯ ಭಾರತ ಸೇರಿ ಏಳು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ನೇಪಾಳ, ಬಾಂಗ್ಲಾದೇಶ, ಆಸ್ಟ್ರೇಲಿಯಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ಭಾಗವಹಿಸಲಿರುವ ಇನ್ನುಳಿದ ತಂಡಗಳಾಗಿವೆ‘ ಎಂದರು.

ಡಿ.6ರಂದು ನಡೆಯುವ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ ತಂಡವು ನೇಪಾಳಕ್ಕೆ ಮುಖಾಮುಖಿಯಾಗಲಿದೆ. ಫರೀದಾಬಾದ್‌ನಲ್ಲಿ ಈ ಪಂದ್ಯ ನಡೆಯಲಿದೆ. ಒಟ್ಟು 24 ಪಂದ್ಯಗಳು ನಡೆಯಲಿದ್ದು, 17ರಂದು ಫೈನಲ್ ಪಂದ್ಯಕ್ಕೆ ಬೆಂಗಳೂರು ಆತಿಥ್ಯ ವಹಿಸಲಿದೆ.

ಯುವರಾಜ್ ಸಿಂಗ್ ರಾಯಭಾರಿ: ಈ ಬಾರಿಯ ವಿಶ್ವಕಪ್ ಟೂರ್ನಿಗೆ ಭಾರತ ತಂಡದ ಮಾಜಿ ಆಟಗಾರ ಯುವರಾಜ್ ಸಿಂಗ್ ಪ್ರಚಾರ ರಾಯಭಾರಿಯಾಗಿದ್ದಾರೆ. 2017ರಲ್ಲಿ ನಡೆದಿದ್ದ ಟೂರ್ನಿಗೆ ರಾಹುಲ್ ದ್ರಾವಿಡ್ ರಾಯಭಾರಿಯಾಗಿದ್ದರು.

ಟೂರ್ನಿಗೆ ಪ್ರಕಟಿಸಲಾದ ಭಾರತ ತಂಡದಲ್ಲಿ ಕರ್ನಾಟಕದ ಪ್ರಕಾಶ್ ಜಯರಾಮಯ್ಯ, ಲೋಕೇಶ್ಸು, ಸುನಿಲ್ ರಮೇಶ್ ಸ್ಥಾನ ಪಡೆದಿದ್ದಾರೆ.

ಸಿಎಬಿಐ ಪ್ರಧಾನ ಕಾರ್ಯದರ್ಶಿ ಇ. ಜಾನ್ ಡೇವಿಡ್ ಮತ್ತು ಭಾರತ ತಂಡದ ನಾಯಕ ಅಜಯ್‌ಕುಮಾರ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಭಾರತ ತಂಡ: ಅಜಯ್‌ಕುಯಮಾರ್ ರೆಡ್ಡಿ (ನಾಯಕ), ವೆಂಕಟೇಶ್ವರ ರಾವ್ ದುನ್ನಾ (ಉಪನಾಯಕ), ಲಲಿತ್ ಮೀನಾ, ಪ್ರವೀಣ್ ಕುಮಾರ್ ಶರ್ಮಾ, ಸುಜೀತ್ ಮುಂಡಾ, ನೀಲೇಶ್ ಯಾದವ್, ಸೋನು ಗೋಲ್ಕರ್, ಸುವೇಂದು ಮೆಹತಾ, ನಕುಲ್ ಬಡಾನಾಯಕ್, ಇರ್ಫಾನ್ ದಿವಾನ್, ಲೋಕೇಶ್, ತೊಂಪಕಿ ದುರ್ಗಾ ರಾವ್, ಸುನಿಲ್ ರಮೇಶ್, ಎ.ರವಿ, ಪ್ರಕಾಶ್ ಜಯರಾಮಯ್ಯ, ದೀಪಕ್ ಮಲಿಕ್, ದಿನಕರ್ ಜಿ.

ಸಂಕ್ಷಿಪ್ತ ಸುದ್ದಿ

ವಿಶ್ವ ಶೂಟಿಂಗ್: ತಿಲೋತ್ತಮಾಗೆ ಕಂಚು

ತಿಲೋತ್ತಮಾ

ಬೆಂಗಳೂರು: ಉದ್ಯಾನನಗರಿಯ ತಿಲೋತ್ತಮಾ ಸೇನ್ ಅವರು ಈಜಿಪ್ಟ್‌ನ ಕೈರೊದಲ್ಲಿ ನಡೆಯುತ್ತಿರುವ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಜೂನಿಯರ್ ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ 14 ವರ್ಷದ ತಿಲೋತ್ತಮಾ ಅವರಿಗೆ ಗುರುವಾರ ಪದಕ ಒಲಿದಿದೆ. ಅರ್ಹತಾ ಸುತ್ತಿನಲ್ಲಿ ಅವರು ವಿಶ್ವದಾಖಲೆಯ ಸ್ಕೋರ್ (633.4) ಸರಿಗಟ್ಟಿದರು.

ಹಾಕಿ: ಪ್ರೊ ಲೀಗ್ ವಿಜೇತರಿಗೆ ಒಲಿಂಪಿಕ್ಸ್ ನೇರ ಅರ್ಹತೆ

ನವದೆಹಲಿ (ಪಿಟಿಐ): 2023–24ರ ಸಾಲಿನ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿ ವಿಜೇತ ಪುರುಷ ಮತ್ತು ಮಹಿಳಾ ತಂಡಗಳು 2026ರ ವಿಶ್ವಕಪ್ ಹಾಗೂ 2028ರ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಗಳಿಸಲಿವೆ.

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಥಿಯರಿ ವೇಲ್ ಶುಕ್ರವಾರ ಈ ವಿಷಯ ತಿಳಿಸಿದ್ದಾರೆ.

‘ಐದು ಮತ್ತು ಆರನೇ ಆವೃತ್ತಿಗಳ ಪ್ರೊ ಲೀಗ್ ವಿಜೇತ ತಂಡಗಳು 2026ರ ವಿಶ್ವಕಪ್‌ಗೆ ನೇರ ಪ್ರವೇಶ ಪಡೆಯಲಿದ್ದರೆ, ಏಳು ಮತ್ತು ಎಂಟನೇ ಆವೃತ್ತಿಗಳಲ್ಲಿ ಗೆದ್ದವರು 2028ರ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಗಳಿಸುವರು‘ ಎಂದು ವರ್ಚುವಲ್ ಸಂವಾದದಲ್ಲಿ ವೇಲ್ ಹೇಳಿದ್ದಾರೆ.

ಚಾರ್ವಿಗೆ 5 ಚಿನ್ನ

ಬೆಂಗಳೂರು: ಕರ್ನಾಟಕದ ಚೆಸ್ ಆಟಗಾರ್ತಿ ಚಾರ್ವಿ ಅನಿಲ್‌ಕುಮಾರ್ ಉತ್ತಮ ಆಟ ಮುಂದುವರಿಸಿದ್ದಾರೆ. ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಐದು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಟೂರ್ನಿಯ ವೈಯಕ್ತಿಕ ರ್‍ಯಾಪಿಡ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದ ಬೆಂಗಳೂರಿನ ಚಾರ್ವಿ, ವೈಯಕ್ತಿಕ ಬ್ಲಿಟ್ಜ್, ತಂಡ ವಿಭಾಗದ ರ್‍ಯಾಪಿಡ್, ಸ್ಟ್ಯಾಂಡರ್ಡ್ ಮತ್ತು ಬ್ಲಿಟ್ಜ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಜಯಿಸಿದರು.

ನ. 1ರಿಂದ ಜೈಂಟ್ಸ್ ಕಪ್ ಕ್ರಿಕೆಟ್

ಬೆಂಗಳೂರು: ಜೈಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ಬೆಂಗಳೂರು ಎಂಟನೇ ಬಾರಿ ಜೈಂಟ್ಸ್ ಕ್ರಿಕೆಟ್ ಕಪ್ ಆಯೋಜಿಸುತ್ತಿದೆ.

ಈ ಮುಕ್ತ ಟೂರ್ನಿಯು ನವೆಂಬರ್ 1ರಿಂದ ಆರಂಭವಾಗಲಿದೆ. ತಂಡಗಳ ನೋಂದಣಿಗೆ ಅಕ್ಟೋಬರ್ 26 ಕೊನೆಯ ದಿನವಾಗಿದೆ. ಮಾಹಿತಿಗಾಗಿ ಚಂದ್ರಶೇಖರ್ ಮತ್ತು ವಿವೇಕಾನಂದ ಕಿಣಿ (ಮೊ: 9844760690/ 8088237006) ಅವರನ್ನು ಸಂಪರ್ಕಿಸಬಹುದು ಇಮೇಲ್ giantsaturservice@ gmail.com.

ಬಿಎಫ್‌ಸಿಗೆ ಹೈದರಾಬಾದ್ ಸವಾಲು

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ ಮತ್ತು ರಾಯ್‌ಕೃಷ್ಣ – ಪ್ರಜಾವಾಣಿ ಚಿತ್ರ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಎಫ್‌ಸಿ ತಂಡವು ಶನಿವಾರ ಹಾಲಿ ಚಾಂಪಿಯನ್ ಹೈದರಾಬಾದ್ ಎಫ್‌ಸಿ ಸವಾಲು ಎದುರಿಸಲಿದೆ.

ಇಲ್ಲಿಯ ಜಿಎಂಸಿ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ಈ ಹಣಾಹಣಿ ನಡೆಯಲಿದೆ.

ಬೆಂಗಳೂರಿನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಜಯ ಸಾಧಿಸಿದ್ದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ, ಕಳೆದ ಪಂದ್ಯದಲ್ಲಿ ಡ್ರಾ ಸಾಧಿಸಿತ್ತು.

ಡುರಾಂಡ್ ಕಪ್ ಟೂರ್ನಿಗಳು ಉಭಯ ತಂಡಗಳು ಮುಖಾಮುಖಿಯಾಗಿದ್ದಾಗ, ಹೈದರಾಬಾದ್‌ನ ಒಡ್ಡೆ ಒನ್ನೆಂಡಿಯಾ ನೀಡಿದ ‘ಉಡುಗೊರೆ ಗೋಲಿನ‘ ನೆರವಿನಿಂದ ಗೆದ್ದು ಬೆಂಗಳೂರು ಫೈನಲ್‌ಗೆ ಪ್ರವೇಶಿಸಿತ್ತು.

ಈ ಪಂದ್ಯದಲ್ಲಿಯೂ ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸದಲ್ಲಿ ಬೆಂಗಳೂರು ಇದೆ. ಶಿವಶಕ್ತಿ ನಾರಾಯಣನ್ ಮತ್ತು ರಾಯ್ ಕೃಷ್ಣ ಅವರು ತಂಡದ ಶಕ್ತಿಯಾಗಿದ್ದಾರೆ. ಸುನಿಲ್ ಚೆಟ್ರಿ ಕೂಡ ಮಿಂಚಿದರೆ ಗೆಲುವು ಸುಲಭವಾಗಬಹುದು.

ಈ ಪಂದ್ಯವು ರಾತ್ರಿ 7.30ರಿಂದ ಆರಂಭವಾಗಲಿದೆ. ಮತ್ತೊಂದು ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ–ಜಮ್ಶೆಡ್‌ಪುರ ಎಫ್‌ಸಿ ಸೆಣಸಲಿವೆ.

ಗೋವಾಗೆ ಜಯ: ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವು 2–0ಯಿಂದ ಚೆನ್ನೈಯಿನ್ ಎಫ್‌ಸಿ ವಿರುದ್ಧ ಗೆದ್ದಿತು.

ಬೆಂಗಳೂರಿನ ಕುಂಬಳಗೋಡಿನಲ್ಲಿರುವ ಬಿಜಿಎಸ್ ಸಮೂಹ ಸಂಸ್ಥೆಗಳ ಆವರಣದಲ್ಲಿ ಬಿಜಿಎಸ್ ಕ್ರೀಡಾವೈಭವಕ್ಕೆ ಗುರುವಾರ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಬಿಜಿಎಸ್ ಮತ್ತು ಎಸ್‌ಜೆಬಿ ಎಂ.ಡಿ. ಪ್ರಕಾಶನಾಥ ಸ್ವಾಮೀಜಿ, ಅಭಿಮನ್ಯು ಅಕಾಡೆಮಿ ಸಿಇಒ, ಅಂತರರಾಷ್ಟ್ರೀಯ ಅಥ್ಲೀಟ್ ಅರ್ಜುನ್ ದೇವಯ್ಯ, ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್, ಅಂತರರಾಷ್ಟ್ರೀಯ ಹಾಕಿ ಕೋಚ್ ಸಂಜು ಸೋಮಯ್ಯ, ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, ಭಾರತ ಕ್ರಿಕೆಟ್ ತಂಡದ ಆಟಗಾರ ಕರುಣ್ ನಾಯರ್, ವಿದ್ಯಾರ್ಥಿಗಳು ಮತ್ತಿತರರಿದ್ದರು

ವಿಶ್ವ ಬ್ಯಾಡ್ಮಿಂಟನ್: ಭಾರತಕ್ಕೆ 13ನೇ ಸ್ಥಾನ

ಸಾಂಟಾಂಡೆರ್, ಸ್ಪೇನ್ (ಪಿಟಿಐ): ಭಾರತ ತಂಡದವರು ಇಲ್ಲಿ ನಡೆದ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಿಶ್ರ ತಂಡ ವಿಭಾಗದಲ್ಲಿ 13ನೇ ಸ್ಥಾನ ಗಳಿಸಿದರು.

13 ರಿಂದ 16ರ ವರೆಗಿನ ಸ್ಥಾನ ನಿರ್ಣಯಿಸಲು ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ 4–1 ರಲ್ಲಿ ಜರ್ಮನಿ ತಂಡವನ್ನು ಮಣಿಸಿತು.

ಮೊದಲ ಪಂದ್ಯದಲ್ಲಿ ಕಣಕ್ಕಿಳಿದ ಭಾರತದ ಮಿಶ್ರ ಡಬಲ್ಸ್ ಜೋಡಿ ಸಮರವೀರ್– ರಾಧಿಕಾ ಶರ್ಮಾ 21–18, 21–16 ರಲ್ಲಿ ಜರ್ಮನಿಯ ಜೇರ್ನ್ ಶ್ಲೆವೊಟ್– ಜೂಲಿಯಾ ಮೆಯರ್ ವಿರುದ್ಧ ಗೆದ್ದು 1–0 ಮುನ್ನಡೆ ತಂದಿತ್ತಿತು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭರತ್ ರಾಘವ್ 14–21, 21–17, 21–18 ರಲ್ಲಿ ಸಂಜೀವಿ ಪದ್ಮನಾಭನ್ ಅವರನ್ನು ಮಣಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

5% EXTRA CASHBACK# SBI card
#Min. Trxn.: ₹20000; Max. Cashback on one Trxn. per card during the offer period: ₹5000. per card. Valid only on EMI Trxn. Validity: Sep 2022 - Oct 2022. T&C Apply.

70116 70116
MISSED CALL TO CONNECT 8367796950
HeroMotoCorp.com
Hero 100 MILLION**
CALL TOLL-FREE 1800 266 0018
Hero GoodLife | Enroll for benefits ₹6500 T&C apply
Exchange Powered By Wheels of Trust^^ | Exchange ANY old two-wheeler for a new Hero at best resale value. For more details, visit www.wheelsoftrust.com
SCAN FOR BEST^^ RESALE VALUE

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or call our toll-free no.: 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per cumulative dispatch numbers till 31st January, 2021. $Highest Two-wheeler sales in a year by a single corporate entity. Data source: DNA Consult Advisory and Society of Indian Automobile Manufacturers. Based on Two-Wheeler Market Reports for CY2021 published by DNA Consult Advisory; and SIAM's Auto Industry Sales figures for CY2021 ^^Based on offers from empaneled dealers on Wheels of Trust platform. #Available at select dealerships. An SBI offer, subject to its exclusive T&Cs. ^Finance scheme is at the sole discretion of financiers & subject to its respective terms & conditions. Offer is for limited period or till stock lasts. Offer is available in select Dealership only. For more details please visit your nearest authorised Hero outlet. ˇˇData Source: SIAM's Production, Domestic Sales Data of Two Wheelers Cumulative for January 2021-December 2021. *T&C apply.

AUTHORISED DEALERS - BENGALURU - MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. BYATARAYANAPURA: BIMAL HERO - PH: 9289922863. Doddaballapur : Bimal Hero 9742202125, HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. PEENYA: SAI HERO - PH: 9289922830. RAJAJI NAGAR: MAX HERO - PH: 9289923023. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. TUMKUR: SAI HERO - PH: 9289922986. TIPTUR: SAI HERO PH. 9164840456. KUNIGAL: SAI HERO - PH: 7022752858.

AUTHORISED SERVICE CENTRES: MADIWALA - 9606283336. BANASHANKARI 3RD STAGE - 9513353864. KAMAKSHIPALYA - 23585530/23583416. BANNERGHATTA ROAD - 41209619. KENGERI - 9739275523. YELAHANKA - 28462524, 9341025589. MYSORE ROAD - 26757775 / 26755599. DEVANAHALLI - 27681444. KANAKAPURA - 9880212346. BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. GUBBI - 9538084895. MADHUGIRI - 9972278989.

AUTHORISED REPRESENTATIVE OF DEALERS - HSR LAYOUT: 7428893265. MATHIKERE: 9035027951. DOMLUR : 7353919910- J.P.NAGAR: 9035024274. RT NAGAR : 9535327710 CHANDAPURA: 9481329064. ATTIBELE: 8050609104. CV RAMAN NAGAR: 9036745854. B NARAYANAPURA: 9945472149. VARTHUR: 9900877227. MAHALAKSHMI LAYOUT: 9448532384. HEGGANAHALLI CROSS: 9986200228. HESARGHATTA ROAD: 9008006878. MAKALI: 8147135109. ABBIGERE: 9448087926. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 87628 60999. VIJAYAPURA: 9449619920. BIDADI: 9844767719. RAMANAGARA: 9663399909. JIGANI: 9986498884. SRINIVASPUR: 9738504002. GAURIBIDANUR: 9448662521. MULBAGAL: 9686445606. BANGARPET: 9448168139. SIRA: 9448417393. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. H CROSS: 9740525278. VIDYARANYAPURA : 9606934533. BAGALUR : 8792035018.

ಪರಿಸರಸ್ನೇಹಿ ಹಣತೆಗೆ ಹೆಚ್ಚಿದ ಬೇಡಿಕೆ

ಖಲೀಲಅಹ್ಮದ ಶೇಖ

ದೀಪಾವಳಿ ಹಬ್ಬದ ಅಂಗವಾಗಿ ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ವಿಧ ವಿಧವಾದ ದೀಪಗಳು (ಹಣತೆಗಳು), ಆಕಾಶ ಬುಟ್ಟಿಗಳು ಸೇರಿದಂತೆ ಇತರೆ ಆಲಂಕಾರಿಕ ವಸ್ತುಗಳು ಕಂಗೊಳಿಸುತ್ತಿವೆ.

ಕೋವಿಡ್ ಕಾರಣದಿಂದ ಎರಡು ವರ್ಷಗಳಿಂದ ಮಂಕಾಗಿದ್ದ ಬೆಳಕಿನ ಹಬ್ಬ ದೀಪಾವಳಿ ಸಂಭ್ರಮ ಇನ್ನೂ ನಾಲ್ಕು ದಿನಗಳು ಬಾಕಿ ಇರುವಾಗಲೇ ಸಿದ್ಧತೆಗಳು ಜೋರಾಗಿವೆ. ಮನೆಯಲ್ಲಿ ಆಚರಣೆಗೆ ಸಿದ್ಧತೆ ಶುರುವಾಗಿದೆ. ದೀಪಾವಳಿ ಹಬ್ಬಕ್ಕೆ ಹಣತೆಗಳು ಬೇಕೇ ಬೇಕು. ಹಣತೆಗಳ ಬೆಳಕು ಮನೆಯಲ್ಲಿ ಇಲ್ಲದೇ ಇದ್ದಲ್ಲಿ ಹಬ್ಬವೇ ಅಪೂರ್ಣ ಎನ್ನುವ ಭಾವನೆ ಜನರದು.

ದೀಪಗಳ ಹಬ್ಬ ದೀಪಾವಳಿ ಆಚರಣೆಗೆ ನಗರದ ಜನತೆ ಸಿದ್ಧತೆ ನಡೆಸಿದ್ದು, ಇದೇ 24ರಿಂದ 26ರ ವರೆಗೆ ನಡೆಯಲಿರುವ ದೀಪಾವಳಿ ಸಂಭ್ರಮ ನಗರದಲ್ಲಿ ಮನೆ ಮಾಡಲಿದೆ. ಹಣತೆ ವ್ಯಾಪಾರಸ್ಥರು, ಕುಂಬಾರರು ಭಾರಿ ಮಾರಾಟದ ನಿರೀಕ್ಷೆಯಲ್ಲಿದ್ದರು. ಆದರೆ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ವಸ್ತುಗಳ ಮಾರಾಟಕ್ಕೆ ಕಡಿವಾಣ ಬಿದ್ದಂತಾಗಿದೆ.

‘ಮಾರುಕಟ್ಟೆಯಲ್ಲಿ ಪರಿಸರಸ್ನೇಹಿ ಹಣತೆಗಳಿಗೆ ಬೇಡಿಕೆಯಿದ್ದು, ತಮಿಳುನಾಡಿನ ಅಚ್ಚು ಹಾಕಿದ ಆಲಂಕಾರಿಕ ವೈವಿಧ್ಯಮಯ ಹಣತೆಗಳು ಗ್ರಾಹಕರನ್ನು ಸೆಳೆಯುತ್ತಿವೆ. ಪ್ರತಿದಿನ 800 ದೀಪಗಳನ್ನು ಸಿದ್ಧಪಡಿಸುತ್ತೇನೆ. ನಿತ್ಯ 5-6 ಜನ ಗ್ರಾಹಕರು ಬರುತ್ತಿದ್ದು, ವಾರಾಂತ್ಯದಲ್ಲಿ ವಹಿವಾಟು ಹೆಚ್ಚಾಗಬಹುದು. ಕೋವಿಡ್ ಕಾರಣದಿಂದ ಮಂಕಾಗಿದ್ದ ಮಾರುಕಟ್ಟೆಗೆ ಈಗ ಗ್ರಾಹಕರು ಉತ್ಸಾಹದಿಂದ ಬರುತ್ತಿದ್ದಾರೆ’ ಎಂದು ಪಾಟರಿಟೌನ್‌ನ ಕುಂಬಾರ ರಮೇಶ್ ಮಾಹಿತಿ ನೀಡಿದರು.

ದೀಪಾವಳಿ ಹಬ್ಬಕ್ಕೆ ಮಾರುಕಟ್ಟೆಯಲ್ಲಿ ತರಹೇವಾರಿ ಬಣ್ಣ ಬಣ್ಣದ ಹಣತೆಗಳು ಗ್ರಾಹಕರ ಕೈಗೆಟುಕುವ ದರದಲ್ಲಿ ಸಿಗುತ್ತಿವೆ. ವಿಶೇಷವಾಗಿ ಮಣ್ಣಿನಿಂದ ಮಾಡಿದ ಪರಿಸರಸ್ನೇಹಿ ಪಣತಿಗಳಿಗೆ ಬೇಡಿಕೆಗೆ ಹೆಚ್ಚಿದೆ. ಗ್ರಾಹಕರು ತಮ್ಮ ಅಗತ್ಯಕ್ಕೆ ಎಷ್ಟು ಬೇಕೊ ಅಷ್ಟು ಹಣತೆಗಳನ್ನು ಖರೀದಿ ಮಾಡಿ ಹಬ್ಬಕ್ಕಾಗಿ ಸಂಗ್ರಹ ಮಾಡುತ್ತಿದ್ದಾರೆ.

ಚಿತ್ರಗಳು: ಎಚ್.ಜಿ.ಪ್ರಶಾಂತ್

‘ಯೆಲ್ಲೋ ಗ್ಯಾಂಗ್ಸ್’ಗೆ ಗ್ರೀನ್ ಸಿಗ್ನಲ್

ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ‘ಯೆಲ್ಲೋ ಗ್ಯಾಂಗ್ಸ್’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ನವೆಂಬರ್ 11ರಂದು ಚಿತ್ರ ತೆರೆಗೆ ಬರಲಿದೆ. ಸ್ನೇಹಿತರೇ ಸೇರಿಕೊಂಡು ಈ ಚಿತ್ರ ನಿರ್ಮಿಸಿದ್ದಾರೆ. ರವೀಂದ್ರ ಪರಮೇಶ್ವರಪ್ಪ ನಿರ್ದೇಶಕರು.

ದೇವ್ ದೇವಯ್ಯ ನಾಯಕ, ಅರ್ಚನಾ ಕೊಟ್ಟಿಗೆ ನಾಯಕಿ. ಸೇರಿದಂತೆ ಹತ್ತೊಂಬತ್ತು ಪ್ರಮುಖ ಪಾತ್ರಗಳು ನಮ್ಮ ಚಿತ್ರದಲ್ಲಿವೆ ಎಂದರು ನಿರ್ದೇಶಕರು. ಚಿತ್ರದಲ್ಲಿ ನಾಯಕ ವಿಕ್ರಂ ಹೆಸರಿನ ಪೊಲೀಸ್ ಅಧಿಕಾರಿ.

ಸುಜ್ಞಾನ್ ಅವರ ಸುಂದರ ಛಾಯಾಗ್ರಹಣ ಹಾಗೂ ರೋಹಿತ್ ಸೋವರ್ ಅವರ ಸಂಗೀತ ನಿರ್ದೇಶನವಿದೆ.

‘ವಿಭಿನ್ನ ಸ್ಟುಡಿಯೋಸ್, ವಾಟ್ ನೆಕ್ಸ್ಟ್ ಮೂವೀಸ್ ಹಾಗೂ ಕೀ ಲೈಟ್ಸ್ ಸಂಸ್ಥೆ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಶಿವಮೊಗ್ಗದ ನವೋದಯ ಶಾಲೆಯಲ್ಲಿ ಓದಿರುವ ಸಾಕಷ್ಟು ವಿದ್ಯಾರ್ಥಿಗಳು ಈ ಚಿತ್ರಕ್ಕೆ ಹಣ ಹೂಡಿದ್ದೇವೆ. ಏಕೆಂದರೆ ನಿರ್ದೇಶಕ ರವೀಂದ್ರ ನಮ್ಮ ಸಹಪಾಠಿ. ಮೊದಲಿನಿಂದಲೂ ಅವರ ಯೋಚನೆ ವಿಭಿನ್ನವಾಗಿರುವುದರಿಂದ ನಮ್ಮ ಸಂಸ್ಥೆಗೆ ವಿಭಿನ್ನ ಸ್ಟುಡಿಯೋಸ್ ಎಂದು ಹೆಸರಿಟ್ಟಿದ್ದೇವೆ’ ಎಂದರು ನಿರಂಜನ್.

ಕೊನೇ ಹಂತದಲ್ಲಿ ‘ಎವಿಡೆನ್ಸ್’

ಶ್ರೀಧೃತಿ ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಿಸಿರುವ ‘ಎವಿಡೆನ್ಸ್’ನ ಪೋಸ್ಟ್ ಪ್ರೊಡಕ್ಷನ್ಸ್ ನಡೆದಿದೆ. ಜೋಶ್ ಖ್ಯಾತಿಯ ರೋಬೊ ಗಣೇಶನ್ ನಾಯಕ. ಕಿರಗೂರಿನ ಗಯ್ಯಾಳಿಗಳು ಖ್ಯಾತಿಯ ಮಾನಸ ಜೋಶಿ ಚಿತ್ರದ ನಾಯಕಿ.

ಡಾ.ಕೊಡ್ಲಾಡಿ ಸುರೇಂದ್ರಶೆಟ್ಟಿ ಅವರು ಅರ್ಪಿಸಿ, ಶ್ರೀನಿವಾಸ್‌ಪ್ರಭು, ಕೆ.ಮಾದೇಶ್ (ಕೊಡಿಹಳ್ಳಿ), ನಟರಾಜ್ ಸಿ.ಎಸ್. (ಚನ್ನಸಂದ್ರ) ಸೇರಿ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಪ್ರವೀಣ್ ರಾಮಕೃಷ್ಣ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಅರವಿಂದ್ ಅಚ್ಚು, ಎಂ.ಎನ್.ರವೀಂದ್ರ ರಾವ್ (ದೂರದರ್ಶನ), ಪ್ರಶಾಂತ್ ಸಿ.ಪಿ. ರಮೇಶ್ ಕೆ. ಕಿಶೋರ್‌ಬಾಬು ಮತ್ತು ನರಸಿಂಹಮೂರ್ತಿ ಚಿತ್ರದ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ. ವಿಷುಯಲ್ ಮ್ಯಾಜಿಕ್ ಸ್ಟುಡಿಯೋದಲ್ಲಿ ಈ ಚಿತ್ರದ ಕೊನೆಯಹಂತದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಸದ್ಯದಲ್ಲೇ ಹಾಡುಗಳು ಮತ್ತು ಟೀಸರ್, ಟ್ರೈಲರನ್ನು ಬಿಡುಗಡೆ ಮಾಡುವುದಾಗಿ ಚಿತ್ರತಂಡ ತಿಳಿಸಿದೆ.

ರೋಬೋ ಗಣೇಶನ್, ಮಾನಸಾ ಜೋಷಿ

ಕ್ರೈಮ್, ಸಸ್ಪೆನ್ಸ್, ಥ್ರಿಲ್ಲರ್ ಜೊತೆಗೆ ತ್ರಿಕೋನ ಪ್ರೇಮಕಥಾಹಂದರದ ಈ ಚಿತ್ರಕ್ಕೆ ಪ್ರವೀಣ್ ರಾಮಕೃಷ್ಣ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಮತ್ತು ನೆಲಮಂಗಲ ಹೊರವಲಯದಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಆಕರ್ಷ್ ಆದಿತ್ಯ, ರಚಿತಾ, ಪೂಜಿತ ಬೋಬೆಗೌಡ, ಚಮಕ್‌ಚಂದ್ರ, ಪವನ್ ಸುರೇಶ್, ಶಶಿಧರಕೋಟೆ, ಕಾರ್ತಿಕ್ ವರ್ಣೇಕರ್, ಮನಮೋಹನ್ ರೈ, ರೇಣು ಶಿಕಾರಿ, ಆರಾಧ್ಯ ಶಿವಕುಮಾರ್ ತಾರಾಗಣದಲ್ಲಿದ್ದಾರೆ.

ಈ ಚಿತ್ರದಲ್ಲಿ 4 ಹಾಡುಗಳಿದ್ದು, ಆರೋನ್ ಕಾರ್ತಿಕ್ ವೆಂಕಟೇಶ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿಶೇಷವಾಗಿ ಹಾಡೊಂದಕ್ಕೆ ‘ಸ ರಿ ಪ’ ಎನ್ನುವ ಮೂರೇ ಸ್ವರದಲ್ಲಿ ರಾಗ ಸಂಯೋಜನೆ ಮಾಡಿದ್ದಾರೆ. 2 ಹಾಡಿನ ಸಾಹಿತ್ಯವೂ ಇವರದ್ದೇ. ಉಳಿದಂತೆ ಡಾ.ವಿ.ನಾಗೇಂದ್ರಪ್ರಸಾದ್ ಮತ್ತು ಪ್ರವೀಣ್ ರಾಮಕೃಷ್ಣ ಸಾಹಿತ್ಯ ರಚಿಸಿದ್ದಾರೆ. ಹನುಮಯ್ಯ ಬಂಡಾರು ಮತ್ತು ಆರ್. ಚಂದ್ರಶೇಖರ ಪ್ರಸಾದ್ ಅವರ ಸಂಭಾಷಣೆ, ರವಿ ಸುವರ್ಣ ಅವರ ಛಾಯಾಗ್ರಹಣ, ಶೇಷಾಚಲ ಕುಲಕರ್ಣಿ ಅವರ ಸಂಕಲನ, ಕರಿಯನಂದ ಮತ್ತು ರಘು ಆರ್.ಜೆ. ನೃತ್ಯ ನಿರ್ದೇಶನ, ಜಾನಿ ಮಾಸ್ಟರ್ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಆನ್‌ಲೈನ್ ಶಾಪಿಂಗ್ ಆಗದಿರಲಿ ಶಾಕಿಂಗ್

ಅವಿನಾಶ್ ಬಿ.

ದೀಪಾವಳಿ ಹಬ್ಬದ ಧಾವಂತ ಆನ್‌ಲೈನ್‌ನಲ್ಲಿಯೂ ಜೋರಾಗಿಯೇ ಸಾಗಿದೆ. ಬಣ್ಣ ಬಣ್ಣದ ಜಾಹೀರಾತುಗಳು ಗಮನ ಸೆಳೆಯುತ್ತವೆ. ಕುಳಿತು ಮೊಬೈಲ್‌ನಲ್ಲಿ ಎಲ್ಲವನ್ನೂ ಒಂದೇ ಕ್ಲಿಕ್‌ನಲ್ಲಿ ಖರೀದಿಸಬಹುದೆಂಬ ಉತ್ಸಾಹ. ಮನೆಯಲ್ಲೇ ಕೂತು, ಕೈಬೆರಳಲ್ಲಿ ಜಗತ್ತನ್ನೇ ನೋಡಿ, ಸಾಕಷ್ಟು ಕೊಡುಗೆಗಳು, ರಿಯಾಯಿತಿಗಳೊಂದಿಗೆ ಹಬ್ಬವನ್ನು ಸಂಭ್ರಮಿಸಬಹುದು ಎಂಬ ಮನಃಸ್ಥಿತಿ.

ಇಂಥ ಸಂದರ್ಭದಲ್ಲಿ ಆನ್‌ಲೈನ್ ಶಾಪಿಂಗ್ ಉತ್ಸವದಲ್ಲಿ ಉತ್ಸಾಹದಿಂದ ಖರೀದಿಸುವಾಗ ಎಚ್ಚರಿಕೆ ವಹಿಸದಿದ್ದರೆ ಹೇಗೆ? ಕಾರಣವಿದೆ. ಸ್ನೇಹಿತರೊಬ್ಬರು ಮೊನ್ನೆ ದಸರಾ ಹಬ್ಬದ ಖರೀದಿಗೆ ಪ್ರೇರೇಪಿಸಿದ, ಧುತ್ತನೇ ಬಂದ ಜಾಹೀರಾತು ಲಿಂಕ್ ಕ್ಲಿಕ್ ಮಾಡಿ ₹20 ಸಾವಿರ ಕಳೆದುಕೊಂಡಿದ್ದಾರೆ. ಹೇಗೆ? ಪರಿಚಿತರೇ ಕಳುಹಿಸಿದ, ಹಬ್ಬದ ಕೊಡುಗೆ, ಶೇ 60 ರಿಯಾಯಿತಿ ಸಿಗುತ್ತಿದೆ ಎಂದು ತಮ್ಮಿಷ್ಟದ ಮೊಬೈಲ್ ಫೋನ್ ಖರೀದಿಯ ಸಂದೇಶದಲ್ಲಿದ್ದ ಲಿಂಕ್ ಕ್ಲಿಕ್ ಮಾಡಿದ್ದಾರೆ. ಆಗ ತೆರೆದುಕೊಂಡ ವೆಬ್ ಪುಟದಲ್ಲಿ ಎಲ್ಲ ಮಾಹಿತಿಯನ್ನೂ ತುಂಬಿಸಿ ಸಬ್‌ಮಿಟ್ ಮಾಡಿದ್ದಾರೆ. ಕೆಲವು ಕ್ಷಣಗಳಲ್ಲಿ ಅತ್ತ ಕಡೆಯಿಂದ ಯುವತಿಯೊಬ್ಬಳು ಫೋನ್ ಕರೆ ಮಾಡಿ, 'ಫೋನ್ ಖರೀದಿಯ ರಿಯಾಯಿತಿ ಕೊಡುಗೆ ಪಡೆಯಲು ನಿಮ್ಮ ಮೊಬೈಲ್‌ಗೆ ಬಂದಿರುವ ಒಟಿಪಿ ತಿಳಿಸಿ' ಅಂತ ಹೇಳಿದ್ದಾಳೆ.

ಇವರು ಕೊಟ್ಟಿದ್ದಾರೆ. ಅಷ್ಟೇ. ಕೆಲವೇ ಕ್ಷಣಗಳಲ್ಲಿ ಅವರ ಮೊಬೈಲ್‌ಗೆ ಮತ್ತೊಂದು ಸಂದೇಶ ಬಂದಿದೆ - ನಿಮ್ಮ ಖಾತೆಯಿಂದ ₹20 ಸಾವಿರ ವರ್ಗಾವಣೆಯಾಗಿದೆ!

ಇಂಥದ್ದೇ ಹಲವಾರು ಉದಾಹರಣೆಗಳು ಸಾಕಷ್ಟಿವೆ. ಶುಭಾಶಯ ರೂಪದಲ್ಲಿಯೂ, ಕಂಪನಿ ಗಳು ಕೊಡುಗೆ, 5ಜಿ ಪಡೆಯಿರಿ, ಉಚಿತ ಡೇಟಾ ಪಡೆಯಿರಿ ಎಂಬೆಲ್ಲ ಆಮಿಷವುಳ್ಳ ವೈವಿಧ್ಯಮಯ ಲಿಂಕ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ, ವಿಶೇಷವಾಗಿ ವಾಟ್ಸ್‌ಆ್ಯಪ್‌ನಲ್ಲಿ ಬರುತ್ತಿರುತ್ತವೆ. ಇವುಗಳನ್ನೆಲ್ಲ ಕ್ಲಿಕ್ ಮಾಡದೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ.

ಹೀಗೆ ಎಚ್ಚರ ವಹಿಸಿ

- ಯಾವುದೇ ಅಪರಿಚಿತ ಲಿಂಕ್ ಕ್ಲಿಕ್ ಮಾಡಬೇಡಿ; ಮಾಲ್‌ವೇರ್‌ಗಳು ಆ ಲಿಂಕ್ ಮೂಲಕ ನಿಮ್ಮ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಆಗುವ ಅಪಾಯವಿದೆ.
- ಸಾರ್ವಜನಿಕ ವೈಫೈ ಬಳಸಿ ಆನ್‌ಲೈನ್ ಹಣಕಾಸು ವಹಿವಾಟು ಮಾಡದಿರಿ
- ಮೊಬೈಲ್ ತಂತ್ರಾಂಶ ಅಪ್‌ಡೇಟ್ ಬಂದರೆ ಅಳವಡಿಸಿಕೊಳ್ಳಲು ನಿರ್ಲಕ್ಷ್ಯ ಮಾಡದಿರಿ
- ಯಾರೇ ಕೇಳಿದರೂ ಒಟಿಪಿ ಹಂಚಿಕೊಳ್ಳಬೇಡಿ
- ಮೊಬೈಲ್ ಫೋನ್ ಅನ್ನು ಮಕ್ಕಳ ಕೈಗೆ ಕೊಡಬೇಡಿ
- ಸಾರ್ವಜನಿಕ ಸೈಬರ್ ಕೇಂದ್ರಗಳಲ್ಲಿರುವ ಕಂಪ್ಯೂಟರ್ ಮೂಲಕ ಹಣಕಾಸು ವಹಿವಾಟು ಮಾಡದಿರಿ
- ಆಕರ್ಷಕ ಕೊಡುಗೆಯ ಬಗ್ಗೆ ಸ್ನೇಹಿತರೇ ಕಳುಹಿಸಿದರೂ ಲಿಂಕ್ ಕ್ಲಿಕ್ ಮಾಡುವ ಮುನ್ನ ಅವರಲ್ಲೇ ಪರಿಶೀಲಿಸಿಕೊಳ್ಳಿ.
- ಡೆಬಿಟ್/ಕ್ರೆಡಿಟ್ ಕಾರ್ಡ್ ಮಾಹಿತಿಯನ್ನು ಆನ್‌ಲೈನ್ ಶಾಪಿಂಗ್ ತಾಣಗಳಲ್ಲಿ ಸೇವ್ ಆಗುವಂತೆ ಇರಿಸಬೇಡಿ
- ಡೆಬಿಟ್/ಕ್ರೆಡಿಟ್ ಕಾರ್ಡ್‌ನ ಸಿವಿವಿ (ಸಂಖ್ಯೆ)ಯನ್ನು ಯಾರಿಗೂ ಹೇಳಬೇಡಿ
- ಆ್ಯಪ್ ಸ್ಟೋರ್‌ನಿಂದ ಮಾತ್ರ ಯಾವುದೇ ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ

ಕಥಕ್ ಲೋಕದ ಹೊಸ ಮಿಂಚು...

ಮೀನಾಕ್ಷಿ ಕಾಮತ್

ಮಂಜುಶ್ರೀ ಎಂ. ಕಡಕೋಳ

ಓದಿದ್ದು ಮಾರ್ಕೆಟಿಂಗ್ ಅಂಡ್ ಕಮ್ಯುನಿಕೇಷನ್. ವೃತ್ತಿ ಡ್ರೋನ್ ಉತ್ಪಾದನೆ ಸಂಸ್ಥೆಯಲ್ಲಿ ವ್ಯವಸ್ಥಾಪಕ ನಿರ್ದೇಶಕಿ. ಆದರೆ, ಚಿತ್ತ ಮಾತ್ರ ಸದಾ ಕಥಕ್‌ನತ್ತ. ಇದು ನಗರದ ಯುವ ಕಥಕ್ ಕಲಾವಿದೆ ಮೀನಾಕ್ಷಿ ಜೆ. ಕಾಮತ್ ಅವರ ಸಂಕ್ಷಿಪ್ತ ಪರಿಚಯ.

ಅಪ್ಪ ಖ್ಯಾತ ವಕೀಲ ಕೆ.ಜೆ. ಕಾಮತ್, ಅಮ್ಮ ವೀಣಾ ವಾದಕಿ ಶ್ರೀದೇವಿ ಕಾಮತ್ ಅವರ ಮಾರ್ಗದರ್ಶನದಲ್ಲಿ ಬಾಲ್ಯದಲ್ಲೇ ಕಲಾ ಪ್ರಪಂಚದ ಆಗುಹೋಗುಗಳನ್ನು ನೋಡುತ್ತಿದ್ದ ಮೀನಾಕ್ಷಿ ಅವರಿಗೆ ಮುಂದೊಂದು ದಿನ ವೃತ್ತಿಯ ಭಾಗವಾಗಿಯೇ ಕಥಕ್ ನೃತ್ಯ ಕಲಿಯುವ ಕಲ್ಪನೆ ಇರಲಿಲ್ಲ. ಸ್ನಾತಕೋತ್ತರ ಪದವಿ ವೇಳೆಗೆ ಮಾರ್ಕೆಟಿಂಗ್ ಮತ್ತು ಕಮ್ಯುನಿಕೇಷನ್‌ನಲ್ಲಿ ಸಂವಹನದ ಅಗತ್ಯ ಮನಗಂಡ ಅವರು ತಮ್ಮ ಯೋಜನೆಗಳ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು ಆಯ್ಕೆ ಮಾಡಿಕೊಂಡಿದ್ದು ಕಥಕ್ ನೃತ್ಯಪ್ರಕಾರವನ್ನು.

ಅಮ್ಮ ಮತ್ತು ಅಕ್ಕ ವೀಣಾವಾದಕರಾಗಿದ್ದರೆ, ಮತ್ತೊಬ್ಬ ಅಕ್ಕ ಭರತನಾಟ್ಯ ಕಲಾವಿದೆ. ಅವರನ್ನು ನೋಡುತ್ತಲೇ ಕಲೆಯ ಬಗ್ಗೆ ಮೋಹ ಬೆಳೆಸಿಕೊಂಡ ಮೀನಾಕ್ಷಿ ಉತ್ತಮ ಕೊಳಲು ವಾದಕಿಯೂ ಹೌದು.

ಅಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಅಮ್ಮ ಮತ್ತು ಅಕ್ಕನನ್ನು ಕರೆಸಿಕೊಂಡು ವೀಣಾ ವಾದನವನ್ನು ಆಸ್ವಾದಿಸಿದ್ದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವ ಅವರು ಒಂಬತ್ತು ವರ್ಷಗಳಿಂದ ಕಥಕ್ ನೃತ್ಯಾಭಾಸದಲ್ಲಿ ತೊಡಗಿಕೊಂಡಿದ್ದಾರೆ.

ನೃತ್ಯ ಎನ್ನುವುದು ನಿರಂತರ ಕಲಿಕೆಯ ಪ್ರಕ್ರಿಯೆ. ಆ ಪಯಣಕ್ಕೆ ಕೊನೆ ಎಂಬುದಿಲ್ಲ ಎನ್ನುವ ಯುವ ಕಥಕ್ ಕಲಾವಿದೆ ಮೀನಾಕ್ಷಿ ಜೆ. ಕಾಮತ್ ಅವರು ಆ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳನ್ನು ಪ್ರಯೋಗಿಸುವ ಹಂಬಲದಲ್ಲಿದ್ದಾರೆ.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಪದವಿ ಹಂತದಲ್ಲೇ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದ ಅವರು ಆರಂಭದ ದಿನಗಳಲ್ಲಿ ಖ್ಯಾತ ಕಥಕ್ ನೃತ್ಯಗಾರ್ತಿ ಮಾಯಾ ರಾವ್ ಅವರ ಬಳಿ ಕಥಕ್ ಕಲಿತರು. ಬಳಿಕ ನಂದಿನಿ ಕೆ. ಮೆಹ್ತಾ ಮತ್ತು ಕೆ. ಮುರಳಿ ಮೋಹನ್ ಅವರ ಬಳಿ ನೃತ್ಯಾಭ್ಯಾಸ ಮುಂದುವರಿಸಿದರು. ಉನ್ನತ ಶಿಕ್ಷಣ ಕ್ಕಾಗಿ ಬ್ರಿಟನ್‌ನ ಆಕ್ಸ್ ಫರ್ಡ್ ಬ್ರೂಕ್ಸ್ ವಿಶ್ವವಿದ್ಯಾಲಯಕ್ಕೆ ತೆರಳಿದಾಗಲೂ ಕಥಕ್ ಬಗೆಗಿನ ಮೋಹ ಬಿಟ್ಟವರಲ್ಲ. ಅಲ್ಲಿನ ಹ್ಯಾರೊ ನಗರದಲ್ಲಿ ಸುಜಾತಾ ಬ್ಯಾನರ್ಜಿ ಅವರ ಬಳಿ ನೃತ್ಯಾಭ್ಯಾಸ ಮುಂದುವರಿಸಿದರು.

'ನೃತ್ಯ ಎಂಬುದು ನಿತ್ಯ ಕಲಿಕೆಯ ಪ್ರಕ್ರಿಯೆ' ಎಂದು ವಿನಮ್ರವಾಗಿ ನುಡಿಯುವ ಮೀನಾಕ್ಷಿ, ರಂಗಪ್ರವೇಶ ಮಾಡಿದ್ದೂ ವಿಶೇಷ ಸಂದರ್ಭದಲ್ಲಿ. 2022ರ ಮಾರ್ಚ್ 23ರಂದು ತಾತಾ ದಿ. ಮಾಧವ್ ಕಾಮತ್ ಅವರ ಜನ್ಮದಿನದ ಪ್ರಯುಕ್ತ ರಂಗ ಪ್ರವೇಶ ಮಾಡಿದರು. ಅದಕ್ಕಾಗಿ ಅಲ್ಪಾವಧಿಯಲ್ಲೇ ಸತತ ಅಭ್ಯಾಸ ಮಾಡಿ, ಸುಮಾರು ಒಂದು ಸಾವಿರ ಪ್ರೇಕ್ಷಕರ ಮುಂದೆ 'ತ್ರಿಕಾಲ' ಪರಿಕಲ್ಪನೆಯ ನೃತ್ಯ ಪ್ರಸ್ತುತಪಡಿಸಿ ಶಹಬ್ಬಾಸ್ ಗಿರಿ ಪಡೆದುಕೊಂಡರು. ತಮ್ಮ ನೃತ್ಯಕ್ಕೆ ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ಆಶೀರ್ವಾದ ದೊರೆತ ಬಗ್ಗೆ ಸಂತಸ ವ್ಯಕ್ತಪಡಿಸುವ ಮೀನಾಕ್ಷಿ ಇದೆಲ್ಲಾ ಸಾಧ್ಯವಾದದ್ದು ಅಪ್ಪ–ಅಮ್ಮನಿಂದಾಗಿ ಎನ್ನುತ್ತಾರೆ.

ದಕ್ಷಿಣ ಭಾರತದ ವಿವಿಧ ಐತಿಹಾಸಿಕ ದೇವಾಲಯಗಳಲ್ಲಿ ಮತ್ತು ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ನೃತ್ಯ ಪ್ರಸ್ತುತಪಡಿಸಿರುವ ಮೀನಾಕ್ಷಿ, ಯಾವುದೇ ಭಾರತೀಯ ನೃತ್ಯಪ್ರಕಾರ ಕಲಿಯಲು ತಾಳ್ಮೆ ಅಗತ್ಯ. ಇಂದು ದಿಢೀರ್ ಅಂತ ಕಲಿತು ನಾಳೆಯೇ ಪ್ರದರ್ಶನ ನೀಡಲಾಗದು ಎನ್ನುತ್ತಾರೆ. ನಮ್ಮ ಸಾಂಸ್ಕೃತಿಕ ಪರಂಪರೆ, ಮೌಲ್ಯಗಳನ್ನು ಸಂರಕ್ಷಿಸಬೇಕಾದದ್ದು ಅಗತ್ಯ ಎನ್ನುವ ಅವರು, ಆ ಹಿನ್ನೆಲೆಯಲ್ಲಿ ಆಕ್ಸ್‌ಫರ್ಡ್ ವಿ.ವಿಯ ಸ್ನಾತಕೋತ್ತರ ಪದವಿಯಲ್ಲಿ 'ಆಧ್ಯಾತ್ಮಿಕ ಪ್ರವಾಸೋದ್ಯಮ' ಕುರಿತು ಪ್ರಬಂಧ ಸಲ್ಲಿಸಿದ್ದಾರೆ.

'ಅಮ್ಮ ಒಳಜಗತ್ತು ಪರಿಚಯಿಸಿದರೆ, ಅಪ್ಪ ಹೊರ ಜಗತ್ತು ಪರಿಚಯಿಸಿದರು. ಜಾತಿ– ಧರ್ಮ– ಪಂಥಗಳಾಚೆ ನಾವೆಲ್ಲ ಒಂದೇ ಎಂಬುದನ್ನು ಮನದಟ್ಟು ಮಾಡಿಸಿದರು. ಕ್ರಿಸ್ಮಸ್ ವೇಳೆ ಒಮ್ಮೆ ವ್ಯಾಟಿಕನ್‌ಗೆ ಹೋಗುವ ಅವಕಾಶ ಸಿಕ್ಕಿತ್ತು. ಅಲ್ಲಿಗೆ ಹೋಗುವ ಮುನ್ನ ಅಪ್ಪ ಅಲ್ಲಿನ ಪೋಪ್ ಅವರಿಗೆ ಪತ್ರ ಬರೆದಿದ್ದರು. ಅದಕ್ಕೆ ಪ್ರತಿಯಾಗಿ ಪೋಪ್ ಅವರಿಂದ ನಮಗೆ ಆಹ್ವಾನ ಸಿಕ್ಕಾಗ ಆನಂದಕ್ಕೆ ಪಾರವೇ ಇರಲಿಲ್ಲ. ರಾಮ, ಕೃಷ್ಣ, ಏಸು, ಅಲ್ಲಾ ಎಲ್ಲರೂ ಒಂದೇ ಎಂಬುದನ್ನು ಅಪ್ಪ ಸೂಕ್ಷ್ಮವಾಗಿ ಮನದಟ್ಟು ಮಾಡಿಸಿದ್ದರು. ಬಾಲ್ಯದಲ್ಲೇ ಮನೆಗೆ ಬರುತ್ತಿದ್ದ ಖ್ಯಾತ ಕಲಾವಿದರ ಒಡನಾಟ ನಮಗೆಂದೂ ವಿಶೇಷ ಅನಿಸಲಿಲ್ಲ. ಅದೊಂದು ಸಹಜವೆಂಬಂತೆ ಬೆಳೆಸಿದ್ದರು. ಅಪ್ಪನ ಕಚೇರಿಗೆ ಒಮ್ಮೆ ಖ್ಯಾತಕಲಾವಿದ ಎಂ.ಎಫ್. ಹುಸೇನ್ ಬಂದಿದ್ದರು. ಆಗ ಕಚೇರಿಯಲ್ಲಿದ್ದ ಪುಸ್ತಕವೊಂದರಲ್ಲಿ ಅನೇಕ ಸ್ಕೆಚ್‌ಗಳನ್ನು ಮಾಡಿದ್ದರು. ಅದನ್ನು ಬೆರಗುಗಣ್ಣಿನಿಂದ ನೋಡಿದ್ದ ನನಗೆ ಸರಳತೆ ಎಂದರೆ ಹೀಗಿರಬೇಕು ಎಂದೆನಿಸಿತ್ತು' ಎಂದು ನೆನಪಿಸಿಕೊಳ್ಳುತ್ತಾರೆ ಅವರು.

ಉಡುಪಿಯ ನೀಲಾವರದಲ್ಲಿನ ಗೋಶಾಲೆಯಲ್ಲಿನ ವಾತಾವರಣದ ಹಿನ್ನೆಲೆಯಲ್ಲಿ ನೃತ್ಯರೂಪಕದ ಸಿದ್ಧತೆಯಲ್ಲಿರುವ ಮೀನಾಕ್ಷಿ, ಎರಡು ಬಾರಿ ವಿಶ್ವಪರ್ಯಟನೆಯನ್ನೂ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ವೃತ್ತಿಯ ಜತೆಗೆ ಕಥಕ್‌ನಲ್ಲಿ ಹೊಸ ಸಾಧ್ಯತೆಗಳನ್ನು ಪ್ರಯೋಗಿಸಬೇಕೆಂಬ ಹಂಬಲ ಮೀನಾಕ್ಷಿ ಕಾಮತ್ ಅವರದ್ದು.

ಜನಮೆಚ್ಚಿದ 'ವಸುಂಧರಾದೇವಿ' ಟೀಸರ್

ಧರ್ಮ ಕೀರ್ತಿರಾಜ್ ಹಾಗೂ ಸೋನುಗೌಡ ನಾಯಕ - ನಾಯಕಿಯಾಗಿ ನಟಿಸಿರುವ 'ವಸುಂಧರಾ ದೇವಿ' ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಟೀಸರ್‌ಗೆ ಮೆಚ್ಚುಗೆ ಬಂದಿದೆ. ಈ ಸಂತೋಷವನ್ನು ಚಿತ್ರತಂಡ ಮಾಧ್ಯಮಗಳ ಮುಂದೆ ಹಂಚಿಕೊಂಡರು

ನಿರ್ದೇಶಕ ಮಹೇಶ್ ಚಿನ್ಮಯ್ ಮಾತನಾಡಿ, 'ಇದು ನನ್ನ ನಿರ್ದೇಶನದ ನಾಲ್ಕನೇ ಚಿತ್ರ. ಧರ್ಮ ಕೀರ್ತಿರಾಜ್ ಅವರೊಡನೆ ಇದು ಎರಡನೇ ಚಿತ್ರ' ಎಂದರು.

ಸಿನಿ ಹನಿ

ಕಥೆಯಲ್ಲೇನಿದೆ?

'ಮುಖ್ಯಮಂತ್ರಿಗಳ ಮಗಳು ತಾನು ಮುಖ್ಯಮಂತ್ರಿ ಆಗಬೇಕೆಂಬ ಆಸೆಯಿಂದ ಮುಖ್ಯಮಂತ್ರಿ ಆಗುತ್ತಾಳೆ. ನಂತರ ಆಕೆಯ ಕೊಲೆಯಾಗುತ್ತದೆ. ಆ ಕೊಲೆ ಮಾಡಿದ್ದು ಯಾರು? ಎಂದು ಕಂಡು ಹಿಡಿಯಲು ತನಿಖಾಧಿಕಾರಿ ಬರುತ್ತಾರೆ. ತನಿಖೆ ಹೇಗೆ ನಡೆಯುತ್ತದೆ ಎಂಬುದನ್ನು ಚಿತ್ರದಲ್ಲಿ ನೋಡಬೇಕು. ತನಿಖಾಧಿಕಾರಿ ಪಾತ್ರದಲ್ಲಿ(ತನಿಖಾಧಿಕಾರಿ) ಧರ್ಮ ಕೀರ್ತಿರಾಜ್ ಅಭಿನಯಿಸಿದ್ದಾರೆ. ವಸುಂಧರಾದೇವಿ ಪಾತ್ರದಲ್ಲಿ ಸೋನು ಗೌಡ ನಟಿಸಿದ್ದಾರೆ' ಎಂದರು ಮಹೇಶ್.

ಗೋವಿಂದೇಗೌಡ, ರೂಪೇಶ್, ಪೂಜಾ, ಸೆವೆನ್ ರಾಜ್ ತಾರಾಬಳಗದಲ್ಲಿದ್ದಾರೆ. ಚಿತ್ರ ಮುಂದಿನ ತಿಂಗಳು ತೆರೆಗೆ ಬರುವ ಸಾಧ್ಯತೆಯಿದೆ ಎಂದು ನಿರ್ದೇಶಕ ಮಹೇಶ್ ಚಿನ್ಮಯ್ ತಿಳಿಸಿದರು. ಅಶೋಕ್ ಕವೇಟ ನಿರ್ಮಾಪಕರು. ಸಂಗೀತ ನಿರ್ದೇಶನ ವಿನು ಮನಸು ಅವರದ್ದು.

'ಕಾಂತಾರಾ' ಮೆಚ್ಚಿದ ಅನುಷ್ಕಾ, ಕಂಗನಾ

ನಟ ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಕಾಂತಾರ' ಸಿನಿಮಾಕ್ಕೆ ಕನ್ನಡ ಸೇರಿದಂತೆ ತೆಲುಗು, ತಮಿಳು, ಹಿಂದಿಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಾಂತಾರ ಸಿನಿಮಾ ನೂರಾರು ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಾಣುತ್ತಿದ್ದು, ಪರ ಭಾಷಾ ನಟ –ನಟಿಯರು ಸೇರಿದಂತೆ ಪ್ರೇಕ್ಷಕರು ಮೆಚ್ಚಿಕೊಂಡಿದ್ದಾರೆ.



ಇದೀಗ ಬಾಲಿವುಡ್ ನಟಿ ಕಂಗನಾ ರನೌತ್ ಅವರು 'ಕಾಂತಾರ' ಚಿತ್ರದ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದ್ದಾರೆ.

'ನಾನು ಕುಟುಂಬದವರ ಜತೆ ಕಾಂತಾರ ನೋಡಿ ಬಂದಿದ್ದೇನೆ. ಈಗಲೂ ನಾನು ಶೇಕ್ ಆಗುತ್ತಿದ್ದೇನೆ. ಎಂತಹ ಸ್ಫೋಟಕ ಅನುಭವ. ರಿಷಬ್ ಶೆಟ್ಟಿ ಅವರೇ ನಿಮಗೆ ಹ್ಯಾಟ್ಸ್ ಆಫ್. ಬರವಣಿಗೆ, ನಿರ್ದೇಶನ, ನಟನೆ, ಆ್ಯಕ್ಷನ್ ಎಲ್ಲವೂ ಬ್ರಿಲಿಯಂಟ್. ನಂಬೋಕೆ ಸಾಧ್ಯವಾಗುತ್ತಿಲ್ಲ' ಎಂದು ಕಂಗನಾ ವಿಡಿಯೊದಲ್ಲಿ ವಿವರಿಸಿದ್ದಾರೆ.

'ಸಂಪ್ರದಾಯ, ಜಾನಪದ ವಿಚಾರ, ಸ್ಥಳೀಯ ಸಮಸ್ಯೆಗಳನ್ನು ಸಿನಿಮಾದಲ್ಲಿ ಹದವಾಗಿ ಬೆರೆಸಲಾಗಿದೆ. ಎಂಥ ಸುಂದರ ಛಾಯಾಗ್ರಹಣ, ಸಿನಿಮಾ ಎಂದರೆ ಇದು. ಒಂದು ವಾರಗಳ ಕಾಲ ಈ ಹ್ಯಾಂಗೋವರ್‌ನಿಂದ ಹೊರಬರಲು ಸಾಧ್ಯವಿಲ್ಲ' ಎಂದು ಕಂಗನಾ ಹೇಳಿಕೊಂಡಿದ್ದಾರೆ.

ತೆಲುಗಿನ ಸ್ಟಾರ್ ನಟಿ, ಕನ್ನಡತಿ ಅನುಷ್ಕಾ ಶೆಟ್ಟಿ ಅವರಿಗೂ 'ಕಾಂತಾರ' ಸಖತ್ ಇಷ್ಟವಾಗಿದೆ. ಸಿನಿಮಾ ವೀಕ್ಷಿಸಿದ ಬಳಿಕ ಅವರು ಫೇಸ್‌ಬುಕ್‌ನಲ್ಲಿ ಅಭಿಪ್ರಾಯ ತಿಳಿಸಿದ್ದಾರೆ.

'ಕಾಂತಾರ' ಸಿನಿಮಾ ನೋಡಿದೆ. ಪೂರ್ತಿಯಾಗಿ ಈ ಚಿತ್ರ ನನಗೆ ಇಷ್ಟ ಆಯ್ತು. ಪ್ರತಿಯೊಬ್ಬ ಕಲಾವಿದರು, ತಂತ್ರಜ್ಞರು, ನಿರ್ಮಾಪಕರು ಸೇರಿ ಇಡೀ ತಂಡಕ್ಕೆ ಅಭಿನಂದನೆಗಳು. ಈ ಅನುಭವ ನೀಡಿದ್ದಕ್ಕಾಗಿ ಧನ್ಯವಾದಗಳು. ರಿಷಬ್ ಶೆಟ್ಟಿ ನೀವು ಅಮೇಜಿಂಗ್. ಎಲ್ಲವೂ ಈ ಸಿನಿಮಾವನ್ನು ಚಿತ್ರಮಂದಿರದಲ್ಲೇ ನೋಡಿ' ಎಂದು ಅನುಷ್ಕಾ ಕೊಂಡಾಡಿದ್ದಾರೆ.

'ಕಾಂತಾರ', ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಘರ್ಷದ ಕಥೆಯಾಗಿದ್ದು, ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ರಿಷಬ್ ಶೆಟ್ಟಿ ಜೊತೆಗೆ ಸಪ್ತಮಿ ಗೌಡ, ಕಿಶೋರ್, ಅಚ್ಯುತ್ ಕುಮಾರ್, ಪ್ರಮೋದ್ ಶೆಟ್ಟಿ ಸೇರಿದಂತೆ ಹಲವು ಪ್ರತಿಭಾವಂತ ಕಲಾವಿದರು ನಟಿಸಿದ್ದಾರೆ. ಹೊಂಬಾಳೆ ಫಿಲಂಸ್ ಚಿತ್ರವನ್ನು ನಿರ್ಮಿಸಿದೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಅವರ ಸಂಗೀತ ಮತ್ತು ಅರವಿಂದ್ ಕಶ್ಯಪ್ ಛಾಯಾಗ್ರಹಣವಿದೆ.

ಸೆಂಚುರಿ ಸ್ಟಾರ್ 125ನೇ ಸಿನಿಮಾ ಡಿ.23ಕ್ಕೆ

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ನಟ ಶಿವರಾಜ್ ಕುಮಾರ್ ಅವರ 125ನೇ ಚಿತ್ರ 'ವೇದ' ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ.

ಡಿ.23ರಂದು 'ವೇದ' ಸಿನಿಮಾ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಿಲೀಸ್ ಆಗಲಿದ್ದು, 'ರಣಬೇಟೆಗಾರನ ರಕ್ತಸಿಕ್ತ ಅಧ್ಯಾಯ' ಎಂಬ ಶೀರ್ಷಿಕೆ ನೀಡಿ ಹೊಸ ಪೋಸ್ಟರ್ ಒಂದನ್ನು ಶಿವರಾಜ್‌ಕುಮಾರ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದಾರೆ.

ಎ.ಹರ್ಷ ನಿರ್ದೇಶನದಲ್ಲಿ ಶಿವರಾಜ್ ಕುಮಾರ್ ಅಭಿನಯಿಸುತ್ತಿರುವ 4ನೇ ಚಿತ್ರ ಇದಾಗಿದೆ. ಈ ಹಿಂದೆ ಹರ್ಷ ನಿರ್ದೇಶನದ 'ವಜ್ರಕಾಯ', 'ಭಜರಂಗಿ', 'ಭಜರಂಗಿ–2' ಚಿತ್ರದಲ್ಲಿ ಶಿವರಾಜ್‌ಕುಮಾರ್ ನಟಿಸಿದ್ದರು. 'ದಿ ಬ್ರೂಟಲ್ 1960' ಎಂಬ ಟ್ಯಾಗ್‌ಲೈನ್ ಚಿತ್ರಕ್ಕಿದ್ದು, 1960ರ ದಶಕದಲ್ಲಿ ನಡೆಯುವ ಕಥಾವಸ್ತುವಿನ ಸುತ್ತ ಹೆಣೆದ ಕಥೆ ಇದಾಗಿದೆ.

1986ರಲ್ಲಿ 'ಆನಂದ್' ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ಶಿವರಾಜ್‌ಕುಮಾರ್ ಅವರು ತಮ್ಮ ಈ 36 ವರ್ಷದ ಸುದೀರ್ಘ ಸಿನಿಪಯಣದಲ್ಲಿ 125ನೇ ಸಿನಿಮಾದ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿರುವ ಸೆಂಚುರಿ ಸ್ಟಾರ್, ಸದ್ಯ ಯೋಗರಾಜ್ ಭಟ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಕರಟಕ ದಮನಕ' ಹಾಗೂ 'ಬೀರ್ ಬಲ್', 'ಓಲ್ಡ್ ಮಾಂಕ್' ಸಿನಿಮಾ ಖ್ಯಾತಿಯ ನಟ ಶ್ರೀನಿ ಆ್ಯಕ್ಷನ್ ಕಟ್ ಹೇಳುತ್ತಿರುವ 'ಘೋಸ್ಟ್' ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ.

ಯಕ್ಷಗಾನ ವೇಷದಲ್ಲಿ ರಮೇಶ್ ಮಿಂಚಿಂಗ್

ಈ ವರ್ಷದ ಕಾರಂತ ಹುಟ್ಟೂರ ಪ್ರಶಸ್ತಿಗೆ ಭಾಜನರಾದ ಪ್ರಸಿದ್ಧ ನಟ, ನಿರ್ದೇಶಕ ರಮೇಶ್ ಅರವಿಂದ್ ಯಕ್ಷಗಾನ ವೇಷ ಧರಿಸಿರುವ ಚಿತ್ರವೀಗ ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯಾಗುತ್ತಿದೆ.

'ಮೊತ್ತ ಮೊದಲ ಬಾರಿಗೆ ಯಕ್ಷಗಾನದ ವೇಷ ತೊಟ್ಟ ನಾನೀಗ ಎಂಟಡಿ, ನೂರೈವತ್ತು ಕೆ.ಜಿ ಬೆಳೆದವನಂತೆ ಅನಿಸುತ್ತಿದೆ. ನಾನಿವತ್ತು ಬಹಳವೇ ಶಕ್ತಿ ಶಾಲಿ, ಎದುರಿಗೇನಾದರೂ ರಾಕ್ಷಸರು ಬಂದರೆ ಹೊಡೆದುರುಳಿಸಿ ಬಿಡುತ್ತೇನೆ ಅನ್ನುವಷ್ಟು ಆತ್ಮವಿಶ್ವಾಸ ಬೆಳೆಯುತ್ತಿದೆ' ಎಂದು ರಮೇಶ್ ಅರವಿಂದ್ ಹೇಳಿದ್ದಾರೆ.

ಉಡುಪಿಯ ಜನಪ್ರಿಯ ಛಾಯಾಗ್ರಾಹಕ ಫೋಕಸ್ ರಾಘು ಯಕ್ಷಗಾನದ ವೇಷದಲ್ಲಿರುವ ರಮೇಶ್ ಅರವಿಂದ್ ಅವರನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ.

ಬ್ರಹ್ಮಾವರ ತಾಲ್ಲೂಕಿನ ಕೋಟ ಗಿಳಿಯಾರು ಶಾಂಭವಿ ಶಾಲೆಯ ಆವರಣದಲ್ಲಿ ಡಾ.ಶಿವರಾಮ ಕಾರಂತ ಟ್ರಸ್ಟ್, ಕೋಟ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ ಪ್ರತಿಷ್ಠಾನ ಹಾಗೂ ಕೋಟತಟ್ಟು ಪಂಚಾಯಿತಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ರಮೇಶ್ ಅರವಿಂದ್‌ಗೆ ಪ್ರಶಸ್ತಿ ಪ್ರದಾನ ಮಾಡಿದ್ದರು.

ವೇಷದ ಕುರಿತು ಪ್ರತಿಕ್ರಿಯಿಸಿರುವ ರಮೇಶ್, 'ಮಂಗಳೂರಿನಿಂದ ಕಾರವಾರದವರೆಗೂ, ಕನ್ನಡ ಕರಾವಳಿ ಯಾದ್ಯಂತ ಅನೇಕ ಸಿನಿಮಾಗಳನ್ನು ಮಾಡಿದ್ದೇನೆ. ಆ ಹೊತ್ತಿಗೆಲ್ಲ, ಯಕ್ಷಗಾನವನ್ನು ಗಮನಿಸುತ್ತಿದ್ದೆ. ಆರೇಳು ಗಂಟೆ ಏರು ಧ್ವನಿಯಲ್ಲಿ ಹಾಡುವ ಭಾಗವತರ ಶಕ್ತಿಯ ಬಗ್ಗೆ ಆಶ್ಚರ್ಯವಾಗುತ್ತದೆ. ಕಲಾವಿದರನ್ನು ಕಂಡು ನಾನೂ ಒಮ್ಮೆ ಯಕ್ಷಗಾನದ ಬಣ್ಣ ಹಚ್ಚಬೇಕೆಂಬ ಆಸೆ ಇತ್ತು' ಎಂದು ರಮೇಶ್ ಸ್ಥಳೀಯ ಸುದ್ದಿ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಬಣ್ಣ ಹಚ್ಚಲಿದ್ದಾರೆ ನಿರ್ದೇಶಕ ಜೋಗಿ ಪ್ರೇಮ್

ನಿರ್ದೇಶಕ, ನಟ ಜೋಗಿ ಪ್ರೇಮ್ ಅವರು ಬಣ್ಣ ಹಚ್ಚಲು ಮುಂದಾಗಿದ್ದಾರೆ. ಚಿತ್ರದ ಹೆಸರು ಇನ್ನಷ್ಟೇ ಗೊತ್ತಾಗಬೇಕಿದೆ. ಎಂ. ಶಶಿಧರ್ ಅವರು ಈ ಚಿತ್ರದ ನಿರ್ದೇಶಕರು. ಬಹಳ ವರ್ಷಗಳ ನಂತರ ಪ್ರೇಮ್ ಅವರೇ ಮತ್ತೆ ನಾಯಕ ನಟನಾಗಲು ತಯಾರಿ ನಡೆಸಿದ್ದಾರೆ.

ಚಿತ್ರದಲ್ಲಿ ಸೈಕಾಲಾಜಿಕಲ್ ಥ್ರಿಲ್ಲರ್ ಕತೆ ಇರಲಿದೆ. ಪ್ಯಾನ್ ಇಂಡಿಯಾ ಚಿತ್ರವಾಗಿರಲಿದೆ. ಬೇರೆ ಭಾಷೆಗಳ ತಾರೆಯರೂ ಜೊತೆಗಿರಲಿದ್ದಾರೆ. ಅ. 22ಕ್ಕೆ ಪ್ರೇಮ್ ಹುಟ್ಟು ಹಬ್ಬದ ದಿನದಂದು ಚಿತ್ರದ ಫಸ್ಟ್ ಲುಕ್ ಬಿಡಲು ಚಿತ್ರತಂಡ ತೀರ್ಮಾನಿಸಿದೆ.

ಯಾರು ಶಶಿಧರ್?

ಮೈಸೂರಿನವರಾದ 28 ವರ್ಷದ ಎಂ. ಶಶಿಧರ್ ಅವರು ಫಿಲ್ಮ್ ಮೇಕಿಂಗ್‌ನಲ್ಲಿ ಎಂಎಸ್‌ಸಿ ಪದವೀಧರ. VFX ನಲ್ಲಿ ತುಂಬ ಪರಿಣತ. ಈಗಾಗಲೇ ಎಲ್ಲಾ ಭಾಷೆಗೆ ಡಬ್ ಆಗಿ, ಸಾಯಿ ಕುಮಾರ್, ಸಂಪತ್ ರಾಜ್, ಅರುಣ್ ಸಾಗರ್, ದೇವಗಿಲ್, ರಾಹುಲ್ ದೇವ್ ಅಂತಹ ತಾರಾಬಳಗವಿರುವ, ಬಿಡುಗಡೆಗೆ ಸಿದ್ಧವಾಗಿರುವ 'ಫಾರ್ಗಾ' ಚಿತ್ರವನ್ನು ತುಂಬ ಅಚ್ಚುಕಟ್ಟಾಗಿ ಚಿತ್ರೀಕರಿಸಿದ್ದಾರೆ, ಅಲ್ಲದೆ 'ಫಾರ್ಗಾ' ಚಿತ್ರದ ಮೂಲಕ ಅಶ್ವಿನಿ ರಾಮ್ ಪ್ರಸಾದ್ ಅವರ ಮಗನಾದ ಅರುಣ್ ರಾಮ್ ಪ್ರಸಾದ್ ಅವರನ್ನು ಮೊದಲ ಬಾರಿಗೆ ಬೆಳ್ಳಿ ಪರದೆ ಮೇಲೆ ಪರಿಚಯಿಸಿದ್ದಾರೆ.

ಪ್ರೇಮ್ ಅವರ ಹೊಸ ಚಿತ್ರಕ್ಕೆ ಎ2 ಫಿಲ್ಮ್ಸ್ ಹಾಗೂ ಪ್ರೇಮ್ ಡ್ರೀಮ್ಸ್ ಜಂಟಿಯಾಗಿ ಬಂಡವಾಳ ಹೂಡಿವೆ.

ಆ್ಯಕ್ಷನ್ ಪ್ರಿನ್ಸ್ ಇದೀಗ 'KD'

'ಏಕ್ ಲವ್ ಯಾ' ಸಿನಿಮಾ ಬಳಿಕ ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಜೊತೆಗೆ ಹೊಸ ಪ್ರೊಜೆಕ್ಟ್ ಒಂದನ್ನು ಕಳೆದ ಏಪ್ರಿಲ್‌ನಲ್ಲೇ ನಿರ್ದೇಶಕ 'ಜೋಗಿ' ಪ್ರೇಮ್ ಕೈಗೆತ್ತಿಕೊಂಡಿದ್ದರು. ಇದೀಗ ಈ ಸಿನಿಮಾದ ಟೈಟಲ್ ಘೋಷಣೆಯಾಗಿದ್ದು, ಅದ್ದೂರಿಯಾಗಿ ನಿರ್ಮಾಣವಾಗಲಿರುವ ಸಿನಿಮಾಗೆ 'ಕೆಡಿ'(ಕಾಳಿದಾಸ) ಎಂಬ ಶೀರ್ಷಿಕೆ ಇಡಲಾಗಿದೆ.

ಪ್ರೇಮ್ ಹಾಗೂ ಧ್ರುವ ಸರ್ಜಾ

ಕೆಡಿ ಪೋಸ್ಟರ್

ಕೆ.ಜಿ.ಎಫ್. ಎರಡನೇ ಭಾಗದಲ್ಲಿ 'ಅಧೀರ'ನಾಗಿ ತೆರೆ ಮೇಲೆ ಮಿಂಚಿದ್ದ ಬಾಲಿವುಡ್‌ನ ನಟ ಸಂಜಯ್ ದತ್, 'ಕೆಡಿ' ಸಿನಿಮಾದಲ್ಲೂ ಬಣ್ಣಹಚ್ಚಲಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಟೈಟಲ್ ಟೀಸರ್ ಕಾರ್ಯಕ್ರಮಕ್ಕೆ ಭೇಟಿ ನೀಡಿದ ದತ್, ಚಿತ್ರತಂಡಕ್ಕೆ ಶುಭಕೋರಿದರು. ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಾಣದ ನಾಲ್ಕನೇ ಚಿತ್ರ ಇದಾಗಿದೆ. ಇದು ಪ್ರೇಮ್ ಅವರ ನಿರ್ದೇಶನದ 9ನೇ ಚಿತ್ರ.

'ಪೊಗರು' ಚಿತ್ರದ ಬಳಿಕ ಧ್ರುವ ಸರ್ಜಾ, ನಿರ್ದೇಶಕ ಎ.ಪಿ.ಅರ್ಜುನ್ ನಿರ್ದೇಶನದ 'ಮಾರ್ಟಿನ್' ಚಿತ್ರದಲ್ಲಿ ತೊಡಗಿಸಿಕೊಂಡಿದ್ದರು. ಈ ಸಿನಿಮಾ ರಿಲೀಸ್‌ಗೆ ಸಿದ್ಧವಾಗಿದೆ. ಅರ್ಜುನ್ ನಿರ್ದೇಶನದ 'ಅದ್ದೂರಿ' ಸಿನಿಮಾ ಮುಖಾಂತರ 2012ರಲ್ಲಿ ಚಂದನವನಕ್ಕೆ ಪ್ರವೇಶಿಸಿದ್ದ ಧ್ರುವ ಸರ್ಜಾ, ನಂತರ 'ಬಹದ್ದೂರ್', 'ಭರ್ಜರಿ', 'ಪೊಗರು' ಚಿತ್ರದಲ್ಲಿ ಮಿಂಚಿದ್ದರು. ಪ್ರೇಮ್ ಆ್ಯಕ್ಷನ್ ಕಟ್ ಹೇಳಲಿರುವ 'ಕೆಡಿ' ಚಿತ್ರವು ಧ್ರುವ ಸರ್ಜಾ ಅವರ ಆರನೇ ಸಿನಿಮಾ ಆಗಿರಲಿದೆ.

'ಕೆಡಿ' ಸಿನಿಮಾವು 1970ರಲ್ಲಿ ನಡೆದ ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ಕಥೆಯನ್ನು ಹೊಂದಿದೆ. 'ಬೆಂಗಳೂರಿನಲ್ಲಿ ನಡೆದ ಈ ಕಥೆ ರೋಚಕವಾಗಿದ್ದು, ನೈಜವಾಗಿ ತೆರೆಮೇಲೆ ತರುವ ಪ್ರಯತ್ನ ಮಾಡಲಿದ್ದೇನೆ. ಇದೊಂದು ಪ್ಯಾನ್ ಇಂಡಿಯಾ ಸಿನಿಮಾ. ಹಾಗಾಗಿ, ಪರಭಾಷೆಯ ಕಲಾವಿದರು ಕೂಡ ಇರಲಿದ್ದಾರೆ. ಪಾತ್ರಕ್ಕೆ ಹೊಂದಿಕೆ ಆಗುವುದರಿಂದ ಅವರನ್ನು ಆಯ್ಕೆ ಮಾಡಲಿದ್ದೇವೆ. ಆ ಕಲಾವಿದರು ಯಾರು ಎನ್ನುವುದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ' ಎಂದಿದ್ದಾರೆ ಪ್ರೇಮ್.

ಮಚ್ಚು ಹಿಡಿದು ಖಡಕ್ ಆಗಿ ಪೋಸ್ ನೀಡಿರುವ ಧ್ರುವ ಸರ್ಜಾ, ಪಾತ್ರಕ್ಕಾಗಿ ಭರ್ಜರಿ ತಯಾರಿ ಮಾಡಿಕೊಂಡಿದ್ದಾರಂತೆ. ಈಗಾಗಲೇ ಅವರು 7ಕೆ.ಜಿ. ತೂಕ ಇಳಿಸಿಕೊಂಡಿದ್ದಾರೆ. ಧ್ರುವ ರೆಟ್ರೋ ಶೈಲಿ ಉಡುಪಿನಲ್ಲಿ ಕಾಣಿಸಿಕೊಂಡಿದ್ದು, ಇದೊಂದು ಮಾಸ್ ಆ್ಯಕ್ಷನ್ ಥ್ರಿಲ್ಲರ್ ಕಥೆಯನ್ನು ಹೊಂದಿದೆ. ಈ ಸಿನಿಮಾದಲ್ಲಿ 'ಕಾಳಿದಾಸ' ಎಂಬ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ.

ತಮಿಳು ಟೈಟಲ್ ಟೀಸರ್‌ಗೆ ನಟ ವಿಜಯ್ ಸೇತುಪತಿ ಧ್ವನಿ ನೀಡಿದ್ದಾರೆ. ಮಲಯಾಳಂನಲ್ಲಿ ನಟ ಮೋಹನ್‌ಲಾಲ್ ಹಾಗೂ ಹಿಂದಿಯಲ್ಲಿ ನಟ ಸಂಜಯ್ ದತ್ ಅವರು ಟೈಟಲ್ ಟೀಸರ್‌ಗೆ ಧ್ವನಿ ನೀಡಿದ್ದಾರೆ. ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಲಿದ್ದು, 'ವಿಕ್ರಾಂತ್ ರೋಣ' ಖ್ಯಾತಿಯ ವಿಲಿಯಂ ಡೇವಿಡ್ ಛಾಯಾಗ್ರಹಣವಿರಲಿದೆ. ಬಹುತೇಕ ಸೆಟ್‌ನಲ್ಲೇ ಚಿತ್ರದ ಚಿತ್ರೀಕರಣ ನಡೆಯಲಿದೆ. ಅದಕ್ಕಾಗಿ ಸೆಟ್ ನಿರ್ಮಾಣ ಕಾರ್ಯವೂ ಆರಂಭವಾಗಿದೆ ಎಂದಿದೆ ಚಿತ್ರತಂಡ.

'ಕಾಸಿನ ಸರ' ಡಬ್ಬಿಂಗ್‌ನಲ್ಲಿ ಧಿಕ್ಕಾರದ ಕೂಗು

ವಿಜಯ್ ರಾಘವೇಂದ್ರ – ಹರ್ಷಿಕಾ ಪೂಣಚ್ಚ ಅಭಿನಯದ 'ಕಾಸಿನ ಸರ' ಚಿತ್ರದ ಡಬ್ಬಿಂಗ್ ಭರ್ಜರಿಯಾಗಿಯೇ ಸಾಗಿದೆ. ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ರೈತವಿರೋಧಿ ಕಂಪನಿಯೊಂದರ ವಿರುದ್ಧ ಜೋರಾಗಿಯೇ ಧಿಕ್ಕಾರ ಕೂಗುವ ಸನ್ನಿವೇಶದ ಧ್ವನಿಮುದ್ರಣ ನಡೆಯಿತು. ಎಸ್.ಜಿ. ಸಿದ್ದರಾಮಯ್ಯ, ಉಮಾಶ್ರೀ,ನೀನಾಸಂ ಅಶ್ವಥ್, ಸಂಗೀತಾ, ಸುಧಾ ಬೆಳವಾಡಿ, ಹನುಮಂತೇಗೌಡ, ಮಂಡ್ಯ ರಮೇಶ್, ಮೀನಪ್ರಕಾಶ್ ತಾರಾಗಣದಲ್ಲಿದ್ದಾರೆ.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನೇಟಿವ್ ಕ್ರಿಯೇಷನ್ಸ್ ಲಾಂಛನದಲ್ಲಿ ಈ. ದೊಡ್ಡನಾಗಯ್ಯ ಈ ಚಿತ್ರ ನಿರ್ಮಿಸಿದ್ದಾರೆ. ಎನ್.ಆರ್. ನಂಜುಂಡೇಗೌಡ ನಿರ್ದೇಶಕರು. ಎಚ್. ಸಿ. ವೇಣು ಛಾಯಾಗ್ರಹಣ, ಶ್ರೀಧರ್ ಸಂಭ್ರಮ್ ಸಂಗೀತ, ಸುರೇಶ್ ಅರಸ್ ಸಂಕಲನ, ಸಂಭಾಷಣೆ ಎಸ್. ಜಿ. ಸಿದ್ದರಾಮಯ್ಯ ಅವರದ್ದು.

ಧನಂಜಯ್ ಹೊಸ ಚಿತ್ರಕ್ಕೆ ಪ್ರಿಯಾ ಭವಾನಿ ನಾಯಕಿ

ಪ್ರಿಯಾ ಭವಾನಿ ಶಂಕರ್

'ನಟರಾಕ್ಷಸ' ಡಾಲಿ ಧನಂಜಯ್ ಸದ್ಯ ತನ್ನದೇ ಪ್ರೊಡಕ್ಷನ್‌ನ 'ಹೆಡ್‌ಬುಷ್' ಸಿನಿಮಾ ರಿಲೀಸ್‌ಗೆ ಕಾಯುತ್ತಿದ್ದಾರೆ. ಈ ನಡುವೆ ಹಲವು ಹೊಸ ಸಿನಿಮಾಗಳಿಗೂ ಕಾಲ್‌ಶೀಟ್ ನೀಡಿದ್ದಾರೆ. 'ಪುಷ್ಪ' ಸಿನಿಮಾ ಮೂಲಕ ಟಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದ ಧನಂಜಯ್, ಇದೀಗ ಮತ್ತೊಮ್ಮೆ ಅತ್ತ ಹೆಜ್ಜೆ ಹಾಕಿದ್ದಾರೆ. ಅವರ ಹೊಸ ಚಿತ್ರಕ್ಕೆ ನಾಯಕಿಯಾಗಿ ತಮಿಳಿನ ನಟಿ ಪ್ರಿಯಾ ಭವಾನಿ ಶಂಕರ್ ತಂಡ ಸೇರಿಕೊಂಡಿದ್ದಾರೆ.

ಇದು ಧನಂಜಯ್ ಅವರ 26ನೇ ಸಿನಿಮಾ. ಈ ಹಿಂದೆ ತೆಲುಗಿನಲ್ಲಿ 'ಪೆಂಗ್ವಿನ್' ಎಂಬ ಸಿನಿಮಾ ಮಾಡಿದ್ದ ಈಶ್ವರ್ ಕಾರ್ತಿಕ್, ಡಾಲಿ-ಸತ್ಯದೇವ್ ನಟನೆಯ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದೆ. ಕ್ರೈಮ್ ಆ್ಯಕ್ಷನ್ ಎಂಟರ್‌ಟೈನರ್ ಕಥಾಹಂದರದ ಈ ಸಿನಿಮಾ, ತೆಲುಗು ಹಾಗೂ ಕನ್ನಡದಲ್ಲಿ ತೆರೆಕಾಣಲಿದೆ. ಸದ್ಯ ಚಿತ್ರೀಕರಣದಲ್ಲಿ ನಿರತವಾಗಿರುವ ಚಿತ್ರತಂಡ ನಾಯಕಿಯೊಬ್ಬರನ್ನು ಪರಿಚಯಿಸಿದೆ.

'ಓಹ್ ಮನಪೆಣ್ಣೆ', 'ಬ್ಲಡ್ ಮನಿ', 'ತಿರುಚಿತ್ರಂಬಲಂ' ಸಿನಿಮಾಗಳ ಮೂಲಕ ಖ್ಯಾತಿ ಗಳಿಸಿರುವ ಪ್ರಿಯಾ ಭವಾನಿ ಶಂಕರ್ ಅವರಿಗೆ ಇದು ತೆಲುಗಿನ ಮೊದಲ ಚಿತ್ರ. ಚಿತ್ರದಲ್ಲಿ ಫ್ಯಾಶನ್ ಡಿಸೈನರ್ ಪಾತ್ರದಲ್ಲಿ ಅವರು ನಟಿಸಲಿದ್ದು, ಚಿತ್ರದ ಇನೊಬ್ಬ ನಾಯಕಿಯನ್ನು ಸದ್ಯದಲ್ಲೇ ಪರಿಚಯಿಸಲಿದ್ದೇವೆ ಎಂದಿದೆ ಚಿತ್ರತಂಡ. ಓಲ್ಡ್ ಟೌನ್ ಪಿಕ್ಚರ್ಸ್ ಸಂಸ್ಥೆಯಡಿ ಬಾಲ ಸುಂದರಂ ಮತ್ತು ದಿನೇಶ್ ಸುಂದರಂ ನಿರ್ಮಾಣ ಮಾಡುತ್ತಿರುವ ಮೊದಲ ಸಿನಿಮಾ ಇದಾಗಿದೆ.

'ಟಗರು' ಸಿನಿಮಾ ಖ್ಯಾತಿಯ ಚರಣ್ ರಾಜ್ ಸಂಗೀತ, ಮಣಿಕಂಠನ್ ಕೃಷ್ಣಮಾಚಾರಿ ಛಾಯಾಗ್ರಹಣ, ಅನಿಲ್ ಕ್ರಿಶ್ ಸಂಕಲನ, ಸುಬ್ಬು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಶೀಘ್ರದಲ್ಲೇ ಚಿತ್ರದ ಶೀರ್ಷಿಕೆಯನ್ನೂ ಬಿಡುಗಡೆಗೊಳಿಸಲಿದ್ದೇವೆ ಎಂದಿದೆ ಚಿತ್ರತಂಡ.

ಸಾಯಿಗೋಲ್ಡ್ ನಲ್ಲಿ ದೀಪಾವಳಿ ಸಂಭ್ರಮ,ಗ್ರಾಹಕರಿಗೂ ಭರಪೂರ ಕೊಡುಗೆ

ಕಳೆದ ಎರಡು ವರುಷಗಳಿಂದ ಕರೊನ ಹೊಡೆತಕ್ಕೆ ವಿಶ್ವವೇ ತತ್ತರಿಸಿತ್ತು,ಆರ್ಥಿಕ ಸಂಕಷ್ಟಕ್ಕೆ ನಾಗರೀಕರು ತತ್ತರಿಸಿ,ಹಬ್ಬ ಹರಿದಿನಗಳನ್ನ ಆಚರಿಸಲು ಆಗದ ಸ್ಥಿತಿಗೆ ಕರೊನ ಮಹಾಮಾರಿ ತಂದೊಡ್ಡಿದ ಕಾರಣ ವ್ಯಾಪಾರ ವಹಿವಾಟು ಎಲ್ಲ ಸ್ಥಗಿತಗೊಂಡ ಕಾರಣ ಚಿನ್ನದ ಅಂಗಡಿಗಳು ಕೂಡ ಬಣಗುಟ್ಟಿದ್ದವು.

ಗ್ರಾಹಕರಿಲ್ಲದೆ ಕಂಗೆಟ್ಟಿದ ವ್ಯಾಪರಸ್ಥರಿಗೆ ಕಡೆಗೂ ಚಿನ್ನ ಕೊಳ್ಳಲು ಗ್ರಾಹಕರು ಧಾವಿಸಿದ್ದು ಕಳೆದ ಅಕ್ಷಯ ತೃತಿಯ ದಿನದಂದು ,ನಂತರ ಈಗ ಕರೊನ ಭಯದಿಂದ ಹೊರಬಂದಂತೆ ಕಾಣುತ್ತಿರುವ ನಾಗರೀಕರು ಹಬ್ಬ ಆಚರಿಸುವ ,ಹಬ್ಬಕ್ಕೆ ಬೇಕಾದ ವಸ್ತ್ರ ಉಡುಗೊರೆ ಕೊಳ್ಳಲು ಅಂಗಡಿಗಳತ್ತ ಧಾವಿಸುತ್ತಿದ್ದಾರೆ.

ಈಗ ಧಾಂತೇರ ಹಾಗೂ ದೀಪಾವಳಿ ಹಬ್ಬವನ್ನ ಆಚರಿಸುವ ಸಲುವಾಗಿ ಆಭರಣದ ಅಂಗಡಿಗಳತ್ತ ಜನ ಧಾವಿಸುತ್ತಿದ್ದಾರೆ. ಸಾಯಿಗೋಲ್ಡ್ ಮಾಲೀಕರಾದ ಶರವಣ ಅವರು ಹೇಳುವಂತೆ ನಾಗರೀಕರು ಹಬ್ಬದ ಸಡಗರದಲ್ಲಿ ನಮ್ಮ ಸಾಯಿಗೋಲ್ಡ್ ಗೆ ತಂಡೋಪತಂಡವಾಗಿ ಜನ ಆಗಮಿಸುತ್ತಿದ್ದಾರೆ. ಒಮ್ಮೊಮ್ಮೆ ನೂಕು ನಗ್ಗಲಪ ಕೂಡ ಆಗುತಲಿದ್ದು ಜನರನ್ನ ಸಂಬಾಳಿಸುವುದು ಕಷ್ಟಕರವಾಗುತಲಿದೆ ಎಂದೇ ಹೇಳುತ್ತಾರೆ.

ವಿಶೇಷವಾಗಿ "ಧನ್ ತ್ರಿಯೋದಶಿ" ಇದೇ ಶನಿವಾರ ಭಾನುವಾರ ಆಚರಿಸುವುದರಿಂದ ಸಾಯಿಗೋಲ್ಡ್ ನಲ್ಲಿ ಮುಂಗಡಬುಕ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಮತ್ತು ವಿಶೇಷ ಆಕರ್ಷಕ ಕೊಡುಗೆಗಳನ್ನೂ ಸಹ ನೀಡುತ್ತಿದ್ದು, ಪ್ರತಿಗ್ರಾಂ ಚಿನ್ನ ಖರೀದಿಸಿದರೆ ಒಂದು ಗ್ರಾಂ ಬೆಳ್ಳಿ ಉಚಿತ ಹಾಗೂ 1.50 ಕೋಟಿ ಬಹುಮಾನವಿಡಲಾಗಿದೆ ಇದು ನವೆಂಬರ್ 1 ರಂದು ಡ್ರಾ ಮಾಡಿ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ ಎಂದು ಶರವಣ ವಿವರಿಸುತ್ತಾರೆ. ಸಾಯಿಗೋಲ್ಡ್ ನಲ್ಲಿ ವಿಶೇಷವಾಗಿ ಆಂಟಿಕ್ ಗೋಲ್ಡ್ ಅಂದರೆ ತೂಕ ಮಾಮೂಲಿ ತೂಕಕ್ಕಿಂತ ಅರ್ಧದಷ್ಟು ಕಮ್ಮಿ ಇರುತ್ತದೆ ಇದನ್ನ ಬಳಸಿ ವಿವಿಧ ದೇವತೆಗಳ ಪ್ರತಿಮೆ ಗಳ ಸರಗಳನ್ನ ತಯಾರುಮಾಡಲಾಗಿದೆ,ಇದರತ್ತ ಗ್ರಾಹಕರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ ಎಂದು ವಿವರಿಸುತ್ತ ಈ ಬಾರಿ ವ್ಯಾಪಾರ ತೃಪ್ತಿದಾಯಕವಾಗಲಿದೆ ಎಂದು ಗ್ರಾಹಕರಿಗೆ ದೀಪಾವಳಿಯ ಶುಭಾಶಯ ತಿಳಿಸುತ್ತಾರೆ.

ಕಣ್ಮನ ಸೆಳೆಯುವ ಅಭೂತಪೂರ್ವ ವಿನ್ಯಾಸಗಳ

ಅರ್ಜುನ ಜ್ಯೂವೆಲ್ಲರ್ಸ್

ಜೊತೆಗೆ ಬೆಳಕಿನ ಹಬ್ಬ ಆಚರಿಸೋಣ

ಈಗಾಗಲೇ ಹಬ್ಬಗಳು ಆರಂಭಗೊಂಡಿದ್ದು ಜನರು ತಮ್ಮ ಪ್ರೀತಿ ಪಾತ್ರರೊಂದಿಗೆ ಆಕರ್ಷಕ ಹಾಗೂ ಪ್ರೀತಿಯ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುವುದರ ಸಂದರ್ಭದಲ್ಲಿಯೇ ಮತ್ತೊಂದು ಧನ್‌ತೆರಸ್ (ಲಕ್ಷ್ಮಿಪೂಜೆ) ಮತ್ತು ದೀಪಾವಳಿ ಹತ್ತಿರದಲ್ಲಿದೆ.

ಇದು ಅಮೂಲ್ಯ ಹಾಗೂ ಮಂಗಳಕರ ವಸ್ತುಗಳನ್ನ ಖರೀದಿಸುವ ಋತುವಾಗಿದೆ ಹಾಗಾಗಿ ನಾಗರೀಕರು ಚಿನ್ನ ಬೆಳ್ಳಿ ಆಭರಣಗಳನ್ನ ಕೊಳ್ಳುವ ಭರದಲ್ಲಿ ಎಲ್ಲಿ ಕೊಳ್ಳಬೇಕು ಎಂಬ ಯೋಚನೆಯಲ್ಲಿರುವಾಗಲೇ ಜಯನಗರ 4ನೇ ಬ್ಲಾಕಿನಲ್ಲಿರುವ "ಅರ್ಜುನ"ಜ್ಯೂವೆಲ್ಲರ್ಸ್ ಮಳಿಗೆ ಬೆಂಗಳೂರು ನಾಗರೀಕರ ಮನತಣಿಸುವ ವಿವಿಧ ಬಗೆಯ ನವನವೀನ ವಿನ್ಯಾಸಗಳೊಂದಿಗೆ ಗ್ರಾಹಕರಿಗೆ ಆಕರ್ಷಕ ಕೊಡುಗೆಗಳನ್ನ ಸಹ ನೀಡಲಾಗುತ್ತದೆ,

"ಅರ್ಜುನ" ಜ್ಯೂವೆಲ್ಲರ್ಸ್ ಮಳಿಗೆ ಸ್ಥಳಿಯವಾಗಿಯೆ ರೂಪುಗೊಂಡು ಮನೆಮಾತಾಗಿರುವ ಮಳಿಗೆ ,ನಮ್ಮ ಬೆಂಗಳೂರು ನಾಗರೀಕರಿಗೆ ತೃಪ್ತಿದಾಯಕ ಸೇವೆ ಒದಗಿಸುವುದರೊಂದಿಗೆ ಬೆಂಗಳೂರು ನಾಗರೀಕರ ವಿಶ್ವಾಸಕ್ಕೆ ಪಾತ್ರವಾಗಿರುವ ಅರ್ಜುನ ಬ್ರಾಂಡ್ ಜ್ಯೂವೆಲ್ಲರ್ಸ್ ಇದಾಗಿದೆ.

ಇಲ್ಲಿ ಚಿನ್ನ ಬೆಳ್ಳಿ ಮತ್ತು ಬೆಲೆಬಾಳುವ ಲೋಹಗಳಿಂದ ಹಿಡಿದು ಲಭ್ಯವಿರುವ ಬಣ್ಣಬಣ್ಣದ ಹರಳುಗಳು ಮತ್ತು ರತ್ನಗಳು ವ್ಯಾಪಕ ಶ್ರೇಣಿಯವರೊವಿಗೂ ಬೆಲೆ ಬಾಳುವ ಎಲ್ಲಾ ಆಭರಣಗಳ ಮನೆ"ಅರ್ಜುನ ಜ್ಯೂವೆಲ್ಲರ್ಸ್". ಇಲ್ಲಿ ಗುಣಮಟ್ಟವನ್ನ ಖಚಿತಪಡಿಸಿಕೊಳ್ಳುವ ಸಲುವಾಗಿಯೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ, ಕರಕುಶಲ ಕರ್ಮಿಗಳಿಂದ ರೂಪುಗೊಂಡ ಆಭರಣಗಳು ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಸಿಗುವುದರ ಜೊತೆ ಗ್ರಾಹಕರ ಕನಸ್ಸನ್ನ ನನಸು ಮಾಡುವುದು ಕೂಡ "ಅರ್ಜುನ ಜ್ಯೂವೆಲ್ಲರ್" ಮಳಿಗೆ.

ವಿನ್ಯಾಸದಲ್ಲಿ ನಿಖರತೆಯೊಂದಿಗೆ ಗ್ರಾಹಕರಿಗೆ ತೃಪ್ತಿದಾಯಕ ಸೇವೆ ಒದಗಿಸುವ ಗುರಿ "ಅರ್ಜುನ ಜ್ಯೂವೆಲ್ಲರ್" ಗುರಿಯಾಗಿದೆ. ಹಬ್ಬಗಳ ಈ ವಿಶೇಷ ಋತುಮಾನದಲ್ಲಿ "ಅರ್ಜುನ ಜ್ಯೂವೆಲ್ಲರ್ಸ್" ಗ್ರಾಹಕರ ಕಣ್ಮನ ಸೆಳೆಯುವ ಆಭರಣ ಮಳಿಗೆಯಾಗಿದೆ. ನಮ್ಮ ಪ್ರತಿನಿಧಿಗಳೊಂದಿಗೆ ನೇರ ಸಂಪರ್ಕ ಮತ್ತು ಅಧ್ಬುತ ಅನುಭವವನ್ನ ಹಂಚಿಕೊಳ್ಳಲು ಉತ್ಸುಕರಾಗಿರುವ ಗ್ರಾಹಕರಿಗೆ "ಅರ್ಜುನ"-ಜ್ಯೂವೆಲ್ಲರ್ಸ್ ವಿಶೇಷ ಕೊಡುಗೆ ದೀಪಾಳಿಯವರೆವಿಗೂ ಮುಂದುವರೆಯುತ್ತದೆ.

"ಅರ್ಜುನ ಜ್ಯೂವೆಲ್ಲರ್ಸ್" ಬ್ರಾಂಡ್ ಬ್ರಾಂಡ್ ಗ್ರಾಹಕರನ್ನ ಮನದಲ್ಲಿರಿಸಿಕೊಂಡು ಆಕರ್ಷಕ ಕೊಡುಗೆಗಳನ್ನ ನೀಡಲು ಉತ್ಸುಕದಲ್ಲಿದೆ, ಲಕ್ಷ್ಮಿಪೂಜೆ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಆಭರಣಗಳನ್ನ ಖರೀದಿಸಲು ಆಗಮಿಸುವ ಗ್ರಾಹಕರಿಗೆ ವಿಶೇಷ ಆಕರ್ಷಕ ರಿಯಾಯಿತಿಯನ್ನ ನೀಡುತ್ತಿದೆ. ಇದು ಬೆಂಗಳೂರಿನಲ್ಲೆ "ಅರ್ಜುನ" ಜ್ಯೂವೆಲ್ಲರ್ಸ್ ವ್ಯಾಪರಿಗಳ ಬಹುದೊಡ್ಡ ಕೊಡುಗೆಯಾಗಿದೆ.

ಚಿನ್ನದ ಉಡುಗೊರೆ
ಅರ್ಜುನ ಜುವೆಲರ್ಸ್‌ನಲ್ಲಿ ಚಿನ್ನ ಖರೀದಿಸಿದರೆ ಪ್ರತಿ ಗ್ರಾಂ ಚಿನ್ನಕ್ಕೆ 200/-ರೂ ರಿಯಾಯಿತಿ ಪಡೆಯಬಹುದಾಗಿದೆ.

ಸಿಲ್ವರ್ ಲೈನಿಂಗ್
ನೀವು ಖರೀದಿಸುವ 1ಕೆ.ಜಿ ಬೆಳ್ಳಿ ಆಭರಣಕ್ಕೆ ₹2000 ರಿಯಾಯಿತಿ ಪಡೆಯಿರಿ.

ವಿಶಿಷ್ಟ ವಜ್ರಗಳು
ಈ ಋತುವಿನಲ್ಲಿ ನೀವು ಖರೀದಿಸುವ ವಜ್ರದ ಆಭರಣಗಳಿಗೆ 20 % ರಷ್ಟು ರಿಯಾಯಿತಿ ಪಡೆಯಿರಿ.

ನಿಯಮಗಳು ಷರತ್ತುಗಳು

1. ಈ ಕೊಡುಗೆಯು ಅಕ್ಟೋಬರ್ 10.2022ರಿಂದ ಅಕ್ಟೋಬರ್ 25.2022 ರವರೆಗೆ ಲಭ್ಯವಿರುತ್ತದೆ
2. ಎಲ್ಲಾ ರಿಯಾಯಿತಿ ಹಾಗೂ ಕೊಡುಗೆಗಳನ್ನ ಅರ್ಜುನ ಜ್ಯೂವೆಲ್ಲರ್ಸ್ ಜಯನಗರ 4ನೇ ಬ್ಲಾಕ್ ಬೆಂಗಳೂರು ಇಲ್ಲಿ ಮಾತ್ರ ಲಭ್ಯ
3. ಈ ಕೊಡುಗೆಗಳನ್ನ ಬೇರೆ ಯಾವುದೇ ಕೊಡುಗೆಯೊಂದಿಗೆ ಸಂಯೋಜಿಸಲಾಗುವುದಿಲ್ಲ.
4.ಆಫರ್‌ಗಳನ್ನು ಮ್ಯಾನೇಜ್ಮೆಂಟ್‌ನ ವಿವೇಚನೆಯ ಮೇರೆಗೆ ಬದಲಾವಣೆ ಅಥವಾ ಹಿಂತೆಗೆದುಕೊಳ್ಳುವಿಕೆಗೆ ಒಳಪಡಿಸಬಹುದು
5. ಗ್ರಾಹಕರು ಯಾವುದೇ ಸಂದರ್ಭದಲ್ಲೂ ಮ್ಯಾನೆಜ್‌ಮೆಂಟ್‌ನೊಂದಿಗೆ ತಮ್ಮ ಯಾವುದೇ ಸಂಶಯ ಹಾಗೂ ಪ್ರಶ್ನೆಗಳನ್ನ ಪರಿಹರಿಸಿಕೊಳ್ಳಲು ಮ್ಯಾನೆಜ್‌ಮೆಂಟ್‌ನೊಂದಿಗೆ ಮಾತನಾಡಬಹುದಾಗಿದೆ.

ಬಂಗಾರದ ಮಳಿಗೆಯಲ್ಲಿ ಮಧುರಾನುಭೂತಿ ಆಭರಣ

ದೀಪಾವಳಿಗೆ ಮೂರು ಅಧ್ಬುತ ಕೊಡುಗೆಗಳು ನಿಮಗಾಗಿ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಆಭರಣ ಮಳಿಗೆಯಲ್ಲಿ ನಿಮ್ಮನ್ನ ಸ್ವಾಗತಿಸಲು ಕಾಯುತಿವೆ

ಬಂಗಾರದ ಹಾಗೂ ವಜ್ರದ ಅಭೂತಪೂರ್ವ ವಿನ್ಯಾಸಗಳನ್ನ ಹೊಂದಿರುವ ಆಭರಣಗಳನ್ನ ನೋಡಬೇಕೆ, ಕಣ್ಮನಸ್ಸುಗಳು ತುಂಬಿಕೊಳ್ಳಬೇಕೆ, ನಿಮ್ಮ ಕೈಗೆಟುಕುವ ಬೆಲೆಯಲ್ಲಿ ನಿಮ್ಮ ಮನೆಗೆ ಬರುವ ವಧುವಿಗೆ ಹೊಂದುವ, ಸೌಂದರ್ಯವನ್ನ ಪ್ರತಿಬಿಂಬಿಸುವ ಬಂಗಾರ ಹಾಗೂ ಡೈಮಂಡ್ ಆಭರಣಗಳು ಈಗ ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್ ಜ್ಯೂವೆಲರ್ಸ್ ನಲ್ಲಿ ಲಭ್ಯ.

ವಿಧಾನಸೌಧ ಹಾಗೂ ಮೈಸೂರು ಅರಮನೆಯ ಚಿನ್ನದ ನಾಣ್ಯಗಳು: 24 ಕ್ಯಾರೆಟ್ ಅಪ್ಪಟ ಚಿನ್ನದಿಂದ ಬೆಂಗಳೂರಿನ ವಿಧಾನಸೌಧ ಹಾಗೂ ಕರ್ನಾಟಕದ ಸ್ಮಾರಕಗಳನ್ನ ಮುದ್ರಿಸಿರುವ ಮತ್ತು ತುಂಬಾ ಅರ್ಥಪೂರ್ಣವಾಗಿ ಮತ್ತು ಸೂಕ್ಷ್ಮವಾಗಿ ವಿನ್ಯಾಸಗೊಳಿಸಲಾದ ಚಿನ್ನದ ನಾಣ್ಯಗಳು ಕೃಷ್ಣಯ್ಯಚೆಟ್ಟಿ ಆಭರಣ ಮಳಿಗೆಯಲ್ಲಿ ಲಭ್ಯ.

ಆದರೂ ಇಂತಹ ಅಭೂತಪೂರ್ವ ವಿನ್ಯಾಸಗಳುಳ್ಳ ನಾಣ್ಯ 24 ಕ್ಯಾರೆಟ್ ಅಪ್ಪಟ ಚಿನ್ನದಲ್ಲಿ ಸಿಗುವುದು ಅಪರೂಪ.

ಆದರೆ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಆಭರಣ ಮಳಿಗೆ ಇಂತಹ ವಿಭಿನ್ನ ವಿನ್ಯಾಸಗಳಿಗಾಗಿ ವಿಶೇಷ ಆಸಕ್ತಿ ಹಾಗೂ ವಿಶೇಷ ತಾಂತ್ರಿಕತೆ ಹಾಗೂ ಅದರ ಬಗ್ಗೆ ಅನುಭವಿ ಕರಕುಶಲಿಗಳಿಗೆ ವಿವರಿಸಿ ದೀಪಾವಳಿ ಹಬ್ಬಕ್ಕಾಗಿಯೇ ಈ ವಿಶೇಷ ವಿನ್ಯಾಸಗಳುಳ್ಳ ಆಭರಣಗಳು ಹಾಗೂಚಿನ್ನದ ನಾಣ್ಯಗಳನ್ನ ಸಿದ್ದಪಡಿಸಿದ್ದಾರೆ.

ಸುಂದರವಾಗಿರುವ, ಕಣ್ಣುಕುಕ್ಕುವ ವಿಧಾನಸೌಧ ಹಾಗೂ ಮೈಸೂರು ಅರಮನೆಯ ನೂರಾರು ಚಿನ್ನದ ನಾಣ್ಯಗಳು ಇಲ್ಲಿ ರೂಪುಗೊಂಡು ಗ್ರಾಹಕರಿಗಾಗಿ ಕಾದಿವೆ.

ಈ ವಿನ್ಯಾಸಗಳುಳ್ಳ ನಾಣ್ಯಗಳನ್ನ ತಯಾರಿಸಲು ಸಾಧ್ಯವಾಗದಂತಹ ಕೆಲವು ವಸ್ತುಗಳು ಮತ್ತು ವಿವಿಧ ಮೌಲ್ಯಗಳುಳ್ಳ 10 ಗ್ರಾಂನಿಂದ ಹಿಡಿದು 100 ಗ್ರಾಂ ವರೆವಿಗೂ ತಯಾರಿಸಿದ್ದಾರೆ ಹಾಗಾಗಿ ಸಂಗ್ರಹಿಸುವ ಜನರಿಗೆ ಇದು ಮೌಲ್ಯಯುತವಾದ ಸಂಗ್ರಹವಾಗಬಹುದು.

ಡೆನಿಮ್ ಅಂಡ್ ಡೈಮಂಡ್ಸ್: ಸಂಗ್ರಹ ಮಾಡುವ ಜನರು ಕೆಲವು ವಿಶೇಷ ವಸ್ತುಗಳನ್ನಷ್ಟೆ ಆಸಕ್ತಿವಹಿಸಿ ಸಂಗ್ರಹಿಸುತ್ತಾರೆ-,ಆದರೆ ಅದಕ್ಕೆ ಪೂರಕವೆಂಬಂತೆ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಆಭರಣ ಮಳಿಗೆಯಲ್ಲಿ ಡೆನಿಮ್ ಹಾಗೂ ಪ್ಯಾಬ್ರಿಕ್ ಹಾಗೂ ಚಿನ್ನದೊಂದಿಗೆ ಸಂಯೋಜಿಸಿ ರೂಪಿಸಿದ್ದಾರೆ, ಹಾಗಾಗಿ ಇದು ಸಂಪೂರ್ಣವಾಗಿ ಭಿನ್ನವಾಗಿದೆ.

ಬಹುಶ: ಈ ವಿಭಿನ್ನ ವಿಶಿಷ್ಟ ವಿನ್ಯಾಸಗಳನ್ನ ಹೊರತಂದಿರುವ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್, ವಿಶ್ವದಲ್ಲೆ ಮೊದಲಿಗರೆನಿಸುತ್ತಾರೆ.

ಏಕೆಂದರೆ ಯಾರು ತಯಾರು ಮಾಡದಂತಹ ತುಂಬಾ ಕಷ್ಟಕರವಾದ ಹಾಗೂ ಬಹಳ ಸ್ಪಷ್ಟವಾಗಿ ಹಲವು ಸಂಗ್ರಹ ಯೋಗ್ಯ ವಿನ್ಯಾಸಗಳನ್ನ ರೂಪಿಸುವುದು ಬಹಳ ಕಷ್ಟ.

ಲೋಹಶಾಸ್ತ್ರೀಯವಾಗಿ ಬಹಳ ಶ್ರಮ ವಹಿಸಿ ರೂಪಿಸಿರುವ ಈ ಆಭರಣ ಮತ್ತು ನಾಣ್ಯಗಳ ಮೌಲ್ಯ ಸುಮಾರು 20.000 ಸಾವಿರದಿಂದ. ಪ್ರಾರಂಭವಾಗಿ 25.000 ಹಾಗೂ 2.00000 ಲಕ್ಷದ ವರೆವಿಗೂ ಸಿಗುತ್ತದೆ. ಇದು ದುಬಾರಿಯಲ್ಲದ ವಧುವಿನ ಸಿಂಗಾರಕ್ಕೆ ಹೇಳಿ ಮಾಡಿಸಿದಂತಹ ಆಭರಗಳಾಗಬಹುದು.

ಮದುವೆಯ ಆಭರಣಗಳು: ವಧುವಿನ ಅಲಂಕಾರಕ್ಕೆ ಯಾಕೆ ಈ ಆಭರಣಗಳು ಸೂಕ್ತ ಎಂದರೆ ವಧುವಿನ ಕುತ್ತಿಗೆಯಲ್ಲಿ ಥಳಥಳಿಸುವ ಆಭರಣ.

ಇದು ಕುತ್ತಿಗೆಯಲ್ಲಿ ಕಡಿಮೆ ಎತ್ತರದ ಉದ್ದಕ್ಕೆ ಇಳಿಬಿಟ್ಟ ಮತ್ತು ಕುತ್ತಿಗೆಯ ತುಂಡಿಗೆ ಪೂರಕವಾಗಿದೆ ಮತ್ತು ವಧುವಿನ ಕೂದಲಿಗೆ ಹಾಗೂ ದೇಹಕ್ಕೆ ಹೊಂದುವ ಆಕರ್ಷಕವಾಗಿ ಕಾಣುವಂತ ಆಭರಣಗಳು ಇಲ್ಲಿವೆ.

ವಧುವಿನ ಬಳೆಗಳು ಮತ್ತು ಉಂಗುರಗಳೊಂದಿಗೆ ಸಂಪೂರ್ಣವಾಗಿ ಹೊಂದುವ ಅಸಮಾನ್ಯ ಆಭರಣಗಳಾಗಿ ನೋಡುಗರನ್ನ ಆಕರ್ಷಿಸುವಂತೆ ಕಾಣುತ್ತದೆ.

ಕೃಷ್ಣಯ್ಯಚೆಟ್ಟಿ ವಜ್ರಗಳು ಮತ್ತು ಚಿನ್ನದ ಗುಣಮಟ್ಟ ಮತ್ತು ಮಾನದಂಡ ಸಹಜವಾಗಿ ವೈಟ್ ಮತ್ತು ಆಭರಣದ ವಿಷಯಗಳ ಅತ್ಯಂತ ಪ್ರಮುಖ ನಿಖರವಾದ ಪ್ರಾತಿನಿಧ್ಯ ಹೊಂದಿವೆ.

ಈ ಆಭರಣಗಳು ಸುಮಾರು ಹತ್ತುಲಕ್ಷ ,ಐವತ್ತು ಲಕ್ಷ, ಹಾಗೂ ಕೋಟಿ ರೂಪಾಯಿಗಳವರೆವಿಗೂ ಪಡೆಯಬಹುದು.

ದೀಪಾವಳಿ ಹಬ್ಬಕ್ಕೆ ಈ ಮೂರು ಅಧ್ಬುತ ಕೊಡುಗೆಗಳು ನಿಮಗಾಗಿ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಆಭರಣ ಮಳಿಗೆಯಲ್ಲಿ ನಿಮ್ಮನ್ನ ಸ್ವಾಗತಿಸಲು ಕಾಯುತಿವೆ. ಇದು ದೀಪಾವಳಿಯ ಹಬ್ಬಕ್ಕೆ ಅತೀ ಕಡಿಮೆ ಬೆಲೆಯ ಉತ್ಕೃಷ್ಟ ಕೊಡುಗೆ, ಹಾಗಾಗಿ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಗ್ರಾಹಕರಿಗಾಗಿಯೇ ಹಲವು ಉಪಯುಕ್ತ ಹಾಗೂ ಪ್ರಯೋಜನಕಾರಿ ಕೊಡುಗೆಗಳನ್ನ ನೀಡುತ್ತಾರೆ. ಗ್ರಾಹಕರು ಅದನ್ನ ಬಳಸಿಕೊಳ್ಳುವ ಅವಕಾಶವನ್ನ ಪಡೆಯಬೇಕಾಗಿದೆ. ಇದು ಹಬ್ಬದ ಸೀಸನ್ ಆದ್ದರಿಂದ ಎಲ್ಲಾ ಗ್ರಾಹಕರಿಗೂ ಶುಭಾಶಯಗಳನ್ನ ಕೃಷ್ಣಯ್ಯಚೆಟ್ಟಿ ಅಂಡ್ ಸನ್ಸ್ ಪ್ರೀತಿಯಿಂದ ತಿಳಿಸುತ್ತಾರೆ.

ಸಂಪರ್ಕಿಸಿ

ಸಿ. ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜುವೆಲರ್ಸ್
ಕಮರ್ಷಿಯಲ್ ಸ್ಟ್ರೀಟ್, ಮೇನ್ ಗಾರ್ಡ್ ಕ್ರಾಸ್ ರಸ್ತೆ,
ಜಯನಗರ, ಮಲ್ಲೇಶ್ವರಂ. ಫೀನಿಕ್ಸ್ ಮಾರ್ಕೆಟ್ ಸಿಟಿ.
ದೂರವಾಣಿ: 080-4000 1869 / 080-4100 1869

ಬೆಟ್ಟದಾಸನಪುರ ತಿಮ್ಮರಾಯ ಸ್ವಾಮಿ ದೇಗುಲ

ಡಾ. ವಿ.ಎ.ಲಕ್ಷ್ಮಣ್

ಐತಿಹಾಸಿಕ ನಗರ ಬೆಂಗಳೂರು ತನ್ನೊಡಲಿನೊಳಗೆ ಭವ್ಯ ಸಂಸ್ಕೃತಿಯನ್ನು ಅಡಗಿಸಿಕೊಟ್ಟಿಕೊಂಡಷ್ಟೇ ಆಧುನಿಕತೆಗೆ ತೆರೆದುಕೊಂಡಿದೆ.

ನಗರದ ದಕ್ಷಿಣಭಾಗದ ಬೇಗೂರು ಹೋಬಳಿಯ ಬೆಟ್ಟದಾಸನಪುರವೆಂಬ ಅತ್ತ ಹಳ್ಳಿಯೂ ಅಲ್ಲದ ಪಟ್ಟಣವೂ ಅಲ್ಲದ ರೂರ್ಬನ್ ನ ಎಲ್ಲ ಅಂಶಗಳನ್ನೂ ಮೈಗೂಡಿಸಿಕೊಂಡು ನಿಂತ ಒಂದು ಸಣ್ಣ ಹಳ್ಳಿ.

ಸಣ್ಣ ಹಳ್ಳಿಯ ದೊಡ್ಡ ಮಾತೆಂದರೆ - ಇಲ್ಲಿನ ತಿಮ್ಮರಾಯ ಸ್ವಾಮಿ ದೊಡ್ಡ ಪುರಾತನ ದೇವಾಲಯ. ಎಲೆಕ್ಟ್ರಾನಿಕ್ ಸಿಟಿಯಿಂದ ಬೇಗೂರು ಕೊಪ್ಪ ಹೋಗುವ ರಸ್ತೆಯ ಬಲ ಭಾಗದಲ್ಲಿ ಬೆಟ್ಟದಾಸನಪುರದ ಇಡುಕಿರಿದ ರಸ್ತೆಯ ದಾಟಿ ಒಂದು ತಿರುವು ತೆಗೆದುಕೊಂಡರೆ ರಸ್ತೆಯ ಬಲಬದಿಯ ಒಂದು ಪುಟ್ಟ ಬೆಟ್ಟದ ಮೇಲೊಂದು ಪಾಳು ಬಿದ್ದ ಬೃಹತ್ ಕೋಟೆ ಮತ್ತದರ ಜೀರ್ಣಗೊಳ್ಳುತ್ತಿರುವ ಅವಶೇಷ ಕಾಣುತ್ತೀರಿ. ಅದರೊಳಗಡೆ ಇರುವುದೇ ಅಷ್ಟೇನೂ ಪ್ರಸಿದ್ಧವಲ್ಲದ ಆದರೆ ಅದರ ಸುತ್ತ ಮುತ್ತಲಿನ ಇಪ್ಪತ್ತೊಂದು ಹಳ್ಳಿಗಳ ಆರಾಧ್ಯ ದೈವ - ತಿಮ್ಮರಾಯ ಸ್ವಾಮಿ.

ಈ ದೇವಾಲಯವನ್ನು ಯಾರು ಕಟ್ಟಿಸಿದರೆಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದಿದ್ದರೂ ಇಲ್ಲಿರುವ ಅರ್ಚಕರು ಸುಮಾರು ಐದುನೂರು ವರ್ಷಗಳ ಹಿಂದಿನ ವಿಜಯನಗರದ ಕಾಲದ ಅರಸರು ಕಟ್ಟಿಸಿದರೆಂದು ಹೇಳುತ್ತಾರೆ. ಇನ್ನು ಇಲ್ಲಿನ ಸ್ಥಳೀಯರು ಇದು ಸುಮಾರು ಒಂದು ಸಾವಿರದ ಐದುನೂರು ವರ್ಷಗಳ ಇತಿಹಾಸವಿದೆಯೆಂದು ಹೇಳುತ್ತಾರೆ.

ಪೌರಾಣಿಕ ಹಿನ್ನೆಲೆಯಿಂದ ಹೇಳುವುದಾರೆ - ಇಲ್ಲಿ ಗೌತಮ ಖುಷಿಗಳು ತಪಸ್ಸು ಮಾಡಿದ ಪುಣ್ಯ ಕ್ಷೇತ್ರವೆಂದು ಹೇಳುತ್ತಾರೆ.

ಇತಿಹಾಸ ,ಪು ರಾಣದ ಹಿನ್ನೆಲೆ ಬಿಟ್ಟು - ಕೇವಲ ತಿಮ್ಮರಾಯನ ಸ್ವಾಮಿಯ ಮೇಲಿನ ಭಕ್ತಿಯಿಂದ ಬಂದರೆ ಈ ದೇವಸ್ಥಾನದ ಜಾರು ಬಂಡೆ ಹತ್ತುತ್ತಿದ್ದರೆ ನಿಮಗೊಂದು ಆಧ್ಯಾತ್ಮಿಕದ ದಿವ್ಯ ಅನುಭೂತಿ ಪಡೆಯುತ್ತೀರಿ. ಅಷ್ಟೇನೂ ಜನಪ್ರಿಯವಲ್ಲದ ಕಾರಣದಿಂದ ಇಲ್ಲಿ ಬೆಂಗಳೂರಿನ ಇತರ ದೇವಾಲಯಗಳ ಹಾಗೆ ಗಂಟೆಗಟ್ಟಲೆ ದರ್ಶನಕ್ಕಾಗಿ ಸರದಿ ಸಾಲಿನಲ್ಲಿ ನಿಲ್ಲಬೇಕಿಲ್ಲ. ವಿಶಾಲವಾದ ಸ್ಥಳಾವಕಾಶವಿರುವುದರಿಂದ ಸಾಕಷ್ಟು ಪಾರ್ಕಿಂಗ್ ಗೆ ಸ್ಥಳಾವಕಾಶ ಇದೆ.

ತಿಮ್ಮರಾಯಸ್ವಾಮಿ ದೇಗುಲ

ಜಾರು ಬಂಡೆಯ ಮೆಟ್ಟಿಲು ಹತ್ತುತ್ತಿದ್ದಂತೆ ನಿಮಗೊಂದು ಸೈಜುಗಲ್ಲಿನಿಂದಲೇ ಕಟ್ಟಿದ ಚಿಕ್ಕ ಪ್ರವೇಶದ್ವಾರ ಸಿಗುತ್ತದೆ. ಅಲ್ಲಿಂದ ತಲೆ ಬಾಗಿ ಒಳಗೆ ನಡೆದರೆ ನಟ್ಟ ನಡುವೆಯೊಂದು ಕಲ್ಯಾಣಿ ಸಿಗುತ್ತದೆ. ವಿಶೇಷವೆಂದರೆ ಈಗಲೂ ಈ ಕಲ್ಯಾಣಿಯಲ್ಲಿ ವರ್ಷದ ಹನ್ನೆರಡೂ ತಿಂಗಳು ನೀರಿರುತ್ತದೆ. ಈ ಬೆಟ್ಟದ ಕೆಳಗೆ ತುಸುವೇ ದೂರದಲ್ಲಿ ಒಂದೂವರೆ ಸಾವಿರ ಬೋರುವೆಲ್ಲು ಕೊರೆದರೂ ದುರ್ಲಭವಾಗುವ ನೀರು ಇಲ್ಲಿ ಈ ಕಲ್ಯಾಣಿ ಯಲ್ಲಿ ಬಿರು ಬೇಸಿಗೆಯಲ್ಲೂ ಯಥೇಚ್ಛವಾಗಿ ಸಿಗುವುದು ಅಚ್ಚರಿ! ಹೀಗಾಗಿ ಈ ಪುಣ್ಯ ಕ್ಷೇತ್ರ ದ ಮಹಿಮೆಯ ಬಗ್ಗೆ ಅಪಾರ ನಂಬಿಕೆಯ ಜೊತೆಗೆ ಭಯ ಭಕ್ತಿ ಕೂಡ.

ತಿಮ್ಮರಾಯ ಸ್ವಾಮಿಯ ಜೊತೆಯಲ್ಲೇ ಇಲ್ಲಿ ಶ್ರೀ ಲಕ್ಷ್ಮೀ ಸಮೇತ ಭೂ ವರಾಹ ಸ್ವಾಮಿ ಇದೆ. ಸಾಮಾನ್ಯವಾಗಿ ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆಂಬ ಪ್ರತೀತಿ ಇದೆ. ಹೊಸದಾಗಿ ಮನೆ ಕಟ್ಟಲು ಭೂಮಿ ಪೂಜೆ ಮಾಡುವವರು ಇಲ್ಲಿನ ಪ್ರಸಾದ ಸ್ವೀಕರಿಸಿ ಪೂಜೆ ನೆರವೇರಿಸುವ ಸಂಪ್ರದಾಯವೂ ಇದೆ. ಇದಲ್ಲದೆ ಪದ್ಮಾವತಿ, ಗಣಪತಿ ,ಕಾಶೀ ವಿಶ್ವನಾಥ ಪಾರ್ವತಿಯ ವಿಗ್ರಹಗಳಿವೆ.

ದೇವರ ದರ್ಶನ ಪಡೆದವರು ಆರಾಮಾಗಿ ವಿರಮಿಸಲು ಒಳಗೆ ತಂಪಾದ ಮರಗಳ ಕೆಳಗೆ ಕಲ್ಲಿನ ಹಾಸುಗಳಿವೆ. ಈ ತಣ್ಣನೆಯ ಶಾಂತ ವಾತಾವರಣದಿಂದ ತುಸುವೇ ದೂರದಲ್ಲಿ ರಸ್ತೆಯ ಮೇಲೆ ಹಾಯುವ ವಾಹನಗಳ ಕ್ಷೀಣ ಸದ್ದು ಕೇಳಿಸಿದರೂ ನಿಮಗೆ ಈ ಟ್ರಾಫಿಕ್ ಎತ್ತರದ ಕೋಟೆಯ ಕಾರಣದಿಂದ ಕಾಣುವುದಿಲ್ಲ. ಹೀಗಾಗಿ ಇದು ಬೆಂಗಳೂರಿನ ಲ್ಲಿದ್ದರೂ ನೀವು ಬೆಂಗಳೂರಿನಲ್ಲಿ ಇಲ್ಲವೆನ್ನುವ ಅನುಭೂತಿ ಕೊಡುತ್ತದೆ.

ಕೋಟೆಯ ಮೇಲೆ ನಡೆದಾಡುವಷ್ಟು ಸ್ಥಳಾವಕಾಶವಿರುವುದರಿಂದ ನೀವು ಈ ಜಾಗದ ಮುನ್ನೂರು ಅರವತ್ತು ಡಿಗ್ರಿಯಲ್ಲಿ ಇದರ ತುಸುವೇ ದೂರದಲ್ಲಿರುವ ಬನ್ನೇರುಘಟ್ಟ ಕಾಡಿನ ಹಚ್ಚ ಹಸಿರನ್ನೂ ಎಲೆಕ್ಟ್ರಾನಿಕ್ ಸಿಟಿ ಯ ಬಹುಮಹಡಿ ಕಟ್ಟಡಗಳ ಅಂದವನ್ನೂ ಸವಿಯಬಹುದು. ಇಲ್ಲಿ ಪೂರ್ಣ ಪ್ರಮಾಣದ ಸೂರ್ಯೋದಯ ಮತ್ತು ಸೂರ್ಯಾಸ್ತದ ದೃಶ್ಯವನ್ನು ಕಣ್ಣು ತುಂಬಿಸಿಕೊಳ್ಳುವುದೇ ಒಂದು ಸೊಬಗು. ಇಂತಹ ವಿಶೇಷ ಆಕರ್ಷಣೆಯ ಪಾರಂಪರಿಕ ದೇವಾಲಯದೊಳಗೆ ಮಾಲ್ಗುಡಿ ಡೇಸ್ ಸೇರಿದಂತೆ ಅನೇಕ ಹಿರಿ ಕಿರಿ ತೆರೆಯ ಚಿತ್ರಗಳೂ ಶೂಟಿಂಗ್ ಕೂಡ ಆಗಿವೆ.

ಪ್ರತಿ ವರ್ಷ ಕಾರ್ತಿಕ ಮಾಸ ಹಾಗೂ ದೀಪಾವಳಿಯಲ್ಲಿ ಇಡೀ ಕಲ್ಲಿನ ಕೋಟೆಗೆ ವಿಶೇಷ ದೀಪಾಲಂಕಾರವಿದ್ದಾಗ ಬಂದರೆ ಈ ಆಧ್ಯಾತ್ಮಿಕ ಜಾಗ ಇನ್ನಷ್ಟು ವಿಶೇಷ ಅನುಭೂತಿ ಕೊಡುತ್ತದೆ.

ಈ ದೇವಾಲಯ ವಾರದ ಎಲ್ಲಾ ದಿನಗಳಲ್ಲೂ ತೆರೆದಿದ್ದು ಸೋಮವಾರ ಮತ್ತು ಗುರುವಾರ ವಿಶೇಷ ಪೂಜೆ ಕೂಡ ಇರುತ್ತದೆ.



ತಿಮ್ಮರಾಯಸ್ವಾಮಿ ದೇಗುಲದ ಪ್ರವೇಶ ದ್ವಾರ

ಎಚ್‌ಎಂಡಿ ಗ್ಲೋಬಲ್ ಒಡೆತನದ ನೋಕಿಯಾ, ದೇಶದ ಗ್ಯಾಜೆಟ್ ಮಾರುಕಟ್ಟೆಗೆನೂತನ ಸ್ಮಾರ್ಟ್‌ಫೋನ್ ಪರಿಚಯಿಸಿದೆ. ನೋಕಿಯಾ ಜಿ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಹೊಸದಾಗಿ ನೋಕಿಯಾ ಬಿಡುಗಡೆಯಾಗಿದೆ.

ನೋಕಿಯಾ ಜಿ11 ಪ್ಲಸ್ ಸ್ಮಾರ್ಟ್ ಫೋನ್ ಮಾರುಕಟ್ಟೆಗೆ

ಹೊಸ ನೋಕಿಯಾ G11 Plus ನೋಕಿಯಾ ನೂತನ ಸ್ಮಾರ್ಟ್‌ಫೋನ್ 6.5 ಇಂಚಿನ ಎಚ್‌ಡಿ + ಡಿಸ್‌ಪ್ಲೇ ಹೊಂದಿದೆ. ಒಕ್ಟಾ ಕೋರ್ ಉನಿಸಾಕ್ T606 ಪ್ರೊಸೆಸರ್, Mali G57 MP1 ಗ್ರಾಫಿಕ್ಸ್ ಬೆಂಬಲ ಹೊಂದಿದೆ. ಜತೆಗೆ 4 GB LPDDR4x RAM ಮತ್ತು 64 GB ಸ್ಟೋರೇಜ್ ಇದರಲ್ಲಿದೆ. 4G ಸಂಪರ್ಕ ಹಾಗೂ ಆ್ಯಂಡ್ರಾಯ್ಡ್ 12 ಓಎಸ್ ಮೂಲಕ ನೂತನ ನೋಕಿಯಾ ಕಾರ್ಯನಿರ್ವಹಿಸುತ್ತದೆ ಎಂದು ನೋಕಿಯಾ ತಿಳಿಸಿದೆ.

ಹಿಂಭಾಗದಲ್ಲಿ 50 ಮೆಗಾಪಿಕ್ಸೆಲ್ ಕ್ಯಾಮೆರಾ ಜತೆಗೆ 2 ಮೆಗಾಪಿಕ್ಸೆಲ್ ಹಾಗೂ ಮುಂಭಾಗದಲ್ಲಿ 8 ಮೆಗಾಪಿಕ್ಸೆಲ್ ಸೆಲ್ಫಿ ನೋಕಿಯಾ G11 Plus ಸ್ಮಾರ್ಟ್‌ಫೋನ್‌ನಲ್ಲಿದ್ದು, 5000mAh ಬ್ಯಾಟರಿ ಜತೆಗೆ 18W ಫಾಸ್ಟ್ ಚಾರ್ಜಿಂಗ್ ಬೆಂಬಲ ಇದರಲ್ಲಿದೆ. ಬೆಲೆ ವಿವರ ಲೇಕ್ ಬ್ಲೂ ಮತ್ತು ಚಾರ್‌ಕೋಲ್ ಗ್ರೇ ಬಣ್ಣದಲ್ಲಿ ನೂತನ ನೋಕಿಯಾ ದೇಶದಲ್ಲಿ ₹12,499 ದರಕ್ಕೆ ಲಭ್ಯವಾಗುತ್ತಿದೆ. ನೋಕಿಯಾ ಆನ್‌ಲೈನ್ ಮತ್ತು ಪ್ರಮುಖ ಇ ಕಾಮರ್ಸ್, ರಿಟೇಲ್ ಶೋರೂಮ್ ಮೂಲಕ ಗ್ರಾಹಕರು ಖರೀದಿಸಬಹುದು ಎಂದು ಕಂಪನಿ ಹೇಳಿದೆ.

GRT JEWELLERS Since 1964

ಮೊದಲ ವಾರದ ಡ್ರಾನಲ್ಲಿ ಮೊದಲ ಬಹುಮಾನ 50 ಗ್ರಾಂಚಿನ್ನ ಸೇರಿದಂತೆ ಒಟ್ಟು 117 GRT ಗ್ರಾಹಕರು ವಿಜೇತರಾಗಿದ್ದಾರೆ.

ನೀವು ಚಿನ್ನವನ್ನು ಖರೀದಿಸುವ ಪ್ರತಿ ಬಾರಿಯೂ,
ಅದರ ತೂಕಕ್ಕೆ ಸಮವಾದ ಬೆಳ್ಳಿಯನ್ನು ಪಡೆಯಿರಿ,
ಸಂಪೂರ್ಣ ಉಚಿತವಾಗಿ.*

ಮಿನುಗುವ ಆಫರ್‌ಗಳು*

ಪ್ರತಿ ಕ್ಯಾರೆಟ್ ವಜ್ರದ ಮೇಲೆ 25 ಗ್ರಾಂ ಬೆಳ್ಳಿ ಪಡೆಯಿರಿ ಉಚಿತವಾಗಿ*

ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ 25% ರಿಯಾಯಿತಿ* (ವಿಶೇಷ ಸಾಮಾಗ್ರಿಗಳನ್ನು ಹೊರತುಪಡಿಸಿ)

MRP ಬೆಳ್ಳಿ ಆಭರಣಗಳು ಮತ್ತು ಗಿಫ್ಟ್ ವಸ್ತುಗಳ ಮೇಲೆ 10% ರಿಯಾಯಿತಿ*

*ಚಿನ್ನದ ನಾಣ್ಯಗಳು / ಗಟ್ಟಿಗಳ ಖರೀದಿಗೆ ಈ ಕೊಡುಗೆ ಅನ್ವಯಿಸುವುದಿಲ್ಲ.
ಬೆಳ್ಳಿಯ ಸಾಮಗ್ರಿಗಳಿಗೆ VA ಮತ್ತು MC ಅನ್ವಯಿಸುತ್ತವೆ. ಸೀಮಿತ ಅವಧಿಯ ಕೊಡುಗೆ. ಷರತ್ತುಗಳು ಅನ್ವಯಿಸುತ್ತವೆ.

ಈ ಧಂತೆರಾಸ್ ದಿನದಂದು (23.10.22) ನಮ್ಮ ಎಲ್ಲಾ ಶೋರೂಮ್‌ಗಳು ಬೆಳಿಗ್ಗೆ 8 ಗಂಟೆಗೆ ತೆರೆಯಲಿದೆ.

HDFC BANK | FESTIVE TREATS | UPTO ₹5000 CASHBACK# on HDFC Bank Debit & Credit Cards. | Offer: 2% Cashback #Min. transaction: ₹50,000 Validity: 17.10.2022 to 30.10.2022. T&C apply. Attractive offer on online purchase also

AVAIL ATTRACTIVE GIFTS ON UPI PAYMENTS.

Karnataka | Andhra Pradesh | Telangana | Tamil Nadu | Puducherry || Singapore

Shop online at: www.oriana.com | mail@grtjewels.com

GRT LIVE VIDEO SHOPPING Shop from the comfort of your home

ಶನಿವಾರ, 22 ಅಕ್ಟೋಬರ್ 2022
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ನೀವೂ ಮಾಡಿ 'ಕ್ಯಾಕ್ಟಸ್ ಗಾರ್ಡನ್'

ನೀವೂ ಮಾಡಿ 'ಕ್ಯಾಕ್ಟಸ್ ಗಾರ್ಡನ್'

ಹಸಿರು ಉಸಿರು

ಅಭಿಲಾಶ ಬಿ.ಸಿ.

ಅಂದದ ಮನೆಯಲ್ಲಿ ಚೆಂದದ ಹೂತೋಟ ಇರಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಸ್ಥಳ ಹಾಗೂ ಸಮಯದ ಅಭಾವದಿಂದಾಗಿ ಅದು ಸಾಧ್ಯವಾಗುತ್ತಿಲ್ಲ ಎನ್ನುವುದು ಹಲವರ ಕೊರಗು. ಸುಲಭ ನಿರ್ವಹಣೆಯ ಸುಂದರ ಹೂದೋಟ ನಿಮ್ಮದಾಗಬೇಕೇ? ಹಾಗಾದರೆ ನೀವು ಕ್ಯಾಕ್ಟಸ್ (ಕಳ್ಳಿ) ಗಾರ್ಡನ್ ನಿರ್ಮಿಸಬಹುದು.

ಮುಳ್ಳಿನ ಗಿಡ ಕ್ಯಾಕ್ಟಸ್, ಕಡಿಮೆ ನೀರು ಬೇಡುವ, ಸುಲಭದ ನಿರ್ವಹಣೆ ಬಯಸುವ ಗಿಡ. ವಾರಕ್ಕೊಮ್ಮೆ ನೀರು ಉಣಿಸಿದರೂ ಸಾಕು. ಬೇಸಿಗೆಯಲ್ಲೂ ಅಲ್ಪ ಪ್ರಮಾಣದ ನೀರಿನಲ್ಲಿ ಹಚ್ಚಹಸಿರಾಗಿ ಕಂಗೊಳಿಸುವುದೇ ಇದರ ವಿಶೇಷತೆ. ಹಾಗಾಗಿ, ಹೊಸದಾಗಿ ಕೈತೋಟ ಆರಂಭಿಸುವವರಿಗೆ 'ಕ್ಯಾಕ್ಟಸ್ ಗಾರ್ಡನ್' ಉತ್ತಮ ಆಯ್ಕೆ.

ಮನೆ ಒಳ-ಹೊರಗೆ..

ಹದ ಬಿಸಿಲು ಬೀಳುವ ಸ್ಥಳ, ಗೋಡೆಗಳ ಬದಿ, ಕಿಟಕಿ ಮೇಲೆ ಅಥವಾ ಮನೆಯೊಳಗಿನ ಮೂಲೆಯಲ್ಲಿ, ತೆರೆದ ಸ್ಥಳಗಳಲ್ಲಿ ಕ್ಯಾಕ್ಟಸ್ ಗಿಡಗಳನ್ನು ಬೆಳೆಸಬಹುದು. ಸ್ವಲ್ಪ ಬಿಸಿಲು ಬೀಳುವ ಮನೆಯ ಒಳಾಂಗಣ ಸಸ್ಯವಾಗಿ, ಬಾಲ್ಕನಿ, ವರಾಂಡದ ಹೂದೋಟದಲ್ಲೂ ಬೆಳೆಸಬಹುದು. ಎಲ್ಲ ವಾತಾವರಣಕ್ಕೂ ಒಗ್ಗಿ ಬೆಳೆಯುವ ಈ ಕ್ಯಾಕ್ಟಸ್ ಗಿಡಗಳನ್ನು, ಮನೆಯೊಳಗೆ ವಿಶೇಷ ವಿನ್ಯಾಸಗಳಲ್ಲಿ ಜೋಡಿಸಿಡಬಹುದು. ಈ ಅಲಂಕಾರಿಕ ಕ್ಯಾಕ್ಟಸ್ ಗಿಡಗಳು ಬೆಳೆಯುವುದು ನಿಧಾನ. ಹಾಗಾಗಿ ಟೆರರಿಯಂ ಗಾಡರ್ನ್‌ಗೂ ಈ ಗಿಡಗಳು ಸೂಕ್ತ. ಒಂದು ವರ್ಷದ ಗಿಡಗಳನ್ನು ಟ್ರಿಮ್ ಮಾಡಬಹುದು.

ತೇವಾಂಶ ಹಿಡಿದಿಡುವ ಗುಣ

ತನ್ನಲ್ಲಿರುವ ತೇವಾಂಶವನ್ನು ಬಹುಕಾಲ ಹಿಡಿದಿಟ್ಟುಕೊಳ್ಳುವುದೇ ಇದರ ವೈಶಿಷ್ಟ್ಯ. ಇದರ ಎಲೆಗಳು ಮುಳ್ಳುಗಳಿಂದ ಕೂಡಿದ್ದು, ನೀರಿನ ಶೀಘ್ರ ಆವಿಯನ್ನು ತಡೆಯುತ್ತದೆ. ಸದಾ ಹಸಿರಾಗಿದ್ದು, ಮೃದುವಾಗಿ, ರಸಭರಿತವಾಗಿರುವ ಕಾಂಡವನ್ನು ಹೊಂದಿರುವ ಈ ಸಸ್ಯದ ಬೇರುಗಳು ಸಾಮಾನ್ಯವಾಗಿ ಹೆಚ್ಚು ಆಳಕ್ಕೆ ಇಳಿಯುವುದಿಲ್ಲ.

ವೈವಿಧ್ಯಮಯ ತಳಿಗಳು

ಕ್ಯಾಕ್ಟಸ್‌ನಲ್ಲಿ ಹಲವು ತಳಿಗಳಿವೆ. ಇವುಗಳಲ್ಲಿ ಕೆಲವಂತೂ ಬಣ್ಣಬಣ್ಣದ ಹೂವನ್ನು ಬಿಟ್ಟು ಮನಸೂರೆಗೊಳ್ಳುತ್ತವೆ. ಅಂಥ ಕೆಲವು ಅಲಂಕಾರಿಕ ಕ್ಯಾಕ್ಟಸ್‌ಗಳ ವಿವರ ಇಲ್ಲಿದೆ.

ಕ್ರಿಸ್‌ಮಸ್ ಕ್ಯಾಕ್ಟಸ್

ಚಳಿಗಾಲದಲ್ಲಿ ಸುಂದರ ಹೂ ಅರಳುವ 'ಕ್ರಿಸ್‌ಮಸ್ ಕ್ಯಾಕ್ಟಸ್' ದಶಕಗಳವರೆಗೆ ಬದುಕಬಲ್ಲದು. 'ಓಲ್ಡ್ ಲೇಡಿ' ಹೆಸರಿನ ಮತ್ತೊಂದು ಮುದ್ದಾದ ಕ್ಯಾಕ್ಟಸ್ ಅತ್ಯಂತ ಸುಲಭವಾಗಿ ಬೆಳೆಯುವ ತಳಿಗಳಲ್ಲಿ ಒಂದು. ಚಳಿಗಾಲದ ಕೊನೆಯ ಅವಧಿಯಿಂದ ವಸಂತ ಕಾಲದ ಆರಂಭದವರೆಗೂ ಉಂಗುರದ ಆಕಾರದ ಗುಲಾಬಿ ಬಣ್ಣದ ಹೂವುಗಳನ್ನು ಅರಳಿಸುವ ಈ ತಳಿ, ಕೈತೋಟಕ್ಕೆ ಮೆರುಗು ನೀಡುತ್ತದೆ.

ಗೋಲ್ಡನ್ ಬ್ಯಾರೆಲ್

ಸುಂದರವಾದ ಹಾಗೂ ವೇಗವಾಗಿ ಬೆಳೆಯುವ 'ಗೋಲ್ಡನ್ ಬ್ಯಾರೆಲ್' ಕಳ್ಳಿ ಹೊರಾಂಗಣದಲ್ಲಿ 60 ಇಂಚಿನಷ್ಟು ಉದ್ದ ಬೆಳೆಯಬಲ್ಲದು. ಆದರೆ ಒಳಾಂಗಣದಲ್ಲಿ ಪುಟಾಣಿ ಗಿಡವಾಗಿಯೇ ಉಳಿಯುತ್ತದೆ. ಹಾಗಾಗಿ ಕಿಟಕಿಯ ಮೇಲೆ ಅಥವಾ ಹೊರಾಂಗಣಕ್ಕೆ ಇದು ಸೂಕ್ತ ಸಸ್ಯ.

'ಸಿಲ್ವರ್ ಬಾಲ್'

ಇದು ದುಂಡಗಿನ, ಬಿಳಿ ಮುಳ್ಳುಗಳಿರುವ ಸುಂದರವಾದ ಈ ಕ್ಯಾಕ್ಟಸ್ 20 ಇಂಚು ಎತ್ತರಕ್ಕೆ ಬೆಳೆಯ ಬಲ್ಲದು. ವಸಂತಋತುವಿನಲ್ಲಿ ದೊಡ್ಡದಾದ ಹಳದಿ ಹೂವುಗಳನ್ನು ಅರಳಿಸುತ್ತದೆ. ಹೂತೋಟದ ನಡುವೆ ಈ ಕ್ಯಾಕ್ಟಸ್ ಇಟ್ಟರೆ,

ರೈನ್‌ಬೊ ಹಡ್ಜ್‌ಹೋಗ್

ಈ ತಳಿಯ ಕ್ಯಾಕ್ಟಸ್ ಕೂಡ ಕೈತೋಟ ಆರಂಭಿಸುವವರಿಗೆ ಉತ್ತಮ ಸಸ್ಯ. ಇದು ವಸಂತ ಕಾಲದ ಕೊನೆಯಲ್ಲಿ ಹೂವು ಬಿಡುತ್ತದೆ. ಮನೆಯ ಒಳಾಂಗಣದಲ್ಲೂ ಇಡಬಹುದು. ತಾರಸಿಯಲ್ಲೂ ಬೆಳೆಸಬಹುದು. ಗಿಡಗಳ ನಡುವೆ ಬೆಳೆಸಿದರೆ, ಹೂಬಿಡುವ ಸಮಯದಲ್ಲಿ ಕೈತೋಟದ ಅಂದ ಹೆಚ್ಚುತ್ತೆ.

ಹಲವು ನಮೂನೆಯ ಆಕರ್ಷಕ ವಿನ್ಯಾಸಗಳ ಈ ಕ್ಯಾಕ್ಟಸ್‌ಗಳನ್ನು ಹದ ಬಿಸಿಲಿರುವಲ್ಲಿ ಜೋಡಿಸಿಟ್ಟರೆ ನೋಡಲು ಕಣ್ಣಿಗೆ ಹಬ್ಬ. ಇವುಗಳಿಗೆ ರೋಗ, ಕೀಟಗಳ ಬಾಧೆಯೂ ಕಡಿಮೆ. ಗಾರ್ಡನ್‌ಗೆ ಮೆರುಗು ಹೆಚ್ಚು.

ರಾಜಮೌಳಿ ಸಿನಿಮಾದಲ್ಲಿ ದೀಪಿಕಾ- ಮಹೇಶ್ ಬಾಬು?

'ಆರ್‌ಆರ್‌ಆರ್'ನ ಭರ್ಜರಿ ಯಶಸ್ಸಿನ ನಂತರ ನಿರ್ದೇಶಕ ರಾಜಮೌಳಿ ತೆಲುಗು ಸೂಪರ್ ಸ್ಟಾರ್ ಮಹೇಶ್ ಬಾಬು ಜೊತೆಗೆ ಸಿನಿಮಾ ಘೋಷಿಸಿದ್ದರು. ಅದಕ್ಕೆ ನಾಯಕಿಯಾಗಿ ದೀಪಿಕಾ ಪಡುಕೋಣೆ ಹೆಸರು ದಟ್ಟವಾಗಿ ಕೇಳಿಬಂದಿದೆ.

ರಾಜಮೌಳಿ ತಂದೆ ಕೆ.ವಿ.ವಿಜಯೇಂದ್ರ ಪ್ರಸಾದ್ ಚಿತ್ರಕ್ಕೆ ಕಥೆ ರಚಿಸಿದ್ದು, ನೈಜ ಘಟನೆಗಳಿಂದ ಕೂಡಿದೆ ಎಂದು ವರದಿಯಾಗಿತ್ತು. ಇದೀಗ ಆ ಚಿತ್ರಕ್ಕೆ ದೀಪಿಕಾ ನಾಯಕಿಯಾಗಲಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

'ಎಸ್‌ಎಸ್‌ಎಂಬಿ29' ಎಂದು ಚಿತ್ರಕ್ಕೆ ತಾತ್ಕಾಲಿಕವಾಗಿ ಹೆಸರಿಡಲಾಗಿದ್ದು, ಮುಂದಿನ ವರ್ಷ ಸಿನಿಮಾ ಚಿತ್ರೀಕರಣ ಪ್ರಾರಂಭವಾಗುವ ನಿರೀಕ್ಷೆಯಿದೆ. ಮೊದಲ ಸಲ ದೀಪಿಕಾ-ಮಹೇಶ್ ಬಾಬು ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ.

ದೀಪಿಕಾ ಪ್ರಸ್ತುತ ಪ್ರಭಾಸ್, ಅಮಿತಾಭ್ ಬಚ್ಚನ್ ಮತ್ತು ಸುನೀಲ್ ಶೆಟ್ಟಿ ಜೊತೆಗಿನ ಚಿತ್ರವೊಂದರಲ್ಲಿ ನಟಿಸುತ್ತಿದ್ದಾರೆ. ನಾಗ್ ಅಶ್ವಿನ್ ನಿರ್ದೇಶನದ ಚಿತ್ರ ಕೋವಿಡ್‌ನಿಂದಾಗಿ ವಿಳಂಬವಾಗಿತ್ತು. ಈ ಹಿಂದೆ ಇದೇ ಚಿತ್ರದ ಸೆಟ್‌ನಲ್ಲಿ ದೀಪಿಕಾ ಆರೋಗ್ಯ ಹದಗೆಟ್ಟು ಆಸ್ಪತ್ರೆಗೆ ದಾಖಲಾಗಿದ್ದರು. ಪ್ರಭಾಸ್, ಆದಿಪುರುಷ್‌ನಲ್ಲಿ ಮಗ್ನರಾಗಿದ್ದು ಈ ಚಿತ್ರದ ಟ್ರೇಲರ್ ಈಗಾಗಲೇ ಬಿಡುಗಡೆಗೊಂಡಿದೆ. (ಮೂಲ: ಐಎಎನ್‌ಎಸ್)

ಸಿನಿ ಹನಿ

'ಕೌಸಲ್ಯಾ ಸುಪ್ರಜಾ ರಾಮ'ನಾಗಿ ಡಾರ್ಲಿಂಗ್ ಕೃಷ್ಣ

ಕನ್ನಡದಲ್ಲಿ ವಿಭಿನ್ನ ಶೀರ್ಷಿಕೆಯ ಚಿತ್ರಗಳ ಸಂಖ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ಅದಕ್ಕೀಗ ಡಾರ್ಲಿಂಗ್ ಕೃಷ್ಣ ಅವರ 'ಕೌಸಲ್ಯಾ ಸುಪ್ರಜಾ ರಾಮ' ಹೊಸ ಸೇರ್ಪಡೆ.

ಸದಭಿರುಚಿ ಚಿತ್ರಗಳಿಗೆ ಜನಪ್ರಿಯವಾಗಿರುವ 'ಮೊಗ್ಗಿನ ಮನಸು' ಶಶಾಂಕ್ ಈ ಚಿತ್ರದ ನಿರ್ದೇಶಕರು. ಇತ್ತೀಚಿಗೆ ಬಿಡುಗಡೆಗೊಂಡ ಈ ಶೀರ್ಷಿಕೆಗೆ ನೆಟ್ಟಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಂದು ವಿಭಿನ್ನ ವಿಡಿಯೊ ಮೂಲಕ ಶಶಾಂಕ್ ತಮ್ಮ ಚಿತ್ರದ ಟೈಟಲ್ ಬಿಡುಗಡೆ ಮಾಡಿರುವುದು ವಿಶೇಷ.

'ಕೌಸಲ್ಯಾ ಸುಪ್ರಜಾ ರಾಮ' ನಾವು ದಿನ ಬೆಳಗ್ಗೆ ಕೇಳುವ ಸುಮಧುರ ಸುಪ್ರಭಾತದ ಮೊದಲ ಸಾಲು. ಇದೊಂದು ತಾಯಿ ಮಗನ ಭಾವನಾತ್ಮಕ ಸನ್ನಿವೇಶಗಳನ್ನೊಳಗೊಂಡಿರುವ ಚಿತ್ರ. ಹಾಗಂತ ನಮ್ಮ ಚಿತ್ರದಲ್ಲಿ ಮನೋರಂಜನೆಗೆ ಕೊರತೆಯಿಲ್ಲ. ಉತ್ತಮ ಮನೋರಂಜನೆ ಹಾಗೂ ಭಾವನೆ ಇರುವ, ಕುಟುಂಬ ಸಮೇತ ನೋಡಬಹುದಾದ ಸುಂದರ ಕೌಟುಂಬಿಕ ಚಿತ್ರ ಎನ್ನುತ್ತಾರೆ ಶಶಾಂಕ್.

ಡಾರ್ಲಿಂಗ್ ಕೃಷ್ಣ ಅವರ ತಾಯಿ - ತಂದೆ ಪಾತ್ರದಲ್ಲಿ ಸುಧಾ ಬೆಳವಾಡಿ, ರಂಗಾಯಣ ರಘು ಅಭಿನಯಿಸುತ್ತಿದ್ದಾರೆ. ಅಚ್ಯುತ್‌ಕುಮಾರ್, ಗಿರಿರಾಜ್ ಸಹ ತಾರಾಬಳಗದಲ್ಲಿದ್ದಾರೆ. ಇಬ್ಬರು ನಾಯಕಿಯರಿದ್ದು, ಅದರಲ್ಲಿ ಒಬ್ಬರು ಹೊಸಬರು ಎನ್ನುತ್ತಿದೆ ಚಿತ್ರತಂಡ.

ಈಗಾಗಲೇ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಐದು ಹಾಡುಗಳಿವೆ. ಅರ್ಜುನ್ ಜನ್ಯ ಸಂಗೀತ ನೀಡುತ್ತಿದ್ದಾರೆ. ಸುಜ್ಞಾನ್ ಈ ಚಿತ್ರದ ಛಾಯಾಗ್ರಾಹಕರು. ಶಶಾಂಕ್ ಸಿನಿಮಾಸ್ ಹಾಗೂ ಬಿ.ಸಿ. ಪಾಟೀಲ್ ಅವರ ಕೌರವ ಪ್ರೊಡಕ್ಷನ್ ಹೌಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ.

ಸದಭಿರುಚಿ ಚಿತ್ರಗಳ ನಿರ್ದೇಶಕ ಶಶಾಂಕ್ ಅವರ ನಿರ್ದೇಶನದಲ್ಲಿ ನಟಿಸಬೇಕೆಂಬ ಆಸೆ ಈಗ ಈಡೇರಿದೆ. 'ಲವ್ ಮಾಕ್ಟೇಲ್', 'ಲಕ್ಕಿ ಮ್ಯಾನ್' ಸೇರಿದಂತೆ ನನ್ನ ಅನೇಕ ಚಿತ್ರಗಳ ಶೀರ್ಷಿಕೆ ಇಂಗ್ಲಿಷ್ ನಲ್ಲಿದೆ. ಈಗ ಅಚ್ಚ ಕನ್ನಡದ ಶೀರ್ಷಿಕೆ ಸಿಕ್ಕಿದೆ. ಕಥೆ ಹಾಗೂ ನನ್ನ ಪಾತ್ರ ತುಂಬಾ ಚೆನ್ನಾಗಿದೆ ಎಂದು ನಾಯಕ ಡಾರ್ಲಿಂಗ್ ಕೃಷ್ಣ ಹೇಳಿದ್ದಾರೆ.

ಹೊಸ ಐಪ್ಯಾಡ್, ಐಪ್ಯಾಡ್ ಪ್ರೊ ಶೀಘ್ರ ಬಿಡುಗಡೆ

ತಂತ್ರಜ್ಞಾನ

ಕಳೆದ ತಿಂಗಳು ವಿಶೇಷ ಈವೆಂಟ್ ಆಯೋಜಿಸಿದ್ದ ಆ್ಯಪಲ್, ಐಫೋನ್ 14 ಸರಣಿಯನ್ನು ಮಾರುಕಟ್ಟೆಗೆ ಪರಿಚಯಿಸಿತ್ತು.

ಈ ಬಾರಿ ಮತ್ತೊಂದು ಈವೆಂಟ್ ನಡೆಸಿ, ಹೊಸ ಸರಣಿಯ ಐಪ್ಯಾಡ್ ಮತ್ತು ಮ್ಯಾಕ್‌ಬುಕ್ ಬಿಡುಗಡೆ ಮಾಡಲು ಆ್ಯಪಲ್ ಸಜ್ಜಾಗಿದೆ.

ಅಕ್ಟೋಬರ್ ತಿಂಗಳ ಕೊನೆಯಲ್ಲಿ ಈವೆಂಟ್ ಒಂದನ್ನು ಆಯೋಜಿಸಿ, ನೂತನ ಐಪ್ಯಾಡ್ ಮತ್ತು ಮ್ಯಾಕ್ ಬಿಡುಗಡೆಯನ್ನು ಆ್ಯಪಲ್ ಮಾಡಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

10th Gen ಐಪ್ಯಾಡ್ ಮತ್ತು 5th Gen ಐಪ್ಯಾಡ್ ಪ್ರೊ ಅನ್ನು ಆ್ಯಪಲ್ ಬಿಡುಗಡೆ ಮಾಡುವ ನಿರೀಕ್ಷೆಯಿದೆ. ಜತೆಗೆ M2 ಸಿಲಿಕಾನ್ ಪ್ರೊಸೆಸರ್ ಸಹಿತ ಹೊಸ ಮ್ಯಾಕ್ ಸರಣಿಯನ್ನು ಆ್ಯಪಲ್ ಮಾರುಕಟ್ಟೆಗೆ ಪರಿಚಯಿಸುವ ಸಾಧ್ಯತೆಯಿದೆ ಎಂದು ಗ್ಯಾಜೆಟ್ ಮಾರುಕಟ್ಟೆ ಪರಿಣತ ಮಾರ್ಕ್ ಗುರ್ಮನ್ ತಿಳಿಸಿದ್ದಾರೆ.



ಇರುಳು ಸರಿದು.. ಬೆಳಕು ಹರಿದು..



ಬೆಳಕೆಂದರೆ ದೇವರು, ಬೆಳಕೆಂದರೆ ಜ್ಞಾನ, ಬೆಳಕೆಂದರೆ ಬಣ್ಣ, ಬೆಳಕೆಂದರೆ ಶಕ್ತಿ, ಬೆಳಕೆಂದರೆ ಧೈರ್ಯ, ಬೆಳಕೆಂದರೆ ಬದುಕು, ಬೆಳಕೆಂದರೆ ದಾರಿತಪ್ಪಿದವನಿಗೆ ಸಿಕ್ಕ ಹೊಳಹು. ಬೆಳಕು ಅನಂತ, ಅಗಾಧ ಅದಕ್ಕೆ ನಮಗೆ ಬೆಳಕಿದ್ದರೆ ಇಷ್ಟ. ನಾವು ಬೆಳಕನ್ನು ಆರಾಧಿಸುತ್ತೇವೆ. ತಮಸೋಮ ಜ್ಯೋತಿಗಮಯ.

ಸದಾಶಿವ್ ಸೊರಟೂರು

ಅಮ್ಮ ಮನೆ ಒಪ್ಪಗೊಳಿಸಿದ್ದಾಳೆ. ಅಪ್ಪ ಎಲ್ಲಾ ತಂದುಕೊಡುವ ಭರದಲ್ಲಿ ಓಡಾಡುತ್ತಿದ್ದಾನೆ. ಪತ್ರಿಕೆಯ ಪುಟಗಳು ಒಂದು ಖುಷಿಯನ್ನು ಸ್ವಾಗತಿಸಲು ಅಣಿಯಾಗಿವೆ. ಕೆಲವರಿಗೆ ಊರಿಗೆ ಹೋಗುವ ಧಾವಂತ, ಕೆಲವರಿಗೆ ಇದ್ದಲ್ಲೆ ಆ ದಿನಕ್ಕೊಂದು ತೋರಣ ನೇಯುವ ಹಿತ. ಬೆಳಗಲು ಕಾದ ಬಗೆಬಗೆಯ ದೀಪಗಳು ಈಗಾಗಲೇ ಮನೆ ಸೇರಿವೆ. ಮಕ್ಕಳ ಕಣ್ಣಲ್ಲಿ ಸುರುಸುರು ಬತ್ತಿಯ ಹೊಳಪು. ಎಲ್ಲರೂ ಒಂದು ಹಿತವೆನಿಸುವ ಸಡಗರಕ್ಕೆ ಎದುರಾಗಿ ನಿಂತಿದ್ದೇವೆ. ದೀಪವಾಳಿಯೊಂದು ಮೆಲ್ಲಗೆ ಎದೆಯೊಳಗೆ ಹೆಜ್ಜೆ ಇಟ್ಟಿದೆ.

ಒಂದು ಹಿಡಿ ಮೋಹಕ ಇಳಿ ಸಂಜೆ, ಬೊಗಸೆ ತುಂಬಾ ಕಡು ಕತ್ತಲು, ಅದರ ಮಧ್ಯೆ ಒಂದು ಪುಟ್ಟ ಹಣತೆ, ಆಕಾಶಕ್ಕೆ ಚಾಚಿ ಉಭಯಕುಶಲೋಪರಿಗೆ ಇಳಿದ ಒಂದು ಆಕಾಶ ದೀಪ. ಮನದೊಳಗೆ ಒಂದು ನಿಚ್ಚಳ ಶಾಂತಿ, ಸಡಗರ. ಎದೆಯೊಳಗೆ ಒಂದಷ್ಟು ಪ್ರೀತಿ, ಭಕ್ತಿ. ನಮ್ಮನ್ನು ಒಮ್ಮೊಮ್ಮೆ ಬದುಕಿನ ಕಡೆ ಎಚ್ಚರಿಸಲೊ ಎಂಬಂತೆ ರಸ್ತೆಯ ಬದಿಯಲಿ ಡಮಗುಟ್ಟುವ ಪಟಾಕಿ. ಹೊಟ್ಟೆಯನ್ನಷ್ಟಲ್ಲದೆ ಮನಸನ್ನೂ ತುಂಬುವ ಊಟ.. ಎಲ್ಲಾ ಸೇರಿದರೆ ಅದು ದೀಪಾವಳಿ.

ಇದು ಬೆಳಕಿನ ಹಬ್ಬ. ದೀಪಾವಳಿ ಬರುವುದು ಕತ್ತಲು-ಬೆಳಕಿನ ಪಾಠ ಹೇಳಲು. ಯಾವ ದೀಪಾವಳಿಯೂ ಹುಣ್ಣಿಮೆಯಲ್ಲಿ ಬರುವುದಿಲ್ಲ. ಅಮವಾಸ್ಯೆ ಕಡು ಕತ್ತಲ ದಿನಗಳಲ್ಲಿ ದೀಪಾವಳಿಯ ಆಗಮನ. ಬೆಳಕಿನ ಬಗ್ಗೆ ಹೇಳುವವನಿಗೆ ಕತ್ತಲ ಬಗ್ಗೆ ಗೊತ್ತಿರಬೇಕು. ಅದಕ್ಕೆ ದೀಪಾವಳಿಯ ಪಾಲಿಗೆ ಕಡು ಕತ್ತಲು. ಬೆಳಕನ್ನು ಆನಂದಿಸುವ ನಮಗೆ ಕತ್ತಲೆಯ ಅರಿವಿರಬೇಕು. ಬೆಳಕು ಪ್ರೀತಿಸುವ ನಮಗೆ ಕತ್ತಲಿನ ಗೆಳೆತನವಾದರೂ ಇರಬೇಕು. ಹಬ್ಬ ಬೆಳಕಿನದು. ಕತ್ತಲಿಗೆ ಹಬ್ಬವಿಲ್ಲ. ನಾವು ಬೆಳಕನ್ನು ಸಂಭ್ರಮಿಸುವಾಗ

ಕೇವಲ ಆ ಬೆಳಕಷ್ಟೇ ಖುಷಿ ಪಡುವುದಿಲ್ಲ, ಕತ್ತಲು ಕೂಡ ಸದ್ದಿಲ್ಲದೆ ಆನಂದಿಸುತ್ತದೆ. ಕತ್ತಲ ಒಡಲಿನೊಳಗಿನಿಂದಲೇ ಬೆಳಕಿನ ಹುಟ್ಟು. ಬೆಳಕಿನ ಆಯಸ್ಸು ಮುಗಿದ ಮೇಲೆ ಅದು ಒಂದಾಗುವುದು ಕೂಡ ಕತ್ತಲಿನ ಆತ್ಮದೊಳಗೆ.

ಕತ್ತಲೆ ನಿಗೂಢ, ಎಲ್ಲವನ್ನೂ ಮುಚ್ಚಿಡುತ್ತದೆ. ಕುತೂಹಲ ಉಳಿಸುತ್ತದೆ. ಬೆಳಕು ಎಲ್ಲವನ್ನೂ ತೆರೆದಿಡುತ್ತದೆ. ಎಲ್ಲವನ್ನು ಕಾಣಿಸುತ್ತಾ ಹೋಗುತ್ತದೆ. ಅದಕ್ಕೆ ಬೆಳಕು ಬದುಕಿಗೆ ಹತ್ತಿರ. ಎಲ್ಲವೂ ತಿಳಿದ ಮೇಲೆ ಏನಿದೆ ಬದುಕಿಗೆ? ಎಲ್ಲವೂ ನಿಸ್ಸಾರ. ಹಬ್ಬ ಬರೀ ಬೆಳಕಿನ ಪಾಠವಲ್ಲ; ಕತ್ತಲು ಹುದುಗಿಟ್ಟುಕೊಂಡ ನಿಗೂಢತೆಯ ಸಾರ. ಬರೀ ಬೆಳಕಿನೊಂದಿಗೆ ಬದುಕಲಾಗುವುದಿಲ್ಲ. ಕಣ್ಮುಚ್ಚಿದರೆ ಕತ್ತಲು ಅದೇ ಜೀವನ.

ಬೆಳಕಿನಲ್ಲಿ ತೆಗೆದ ಫೋಟೊಗಳು ಡಾರ್ಕ್ ರೂಮಿನಲ್ಲಿ ತಾನೇ ಜೀವ ಪಡೆಯುವುದು.

ಕತ್ತಲು ಪ್ರೀತಿಸುವವನಿಗೆ ಬೆಳಕು ಉಡುಗೊರೆಯಾಗಿ ಸಿಕ್ಕೀತು. ಕತ್ತಲು ದೂರ ಬೇಡ ಬೆಳಕು ಮುನಿಸಿಕೊಂಡೀತು. ಕತ್ತಲು ಪರಿಯವಿಲ್ಲದಿದ್ದರೆ ನಿನಗೆ ಬೆಳಕಿನ ವಿಳಾಸವೂ ದುರ್ಲಭ. ಕತ್ತಲಲ್ಲಿ ನಡೆದವನಿಗೆ ಬೆಳಕು ಶರಣಾಗುತ್ತದೆ. ಕತ್ತಲ ಗೆಳೆತನ ಮಾಡಿದವನನ್ನು ಬದುಕೆಂಬ ಹಗಲು ಪೊರೆಯುತ್ತದೆ. ಎಂತಹ ಬೆಳಕಲ್ಲೂ ನಿನ್ನೊಳಗೆ ಕತ್ತಲು ಇದ್ದರೆ ಹಾದಿ ತಪ್ಪುವೆ. ಕಡು ಕತ್ತಲಲ್ಲೂ ನಿನ್ನೊಳಗೊಂದು ತುಂಡು ಬೆಳಕಿದ್ದರೆ ಸಾಕು ನೀನು ನಿನ್ನ ಗಮ್ಯ ತಲುಪುವೆ. ನಾಳೆ ಕತ್ತಲೆ ಇಲ್ಲ ಎಂದರೆ ಇವತ್ತು ಬೆಳಕೂ ಇಲ್ಲ.

ಬೆಳಕೆಂದರೆ ದೇವರು, ಬೆಳಕೆಂದರೆ ಜ್ಞಾನ, ಬೆಳಕೆಂದರೆ ಬಣ್ಣ, ಬೆಳಕೆಂದರೆ ಶಕ್ತಿ, ಬೆಳಕೆಂದರೆ ಧೈರ್ಯ, ಬೆಳಕೆಂದರೆ ಬದುಕು, ಬೆಳಕೆಂದರೆ ದಾರಿತಪ್ಪಿದವನಿಗೆ ಸಿಕ್ಕ ಹೊಳವು. ಬೆಳಕು ಅನಂತ, ಅಗಾಧ ಅದಕ್ಕೆ ನಮಗೆ ಬೆಳಕಿದ್ದರೆ ಇಷ್ಟ. ನಾವು ಬೆಳಕನ್ನು ಆರಾಧಿಸುತ್ತೇವೆ. ತಮಸೋಮ ಜ್ಯೋತಿಗಮಯ.

ದೀಪ ಆರಿಸಿ ಜೆನ್ ಗುರು ಕೇಳುತ್ತಾನೆ 'ಮಗು ಬೆಳಕು ಎಲ್ಲಿಗೆ ಹೊಯಿತು?' ಮಗುವಿನ ಉತ್ತರ ಸ್ಪಷ್ಟ 'ಅದು ಎಲ್ಲಿಂದ ಬಂದಿತ್ತೊ ಅಲ್ಲಿಗೆ ಹೊಯಿತು' ಗುರುವಿಗೆ ಯೋಚನೆ. 'ಅರೇ ಬೆಳಕು ಎಲ್ಲಿಂದ ಬಂತು?' ಆಗ ಗುರುವಿನೊಳಗೆ ಹುಟ್ಟಿದ್ದು ಬದುಕಿನ ಸತ್ಯ. ಬರುವವರು ಹೋಗುವವರು ಮನುಷ್ಯರು ಮಾತ್ರ. ಬೆಳಕಲ್ಲ. ಅದು ಬರುವುದಿಲ್ಲ, ಹೋಗುವುದಿಲ್ಲ. ಬೆಳಕು ಕತ್ತಲಲ್ಲಿ ಅಡಗಿ ಕೂತಿರುತ್ತದೆ. ಕತ್ತಲು ಬೆಳಕಿನೊಳಗೆ ಅಡಗಿರುತ್ತದೆ. ಬದುಕು ಪಾಂಗಿತವಾಗಿ ಸಾಗುತ್ತದೆ.

ಕತ್ತಲು ಬೆಳಕು ಎಂದೂ ಜಗಳಕ್ಕಿಳಿಯುವುದಿಲ್ಲ. ಬೆಳಕಿಗೆ ಕತ್ತಲು ದಾರಿ ಬಿಡುತ್ತದೆ. ಕತ್ತಲನು ಬೆಳಕು ಗೌರವಿಸುತ್ತದೆ. ನಾವು ಅವುಗಳನ್ನು ನೋಡಿ ಕಲಿಯಬೇಕು.

ನಿಮ್ಮೊಳಗೊಂದು ಅಂಧಕಾರವಿದ್ದರೆ ಒಂದು ಹಣತೆ ಹಚ್ಚಿಕೊಳ್ಳಿ. ಕಣ್ಣು ಚುಚ್ಚುವ ಢಾಳ ಬೆಳಕಲ್ಲಿ ಬದುಕಲಾಗುವುದಿಲ್ಲ ಕಣ್ಣಿಗೆ ಚೂರು ಅರೆ ಕತ್ತಲ ಮರೆಮಾಡಿಕೊಳ್ಳಿ. ತುಸು ಕತ್ತಲು, ಹೆಚ್ಚೆ ಬೆಳಕು ನಮಗಿರಲಿ. ಎರಡೂ ಕೂಡ ನಮ್ಮನ್ನು ಕೈಹಿಡಿದು ನಡೆಸಲಿ.

ಎದೆಯಿಂದ ಎದೆಗೆ ದೀಪ ಹಚ್ಚಿಕೊಳ್ಳಲು ಕೈ ಚಾಚೋಣ. ಯಾರಿಗೊ ಚಾಚಿದ ಕೈಗಳು ನಿಮ್ಮ ಬದುಕನ್ನು ಹಿಡಿದು ನಡೆಸಬಹುದು. ಕತ್ತಲು-ಬೆಳಲು ಎರಡೂ ಕೂಡ ನಿಮ್ಮನ್ನು ಪೊರೆಯುವಂತಾಗಲಿ.



ನಟಿ ಹನ್ಸಿಕಾ ಮೊಟ್ವಾನಿಗೆ ಕಲ್ಯಾಣ ಭಾಗ್ಯ

ಸಿನಿ ಹನಿ

ಮುಂಬೈ: ಕನ್ನಡದಲ್ಲಿ ಪುನೀತ್ ರಾಜ್‌ಕುಮಾರ್ ಜೊತೆ 'ಬಿಂದಾಸ್' ಚಿತ್ರದಲ್ಲಿ ನಟಿಸಿದ್ದ ಬಹುಭಾಷಾ ನಟಿ ಹನ್ಸಿಕಾ ಮೊಟ್ವಾನಿ ಅಂತೂ ವೈವಾಹಿಕ ಜೀವನಕ್ಕೆ ಕಾಲಿಡಲು ಭರ್ಜರಿ ತಯಾರಿ ನಡೆಸಿದ್ದಾರೆ.

ಹೌದು, ಬಾಲನಟಿಯಾಗಿ ಚಿತ್ರರಂಗ ಪ್ರವೇಶಿಸಿ, ಬರೋಬ್ಬರಿ 50 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ, ಇಂದಿಗೂ ಬೇಡಿಕೆ ನಟಿಯಾಗಿರುವ ಹನ್ಸಿಕಾ ಡಿಸೆಂಬರ್‌ನಲ್ಲಿ ಅದ್ದೂರಿಯಾಗಿ ಮದುವೆಯಾಗಲಿದ್ದಾರೆ ಎಂದು 'ಇಂಡಿಯಾ ಟಿವಿ' ವರದಿ ಮಾಡಿದೆ.

ರಾಜಸ್ಥಾನದ ಜೈಪುರದಲ್ಲಿರುವ 'ಮುಂದೋಟಾ ಕೋಟೆ ಹಾಗೂ ಅರಮನೆ'ಯಲ್ಲಿ ಡಿಸೆಂಬರ್‌ನಲ್ಲಿ ಮದುವೆ ನಡೆಯಲಿದ್ದು, ಮದುವೆಗಾಗಿ ಸಿದ್ಧತೆಗಳು ಆರಂಭಗೊಂಡಿವೆ. ನಟಿ ಹನ್ಸಿಕಾ ಕೂಡ ಸಿದ್ದತೆಯ ಫೋಟೊಗಳನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.

ಮದುವೆ ಬಗ್ಗೆ ಜೂನ್‌ನಲ್ಲಿ ಹನ್ಸಿಕಾ ಮೌನ ಮುರಿದು ತಾನು ಮದುವೆಯಾಗುವುದಾಗಿ ತಿಳಿಸಿದ್ದರು. ಆದರೆ, ಹುಡುಗ ಯಾರು? ಎಲ್ಲಿ ಮದುವೆ? ಎಂಬುದನ್ನು ತಿಳಿಸಿರಲಿಲ್ಲ. ಇದೀಗ ಮದುವೆ ಸ್ಥಳದ ಬಗ್ಗೆ ತಿಳಿದು ಬಂದಿದ್ದು ಹುಡುಗ ಯಾರು ಎಂಬ ಗುಟ್ಟನ್ನೂ ಇದುವರೆಗೂ ಹಂಸಿಕಾ ಬಿಟ್ಟು ಕೊಟ್ಟಿಲ್ಲ.

ಮೂಲಗಳ ಪ್ರಕಾರ ದಕ್ಷಿಣ ಭಾರತದ ಖ್ಯಾತ ರಾಜಕಾರಣಿಯ ಕುಟುಂಬದ ಹುಡುಗನನ್ನು ಹನ್ಸಿಕಾ ವರಿಸಲಿದ್ದಾರೆ ಎಂದು ತಿಳಿದು ಬಂದಿದೆ. ಈ ಹಿಂದೆ ತಮಿಳು ನಟ ಸಿಂಬು ಜೊತೆ ಹನ್ಸಿಕಾ ಹೆಸರು ತಳಕು ಹಾಕಿಕೊಂಡಿತ್ತು.

ಹೃತಿಕ್ ರೋಶನ್ ಅವರ 'ಕೊಯಿ ಮಿಲ್ ಗಯಾ' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ ಹನ್ಸಿಕಾ, ತೆಲುಗಿನ 'ದೇಶಮದುರು' ಚಿತ್ರದ ಭರ್ಜರಿ ಓಪನಿಂಗ್ ನಂತರ ಸಾಕಷ್ಟು ಹಿಟ್ ಚಿತ್ರಗಳನ್ನು ನೀಡಿದರು. ಇದೀಗ ತಮಿಳು ಹಾಗೂ ಹಿಂದಿಯಲ್ಲಿ ಅವರ 5 ಚಿತ್ರಗಳು ಬಿಡುಗಡೆಯಾಗಬೇಕಿದೆ.

ಮೊಸರನ್ನ ಪ್ರಿಯ 'ಡಿಕೆ'

ಕಾರ್ತಿಕ್ ಅವರಿಗೆ ಮೊಸರನ್ನವೆಂದರೆ ಬಲು ಇಷ್ಟ. ಆಗಾಗ ಅಭ್ಯಾಸದ ನಂತರ ಅವರು ಉಪ್ಪಿನಕಾಯಿ ಜೊತೆ ಒಂದು ಬೌಲ್ ಮೊಸರನ್ನ ಸೇವಿಸುವುದೂ ಇದೆ. ಮನೆಯಲ್ಲಿ ಅಪ್ಪ ಮಾಡಿದ ಮಟನ್ ಬಿರಿಯಾನಿ ಕೂಡ ಅವರಿಗೆ ಅಚ್ಚುಮೆಚ್ಚು. ಅದನ್ನು ಹಿತ ಮಿತವಾಗಿ ಸೇವಿಸುತ್ತಾರೆ.

ಜಿ.ಶಿವಕುಮಾರ

ಆ ಕ್ರಿಕೆಟಿಗನ ಓರಗೆಯವರೆಲ್ಲಾ ನಿವೃತ್ತಿ ಪ್ರಕಟಿಸಿದ್ದಾರೆ. ಕೆಲವರು ವೀಕ್ಷಕ ವಿವರಣೆಗಾರರಾಗಿ, ಮತ್ತೆ ಕೆಲವರು ತರಬೇತುದಾರರಾಗಿ ಎರಡನೇ ಇನಿಂಗ್ಸ್ ಕೂಡ ಆರಂಭಿಸಿದ್ದಾರೆ. ಆದರೆ ಆ ಆಟಗಾರ ಅಬ್ಬರದ ಬ್ಯಾಟಿಂಗ್ ಮೂಲಕ ಈಗಲೂ ಅಂಗಳದಲ್ಲಿ ಮೋಡಿ ಮಾಡುತ್ತಿದ್ದಾರೆ.

ವಯಸ್ಸು 37. ಆದರೂ ಉತ್ಸಾಹ ಎಳ್ಳಷ್ಟೂ ಕುಗ್ಗಿಲ್ಲ. ವಿಕೆಟ್‌ಗಳ ನಡುವೆ ಚುರುಕಾಗಿ ಓಡುವುದರಲ್ಲಿ ನಿಸ್ಸೀಮ. ಮೈದಾನದಲ್ಲಿ ಬೌಂಡರಿ, ಸಿಕ್ಸರ್‌ಗಳ ಮಳೆಗರೆಯುವುದರಲ್ಲೂ ಮುಂದು. ಒಟ್ಟಾರೆಯಾಗಿ ಆತ ಅಪ್ರತಿಮ ಹೋರಾಟಗಾರ.

ಫಿಟ್ನೆಸ್ ಫ್ರೀಕ್

ಮೊಸರನ್ನ ಸೇವಿಯುತ್ತಿರುವ ಕಾರ್ತಿಕ್
–ಇನ್‌ಸ್ಟಾಗ್ರಾಮ್ ಚಿತ್ರ

ಕ್ರಿಕೆಟ್ ಅಂಗಳದ ಆ 'ಚಿರ ಯುವಕ'ನ ಹೆಸರು ದಿನೇಶ್ ಕಾರ್ತಿಕ್. ಆಪ್ತ ವಲಯದಲ್ಲಿ 'ಡಿಕೆ' ಎಂದೇ ಕರೆಯಲ್ಪಡುವ ಕಾರ್ತಿಕ್, ಅವಳಿ ಮಕ್ಕಳ ತಂದೆ.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ 2004ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಅಡಿ ಇಟ್ಟಿದ್ದ ಅವರು,18 ವರ್ಷಗಳ ಪಯಣದಲ್ಲಿ ಏಳು ಬೀಳಿನ ಹಾದಿ ಸವೆಸಿದವರು. ಭಾರತ ತಂಡದ ಹಲವು ಸ್ಮರಣೀಯ ಗೆಲುವುಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು. ತಮ್ಮ ಕ್ರೀಡಾ ಬದುಕು ಮುಗಿದೇ ಹೋಯಿತು ಎಂದು ಕ್ರಿಕೆಟ್ ಜಗತ್ತು ಮಾತನಾಡಿಕೊಂಡಾಗಲೆಲ್ಲಾ ಫಿನಿಕ್ಸ್ ಹಕ್ಕಿಯಂತೆ ಎದ್ದು ಬಂದವರು. ದೇಶಿ ಟೂರ್ನಿಗಳಲ್ಲಿ ಅಮೋಘ ಸಾಮರ್ಥ್ಯ ತೋರಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದವರು.

ಈ ವರ್ಷದ ಐಪಿಎಲ್‌ನಲ್ಲಿ ಕಾರ್ತಿಕ್, ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಪರ ಕಣಕ್ಕಿಳಿದಿದ್ದರು. 15 ಇನಿಂಗ್ಸ್‌ಗಳಿಂದ 187.28ರ ಸ್ಟ್ರೈಕ್‌ರೇಟ್‌ನೊಂದಿಗೆ 324ರನ್ ಕಲೆಹಾಕಿ ಎಲ್ಲರ ಹುಬ್ಬೇರುವಂತೆ ಮಾಡಿದ್ದರು. ಆ ಮೂಲಕ ಈ ಬಾರಿಯ ಟಿ-20 ವಿಶ್ವಕಪ್‌ಗೆ ಭಾರತ ತಂಡದಲ್ಲಿ ಸ್ಥಾನವನ್ನೂ ಗಿಟ್ಟಿಸಿಕೊಂಡಿದ್ದಾರೆ.

ತಮಿಳುನಾಡು ಕ್ರಿಕೆಟಿಗ ಪ್ರತಿಬಾರಿಯೂ ಫಿನಿಕ್ಸ್‌ನಂತೆ ಪುಟಿದೇಳುತ್ತಿರುವುದರಲ್ಲಿ ಅವರ ಫಿಟ್‌ನೆಸ್‌ನ ಪಾತ್ರ ಮಹತ್ವದ್ದು.

ದೇಹಾರೋಗ್ಯ ಕಾಪಾಡಿಕೊಳ್ಳುವುದಕ್ಕೆ ಹೆಚ್ಚು ಒತ್ತು ನೀಡುವ 'ಡಿಕೆ' ಪ್ರತಿನಿತ್ಯ ಕನಿಷ್ಠ ಒಂದು ಗಂಟೆ ವ್ಯಾಯಾಮಕ್ಕಾಗಿ ಮೀಸಲಿಡುತ್ತಾರೆ. ಅವರಿಗೆ 'ಪವರ್ ಲಿಫ್ಟಿಂಗ್' ಎಂದರೆ ಅಚ್ಚುಮೆಚ್ಚು. 'ಲೆಗ್ ಸ್ಕ್ವಾಟ್ಸ್,' 'ಪುಶಪ್ಸ್', 'ಪುಲಪ್ಸ್', 'ವೇಯ್ಟೆಡ್ ಸಿಟಪ್ಸ್' ವ್ಯಾಯಾಮಗಳನ್ನು ಅವರು ಒಮ್ಮೆಯೂ ತಪ್ಪಿಸುವುದಿಲ್ಲ. ಕ್ರಂಚಸ್ ಮಾಡುವುದಕ್ಕೂ ಹೆಚ್ಚಿನ ಆದ್ಯತೆ ನೀಡುತ್ತಾರೆ. ಜಿಮ್‌ನಲ್ಲಷ್ಟೇ ಅಲ್ಲ, ದಿನದಲ್ಲಿ ಒಂದು ಗಂಟೆ ಮೈದಾನದಲ್ಲೂ ಬೆವರು ಹರಿಸುತ್ತಾರೆ.

ದೇಹ ಕಟೆಯುವುದರ ಜೊತೆಗೆ ಮಾನಸಿಕ ಆರೋಗ್ಯಕ್ಕೂ ಪ್ರಾಮುಖ್ಯತೆ ನೀಡುವ ಅವರು ಇದಕ್ಕಾಗಿ ಧ್ಯಾನದ ಮೊರೆ ಹೊಗುತ್ತಾರೆ. ಶಾಂತಚಿತ್ತವಾಗಿರಲು ಹಾಗೂ ಒತ್ತಡದಿಂದ ಮುಕ್ತವಾಗಿರಲು ಧ್ಯಾನ ಮಾಡುವುದು ತುಂಬಾ ಮುಖ್ಯ ಎಂದು ಹಿಂದೊಮ್ಮೆ ಕಾರ್ತಿಕ್ ಹೇಳಿದ್ದರು. ಬಿಡುವಿನ ಸಮಯದಲ್ಲಿ ಈಜು ಅಭ್ಯಾಸ ನಡೆಸುವ ಅವರು ಟ್ರೆಡ್‌ಮಿಲ್‌ನಲ್ಲಿ ಹಾಗೂ ಮೈದಾನದಲ್ಲಿ ಓಡುವುದಕ್ಕೂ ಆದ್ಯತೆ ನೀಡುತ್ತಾರೆ.

ಡಯಟ್ ಅನ್ನೂ ಕಟ್ಟುನಿಟ್ಟಾಗಿ ಪಾಲಿಸುವ ಅವರು ಮನೆಯಲ್ಲಿ ತಯಾರಿಸಿದ ಶುಚಿ ಮತ್ತು ರುಚಿಯಾದ, ಆರೋಗ್ಯಕರ ಆಹಾರಕ್ಕೆ ಆದ್ಯತೆ ನೀಡುತ್ತಾರೆ. ಪ್ರೋಟಿನ್ ಮತ್ತು ಕಾರ್ಬೊಹೈಡ್ರೇಟ್ ಹೇರಳವಾಗಿರುವ ಆಹಾರ ಪದಾರ್ಥಗಳನ್ನೂ ಸೇವಿಸುತ್ತಾರೆ. ತಾಜಾ ಹಣ್ಣುಗಳು ಹಾಗೂ ಹಣ್ಣಿನ ರಸ ಅವರ ಡಯಟ್ ಪಟ್ಟಿಯಲ್ಲಿ ಇರುತ್ತವೆ.

ಕಾರ್ತಿಕ್ ಅವರಿಗೆ ಮೊಸರನ್ನವೆಂದರೆ ಬಲು ಇಷ್ಟ. ಆಗಾಗ ಅಭ್ಯಾಸದ ನಂತರ ಅವರು ಉಪ್ಪಿನಕಾಯಿ ಜೊತೆ ಒಂದು ಬೌಲ್ ಮೊಸರನ್ನ ಸೇವಿಸುವುದೂ ಇದೆ. ಮನೆಯಲ್ಲಿ ಅಪ್ಪ ಮಾಡಿದ ಮಟನ್ ಬಿರಿಯಾನಿ ಕೂಡ ಅವರಿಗೆ ಅಚ್ಚುಮೆಚ್ಚು. ಅದನ್ನು ಹಿತ ಮಿತವಾಗಿ ಸೇವಿಸುತ್ತಾರೆ.

ಎಣ್ಣೆಯಿಂದ ಕರಿದ ಪದಾರ್ಥಗಳಿಂದ ಸದಾ ದೂರ ಇರುವ ಕಾರ್ತಿಕ್, ಶಿಸ್ತುಬದ್ಧ ಹಾಗೂ ಆರೋಗ್ಯಪೂರ್ಣ ಜೀವನ ಶೈಲಿ ಮೈಗೂಡಿಸಿಕೊಂಡಿದ್ದಾರೆ.

ಪನ್ನೀರ್ ಸಿಹಿ ರುಚಿ

ಸವಿರುಚಿ

ಕೆ.ವಿ.ರಾಜಲಕ್ಷ್ಮಿ

ಪನೀರ್ ರೆಡಿಯಾಗಿ ಅಂಗಡಿಗಳಲ್ಲಿ ಸಿಗುತ್ತದೆ. ಪನೀರ್ ಜೊತೆಗೆ ಇನ್ನಷ್ಟು ಖಾದ್ಯಗಳನ್ನು ಸೇರಿಸಿದರೆ ಹಲ್ವ, ಬರ್ಫಿಯಂತಹ ವೈವಿಧ್ಯಮಯ ಸಿಹಿ ಖಾದ್ಯಗಳನ್ನು ತಯಾರಿಸಬಹುದು. ಅಂಥ ಪನೀರ್ 3ತಿನಿಸುಗಳ ರೆಸಿಪಿ ಇಲ್ಲಿವೆ.

1. ಪನೀರ್ ಕೋಕೊನಟ್

ಬೇಕಾಗುವ ಸಾಮಗ್ರಿ : ಪನೀರ್ 1 ಕಪ್, ತೆಂಗಿನತುರಿ(ತಾಜಾವಾಗಿರುವುದು) ಅರ್ಧ ಕಪ್, ಕಂಡೆನ್ಸ್ಡ್ ಮಿಲ್ಕ್ ಅರ್ಧ ಕಪ್, ತುಪ್ಪ 4 ರಿಂದ 5 ಚಮಚ.

ಮಾಡುವ ವಿಧಾನ : ದಪ್ಪ ತಳದ ಬಾಣಲೆಗೆ ತುಪ್ಪ ಹಾಕಿ ಸ್ಟೌ ಮೇಲೆ ಇಡಿ. ಸಣ್ಣ ಉರಿಯಲ್ಲಿ ಬಿಸಿ ಮಾಡಿ. ತುಪ್ಪ ಬಿಸಿಯಾಗುತ್ತಲೇ ಅದಕ್ಕೆ ಪನೀರ್, ತೆಂಗಿನಕಾಯಿ ತುರಿ, ಕಂಡೆನ್ಸ್ಡ್ ಮಿಲ್ಕ್ ಒಟ್ಟಿಗೆ ಹಾಕಿ. ಚೆನ್ನಾಗಿ ಮಗುಚಿ. ಬೆರೆತ ಮಿಶ್ರಣವನ್ನು ತಣಿಸಿ. ಈಗ ಪನೀರ್ ಕೋಕೊನಟ್ ತಿನಿಸು ಸವಿಯಲು ಸಿದ್ಧ.

2. ಪನ್ನೀರ್ ಹಲ್ವ

ಬೇಕಾಗುವ ಸಾಮಗ್ರಿ: ಪನೀರ್ 1ಕಪ್, ಬೆಲ್ಲದ ಪುಡಿ 1 ಕಪ್, ತುಪ್ಪ ಅರ್ಧ ಕಪ್.

ಮಾಡುವ ವಿಧಾನ: ದಪ್ಪ ತಳದ ಪಾತ್ರೆಯನ್ನು ಸ್ಟೌ ಮೇಲಿಟ್ಟು ಸಣ್ಣಗೆ ಉರಿ ಮಾಡಿ. ಪಾತ್ರೆಗೆ ತುಪ್ಪ ಹಾಕಿ ಕರಗಿಸಿ. ಇದಕ್ಕೆ ಪನೀರ್ ಹಾಕಿ ಹುರಿಯಿರಿ. ನಂತರ ಸಣ್ಣ ಉರಿಯಲ್ಲೇ, ಪಾತ್ರೆಗೆ ಬೆಲ್ಲದ ಪುಡಿ ಹಾಕಿ ನಿರಂತರವಾಗಿ ನಯವಾಗಿ ಮಿಶ್ರಣವಾಗುವವರೆಗೆ ಮಗುಚುತ್ತಿರಿ. ಅಗತ್ಯ ಬಿದ್ದಲ್ಲಿ ಮೇಲೆ ತುಪ್ಪ ಹಾಕಿ. ಹಲ್ವದ ಹದ ಬಂದ ಕೂಡಲೇ ಉರಿ ಆರಿಸಿ. ಮಿಶ್ರಣವನ್ನು ಬೇರೊಂದು ಪಾತ್ರೆಗೆ ವರ್ಗಾಯಿಸಿ ತಣಿಸಿ. ಈಗ ರುಚಿಯಾದ ಪನೀರ್ ಹಲ್ವ ಸವಿಯಲು ಸಿದ್ಧ.

3. ಪನೀರ್ ಬರ್ಫಿ

ಬೇಕಾಗುವ ಸಾಮಗ್ರಿ: ಪನೀರ್ 1 ಕಪ್, ಹುರಿಗಡಲೆ ಪುಡಿ ಕಾಲು ಕಪ್, ಹಾಲಿನಪುಡಿ 1 ಕಪ್, ಸಕ್ಕರೆ ಪುಡಿ ಒಂದೂವರೆ ಕಪ್, ತುಪ್ಪ 1 ಕಪ್

ಮಾಡುವ ವಿಧಾನ: ದಪ್ಪ ತಳದ ಬಾಣಲೆಯನ್ನು ಸ್ಟವ್ ಮೇಲೆ ಇಡಿ. ಸಣ್ಣ ಉರಿಯಿರಲಿ. ಬಾಣಲೆಗೆ ತುಪ್ಪ ಹಾಕಿ, ಪನೀರ್, ಹುರಿಗಡಲೆಪುಡಿ, ಹಾಲಿನಪುಡಿ, ಸಕ್ಕರೆ ಪುಡಿ, ಎಲ್ಲ ಸೇರಿಸಿ ಮಗುಚುತ್ತಿರಿ. ಇನ್ನೊಂದು ಬದಿಯಲ್ಲಿ ತಟ್ಟೆಯೊಂದಕ್ಕೆ ತುಪ್ಪವನ್ನು ಸವರಿ ಇಡಿ. ಈಗ ಬಾಣಲೆಯಲ್ರಿರುವ ಹದವಾದ ಮಿಶ್ರಣವನ್ನು ತುಪ್ಪ ಸವರಿದ ತಟ್ಟೆಯ ಮೇಲೆ ಸುರಿದು ಸಮವಾಗಿ ಹರಡಿ. ಸ್ವಲ್ಪ ತಂಪಾಗಲು ಬಿಡಿ. ನಂತರ ನಿಮಗೆ ಬೇಕಾದ ಆಕಾರಕ್ಕೆ ಸಣ್ಣ ಸಣ್ಣ ಬಿಲ್ಲೆಗಳನ್ನಾಗಿ ಕತ್ತರಿಸಿ.

ಗಮನಿಸಿ: ರೆಡಿ ಪನೀರ್ ಇಲ್ಲದಾಗ, ಅರ್ಧ ಲೀಟರ್ ಹಾಲಿಗೆ ಒಂದರಿಂದ ಒಂದೂವರೆ ಚಮಚ ನಿಂಬೆ ರಸ ಹಾಕಿ ಮನೆಯಲ್ಲೇ ಪನೀರ್ ತಯಾರಿಸಬಹುದು.